ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪

ಗರ್ಗಮಹಾಋಷಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೫

ಬಲಭದ್ರಖಂಡ ಮತ್ತು ವಿಜ್ಞಾನಖಂಡ

ಆಸ್ಥಾನ ಮಹಾವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ:

ಮೈಸೂರು :

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೮

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೪

ಗರ್ಗಮಹಾಮುನಿಪ್ರಣೀತಾ

ಗಾರ್ಗ್ಯಸಂಹಿತಾ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಭಾಗ ೫

ಬಲಭದ್ರಖಂಡ ಮತ್ತು ವಿಜ್ಞಾನಖಂಡ

ಆಸ್ಥಾನ ಮಹಾವಿದ್ವಾನ್

ಹಾಸನ ಪಂಡಿತ ವೆಂಕಟರಾವ್

ಅನುವಾದಕ:

ಮೈಸೂರು:

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೮

ಮುನ್ನುಡಿ

ಈ ಭಾಗದಲ್ಲಿ ಬಲಭದ್ರಖಂಡ, ವಿಜ್ಞಾನಖಂಡಗಳೆಂಬ ಎರಡು ಖಂಡಗಳು ಸೇರಿವೆ. ಬಲಭದ್ರಖಂಡದಲ್ಲಿ ಬಲರಾಮನು ಯಾರು, ಅವನ ಸ್ವರೂಪವೇನು, ಏತಕ್ಕಾಗಿ ಅವತಾರಮಾಡಿದನು ಇತ್ಯಾದಿ ವಿಷಯಗಳೂ. ಸಹಸ್ರನಾಮವೂ, ವಿಜ್ಞಾನಖಂಡದಲ್ಲಿ ಬ್ರಹ್ಮಸ್ವರೂಪ ಮುಂತಾದ ತತ್ತ್ವವಿಷಯಗಳೂ ಸುಲಭವಾಗಿ ತಿಳಿಯುವಂತೆ ಪ್ರತಿಪಾದಿತವಾಗಿವೆ.

ಈ ಗಾರ್ಗಸಂಹಿತೆಯಲ್ಲಿ ಗೋಲೋಕಖಂಡದಿಂದ ವಿಜ್ಞಾನಖಂಡದವರೆಗೆ ಆಗುವ ಒಂಭತ್ತು ಖಂಡಗಳು ಮಾತ್ರ ಇರುವುವು ಎಂದು ಕೆಲವರ ಮತ. ಮತ್ತೆ ಕೆಲವರು ಅಶ್ವಮೇಧಖಂಡವೆಂಬ ಮತ್ತೊಂದು ಖಂಡವೂ ಸೇರಿ ಹತ್ತು ಖಂಡಗಳಿರುವ ವೆಂದು ಹೇಳುವರು. ಈ ಹತ್ತನೆಯ ಖಂಡದಲ್ಲಿ ಉಗ್ರಸೇನಮಹಾರಾಜನು ಮಾಡಿದ ಅಶ್ವಮೇಧಯಜ್ಞಸಂಬಂಧವಾದ ವಿಷಯಗಳು ವಿವರಿಸಲ್ಪಟ್ಟಿರುವವು. ಈ ಖಂಡವು ಮುಂದಿನ ಭಾಗವಾಗಿ ಮುದ್ರಿಸಲ್ಪಡುವುದು.

ಇಂತಹ ಉತ್ತಮವಾದ ಅನೇಕ ಸಂಸ್ಕೃತಗ್ರಂಥಗಳನ್ನು ಕನ್ನಡ ಭಾಷೆಗೆ ಪರಿವರ್ತನೆಮಾಡಿಸಿ ಸಕಲರೂ ಓದಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ಅಂದವಾಗಿ ಮುದ್ರಿಸಿ ಲೋಕೋಪಕಾರಮಾಡುತ್ತಿರುವ ಕರ್ನಾಟಕಸಿಂಹಾಸನಾಧೀಶ್ವರರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.** ಮಹಾಪ್ರಭುವರ್ಯರಿಗೆ ಶ್ರೀಕೃಷ್ಣಪರಮಾತ್ಮನು ಆಯುರಾರೋಗ್ಯೈಶ್ವರ್ಯಪುತ್ರಸಂತಾನಾದಿ ಸಕಲಸನ್ಮಂಗಳಗಳನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು
ಸರ್ವಧಾರಿನಾಮ ಸಂ॥ ಚೈತ್ರ ಬ॥ ತೃತೀಯಾ
26—4—1948

ಅನುವಾದಕ,
ಹಾಸನದ ಪಂಡಿತ ವೆಂಕಟರಾವ್,
ಆಸ್ಥಾನ ಮಹಾವಿದ್ವಾನ್.

ವಿಷಯಾನುಕ್ರಮಣಿಕೆ

ಬಲಭದ್ರಖಂಡ

ವಿಜ್ಞಾನಖಂಡ

ಆರ್. ಕೃಷ್ಣಶೆಟ್ಟಿ,
ಪ್ರಿಂಟರ್,
ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

—|| ಶ್ರೀ ಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ಪ್ರಥಮೋಽಧ್ಯಾಯಃ

|| ಬಹುಲಾಶ್ವ ಉವಾಚ ||

ಶ್ರುತಂ ತವ ಮುಖಾದ್ಬ್ರಹ್ಮನ್ಮಂಗಲಂ ಪರಮಾದ್ಭುತಂ |
ಸುಧಾಖಂಡಾತ್ಪರಂ ಮಿಷ್ಟಂ ಖಂಡಂ ವಿಶ್ವಜಿತಂ ಪರಂ || ೧ ||

ಪರಿಪೂರ್ಣತಮಸ್ಯಾಪಿ ಶ್ರೀಕೃಷ್ಣಸ್ಯ ಮಹಾತ್ಮನಃ |
ಷೋಡಶಸ್ತ್ರೀಸಹಸ್ರಾಣಾಂ ಪುತ್ರಾ ದಶ ದಶಾಭರ್ವ || ೨ ||

ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಬಭೂವುಃ ಕೋಟಿಶೋ ಮುನೇ |
ರಜಾಂಸಿ ಭೂಮೇರ್ಗಣಯೇನ್ನ ಕವಿಶ್ಚೇದ್ಧರೇಃ ಕುಲಂ || ೩ ||

ಒಂದನೆಯ ಅಧ್ಯಾಯವು

೧. ಮಿಥಿಲಾಧಿಪತಿಯಾದ ಬಹುಲಾಶ್ವರಾಜನು ನಾರದಮಹರ್ಷಿಯನ್ನು ಕುರಿತು " ಓ ಬ್ರಹ್ಮಜ್ಞ ! ನಿನ್ನ ಮುಖದಿಂದ ಮಂಗಲದಾಯಕವೂ, ಪರಮಾಶ್ಚರ್ಯಕರವೂ, ಕಲ್ಲುಸಕ್ಕರೆಗಿಂತಲೂ ಅತಿಶಯವಾದ ಮಾಧುರ್ಯದಿಂದ ಕೂಡಿದುದೂ ಆದ ವಿಶ್ವಜಿತ್ಖಂಡವನ್ನು ಕೇಳಿದೆನು.

೨. ಪರಿಪೂರ್ಣತಮನಾದ ಆ ಶ್ರೀಕೃಷ್ಣನಿಗೆ ತನ್ನ ಹದಿನಾರುಸಾವಿರ ಮಂದಿ ಪತ್ನಿಯರಲ್ಲಿ ಒಬ್ಬೊಬ್ಬರಿಗೂ ಹತ್ತು ಹತ್ತು ಮಂದಿ ಪುತ್ರರು ಜನಿಸಿದರು.

೩. ಆ ಕೃಷ್ಣಪುತ್ರರೆಲ್ಲರಿಗೂ ಪುತ್ರರೂ, ಪೌತ್ರರೂ ಕೋಟಿಗಟ್ಟಲೆ ಜನಿಸಿದರು. ಓ ಮುನೀಂದ್ರ ! ಯಾವಾತನೇ ಆಗಲಿ, ಎಷ್ಟೇ ಮಹಾಜ್ಞಾನಿಯಾಗಿದ್ದರೂ ಆತನು ಭೂಮಿಯಲ್ಲಿರುವ ಧೂಳಿನ ಕಣಗಳನ್ನಾದರೂ ಎಣಿಸಬಲ್ಲನು. ಆದರೆ ಆ ಶ್ರೀಕೃಷ್ಣನ ಸಂತತಿಯನ್ನು ಇಷ್ಟೇ ಎಂದು ಪರಿಗಣಿಸಲು ಎಂದಿಗೂ ಸಾಧ್ಯವಿಲ್ಲ.

ರೇವತ್ಯಾಂ ಬಲದೇವಸ್ಯ ರಾಮಸ್ಯಾಪಿ ಮಹಾತ್ಮನಃ ।
ಪುತ್ರೋದಯಃ ಕಥಂ ನು ಸ್ಯಾದೇತನ್ಮೇ ಬ್ರೂಹಿ ತತ್ತ್ವತಃ ॥ ೪ ॥

॥ ಶ್ರೀ ನಾರದ ಉವಾಚ ॥

ಬಾಢಮುಕ್ತಂ ಭಗವತಃ ಸಂಕರ್ಷಣಸ್ಯಾಚ್ಯುತಾಗ್ರಜಸ್ಯ ಬಲಭದ್ರಸ್ಯ ರಾಮಸ್ಯ ಕಾಮಪಾಲಸ್ಯ ಕಥಾಂ ಸರ್ವಥಾ ತವಾಗ್ರೇ ಕಥಯಿಷ್ಯಾಮಿ॥ ೫ ॥

ಅಥ ಕದಾಚಿತ್ಪ್ರಾಡ್ವಿಪಾಕೋ ನಾಮ ಮುನೀಂದ್ರೋ ಯೋಗೀಂದ್ರೋ ದುರ್ಯೋಧನಗುರುರ್ಗಜಾಹ್ವಯಂ ನಾಮ ಪುರಮಾಜಗಾಮ ॥ ೬ ॥

ಸುಯೋಧನೇನ ಸಂಪೂಜಿತಃ ಪರಮಾದರೇಣ ಸೋಪಚಾರೇಣ ಮಹಾರ್ಹಸಿಂಹಾಸನೇ ಸ್ಥಿತೋಽಭೂತ್ ॥ ೭ ॥

---

೪. ಮಹಾತ್ಮನಾದ ಬಲರಾಮನಿಗೆ ತನ್ನ ಪತ್ನಿಯಾದ ರೇವತಿಯಲ್ಲಿ ಮಕ್ಕಳಾದುದು ಹೇಗೋ, ಈ ಸಂಗತಿಯೆಲ್ಲವನ್ನೂ ನನಗೆ ಯಥಾವತ್ತಾಗಿ ತಿಳಿಸಬೇಕು " ಎಂದು ಪ್ರಾರ್ಥಿಸಿದನು.

೫. ಆಗ ನಾರದಮಹರ್ಷಿಯು ಆ ಬಹುಲಾಶ್ವರಾಜನನ್ನು ಕುರಿತು ಈ ರೀತಿ ನುಡಿಯತೊಡಗಿದನು. " ರಾಜೇಂದ್ರ ! ನೀನೀಗ ಕೇಳಿದ ಪ್ರಶ್ನೆಯು ಬಹು ಚೆನ್ನಾಗಿದೆ. ಈಗ ನಾನು ಶ್ರೀಕೃಷ್ಣನ ಅಣ್ಣನೂ, ರಾಮ, ಕಾಮಪಾಲ, ಬಲಭದ್ರ, ಮುಂತಾದ ಹೆಸರುಗಳಿಂದ ವ್ಯವಹರಿಸಲ್ಪಡುವವನೂ ಆದ ಸಾಕ್ಷಾತ್ ಭಗವಂತನ ಸಂಕರ್ಷಣನೆಂಬ ದಿವ್ಯಮೂರ್ತಿಯ ಶುಭಚರಿತ್ರವನ್ನು ನಿನಗೆ ತಿಳಿಸುವೆನು.

೬. ಹಿಂದೆ ಒಂದು ಸಲ ಪ್ರಾಡ್ವಿಪಾಕನೆಂಬ ಮುನಿಶ್ರೇಷ್ಠನು ತನ್ನ ಶಿಷ್ಯನಾದ ದುರ್ಯೋಧನನನ್ನು ಕಾಣಲು ಹಸ್ತಿನಾವತಿಗೆ ಬಂದನು.

೭. ತನ್ನ ಗುರುವು ಬರುತ್ತಲೇ ಕೌರವೇಂದ್ರನಾದ ದುರ್ಯೋಧನನು ಬಹು ಆದರದಿಂದಲೂ, ಬಗೆಬಗೆಯಾದ ಉಪಚಾರಗಳಿಂದಲೂ ಆ ಮುನೀಂದ್ರನನ್ನು ಸತ್ಕರಿಸಿ ಮಹಾರ್ಹವಾದ ಸಿಂಹಾಸನದಲ್ಲಿ ಕುಳ್ಳಿರಿಸಿದನು.

ತಂ ಪ್ರದಕ್ಷಿಣೀಕೃತ್ಯ ಪ್ರಣಿಪತ್ಯ ಕೃತಾಂಜಲಿಃ ಪುರಃ ಸ್ಥಿತೋ ಮನಃ ಸಂದೇಹಂ ಸ್ಮೃತ್ವಾ ಧಾರ್ತರಾಷ್ಟ್ರ ಇತಿ ಹೋವಾಚ || ೮ ||

ಸಂಕರ್ಷಣಃ ಸಾಕ್ಷಾದ್ಬಲಭದ್ರಃ ಕಿಂ ಕಾರಣಾತ್ಕಸ್ಮಾಲ್ಲೋಕಾತ್ಕೇನ ಪ್ರಾರ್ಥಿತೋ ಭೂಲೋಕಾನಾಜಗಾಮ ಯೆನೇದಂ ಪುರಂ ತಿರ್ಯಗ್ಭೂತಮಭವತ್ ತಸ್ಯ ಮಮ ಗುರೋರ್ಗದಾಶಿಕ್ಷಾಕರಸ್ಯಾಹೋ ತತ್ಪ್ರಭಾವಂ ನಿತರಾಂ ವದತಾತ್ || ೯ ||

|| ಪ್ರಾಡ್ವಿಪಾಕ ಉವಾಚ ||

ಯುವರಾಜ ಕುರೂದ್ವಹ ಯದುವರಸ್ಯ ಪ್ರಭಾವಂ ಶೃಣು ಯಚ್ಛ್ರವಣೇ ಪಾಪಹಾನಿಃ ಪರಂ ಭೂಯಾತ್ || ೧೦ ||

---

೮. ಅನಂತರ ಆತನನ್ನು ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸಿ ಕೈಗಳನ್ನು ಮುಗಿದುಕೊಂಡು ಆ ಸಿಂಹಾಸನದ ಮುಂದೆ ನಿಂತು ಕುರುರಾಜನಾದ ಆ ದುರ್ಯೋಧನನು ತನ್ನ ಮನಸ್ಸಿನಲ್ಲಿದ್ದ ಸಂದೇಹವೊಂದನ್ನು ನೆನೆದು ಈ ರೀತಿಯಾಗಿ ಪ್ರಶ್ನಿಸಿದನು.

೯ "ಓ ಗುರುವರ್ಯ! ಸಾಕ್ಷಾದ್ಭಗವಂತನ ಸಂಕರ್ಷಣವೆಂಬ ಮೂರ್ತಿಯ ಸ್ವರೂಪನಾದ ಬಲಭದ್ರನು ಯಾವ ಕಾರಣದಿಂದ ಇಲ್ಲಿಗೆ ಬಂದನು? ಈ ರೀತಿ ಅವತರಿಸುವಂತೆ ಆತನನ್ನು ಪ್ರಾರ್ಥಿಸಿದವರು ಯಾರು? ಆ ಬಲಭದ್ರನೇ ನಮ್ಮ ನಗರವಾದ ಈ ಹಸ್ತಿನಾವತಿಯನ್ನು ಅಡ್ಡಲಾಗಿ ತಿರುಗಿಸಿಬಿಟ್ಟಿರುವನಲ್ಲವೇ? ಗದಾಯುದ್ಧದ ಶಿಕ್ಷಣವನ್ನು ಇತ್ತಂತಹ ಆ ನನ್ನ ಗುರುವಿನ ಮಾಹಾತ್ಮ್ಯವನ್ನು ನನಗೆ ಚೆನ್ನಾಗಿ ತಿಳಿಯಪಡಿಸಬೇಕು" ಎಂದನು.

೧೦. ಈರೀತಿಯಾಗಿ ಆ ದುರ್ಯೋಧನನು ಪ್ರಾರ್ಥಿಸಲು ಪ್ರಾಡ್ವಿಪಾಕ ಮುನೀಂದ್ರನು ಆತನನ್ನು ಕುರಿತು ಹೇಳತೊಡಗಿದನು :—"ಯುವರಾಜ! ಕೌರವೇಂದ್ರ! ಯಾವುದನ್ನು ಶ್ರವಣಮಾಡಿದ ಮಾತ್ರದಿಂದಲೇ ಪಾಪಗಳೆಲ್ಲವೂ ಪರಿಹಾರವಾಗುವುವೋ ಅಂಥ ಯದುಶ್ರೇಷ್ಠನಾದ ಆ ಬಲರಾಮನ ಮಹಿಮೆಯನ್ನು ಆಲಿಸುವವನಾಗು. ನಾನು ತಿಳಿಸುವೆನು.

ಅಸ್ಮಿನ್ದ್ವಾಪರಾಂತೇ ನೃಪವ್ಯಾಜದೈತ್ಯಾನೀಕಕೋಟಿಭಿರ್ಭೂರಿಭರಾಕ್ರಾಂತಾ ಭೂರ್ಗೌರ್ಭೂತ್ವಾ ಸ್ವಯಂಭುವಂ ಶರಣಂ ಜಗಾಮ ॥ ೧೧ ॥

ತದುಪಚರ್ಯ ಸುರಶ್ರೇಷ್ಠಃ ಸರ್ವಸುರಗಣೈಃ ಸಮೃಡೋ ವೈಕುಂಠನಾಥಂ ಪುರಸ್ಕೃತ್ಯ ಶ್ರೀವಾಮನವಾಮಪಾದಾಂಗುಷ್ಠನಖನಿರ್ಭಿನ್ನೋರ್ಧ್ವಾಂಡಕಟಾಹವಿವರಮಾರ್ಗೇಣ ಬಹಿರ್ನಿರ್ಗತ್ಯ ಕೋಟಿಶೋಂಡನಿಚಯಂ ಬ್ರಹ್ಮದ್ರವೇ ಸಂಪ್ರೇಕ್ಷನ್ವಿರಜಾತೀರಂ ಪ್ರಾಪ್ತವಾನ್ ॥ ೧೨ ॥

ಅಥಾಗ್ರೇಽಸಂಖ್ಯಕೋಟಿಮಾರ್ತಂಡಜ್ಯೋತಿಷಾಂ ಮಂಡಲಮವೇಕ್ಷ್ಯ ಧಾತಾ ನತ್ವಾ ಧ್ಯಾತ್ವಾ ತತ್ರಾನಂತಂ ಸಹಸ್ರವದನಂ ಸಂಕರ್ಷಣಂ ಗುಣಲಕ್ಷಣಲಕ್ಷಿತಂ ದೇವೈಃ ಸಹ ದದರ್ಶ ॥ ೧೩ ॥

---

೧೧. ಈ ದ್ವಾಪರಯುಗದ ಅಂತ್ಯದಲ್ಲಿ ಅನೇಕ ಮಂದಿ ದೈತ್ಯರು ದುಷ್ಟರಾಜರ ರೂಪದಿಂದ ಈ ಭೂಮಿಯಲ್ಲಿ ಅವತರಿಸಿದರು. ಅವರಿಂದುಂಟಾದ ಮಿತಿಮೀರಿದ ಹೊರೆಯನ್ನು ತಾಳಲಾರದೆ ಭೂಮಿಯು ಗೋರೂಪವನ್ನು ಧರಿಸಿ ಬ್ರಹ್ಮನ ಬಳಿಗೆ ಹೋಗಿ ಆತನನ್ನು ಮರೆಹೊಕ್ಕಳು.

೧೨. ಆಗಲಾ ಚತುರ್ಮುಖಬ್ರಹ್ಮನು ಆಕೆಯನ್ನು ಸಮಾಧಾನಗೊಳಿಸಿ ಎಲ್ಲ ದೇವತೆಗಳೊಡನೆಯೂ, ಶಿವನೊಡನೆಯೂ ಹೊರಟು ವೈಕುಂಠಾಧಿಪತಿಯಾದ ವಿಷ್ಣುವನ್ನು ಮುಂದಿಟ್ಟುಕೊಂಡು ವಾಮನಮೂರ್ತಿಯು ತ್ರಿವಿಕ್ರಮನಾಗಿ ಬೆಳೆದು ತನ್ನ ಎಡಗಾಲನ್ನು ಆಕಾಶವೆಲ್ಲ ವ್ಯಾಪಿಸುವಂತೆ ನೀಡಿದಾಗ ಅದರ ಹೆಬ್ಬೆರಳಿನ ತುದಿಯು ತಗಲಿ ಸೀಳಿಹೋದ ಬ್ರಹ್ಮಾಂಡದ ಮೇಲುಭಾಗದಲ್ಲಿರುವ ಬಿಲದ್ವಾರದ ಮುಖಾಂತರ ಹೊರಗಡೆ ಬಂದು ಈ ಅಂಡದಂತೆಯೇ ಕೋಟ್ಯಾಂತರ ಅಂಡಗಳು ಬ್ರಹ್ಮನ ಪ್ರಥಮಸೃಷ್ಟಿಯಾದ ಅಪಾರಜಲರಾಶಿಯಲ್ಲಿ ಸುತ್ತುತ್ತಿರುವುದನ್ನು ನೋಡುತ್ತಾ ಅಲ್ಲಿಂದ ವಿರಜಾನದಿಯ ತೀರವನ್ನು ಸೇರಿದನು.

೧೩. ಅಲ್ಲಿಂದ ಮುಂದೆ ಸಂಖ್ಯಾತೀತವಾದ ಸೂರ್ಯಮಂಡಲಗಳು ಒಟ್ಟುಗೂಡಿ ಏಕಕಾಲದಲ್ಲಿ ಸೇರಿದಾಗ ಬೆಳಗುವಂತೆ ಥಳಥಳಿಸುತ್ತಿರುವ ಅಪಾರವಾದ ತೇಜೋರಾಶಿಯನ್ನು ಕಂಡನು. ಕೂಡಲೇ ಆ ಚತುರ್ಮುಖನು ತನ್ನೊಡನೆ ಬಂದಿದ್ದ ದೇವತೆಗಳೊಡನೆ ಆ ತೇಜೋಮಂಡಲಕ್ಕೆ ನಮಸ್ಕಾರಮಾಡಿ ಕೆಲಹೊತ್ತು ಧ್ಯಾನಪರವಶನಾಗಿದ್ದು ಸ್ವಲ್ಪಹೊತ್ತಿನ ಮೇಲೆ ಆ ಪ್ರಭಾಮಂಡಲದಲ್ಲಿ ನಡುವೆ ಸಹಸ್ರಮುಖಗಳಿಂದ ಶೋಭಿಸುತ್ತಾ ಸಮಸ್ತವಾದ ಶುಭಲಕ್ಷಣಗಳಿಂದಲೂ, ಸದ್ಗುಣಗಳಿಂದಲೂ ಕಂಗೊಳಿಸುತ್ತಿರುವ ಅನಂತಪದವಾಚ್ಯನಾದ ಸಂಕರ್ಷಣಮೂರ್ತಿಯನ್ನು ಸಾಕ್ಷಾತ್ಕರಿಸಿದನು.

ತದ್ಭೋಗಕುಂಡಲೀಭೂತೋತ್ಸಂಗೇ ವೃಂದಾರಣ್ಯಕಾಲಿಂದೀಗೋವರ್ಧನಾದ್ರಿಂ ಕುಂಜನಿಕುಂಜಲತಾತರುಪುಂಜಗೋಪಾಲಗೋಪೀಗೋಕುಲಸಂಕುಲಂ ಲಲಿತಂ ಗೋಲೋಕಂ ಸರ್ವಲೋಕನಮಸ್ಕೃತಂ ಸಮೇತ್ಯ ತತ್ರ ನಿಜಕುಂಜೇ ನಿಜಾಜ್ಞಾಂ ನೀತ್ವಾಂತಃ ಪ್ರಾಪ್ಯ ಸಾಕ್ಷಾತ್ಪರಿಪೂರ್ಣತಮಂ ಸ್ವಯಂ ಶ್ರೀಕೃಷ್ಣಚಂದ್ರಮಸಂಖ್ಯಬ್ರಹ್ಮಾಂಡಪತಿಂ ಶ್ರೀರಾಧಾಪತಿಂ ಶ್ಯಾಮಲಚ್ಛವಿಂ ಪೀತಾಂಬರವನಮಾಲಾವಂಶೀಧರಂ ಕ್ವಣತ್ಕನಕನೂಪುರಕಿಂಕಿಣೀಕಟಿಕಾಂಗದಹಾರಸ್ಫುರತ್ಕೌಸ್ತುಭಾಂಗುಲೀಯಕೈಃ ಸರ್ವತಃ ಪರಿಸ್ಫುರತ್ಕೋಟಿಬಾಲಮಾರ್ತಂಡಮಂಡಲಂ ಕಿರೀಟಕುಂಡಲಮಂಡಿತಗಂಡಸ್ಥಲಮಲಕಾಲಿಭಿರ್ವಿಭ್ರಾಜಮಾನಮುಖಾರವಿಂದಂ ನಮಸ್ಕೃತ್ಯ ವಿಧಿಃ ಸರ್ವೈಃ ಸರ್ವಂ ಭೂಭಾರವೃತ್ತಾಂತಂ ಕಥಯಾಂಬಭೂವ　　　　|| ೧೪ ||

---

೧೪. ಅನಂತರ ತನ್ನ ದೇಹವೆಲ್ಲವನ್ನೂ ಸುರುಳಿಯಾಗಿ ಸುತ್ತಿಕೊಂಡು ಕುಳಿತಿದ್ದ ಆ ಸಂಕರ್ಷಣಮೂರ್ತಿಯ ಶರೀರದ ಮೇಲೆ ವೃಂದಾವನ, ಯಮುನಾನದಿ, ಗೋವರ್ಧನಪರ್ವತ, ಕುಂಜನಿಕುಂಜಗಳು, ತರುಲತಾಸಮೂಹ, ಗೋಪಗೋಪಿಯರು, ಗೋಕುಲ ಇವೆಲ್ಲವುಗಳಿಂದ ನಿಬಿಡವಾಗಿ ರಮಣೀಯವಾಗಿರುವ ಸರ್ವಲೋಕಗಳಿಂದಲೂ ಪರಿಮಾನಿಸಲ್ಪಡುವ ಗೋಲೋಕವನ್ನು ಕಂಡು ಅದನ್ನು ಪ್ರವೇಶಿಸಿ ಪರಮಪುರುಷನಾದ ಶ್ರೀಹರಿಯ ಅಪ್ಪಣೆಯಂತೆ ಆತನ ನಿವಾಸವಾದ ಕುಂಜಗೃಹವನ್ನು ಪ್ರವೇಶಿಸಿದನು- ಅಲ್ಲಿ ಅಸಂಖ್ಯಾಕವಾದ ಬ್ರಹ್ಮಾಂಡಗಳಿಗೆಲ್ಲಾ ಅಧಿಪತಿಯಾದ ಪರಿಪೂರ್ಣತಮನೆನಿಸಿದ ಶ್ರೀಕೃಷ್ಣಚಂದ್ರನು ತನ್ನ ಪ್ರಿಯೆಯಾದ ರಾಧಿಕೆಯೊಡನೆ ವಿರಾಜಮಾನನಾಗಿದ್ದನು. ಆತನ ದಿವ್ಯಸ್ವರೂಪವನ್ನು ಏನೆಂದು ವರ್ಣಿಸಲಿ! ಶ್ಯಾಮಲವಾದ ಶರೀರಕಾಂತಿ! ಉಟ್ಟಿರುವ ಹೊಂಬಣ್ಣದ ಪಟ್ಟೆಮಡಿ! ಧರಿಸಿರುವ ವನಮಾಲೆ! ಹಿಡಿದಿರುವ ಕೊಳಲು! ಜಣಜಣರೆಂದು ಮಧುರವಾಗಿ ಧ್ವನಿಯನ್ನು ಮಾಡುತ್ತಿರುವ ಕಿರುಗೆಜ್ಜೆಗಳಿಂದ ಕೂಡಿದ ಕಾಲಂದುಗೆಗಳು! ಹೊಳೆಯುತ್ತಿರುವ ಕಡಗ! ತೋಳುಬಳೆ! ಹಾರ! ಕೌಸ್ತುಭ! ಉಂಗುರಗಳೆಂಬ ಆಭರಣಗಳು! ಏಕಕಾಲದಲ್ಲಿ ಉದಯಿಸಿದ ಕೋಟಿ ಎಳೆಯ ಸೂರ್ಯರಿಗೆ ಸರಿಸಮನಾಗಿ ಥಳಥಳಿಸುತ್ತಿರುವ ಅಪಾರವಾದ ತೇಜಸ್ಸನ್ನು ಬೀರುವ ಕಿರೀಟ! .ಕುಂಡಲಗಳಿಂದ ಕಂಗೊಳಿಸುತ್ತಿರುವ ಕಪೋಲಗಳು! ದುಂಬಿಯನ್ನು ಹೋಲುವ ಕಪ್ಪಾದ ಮುಂಗುರುಳುಗಳಿಂದ ಶೋಭಿಸುತ್ತಿರುವ ಅರಳಿದ ತಾವರೆಯಂತಿರುವ ಆ ರಾಧಾಕಾಂತನನ್ನು ಕಂಡೊಡನೆಯೇ ಆ ಬ್ರಹ್ಮನು ತನ್ನೊಡನೆ ಬಂದಿದ್ದವರೆಲ್ಲರೊಡನೆ ಆತನಿಗೆ ನಮಸ್ಕಾರಮಾಡಿ ಭೂಮಿಗೆ ಒದಗಿರುವ ಅಪಾರವಾದ ಹೊರೆಯ ಸಂಗತಿಯನ್ನು ತಿಳಿಯಪಡಿಸಿದನು.

ತೇಷಾಂ ವಿಜ್ಞಪ್ತಿಂ ವಿಜ್ಞಾಯ ಭೂಮಿಭಾರಹರಣಾರ್ಥಂ ಭಗವಾನ್ಸ್ವಜನಾನ್ಸರ್ವದೇವಾನ್ ಯಥಾತಥಮಾಜ್ಞಾಂ ದತ್ವಾಽನಂತಂ ಸಹಸ್ರವದನಮಿತಿ ಹೋವಾಚ ॥ ೧೫ ॥

ಅಂಗ ಪುರಸ್ತ್ವಮಪಿ ವಸುದೇವಸ್ಯ ದೇವಕ್ಯಾಂ ಭೂತ್ವಾ ರೋಹಿಣ್ಯುದರಾದಾವಿರ್ಭವ। ಪಶ್ಚಾದ್ದೇವಕ್ಯಾಃ ಪುತ್ರತಾಮಹಂ ಪ್ರಾಪ್ಸ್ಯಾಮಿ ॥ ೧೬ ॥

**ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ
ದುರ್ಯೋಧನಪ್ರಾಡ್ವಿಪಾಕಸಂವಾದೇ ಬಲದೇವಾವತಾರಕಾರಣಂ
ನಾಮ ಪ್ರಥಮೋಽಧ್ಯಾಯಃ**

---

೧೫. ಆ ಬಿನ್ನಹವನ್ನಾಲಿಸಿದ ಪರಮಪುರುಷನು ಭೂಭಾರವನ್ನು ಪರಿಹರಿಸುವ ಸಲುವಾಗಿ ತನ್ನವರಾದ ಆ ದೇವತೆಗಳಿಗೆಲ್ಲರಿಗೂ ಉಚಿತವಾದ ಅಪ್ಪಣೆಯನ್ನಿತ್ತನಂತರ ಸಹಸ್ರಮುಖಗಳಿಂದ ವಿರಾಜಿಸುತ್ತಿರುವ ಅನಂತನನ್ನು ಕುರಿತು,

೧೬. " ಆರ್ಯ ! ನೀನೂ ಸಹ ಮುಂಚಿತವಾಗಿ ವಸುದೇವನ ಪತ್ನಿಯಾದ ದೇವಕಿಯಲ್ಲಿ ಕೆಲಕಾಲ ನೆಲಸಿದ್ದು ಅನಂತರ ಆತನ ಮತ್ತೊಬ್ಬ ಪತ್ನಿಯಾದ ರೋಹಿಣಿಯ ಜಠರದಲ್ಲಿ ಪೂರ್ಣವಾಗಿ ಬೆಳೆದು ಭೂಮಿಯಲ್ಲಿ ಅವತಾರಮಾಡು. ನಾನೂ ಸಹ ದೇವಕಿಯ ಮಗನಾಗಿ ಜನಿಸುವೆನು " ಎಂದು ನುಡಿದನು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ಬಲಭದ್ರಖಂಡದ ದುರ್ಯೋಧನ
ಪ್ರಾಡ್ವಿಪಾಕಸಂವಾದದಲ್ಲಿ ಬಲದೇವಾವತಾರಕಾರಣವೆಂಬ
ಒಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ದ್ವಿತೀಯೋಽಧ್ಯಾಯಃ

॥ ಪ್ರಾಡ್ವಿಪಾಕ ಉವಾಚ ॥

ಇತ್ಯುಕ್ತಃ ಸಹಸ್ರವದನೋ ಗಂತುಮಭ್ಯುದಿತಃ ಸ್ವಸಭಾಯಾಂ ಸ್ಥಿತೋಽಭೂತ್ । ತದೈವ ಸಿದ್ಧಚಾರಣಗಂಧರ್ವಾಃ ಸರ್ವತಸ್ತಂ ನತ ಕಂಧರಾ ಬಭೂವುಃ ॥ ೧ ॥

ಅಥ ಸುಗತಿಃ ಸಾರಥಿರ್ದಿವ್ಯಂ ರಥಂ ತಾಲಾಂಕಂ ಸಾಶ್ವಂ ಸಮಾನೀಯ ಸಂಮುಖಂ ಸ್ಥಿತೋಽಭೂತ್ ॥ ೨ ॥

ಎರಡನೆಯ ಅಧ್ಯಾಯವು

೧. "ಓ ಕುರುರಾಜ ! ಈ ರೀತಿಯಾಗಿ ಪರಮಪುರುಷನಿಂದ ಆಜ್ಞಪ್ತನಾದ ಆ ಸಹಸ್ರಮುಖಗಳ ಅನಂತನು ಭೂಮಿಯಲ್ಲಿ ಅವತರಿಸಲು ಸಿದ್ಧನಾಗಿ ತನ್ನ ಸಭೆಯಲ್ಲಿ ಕುಳಿತಿದ್ದನು. ಆಗ ಆತನ ಸುತ್ತಲೂ ನೆರೆದಿದ್ದ ಸಿದ್ಧರೂ, ಚಾರಣರೂ, ಗಂಧರ್ವರೂ ಆ ಸಂಕರ್ಷಣಮೂರ್ತಿಯನ್ನು ತಲೆವಾಗಿ ನಮಸ್ಕರಿಸಿದರು.

೨. ಅಷ್ಟರಲ್ಲಿ ಆ ಸಂಕರ್ಷಣನ ಸಾರಥಿಯಾದ ಸುಗತಿಯೆಂಬುವನು ತಾಳೆಯಮರದ ಧ್ವಜದಿಂದ ಕಂಗೊಳಿಸುತ್ತಿರುವ ದಿವ್ಯವಾದ ಆತನ ರಥಕ್ಕೆ ಕುದುರೆಗಳನ್ನು ಹೂಡಿ ಪ್ರಯಾಣಸನ್ನದ್ಧನಾಗಿ ಆತನೆದುರಿಗೆ ಆ ರಥವನ್ನು ತಂದು ನಿಲ್ಲಿಸಿದನು.

ಪರಸೈನ್ಯವಿದಾರಣಂ ಮುಸಲಂ ದೈತ್ಯದಮನಂ ಹಲಂ ತೇ ತೂರ್ಣಂ ಪುರಸ್ತಾದುಪತಸ್ಥತುರ್ಬ್ರಹ್ಮಮಯಂ ನಾಮ ವರ್ಮ ಚೋಪತಸ್ಥೇ॥ ೩ ॥

ಅಥ ತತ್ರ ಶ್ರೀಬಲಭದ್ರಸಭಾಯಾಂ ಸರ್ವೇಷಾಂ ಪಶ್ಯತಾಂ ರಮಾವೈಕುಂಠಾತ್ಸಮಾಗತಃ। ಪಾಣಿನಿಪತಂಜಲಿಭಿರ್ಮುನಿಭಿಃ ಸ್ತೂಯಮಾನಃ ಸಹಸ್ರಫಣಮೌಲಿವಿರಾಜಮಾನಃ ಸಿದ್ಧಚಾರಣಚಾಮರಸಂಸೇವ್ಯಮಾನಃ ಶೇಷಸ್ತಮನಂತಂ ಸಂಕರ್ಷಣಂ ಸ್ತುತ್ವಾ ತದ್ವಿಗ್ರಹೇ ಸಂಲೀನೋಽಭೂತ್ ॥ ೪ ॥

ಅಥಾಜಿತ್ವೈಕುಂಠಾತ್ಸಮಾಗತೋಽಜೈಕಪಾದಹಿರ್ಬುಧ್ನ್ಯಬಹುರೂಪಮಹದಾದಿಭಿಃ ಸಂವೇಷ್ಟಿತೋ ಘೋರೈಃ ಪ್ರೇತವಿನಾಯಕೈಃ ಸಂವೇಷ್ಟಿತಃ ಶೇಷಃ ಸಹಸ್ರವದನಃ ಸಮಾಗತ್ಯ ಸಸಭಾಯಾಮನಂತಂ ಸ್ತುತ್ವಾ ತಸ್ಮಿನ್ ಸಂಲೀನೋಽಭೂತ್ ॥ ೫ ॥

---

೩. ಅದರಂತೆ ಶತ್ರುಸೈನ್ಯವನ್ನು ತುಂಡರಿಸುವಂತಹ ಸಾಮರ್ಥ್ಯವುಳ್ಳ ಮುಸಲಾಯುಧವೂ, ದೈತ್ಯರನ್ನು ದಂಡಿಸುವಂತಹ ಹಲಾಯುಧವೂ ಬೇಗನೆ ಬಂದು ಆ ಅನಂತನ ಎದುರಿನಲ್ಲಿ ನಿಂತುವು. ಅದರಂತೆಯೇ ಬ್ರಹ್ಮಮಯವೆಂಬ ಕವಚವೂ ಅಲ್ಲಿ ಸನ್ನಿಹಿತವಾಯಿತು.

೪. ಆ ಸಮಯಕ್ಕೆ ಸರಿಯಾಗಿ ಬಲಭದ್ರಗದವಾಚ್ಯನಾದ ಆ ಸಂಕರ್ಷಣಮೂರ್ತಿಯು ಸಭೆಯಲ್ಲಿದ್ದವರೆಲ್ಲರೂ ನೋಡುತ್ತಿರುವಂತೆಯೇ ಶ್ರೀವೈಕುಂಠದಿಂದ ಶೇಷನು ಬಿಜಯಮಾಡಿಸಿದನು. ಆತನಿಗೂ ಸಾವಿರ ಹೆಡೆಗಳು ವಿರಾಜಿಸುತ್ತಿದ್ದುವು. ಆ ಶೇಷನನ್ನು ಪಾಣಿನಿ, ಪತಂಜಲಿ ಮುಂತಾದ ಮುನಿಗಳೂ ಸ್ತುತಿಸುತ್ತಾ ಹಿಂಬಾಲಿಸುತ್ತಿದ್ದರು. ಸಿದ್ಧರೂ, ಚಾರಣರೂ ಅಕ್ಕಪಕ್ಕದಲ್ಲಿ ಚಾಮರಗಳನ್ನು ಹಿಡಿದು ಬೀಸುತ್ತಾ ಸೇವಿಸುತ್ತಿದ್ದರು. ಈ ರೀತಿಯಾಗಿ ವೈಭವದಿಂದ ಬಂದ ಆ ಶೇಷನು ಸಂಕರ್ಷಣಮೂರ್ತಿಯೆನಿಸಿದ ಆ ಅನಂತನನ್ನು ಸ್ತುತಿಸಿ ಆತನ ಶರೀರದಲ್ಲಿಯೇ ಐಕ್ಯವಾಗಿಬಿಟ್ಟನು.

೫. ಇದಾದನಂತರ ಅಜಿತ್ತೆಂಬ ವೈಕುಂಠದಿಂದ ಸಹಸ್ರಫಣಾಮಂಡಲಗಳಿಂದ ಪರಿಶೋಭಿಸುತ್ತಿರುವಂತಹ ಇನ್ನೊಬ್ಬ ಶೇಷನು ಆ ಸಭೆಗೆ ದಯಮಾಡಿಸಿದನು. ಆತನನ್ನು ಏಕಪಾದನಾದ ಅಜನೂ, ಅಹಿರ್ಬುಧ್ನ್ಯನೂ, ಬಹುರೂಪನೂ, ಮಹದಾದಿಗಳೂ, ಘೋರಾಕಾರರಾದ ಪ್ರೇತಗಳೂ, ಗಣನಾಯಕರೂ ಸುತ್ತುವರಿದುಕೊಂಡು ಓಲೈಸುತ್ತಿದ್ದರು. ಆ ಶೇಷನೂ ಸಹ ಅಲ್ಲಿಗೆ ಬಂದೊಡನೆಯೇ ಆ ಅನಂತನನ್ನು ಸ್ತುತಿಸಿ ಆತನಲ್ಲಿ ಐಕ್ಯವನ್ನು ಹೊಂದಿಬಿಟ್ಟನು.

ಅಥ ಶ್ವೇತದ್ವೀಪಾತ್ಸಮಾಗತಃ ಕುಮುದಕುಮುದಾಕ್ಷಾದಿಭಿಃ ಪಾರ್ಷದಪ್ರವರೈಃ ಸಂಸೇವ್ಯಮಾನಃ ಸಹಸ್ರಫಣಮೌಲಿವಿರಾಜಮಾನಃ ಸಿತಾಚಲಾಭೋ ನೀಲಾಂಬರೋ ನೀಲಕುಂತಲಾಭೋ ಭೀಮಾಭಃ ಸರ್ವೇಷಾಂ ಪಶ್ಯತಾಮನಂತವಿಗ್ರಹೇ ಸೋಽಪಿ ಸಂಲೀನೋಽಭೂತ್ ॥ ೬ ॥

ಅಥ ತಥೈವೇಲಾವೃತಖಂಡಾತ್ಸಮಾಗತಃ ಸ್ತ್ರೀಗಣಾರ್ಬುದಸಹಸ್ರೈರ್ಭವಾನೀನಾಥೈಃ ಸಮಾವೃತಃ ಶೇಷಃ ಸಹಸ್ರವದನಮೌಲಿಮಂಡಲ ಮಂಡಿತಃ ಪ್ರಸ್ಫುರತ್ಕಿರೀಟಕಟಕಾಂಗದಃ ಸಭಾಮೇತ್ಯಾನಂತವಿಗ್ರಹೇ ಸಂಪ್ರಲೀನೋಽಭೂತ್ ॥ ೭ ॥

---

೬. ಅನಂತರ ಶ್ವೇತದ್ವೀಪದಿಂದ ಮತ್ತೊಬ್ಬ ಶೇಷಮೂರ್ತಿಯು ಕುಮುದ, ಕುಮುದಾಕ್ಷ ಮುಂತಾದ ತನ್ನ ಅನುಚರರಿಂದ ಸೇವಿಸಲ್ಪಡುತ್ತಾ ಆ ಸಭೆಯನ್ನು ಪ್ರವೇಶಿಸಿದನು. ಆತನಿಗೂ ಸಾವಿರ ಹೆಡೆಗಳು ಶೋಭಿಸುತ್ತಿದ್ದುವು. ಆ ಶೇಷ ಮೂರ್ತಿಯು ನೋಡಿದರೆ ಹೆದರಿಕೆಯಾಗುವಂತಿದ್ದ ತನ್ನ ಬೃಹದಾಕಾರದಿಂದ ಶ್ವೇತ ಪರ್ವತವನ್ನು ಹೋಲುತ್ತಾ ನೀಲವಾದ ವಸನದಿಂದಲೂ, ಕಪ್ಪಾದ ತಲೆಕೂದಲು ಗಳಿಂದಲೂ ಕಂಗೊಳಿಸುತ್ತಿದ್ದನು. ಆ ಮೂರ್ತಿಯೂ ಕೂಡ ಆ ಸಭಾಸದರೆಲ್ಲರೂ ನೋಡುತ್ತಿರುವಂತೆಯೇ ಆ ಅನಂತನನ್ನು ಸ್ತೋತ್ರಮಾಡಿ ಆತನಲ್ಲಿಯೇ ಸೇರಿ ಹೋದನು.

೭. ಇದಾದ ಕೂಡಲೇ ಇಲಾವೃತಖಂಡದಿಂದ ಸಾವಿರ ಹೆಡೆಗಳಿಂದ ಅಲಂಕೃತನಾದ ಮತ್ತೊಬ್ಬ ಶೇಷನು ಥಳಥಳಿಸುತ್ತಿರುವ ಕಿರೀಟಗಳಿಂದಲೂ, ಕಡಗ ಗಳಿಂದಲೂ, ತೋಳುಬಳೆಗಳಿಂದಲೂ ಶೋಭಿಸುತ್ತಾ ಒಂದುಸಾವಿರ ಅರ್ಬುದಗಳಷ್ಟು ಸ್ತ್ರೀಯರಿಂದಲೂ, ರುದ್ರರಿಂದಲೂ ಪರಿವೃತನಾಗಿ ಆ ಸಭೆಯನ್ನು ಪ್ರವೇಶಿಸಿ ಆ ಸಂಕರ್ಷಣಮೂರ್ತಿಯನ್ನು ಸ್ತುತಿಸಿ ಆತನ ಶರೀರದಲ್ಲಿ ಐಕ್ಯವಾಗಿಬಿಟ್ಟನು.

ಅಥ ಪಾತಾಲಸ್ಯಾಧಸ್ತಾದ್ದ್ವಾತ್ರಿಂಶದ್ಯೋಜನಸಹಸ್ರಾಂತರಾತ್ ಸಮಾಗತೋ ಭಗವತಸ್ತಾಮಸೀಕಲಃ ಸಾಕ್ಷಾತ್ಸಹಸ್ರವದನಕಿರೀಟಮಾರ್ತಂಡಮಂಡಲಮಂಡಿತೋ ವೇದವ್ಯಾಸಪರಾಶರಸನಕಸನಂದನಸನಾತನಸನತ್ಕುಮಾರನಾರದಸಾಂಖ್ಯಾಯನಪುಲಸ್ತ್ಯಬೃಹಸ್ಪತಿಮೈತ್ರೇಯಾದಿ ಮಹರ್ಷಿಭಿಃ ಸಂಶೋಭಿತೋ ವಾಸುಕಿಮಹಾಶಂಕಶ್ವೇತಧನಂಜಯ ಧೃತರಾಷ್ಟ್ರ ಕುಹಕ ಕಾಲಿಯ ತಕ್ಷಕ ಕಂಬಲಾಶ್ವತರದೇವದತ್ತಾದಿಭಿರ್ನಾಗೇಂದ್ರೈಶ್ಚಾಮರಪಾಣಿಭಿಃ ಸಂಸೇವ್ಯಮಾನೋ ಮೃದಮದಾಗರುಕುಂಕುಮಚಂದನಪಂಕಾವಲಿಪ್ತಮಾನಾಭಿರ್ನಾಗಕನ್ಯಾಭಿಃ ಸಿದ್ಧ ಚಾರಣ ಗಂಧರ್ವವಿದ್ಯಾಧರಗಣೈರುಪಗೀಯಮಾನೋ ಹಾಟಕೇಶ್ವರತ್ರಿಪುರಬಲಕಾಲಕೇಯಕಲಿನಿವಾತಕವಚೈರನುಯಾ-ಯಿಭಿಃ ಪುರಃಸರೈರುದ್ರೈಕಾದಶವ್ಯೂಹೈರ್ನಾಭಿಕಾಮಧೇನುವರುಣೈಃ

---

೮. ಅನಂತರ ಪಾತಾಳಲೋಕದಿಂದ ಭಗವಂತನ ತಾಮಸವಾದ ಕಲೆಯೆನಿಸಿದ ಸಹಸ್ರಫಣಾಮಂಡಲ ಪರಿವೃತನಾದ ಇನ್ನೊಬ್ಬ ಶೇಷನು ಸೂರ್ಯಮಂಡಲದಂತೆ ಥಳಥಳಿಸುತ್ತಿರುವ ಕಿರೀಟಗಳಿಂದ ಅಲಂಕೃತನಾಗಿ ಮೂವತ್ತು ಸಹಸ್ರ ಯೋಜನಗಳಷ್ಟು ದೂರದಿಂದ ಆ ಸಭೆಗೆ ಪ್ರವೇಶಿಸಿದನು. ಆತನನ್ನು ವೇದವ್ಯಾಸ, ಪರಾಶರ, ಸನಕ, ಸನಂದ, ಸನಾತನ, ಸನತ್ಕುಮಾರ, ನಾರದ, ಸಾಂಖ್ಯಾಯನ. ಪುಲಸ್ತ್ಯ, ಬೃಹಸ್ಪತಿ, ಮೈತ್ರೇಯ ಮೊದಲಾದ ಮಹರ್ಷಿಗಳೂ ಓಲೈಸುತ್ತಿದ್ದರು. ವಾಸುಕಿ, ಮಹಾಶಂಖ, ಶ್ವೇತ, ಧನಂಜಯ, ಧೃತರಾಷ್ಟ್ರ, ಕುಹಕ, ಕಾಲಿಯ, ತಕ್ಷಕ, ಕಂಬಲ, ಅಶ್ವತರ, ದೇವದತ್ತ ಮುಂತಾದ ಸರ್ಪಶ್ರೇಷ್ಠರು ಚಾಮರಗಳನ್ನು ಹಿಡಿದು ಬೀಸುತ್ತಾ ಸೇವೆಮಾಡುತ್ತಿದ್ದರು. ನಾಗಕನ್ನಿಕೆಯರು ಕಸ್ತೂರಿ, ಕೇಸರಿ, ಅಗುರು, ಶ್ರೀಗಂಧ ಮೊದಲಾದುವುಗಳನ್ನು ಅರೆದ ಅನುಲೇಪನದಿಂದ ಆತನನ್ನು ಲೇಪಿಸುತ್ತಾ ಸಂತೋಷಪಡುತ್ತಿದ್ದರು. ಸಿದ್ಧರೂ, ಚಾರಣರೂ, ಗಂಧರ್ವರೂ, ವಿದ್ಯಾಧರರೂ ಗುಂಪುಗುಂಪಾಗಿ ಆ ಶೇಷನ ವೈಭವವನ್ನು ಗಾನರೂಪವಾಗಿ ಕೊಂಡಾಡುತ್ತಿದ್ದರು. ಆತನ ಹಿಂದುಗಡೆ ಹಾಟಕೇಶ್ವರ, ತ್ರಿಪುರ, ಬಲ, ಕಾಲಕೇಯ, ಕಲಿ, ನಿವಾತಕವಚರೆಂಬ ಪ್ರಭೇದಗಳಿಗೊಳಪಟ್ಟ ದೈತ್ಯರು ಹಿಂಬಾಲಿಸುತ್ತಾ ಬರುತ್ತಿದ್ದರು. ಮುಂದುಗಡೆ ಏಕಾದಶರುದ್ರರು ಸಾಲಾಗಿ ಬಂದರು. ಇವರ ಹಿಂದೆ ನಾಭಿಯೂ, ಕಾಮಧೇನುವೂ, ವರುಣನೂ ಬಂದರು. ಈ ನಾಗರಾಜನನ್ನು ಸಂತೋಷಪಡಿಸಲು ವೀಣ, ವೇಣು, ಮೃದಂಗ, ತಾಲ, ದುಂದುಭಿ ಮೊದಲಾದ

ಪಶ್ಚಾತ್ತ್ರಯಾಯಿಭಿರ್ವೀಣಾವೇಣುಮೃದಂಗತಾಲದುಂದುಭಿಧ್ವನಿ ಶಬ್ದಾಯಮಾನಃ ಫಣೀಂದ್ರೋ ನಾಗೇಂದ್ರ ಇವ ತೂರ್ಣಗತಿರ್ವಿರಾಜತೇ। ಯಸ್ಯೈಕಫಣೇ ಚೇದಂ ಕ್ಷಿತಿಮಂಡಲಂ ಸಿದ್ಧಾರ್ಥ ಇವ ಲಕ್ಷ್ಯತೇ ಸೋಽಪ್ಯಾಗತ್ಯ ಮಹಾನಂತವಿಗ್ರಹೇ ಸಂಲೀನೋಽಭೂತ್ ॥ ೮ ॥

ತಚ್ಚಿತ್ರಂ ದೃಷ್ಟ್ವಾ ತತ್ಸಭಾಪಾರ್ಷದಾಃ ಸರ್ವೇ ತಂ ಪರಿಪೂರ್ಣತಮಂ ಜ್ಞಾತ್ವಾವನತಾ ವಿಸ್ಮಿತಾ ಬಭೂವುಃ ॥ ೯ ॥

ಅಥಾನಂತವದನೋ ಮಹಾನಂತಃ ಸಂಕರ್ಷಣೋ ಭಗವಾನ್ ಪಾರ್ಷದಾನ್ಸಿದ್ಧಾನುವಾಚ ॥ ೧೦ ॥

ಅಹಂ ಭೂಮಿಭಾರಹರಣಾರ್ಥಂ ಭುವಿ ಗಮಿಷ್ಯಾಮಿ ತಸ್ಮಾದ್ಯೂಯಂ ಯಾದವೇಷು ಭವಿಷ್ಯಥ ॥ ೧೧ ॥

ವಾದ್ಯಗಳನ್ನು ಇಂಪಾಗಿ ನುಡಿಸುತ್ತಿದ್ದರು. ಓ ಕುರುರಾಜ! ಈ ನಾಗೇಂದ್ರನ ಒಂದೇ ಒಂದು ತಲೆಯ ಮೇಲೆ ಈ ಭಾರಿಯಾದ ಭೂಮಂಡಲವೆಲ್ಲವೂ ಸಾಸಿವೆಯ ಕಾಳಿನಂತೆ ಅತಿ ಸಣ್ಣನಾಗಿ ತೋರುವುದು. ಇಂಥ ಆ ನಾಗರಾಜನು ಮದ್ದಾನೆಯಂತೆ ಸರಸರನೆ ಬಂದು ಆ ಮಹಾಪುರುಷನಾದ ಅನಂತನ ಮೂಲಸ್ವರೂಪದಲ್ಲಿ ಸೇರಿ ಕಣ್ಮರೆಯಾಗಿಬಿಟ್ಟನು.

೯. ಈ ಆಶ್ಚರ್ಯವನ್ನು ಕಂಡು ಆ ಸಭೆಯಲ್ಲಿದ್ದ ಪಾರಿಷದರೆಲ್ಲರೂ ಆ ಸಂಕರ್ಷಣಮೂರ್ತಿಯನ್ನು ಪರಿಪೂರ್ಣತಮನೆಂಬುದಾಗಿ ಅರಿತು ವಿನಯದಿಂದ ತಲೆವಾಗಿ ಬೆರಗಾಗಿ ನಿಂತರು.

೧೦. ಅನಂತರ ಅಸಂಖ್ಯಾತವಾದ ಮುಖಮಂಡಲಗಳಿಂದ ಕೂಡಿದ ಮಹಾನಂತಸ್ವರೂಪನಾದ ಭಗವಂತನಾದ ಸಂಕರ್ಷಣಮೂರ್ತಿಯು ತನ್ನ ಸಭೆಯಲ್ಲಿ ಸೇರಿದ್ದ ಸಿದ್ಧರನ್ನೂ, ಪಾರಿಷದರನ್ನೂ ಈ ಕುರಿತು ರೀತಿಯಾಗಿ ನುಡಿದನು.

೧೧. ನಾನು ಭೂಭಾರವನ್ನು ಪರಿಹರಿಸುವ ಸಲುವಾಗಿ ಭೂಲೋಕಕ್ಕೆ ತೆರಳುವೆನು. ಆದುದರಿಂದ ನೀವೂ ಸಹ ಯದುವಂಶದಲ್ಲಿ ಅವತರಿಸಿರಿ.

ಭೋಃ ಪ್ರಬಲೋದ್ಭಟ ಸುಮತೇ ಸಾರಥೇ ಭವತಾತ್ರೈವ ಸ್ಥೀಯತಾಂ ಶೋಕಂ ಮಾ ಕುರುತಾತ್। ಯದಾ ಯುದ್ಧಾರ್ಥೀ ತ್ವತ್ಸ್ಮರಣಂ ಕರಿಷ್ಯಾಮಿ ತದಾ ತ್ವಂ ದಿವ್ಯಂ ತಾಲಾಂಕಂ ರಥಂ ನೀತ್ವಾ ಮತ್ಸಮೀಪ ಮಾಗಮಿಷ್ಯಸಿ ॥ ೧೨ ॥

ಹೇ ಹಲ ಮುಸಲೇ ಯದಾ ಯದಾ ಯುವಯೋಃ ಸ್ಮರಣಂ ಕರಿಷ್ಯಾಮಿ ತದಾ ತದಾ ಮತ್ಪುರ ಆವಿರ್ಭೂತೇ ಭವತಂ ॥ ೧೩ ॥

ಭೋ ವರ್ಮ ತ್ವಮಪಿ ಚಾವಿರ್ಭವ। ಹೇ ಮುನಯಃ ಪಾಣಿನ್ಯಾದಯೋ, ಹೇ ವ್ಯಾಸಾದಯೋ, ಹೇ ಕುಮುದಾದಯೋ, ಹೇ ಕೋಟಿಶೋ ರುದ್ರಾ, ಹೇ ಭವಾನೀನಾಥ, ಹೇ ಏಕಾದಶರುದ್ರಾ, ಹೇ ಗಂಧರ್ವಾ, ಹೇ ವಾಸುಕ್ಯಾದಿನಾಗೇಂದ್ರಾ, ಹೇ ನಿವಾತಕವಚಾ, ಹೇ ವರುಣ, ಹೇ ಕಾಮಧೇನೋ, ಭೂಮ್ಯಾಂ ಭರತಖಂಡೇ ಯದುಕುಲೇಽವತರಂತಂ ಮಾಂ ಯೂಯಂ ಸರ್ವೇ ಸರ್ವದಾ ನಿತ್ಯ ಮಮ ದರ್ಶನಂ ಕುರುತ ॥ ೧೪ ॥

---

೧೨. ಎಲೈ ಸಾಹಸಿಗನಾದ ಸಾರಥಿಯೆನಿಸಿದ ಸುಮತಿಯೇ! ನೀನು ಇಲ್ಲೇ ಇರು. ಅಗಲುವೆನೆಂದು ದುಃಖಿಸಬೇಡ. ನಾನು ಯುದ್ಧಾರ್ಥವಾಗಿ ನಿನ್ನನ್ನು ಸ್ಮರಿಸಿದಾಗ ತಾಲಧ್ವಜದಿಂದ ಶೋಭಿಸುತ್ತಿರುವೀ ದಿವ್ಯವಾದ ರಥವನ್ನು ತೆಗೆದುಕೊಂಡು ಕೂಡಲೇ ನನ್ನ ಬಳಿಗೆ ಬರುವೆಯಂತೆ.

೧೩. ಎಲೈ ಹಲಮುಸಲಾಯುಧಗಳಿರಾ! ನಿಮ್ಮಿಬ್ಬರನ್ನೂ ನಾನು ಯಾವಾಗ ನೆನೆಸುವೆನೋ ಆ ಕೂಡಲೇ ನನ್ನೆದುರು ಬಂದು ನಿಲ್ಲಿರಿ. ಎಲೈ ಕವಚವೇ, ನೀನೂ ಸಹ ಹಾಗೆಯೇ ನನ್ನ ಬಳಿ ಸನ್ನಿಹಿತವಾಗುವೆಯಂತೆ!

೧೪. ಎಲೈ ಮುನಿಶ್ರೇಷ್ಠರಾದ ಪಾಣಿನ್ಯಾದಿಗಳಿರಾ! ಕುಮುದ ಕುಮುದಾಕ್ಷಾದಿಪಾರ್ಷದ ಶ್ರೇಷ್ಠರಿರಾ! ಕೋಟಿ ರುದ್ರರಿರಾ! ಓ ಭವಾನಿನಾಥ! ಎಲೈ ಏಕಾದಶರುದ್ರರಿರಾ! ಗಂಧರ್ವರಿರಾ! ವಾಸುಕ್ಯಾದಿ ಮಹಾಸರ್ಪಗಳಿರಾ! ನಿವಾತಕವಾಚಾದಿದೈತ್ಯರಿರಾ! ಓ ವರುಣಾ! ಎಲೆ ಕಾಮಧೇನು! ನಿವೆಲ್ಲರೂ ಭೂಮಂಡಲದಲ್ಲಿ ಯದುವಂಶದಲ್ಲಿ ಅವತರಿಸುವಂತಹ ನನ್ನನ್ನು ಸರ್ವಕಾಲದಲ್ಲಿಯೂ ಬಂದು ಸಂದರ್ಶನವನ್ನು ತೆಗೆದುಕೊಳ್ಳುತ್ತಿರಿ.

॥ ಪ್ರಾಡ್ವಿಪಾಕ ಉವಾಚ ॥

ಇತ್ಯಾಜ್ಞಪ್ತಾಃ ಸರ್ವೇ ಸ್ವಂ ಸ್ವಂ ಧಾಮ ಸಮಾಜಗ್ಮುಃ। ತೇಷು ತೇಷು ನಾಗಕನ್ಯಾಯೂಥಂ ಭಗವಾನಂತಃ ಪ್ರಾಹ। ಯುಷ್ಮಾಕಮಭಿಪ್ರಾಯೋ ಮಯಾ ಜ್ಞಾತಸ್ತಪಸಾ ಗೋಪಾಲಾನಾಂ ಗೃಹೇಷು ಜನ್ಮಾನಿ ಪ್ರಾಪ್ಯ ಮದ್ದರ್ಶನಂ ಕುರುತ ॥ ೧೫ ॥

ಕದಾಚಿತ್ಕಲಿಂದನಂದಿನೀಕೂಲೇ ವಿಹಾರಮಾಧುರ್ಯೇಮೂಲೇ ಯುಷ್ಮಾಭಿಃ ಸಹ ರಾಸಮಂಡಲಂ ಕರಿಷ್ಯಾಮಿ ಯುಷ್ಮಾಕಂ ಮನೋ-ರಥಃ ಸಫಲೋ ಭವಿಷ್ಯತಿ ॥ ೧೬ ॥

ಅಥ ನಿವಾತಕವಚಾನಾಂ ರಾಜಾ ಕಲಿಃ ಸ್ವಾಮಿಪಾದಕೃತಮಸ್ತ-ತಾಂಜಲಿಃ ಪ್ರದತ್ತಪುಷ್ಪಾವಲಿಃ ಶ್ರೀಭಗವಂತಂ ಪ್ರತ್ಯುವಾಚ ॥ ೧೭ ॥

---

೧೫. ಓ ಕುರುರಾಜ! ಈ ರೀತಿಯಾಗಿ ಆ ಸಂಕರ್ಷಣಮೂರ್ತಿಯಿಂದ ಆಜ್ಞಪ್ತರಾದ ಆ ಸಭಾಸದರೆಲ್ಲರೂ ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು. ಅವರು ಹೊರಟುಹೋದನಂತರ ಭಗವಂತನಾದ ಆ ಅನಂತನು ನಾಗಕನ್ಯೆಯರ ಪರಿವಾರವನ್ನು ಕುರಿತು "ನಿಮ್ಮ ಮನದಾಸೆಯನ್ನು ನಾನು ಅರಿತಿರುವೆನು. ನೀವು ನಿಮ್ಮ ತಪೋಬಲದ ಮಹಿಮೆಯಿಂದ ಗೋಪಾಲಕರ ಮನೆಗಳಲ್ಲಿ ಜನ್ಮವನ್ನು ತಾಳಿ ನನ್ನನ್ನು ಕಾಣಿರಿ.

೧೬. ನಾನು ಯಮುನಾನದಿಯ ತೀರದಲ್ಲಿ ಒಂದುಬಾರಿ ನಿಮ್ಮೆಲ್ಲರೊಂದಿಗೂ ವಿಹರಿಸುತ್ತಾ ರಾಸಲೀಲೆಯನ್ನು ತೋರ್ಪಡಿಸುವೆನು. ಆಗ ನಿಮ್ಮ ಮನದಾಸೆಯು ಈಡೇರುವುದು" ಎಂದು ನುಡಿದನು.

೧೭. ಓ ಕುರುರಾಜ! ಆಗ ನಿವಾತಕವಚರೆಂಬ ದೈತ್ಯರಿಗೆ ಅಧಿರಾಜನಾದ ಕಲಿಯು ಆ ಸಂಕರ್ಷಣಮೂರ್ತಿಯ ಕಾಲುಗಳ ಮೇಲೆ ತಲೆಯಿಟ್ಟು ನಮಸ್ಕರಿಸಿ ಕೈಮುಗಿದುಕೊಂಡು ಹೂಗಳಿಂದ ಪೂಜಿಸಿ ಆ ಭಗವಂತನನ್ನು ಇಂತೆಂದು ಪ್ರಾರ್ಥಿಸಿದನು.

ಅಹಂ ಕಿಂ ಕರಿಷ್ಯಾಮಿ ಮಯ್ಯಾಜ್ಞಾಂ ಕುರು। ಭಗವನ್ಯತ್ರ ತ್ವಂ ಗಮಿಷ್ಯಸಿ ತತ್ರಾಪ್ಯಹಂ ಗಮಿಷ್ಯಾಮಿ ಹ ವಾವ ತ್ವದ್ವಿಯೋಗೇನ ಮಹಾ ಸ್ಖೇದೋ ಭವಿಷ್ಯತಿ ಸಹೈವ ಮಾಂ ನಯ ತ್ವಂ ಭಕ್ತವತ್ಸಲೋಽಸಿ ೧೮ ||

ಏವಂ ಸಂಪ್ರಾರ್ಥಿತೋ ಭಗವಾನನಂತಃ ಕಲಿಂ ರಾಜಾನಂ ಸ್ವಭಕ್ತಂ ಪ್ರಸನ್ನಃ ಪ್ರತ್ಯುವಾಚ। ಸುಖೇನ ತ್ವಂ ಮತ್ಸಹೈವಾಗಚ್ಛ ಭರತಖಂಡೇ ಕೌರವೇಂದ್ರಾಣಾಂ ಕುಲೇ ಧೃತರಾಷ್ಟ್ರಸ್ಯ ಪುತ್ರೋ ಭೂತ್ವಾ ದುರ್ಯೋಧನೋ ನಾಮ ಚಕ್ರವರ್ತೀ ಭವಿಷ್ಯಸಿ । ತ್ವತ್ಸಹಾಯಮಹಂ ಕರಿಷ್ಯಾಮಿ ಗದಾಶಿಕ್ಷಾಂ ದಾಸ್ಯಾಮಿ || ೧೯ ||

ಇತ್ಯುಕ್ತಃ ಕಲಿಸ್ತಂ ನಮಸ್ಕೃತ್ಯ ಸ್ವಧಾಮಂ ಗತವಾನ್। ಸೈಷ ಕಲಿಸ್ತ್ವಮೇವ ಜಾತೋಽಸಿ। ವಿಷ್ಣುಮಾಯಯಾ ಸ್ವಾತ್ಮಾನಂ ನ ಸ್ಮರಸಿ || ೨೦ ||

ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ ಪ್ರಾಡ್ವಿಪಾಕ
ದುರ್ಯೋಧನಸಂವಾದೇ ಸಂಕರ್ಷಣಗಮನತಂತ್ರಂ
ನಾಮ ದ್ವಿತೀಯೋಽಧ್ಯಾಯಃ

---

೧೮. "ಹೇ ಭಗವನ್! ನಾನೇನು ಮಾಡಲಿ ? ನನಗೆ ಅಪ್ಪಣೆಯನ್ನು ಕೊಡು. ನೀನೆಲ್ಲಿಗೆ ಹೋಗುವೆಯೋ ಅಲ್ಲಿಗೆ ನಾನೂ ಬರುವೆನು. ನಿನ್ನನ್ನು ಅಗಲಿರಲಾರೆನು. ಆ ಅಗಲಿಕೆಯಿಂದ ನನಗೆ ಬಹುವಾಗಿ ವ್ಯಥೆಯುಂಟಾಗುವುದು. ನೀನು ಭಕ್ತವತ್ಸಲ ನಲ್ಲವೇ ? ಆದುದರಿಂದ ನನ್ನನ್ನೂ ಸಹ ಜೊತೆಯಲ್ಲಿಯೇ ಕರೆದುಕೊಂಡು ಹೋಗು ಎಂದನು.

೧೯. ಈ ರೀತಿಯಾಗಿ ಕಲಿಯು ತನ್ನನ್ನು ಪ್ರಾರ್ಥಿಸಲು ಆ ಭಗವಂತನಾದ ಸಂಕರ್ಷಣನು ತನ್ನ ಭಕ್ತನಾದ ಕಲಿರಾಜನ ವಿಷಯದಲ್ಲಿ ಸುಪ್ರಸನ್ನನಾಗಿ "ಓ ದೈತ್ಯರಾಜ! ನೀನೂ ಸಹ ನನ್ನೊಡನೆಯೇ ಸುಖವಾಗಿ ಅವತರಿಸುವಿಯಂತೆ. ನೀನು ಭರತಖಂಡದಲ್ಲಿ ಕುರುವಂಶದ ಅರಸಾದ ಧೃತರಾಷ್ಟ್ರನಿಗೆ ಮಗನಾಗಿ ಹುಟ್ಟಿ ದುರ್ಯೋಧನನೆಂಬ ಹೆಸರಿನಿಂದ ಚಕ್ರವರ್ತಿಯಾಗಿ ಬಾಳು. ಆಗ ನಾನು ನಿನಗೆ ಸಹಾಯವನ್ನು ಮಾಡುವೆನು" ಎಂದು ಅನುಗ್ರಹಿಸಿದನು.

೨೦. ಹೀಗೆ ತನ್ನ ಪ್ರಭುವಿನಿಂದ ಅನುಗ್ರಹಿಸಲ್ಪಟ್ಟ ಆ ಕಲಿಯು ಆ ಭಗವಂತನನ್ನು ನಮಸ್ಕರಿಸಿ ತನ್ನ ನಿವಾಸಕ್ಕೆ ಹೊರಟುಹೋದನು. ಓ ದುರ್ಯೋಧನ! ಆ ಕಲಿಪುರುಷನೇ ನೀನು. ಈ ವಾಸ್ತವಾಂಶವನ್ನು ಮರೆತು ವಿಷ್ಣುಮಾಯೆಯಿಂದ ಮೋಹಿತನಾದ ನೀನು ನಿನ್ನ ನಿಜಸ್ವರೂಪವನ್ನು ಅರಿಯದಿರುವೆ ಎಂದನು.

ಇಲ್ಲಿಗೆ ಗರ್ಗಸಂಹಿತಾಂತರ್ಗವಾದ ಸಂಕರ್ಷಣಗಮನವೆಂಬ
ಎರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ತೃತೀಯೋಽಧ್ಯಾಯಃ

॥ ಪ್ರಾಡ್ವಿಪಾಕ ಉವಾಚ ॥

ಅಥಾಗತಾ ಕೋಟಿಶರಚ್ಚಂದ್ರಮಂಡಲಪ್ರತೀಕಾಶಾ ನಾಗಲಕ್ಷ್ಮೀರ್ಮಹಾರಥಸ್ಥಾ ಸಖೀಕೋಟಿಮಂಡಲಮಂಡಿತಾ ಸಂಕರ್ಷಣಂ ಮಹಾನಂತಂ ಭರ್ತಾರಂ ಸಭಾಯಾಂ ಪ್ರಾಹ ॥ ೧ ॥

ಅಹಮಪಿ ತ್ವಯಾ ಸಹೈವ ಭಗವನ್ಭುವಮಾಗಮಿಷ್ಯಾಮಿ ತ್ವದ್ವಿಯೋಗಾತುರಾ ಪ್ರಾಣಾನ್ನ ಧಾರಯಾಮಿ. ॥ ೨ ॥

ಮೂರನೆಯ ಅಧ್ಯಾಯವು

೧. ಪ್ರಾಡ್ವಿಪಾಕಮುನಿಯು ಪುನಃ ಹೇಳತೊಡಗಿದನು :—ಅನಂತರ ಶರತ್ಕಾಲದ ಕೋಟಿಚಂದ್ರರಿಗೆಣೆಯಾದ ಕಾಂತಿಯಿಂದ ಕಂಗೊಳಿಸುತ್ತಿರುವ ಆ ಸಂಕರ್ಷಣಮೂರ್ತಿಯ ಪ್ರಿಯಪತ್ನಿಯಾದ ನಾಗಲಕ್ಷ್ಮಿಯು ಭಾರಿಯಾದ ರಥವೊಂದರಲ್ಲಿ ಕುಳಿತು ಗುಂಪುಗುಂಪಾಗಿ ತನ್ನನ್ನು ಓಲೈಸುತ್ತಾ ಬರುತ್ತಿರುವ ಕೋಟಿ ಮಂದಿ ಸಖಿಯರೊಡನೆ ಆ ಸಭೆಗೆ ಬಂದು ತನ್ನ ಪತಿಯಾದ ಆ ಮಹಾನಂತನನ್ನು ಕುರಿತು,

೨. "ನಾಥ! ನಾನೂ ನಿನ್ನೊನೆಯೇ ಭೂಮಿಯಲ್ಲಿ ಅವತರಿಸುವೆನು. ನಿನ್ನ :ವಿಯೋಗವನ್ನು ಸಹಿಸಲಾರೆನು. ಹಾಗೆ ವಿಯೋಗವುಂಟಾಗುವ ಪಕ್ಷದಲ್ಲಿ ನಾನು ಪ್ರಾಣಗಳನ್ನೇ ತೊರೆಯುವೆನು."

ಇತಿ ಬಾಷ್ಪಕಂಠೀಂ ಪ್ರಿಯಾಂ ಸಂಪ್ರೇಕ್ಷ್ಯ ಭಗವಾನನಂತಃ ಸರ್ವ ಜಗತ್ಕಾರಣಕಾರಣಃ ಸರ್ವಭಕ್ತದುಃಖನಿವಾರಣೋ ಮಹೇಂದ್ರವಾರಣ ಇವ ಭೋಗವಾರಣ ಇತಿ ಹೋವಾಚ ॥ ೩ ॥

ರಂಭೋರು ತ್ವಂ ರೇವತೀವಿಗ್ರಹೇ ಸಂಲೀನಾ ಭೂತ್ವಾ ಭೂಲೋಕಂ ಭಜತಾತ್ ಮಾ ಶೋಕಂ ಕುರುತಾತ್ ॥ ೪ ॥

ತಚ್ಛ್ರುತ್ವಾ ನಾಗಲಕ್ಷ್ಮೀಃ ಪ್ರತ್ಯುವಾಚ। ರೇವತೀ ಕಾ ? ಕಸ್ಯ ಸುತಾ ? ಕ್ವ ವರ್ತಮಾನಾ ? ನಿತರಾಂ ವದೈತತ್। ತಚ್ಛ್ರುತ್ವಾ ಭಗವಾನನಂತಃ ಸಸ್ಮಿತಃ ಸ್ವಪ್ರಿಯಾಂ ಪ್ರತ್ಯುವಾಚ ॥ ೫ ॥

ಆದಿಸರ್ಗೇ ಕಶ್ಯಪಸ್ಯ ಕದ್ರೂಸುತೋ ಹ್ಯಹಂ ಜಾತಃ। ಶ್ರೀಕೃಷ್ಣಾಜ್ಞಯಾ ತ್ವಖಂಡಂ ಭೂಖಂಡಮಂಡಲಂ ಗಜರಾಡಿವ ಚೈಕಫಣೇ ಕಮಂಡಲುಮಿವ ಧೃತ್ವಾ. ಸರ್ವತೋಽಧಸ್ತಾದ್ವಿರಾಜಮಾನೋಽಹಂ ಬಭೂವ ॥ ೬ ॥

---

೩. ಎಂಬುದಾಗಿ ದುಃಖದಿಂದ ಗದ್ಗದಿತವಾದ ಕಂಠದಿಂದ ನುಡಿದಳು. ಈ ರೀತಿಯಾಗಿ ದುಃಖದಿಂದ ನುಡಿಯುತ್ತಿರುವ ತನ್ನ ಪ್ರಿಯೆಯನ್ನು ಕಂಡು ಈ ಜಗತ್ತಿಗೆ ನಿಮಿತ್ತವೆನಿಸಿದ ಸಕಲ ಕಾರಣವಸ್ತುಗಳಿಗೂ ಮೂಲಕಾರಣನೆನಿಸಿದ ಭಕ್ತರ ಸಕಲ ದುಃಖಗಳನ್ನೂ ಪರಿಹರಿಸುವ ಆ ಸಂಕರ್ಷಣನು ದೇವೇಂದ್ರನ ವಾಹನವಾದ ಐರಾವತದಂತೆ ಅದ್ಭುತಾಕಾರಗಳನ್ನೊಳಗೊಂಡಿರುವ ತನ್ನ ಶರೀರದಿಂದ ಕಂಗೊಳಿಸುತ್ತಾ ಇಂತೆಂದು ನುಡಿದನು,

೪. “ಎಲೆ ರಂಭೋರು ! (ಬಾಳೆಯ ಕಂಭಕ್ಕೆಣೆಯಾದ ತೊಡೆಗಳುಳ್ಳವಳು) ನೀನು ರೇವತಿಯ ಶರೀರದಲ್ಲಿ ಸೇರಿ ಭೂಲೋಕವನ್ನು ಹೊಂದುವೆಯಂತೆ. ದುಃಖಿಸಬೇಡ.”

೫. ಈ ರೀತಿಯಾಗಿ ತನ್ನ ಪ್ರಿಯನು ನುಡಿದುದನ್ನು ಕೇಳಿ, ನಾಗಲಕ್ಷ್ಮಿಯು ಆತನನ್ನು ಕುರಿತು ರೇವತಿಯೆಂಬುವಳು ಯಾರು ? ಯಾರ ಮಗಳು ? ಎಲ್ಲಿರುವಳು? ಇವೆಲ್ಲವನ್ನೂ ನನಗೆ ಚೆನ್ನಾಗಿ ತಿಳಿಸಬೇಕು ಎಂದು ಪ್ರಾರ್ಥಿಸಲು ಭಗವಂತನಾದ ಆ ಅನಂತನು ನಗುನಗುತ್ತಾ ತನ್ನ ಪ್ರಿಯೆಯನ್ನು ಕುರಿತು ಇಂತೆಂದನು.

೬. “ಹಿಂದೆ ಈ ಪ್ರಪಂಚವು ಮೊದಲನೆಯ ಬಾರಿ ಸೃಷ್ಟಿಸಲ್ಪಟ್ಟಾಗ ನಾನು ಕಶ್ಯಪಮಹರ್ಷಿಯ ಪತ್ನಿಯಾದ ಕದ್ರುವಿನಲ್ಲಿ ಜನಿಸಿದೆನು. ಬಳಿಕ ಶ್ರೀಹರಿಯ ಆಜ್ಞೆಯಂತೆ ಈ ಅಖಂಡವಾದ ಭೂಮಂಡಲವೆಲ್ಲವನ್ನೂ ನನ್ನ ಒಂದೇ ಒಂದು ಹೆಡೆಯ ಮೇಲೆ ಆನೆಯು ಸಣ್ಣ ಗಡಿಗೆಯೊಂದನ್ನು ಎತ್ತಿ ಹಿಡಿಯುವಂತೆ ನಿರಾಯಾಸವಾಗಿ ಹೊತ್ತು ಸಕಲ ಲೋಕಗಳಿಗೂ ಕೆಳಗಡೆ ಇರುತ್ತಾ ಇದ್ದೆನು.

ಅಥ ಮಯಿ ಸ್ಥಿತೇ ಚಕ್ಷುಷಃ ಪುತ್ರೋऽತಿಬಲಶ್ಚಾಕ್ಷುಷೋ ನಾಮ ಮನುಃ ಸಪ್ತದ್ವೀಪಭೂಖಂಡಮಂಡಲೇಷು ಮಂಡಲಪತಿಭಿಸ್ಪೃರ್ಷ್ಟ-ಪಾದಪುಂಡರೀಕಃ ಪುರಂದರಾದಿಭಿರ್ಲಂಘಿತಚಂಡಶಾಸನಃ ಪ್ರಚಂಡ-ದೋರ್ದಂಡವಿಖಂಡಿತಾರಿದೋರ್ದಂಡಃ ಸರ್ವಗುಣಮಂಡಿತಃ ಸಮ್ರಾಡ್ಬಭೂವ ॥ ೨ ॥

ತಸ್ಯ ಮನೋಃ ಸುದ್ಯುಮ್ನಾದ್ಯಾಃ ಪುತ್ರಾ ಬಭೂವುಃ । ತಸ್ಯ ಯಜ್ಞಕುಂಡಸಮುದ್ಭವಾ ಕನ್ಯಾ ಜ್ಯೋತಿಷ್ಮತೀ ಜಾತಾ ॥ ೩ ॥

ಏಕದಾ ಸ್ನೇಹಾಚ್ಚಾಕ್ಷುಷಃ ಪುತ್ರೀಂ ಪಪ್ರಚ್ಛ ಕೀದೃಶಂ ವರಮಿಚ್ಛ-ಸೀತಿ ವದ ಸಾ ತದೋವಾಚ ಯಃ ಸರ್ವೇಷಾಂ ಬಲವಾನ್ಸ ಮೇ ವರೋ ಭೂಯಾತ್ ॥ ೪ ॥

---

೨. ಹೀಗೆ ನಾನಿರಲಾಗಿ ಚಕ್ಷುವಿನ ಪುತ್ರನೂ, ಮಹಾಬಲಶಾಲಿಯೂ, ಸಕಲ ಸುಗುಣಸಂಪನ್ನನೂ ಆದ ಚಾಕ್ಷುಷನೆಂಬ ಮನುವು ಅನೇಕ ಮಂದಿ ಮಂಡಲಾಧಿಪತಿಗಳಿಂದ ತಲೆವಾಗಿ ನಮಸ್ಕರಿಸಲ್ಪಡುವ ಪಾದಾರವಿಂದಗಳುಳ್ಳವನಾಗಿ ಸಪ್ತದ್ವೀಪ ಪರಿವೃತವಾದ ಈ ಭೂಮಡಲಕ್ಕೇ ಏಕಚಕ್ರಾಧಿಪತಿಯೆನಿಸಿ ಮೆರೆಯುತ್ತಿದ್ದನು. ಆತನ ಶಾಸನವನ್ನು ಇಂದ್ರಾದಿದೇವತೆಗಳೂ ಸಹ ಮೀರುತ್ತಿರಲಿಲ್ಲ. ಆತನ ಅತ್ಯದ್ಭುತವಾದ ಬಾಹುಬಲದಿಂದ ಶತ್ರುಗಳೆಲ್ಲರೂ ಪಾದಾಕ್ರಾಂತರಾಗಿಬಿಟ್ಟಿದ್ದರು.

೩. ಆ ಮನುವಿಗೆ ಪ್ರದ್ಯುಮ್ನನೇ ಮೊದಲಾದ ಪುತ್ರರು ಜನಿಸಿದರು. ಮತ್ತು ಯಜ್ಞಕುಂಡದಲ್ಲಿ ಆವಿರ್ಭವಿಸಿದ ಜ್ಯೋತಿಷ್ಮತಿಯೆಂಬ ಕನ್ಯೆಯೊಬ್ಬಳು ಪುತ್ರಿಯೆನಿಸಿದ್ದಳು.

೪. ಆ ಚಾಕ್ಷುಷಮನುವು ಒಮ್ಮೆ ತನ್ನ ಪುತ್ರಿಯೊಡನೆ ಮಾತುಕತೆಯಾಡುತ್ತಿರುವಾಗ ವಾತ್ಸಲ್ಯದಿಂದ “ಅಮ್ಮಾ ನೀನು ಎಂಥವನನ್ನು ಮದುವೆಯಾಗಲು ಇಚ್ಛಿಸುವೆ” ಎಂದು ಪ್ರಶ್ನಿಸಿದನು. ಆಗ ಆ ಮನುಕುಮಾರಿಯು ಎಲ್ಲರಿಗಿಂತಲೂ ಬಲಶಾಲಿಯಾದವನನ್ನೇ ನಾನು ಮದುವೆಯಾಗಬಯಸುವೆನು ಎಂದು ನುಡಿದಳು.

ತಚ್ಛ್ರುತ್ವಾ ರಾಜಾ ಶಕ್ರಂ ಬಲವಂತಂ ಜ್ಞಾತ್ವಾ ಸಮಾಜುಹಾವ। ತದೈವ ಸದ್ಯಃ ಸಮಾಗತಂ ವಜ್ರಿಣಂ ಪುರಃಸ್ಥಿತಂ ಸಾದರೇಣಾಸನಂ ದತ್ವಾ ಮನುಃ ಪ್ರಾಹ ॥ ೧೦ ॥

ತ್ವತ್ತಃ ಕೋಽಪಿ ಬಲವಾನ್ವರ್ತತೇ ನ ವಾ ತತ್ಸತ್ಯಂ ವದ ನ ಚೇತ್ಸ್ಮೃತಿರ್ನ ಹಿ ಸತ್ಯಾತ್ಪರೋ ಧರ್ಮ ಇತಿ ಹೋವಾಚ ಭೂರಿಯಂ ಸರ್ವಂ ಸೋಢುಮಲಂ ಮನ್ಯೇ ಋತೇಽಲೀಕಪರಂ ನರಂ ॥ ೧೧ ॥

॥ ಇಂದ್ರ ಉವಾಚ ॥

ಅಹಂ ಬಲವಾನ್ನಾಸ್ಮಿ। ಮತ್ತೋ ಬಲವಾನ್ವಾಯುರಸ್ತಿ। ಯೇನ ಸಹಾಯೇನ ಕಾರ್ಯಂ ಕರಿಷ್ಯಾಮಿ ಇತ್ಯುಕ್ತ್ವಾ ಗತೇ ಶಕ್ರೇ ರಾಜಾ ವಾಯುಮಾಜುಹಾವಾಹ ಚ ತ್ವತ್ತಃ ಕೋಽಪಿ ಬಲವಾನ್ವರ್ತತೇ ಸತ್ಯಂ ವದತಾತ್ ॥ ೧೨ ॥

---

೧೦. ಈ ರೀತಿ ತನ್ನ ಪುತ್ರಿಯು ನುಡಿದುದನ್ನು ಕೇಳಿ ಆ ಚಾಕ್ಷುಷಮನುವು ಇಂದ್ರನೇ ಅಂತಹ ಪರಾಕ್ರಮಶಾಲಿಯೆಂದು ಬಗೆದು ಆತನನ್ನು ಆಹ್ವಾನಿಸಿದನು. ಕೂಡಲೇ ವಜ್ರಹಸ್ತನಾದ ದೇವೇಂದ್ರನು ಆತನೆದುರಿನಲ್ಲಿ ಬಂದು ನಿಂತನು. ಆಗ ಆ ಚಾಕ್ಷುಷಮನುವು ಅತ್ಯಾದರದಿಂದ ಆತನಿಗೆ ಆಸನವನ್ನಿತ್ತು ಉಪಚರಿಸಿ,

೧೧. "ನಿನಗಿಂತಲೂ ಬಲಶಾಲಿಯಾದವನು ಈ ಜಗತ್ತಿನಲ್ಲಿ ಇರುವನೇ ? ಇಲ್ಲವೇ ? ಸತ್ಯವಾಗಿ ಹೇಳು. ಹಾಗೆ ಯಾರಾದರೂ ಇರುವರೆಂಬ ಸಂಗತಿಯು ನಿಜವಾಗಿಯೂ ನಿನಗೆ ನೆನಪಿಲ್ಲದ ಪಕ್ಷದಲ್ಲಿ ಧೈರ್ಯದಿಂದ ಹೇಳು. ಸತ್ಯಕ್ಕಿಂತಲೂ ಉತ್ತಮವಾದ ಬೇರೊಂದು ಧರ್ಮವು ಈ ಜಗತ್ತಿನಲ್ಲಿ ಇಲ್ಲವು. ಈ ಭೂಮಿಯೂ ಸಹ ಸುಳ್ಳು ಹೇಳುವನೊಬ್ಬನನ್ನು ಬಿಟ್ಟು ಉಳಿದೆಲ್ಲವನ್ನೂ ಧರಿಸಬಲ್ಲುದು ಎಂಬುದಾಗಿ ಭಾವಿಸುವೆನು" ಎಂದು ನುಡಿದನು.

೧೨. ಅದನ್ನು ಕೇಳಿ ಆ ಅನುರಾಧಿಪತಿಯು "ನಾನು ಅಂತಹ ಬಲಶಾಲಿಯಲ್ಲ. ನನಗಿಂತಲೂ ವಾಯುವು ಹೆಚ್ಚು ಬಲಶಾಲಿಯು. ಆತನ ಸಹಾಯದಿಂದಲೇ ನಾನು ಎಲ್ಲ ಕಾರ್ಯಗಳನ್ನು ಸಾಧಿಸಿಕೊಳ್ಳುವೆನು" ಎಂದು ನುಡಿದು ತನ್ನ ಲೋಕಕ್ಕೆ ಹೊರಟುಹೋದನು ಬಳಿಕ ಆ ಮನುವು ವಾಯುವನ್ನು ಆಹ್ವಾನಿಸಿ ಆತನು ಬಂದನಂತರ "ನಿನಗಿಂತಲೂ ಬಲಿಷ್ಠನಾದವನು ಯಾವನಾದರೂ ಇರುವನೇ ? ಹಾಗಿದ್ದಲ್ಲಿ ನಿಜವಾಗಿ ತಿಳಿಸು ಎಂದು ಪ್ರಶ್ನಿಸಿದನು.

॥ ವಾಯುರುವಾಚ ॥

ಮತ್ತೋ ಬಲವಂತಃ ಪರ್ವತಾಃ ಸಂತಿ ಮದ್ವೇಗೇನ ನೋಡ್ಡೀಯಮಾನಾ ಇತ್ಯುಕ್ತ್ವಾ ಗತೇ ವಾಯೌ ರಾಜಾ ಪರ್ವತಾನಾಜುಹಾವಾಹ ಚ ಭವದ್ಭ್ಯಃ ಕೋಽಪಿ ಕೌ ಬಲವಾನ್ವರ್ತತೇ ತತ್ಸತ್ಯಂ ವದತ ॥ ೧೩ ॥

ಪರ್ವತಾಃ ಪ್ರಾಹುರಸ್ಮದ್ಧಾರಣಾದ್ಭೂಖಂಡಂ ಬಲವದ್ವರ್ತತೇ ಯತ್ರ ವಯಂ ಸ್ಥಿತಾಃ ಸ್ಮಃ। ಪರ್ವತೇಷು ಗತೇಷು ಭೂಖಂಡಮಂಡಲಂ ಸಮಾಹೂಯ ರಾಜಾ ಪ್ರಾಹ ತ್ವತ್ತಃ ಕೋಽಪಿ ಬಲವಾನ್ವರ್ತತೇ ನ ವಾ ಸತ್ಯಂ ವದ ॥ ೧೪ ॥

ತಚ್ಛ್ರುತ್ವಾ ಭೂಖಂಡ ಉವಾಚ। ಮತ್ತೋ ಬಲವಾನ್ ಸಂಕರ್ಷಣೋ ಭಗವಾನ್ವರ್ತತೇ ಸೋಽಯಂ ಸದಾನಂತೋಽನಂತಗುಣಾರ್ಣವ ಆದಿದೇವೋ ವಾಸುದೇವಃ ಸಹಸ್ರವದನೋ ನಾಗೇಂದ್ರ ಇವ

---

೧೩. ಆಗ ಆ ವಾಯುವು "ನನಗಿಂತಲೂ ಪರ್ವತಗಳು ಹೆಚ್ಚು ಬಲವನ್ನು ಪಡೆದಿರತಕ್ಕಂತಹವು. ಏಕೆಂದರೆ ಎಲ್ಲ ವಸ್ತುಗಳನ್ನೂ ಹಾರಿಸಿಬಿಡಬಲ್ಲ ನಾನು ಎಷ್ಟೇ ಜೋರಾಗಿ ಬೀಸಿದರೂ ಆ ಪರ್ವತಗಳನ್ನು ಬೇರೆಹಾರಿಸಲು ಸಾಧ್ಯವಿಲ್ಲವಾಗಿರುವುದು" ಎಂದು ತನ್ನ ನಿವಾಸಕ್ಕೆ ಹಿಂದಿರುಗಿದನು. ಅನಂತರ ಆ ಮನುವು ಪರ್ವತಗಳನ್ನು ಆಹ್ವಾನಿಸಿ ಅವು ಬರುತ್ತಲೇ "ನಿಮಗಿಂತಲೂ ಬಲಾಢ್ಯನಾದವನಾದರೂ ಇದ್ದರೆ ಅದನ್ನು ಮರೆಮಾಚದೆ ತಿಳಿಸಿ" ಎಂದು ನುಡಿದನು.

೧೪. ಅದನ್ನು ಕೇಳಿ ಆ ಪರ್ವತಗಳು "ನಮಗೆ ಆಸರೆಯನ್ನಿತ್ತಿರುವೀ ಭೂಮಿಯೇ ನಮಗಿಂತಲೂ ಬಲವತ್ತರವಾದುದು. ಏಕೆಂದರೆ ಇದು ನಮ್ಮನ್ನೂ ಹೊತ್ತಿರುವುದು" ಎಂದು ನಿಜಾಂಶವನ್ನು ತಿಳಿಸಿ ಹೊರಟುಹೋದುವು. ಬಳಿಕ ಆ ಚಾಕ್ಷುಷರಾಜನು ಅಖಂಡವಾದ ಭೂಮಂಡಲವನ್ನೇ ಆಹ್ವಾನಿಸಿ ಅದನ್ನು ಕುರಿತು "ನಿನಗಿಂತಲೂ ಬಲಿಷ್ಠನಾದವನು ಈ ಜಗತ್ತಿನಲ್ಲಿ ಇರುವನೇ ಅಥವಾ ಇಲ್ಲವೇ ? ನಿಜವಾದ ಸಂಗತಿಯನ್ನು ನನಗೆ ತಿಳಿಸಬೇಕು" ಎಂದನು.

೧೫. ಆ ಮಾತನ್ನು ಕೇಳಿ ಭೂಮಂಡಲವು ಆತನನ್ನು ಕುರಿತು ಇಂತೆಂದು ನುಡಿಯಿತು. "ನನಗಿಂತಲೂ ಬಲಶಾಲಿಯೊಬ್ಬನಿರುವನು ಆತನೇ ಸಾಕ್ಷಾತ್ ಭಗವತ್ಸ್ವರೂಪನಾದ ಸಂಕರ್ಷಣನು. ಆತನ ಕಲ್ಯಾಣಗುಣಗಳು ಲೆಖ್ಖವಿಲ್ಲದಷ್ಟು ಹೇರಳವಾಗಿರುವುವು. ಆತನನ್ನು ಆದಿದೇವನೆಂದೂ, ವಾಸುದೇವನೆಂದೂ ಕರೆಯುವರು.

ಭವ್ಯವಪುಃ ಕೈಲಾಸ ಇವ ಶುಕ್ಲಪ್ರಕಾಶಃ, ಕೋಟಿಸೂರ್ಯಪ್ರತಿಭಾಸಃ, ಕೋಟಿಕಂದರ್ಪದರ್ಪಹಾರಿಲಾವಣ್ಯೇನ ವಿಭ್ರಾಜಮಾನಃ ಕಮಲಪತ್ರಾಕ್ಷಃ, ಕಮಲಕರ್ಣಿಕಾದಿವ್ಯವಿಮಲಮಾಲಾನಿರ್ಮಲಪರಿಮಲಪರಿಲೋಭಿತಮಧುಕರನಿಕರಸಂಗೀಯಮಾನಃ ಸಿದ್ಧಚಾರಣಗಂಧರ್ವವಿದ್ಯಾಧರವರಗಣೈರುಪಗೀಯಮಾನಃ, ಸುರಾಸುರೋರಗಮುನಿಗಣೈಃ ಸಂಧ್ಯಾಯಮಾನಃ ಸರ್ವೋಪರಿ ವಿರಾಜಮಾನ ಆಸ್ತೇ ॥ ೧೫ ॥

ಯಸ್ಯೈಕಸ್ಮಿನ್ಮೂರ್ಧ್ನಿ ಸಗಿರಿಸರಿಸತ್ಸಮುದ್ರವನಜೀವಕೋಟಿಮಂಡಿತಂ ಭೂಖಂಡಮಂಡಲಮಹಂ ದೃಶ್ಯೇಯನ್ನಾಮಾನುಕೀರ್ತನಾ ತ್ರಿಲೋಕ್ಯಾಂ ತ್ರೈಲೋಕ್ಯಘಾತ್ಯಪಿ ಕೈವಲ್ಯಂ ಪ್ರಾಪ್ನೋತಿ ॥ ೧೬ ॥

ಆ ಮೂರ್ತಿಯು ಸಹಸ್ರಮುಖಗಳಿಂದ ಕಂಗೊಳಿಸುತ್ತಾ ಗಜರಾಜನಂತೆ ಭವ್ಯವಾದ ಶರೀರದಿಂದ ಮೆರೆಯುತ್ತಿರುವನು. ಶುಭ್ರವಾದ ವರ್ಣದಿಂದ ಕೈಲಾಸ ಪರ್ವತವನ್ನು ಹೋಲುತ್ತಿರುವ ಆ ಪ್ರಭುವು ಕೋಟಿಸೂರ್ಯರಿಗೆಣೆಯಾದ ತೇಜಸ್ಸಿನಿಂದ ಮೆರೆಯುತ್ತಾ ತನ್ನ ಸೌಂದರ್ಯದಿಂದ ಕೋಟಿ ಮನ್ಮಥರ ಹೆಮ್ಮೆಯನ್ನೂ ಅಡಗಿಸಿಬಿಡುತ್ತಿರುವನು. ಕಮಲದಂತೆ ಮುದ್ದಾದ ಕಣ್ಣುಗಳುಳ್ಳ ಆ ಸ್ವಾಮಿಯು ಬಿಳುಪಾದ ಕಾಂತಿಯನ್ನು ಬೀರುತ್ತಿರುವ ದಿವ್ಯವಾದ ಕಮಲಕರ್ಣಿಕೆಗಳ ಹಾರವನ್ನು ಕುತ್ತಿಗೆಯಲ್ಲಿ ಧರಿಸಿರುವನು. ಆ ಮಾಲೆಯ ಪರಿಮಲಕ್ಕೆ ಮನಸೋತು ದುಂಬಿಗಳು ಝೇಂಕರಿಸುತ್ತಾ ಸಾಲಾಗಿ ಬಂದು ಎರಗುತ್ತಿರುವುವು. ಆ ಪ್ರಭುವಿನ ಕಲ್ಯಾಣ ಗುಣಗಳನ್ನು ಸಿದ್ಧರೂ, ಚಾರಣರೂ, ಗಂಧರ್ವರೂ, ವಿದ್ಯಾಧರರೂ, ಗುಂಪುಗುಂಪಾಗಿ ಕೊಂಡಾಡುತ್ತಿರುವರು. ಸುರರೂ, ಅಸುರರೂ, ನಾಗರೂ, ಮಹರ್ಷಿಗಳೂ ಆ ಪರಮಪುರುಷನನ್ನು ಸರ್ವದಾ ಧ್ಯಾನಿಸುತ್ತಿರುವರು. ಈ ರೀತಿಯಾಗಿ ಆ ಸಂಕರ್ಷಣನು ವೈಭವದಿಂದ ಮೆರೆಯುತ್ತಿರುವನು.

೧೬. ಓ ಚಾಕ್ಷುಷರಾಜೇಂದ್ರ! ಸಮಸ್ತವಾದ ಪರ್ವತಗಳಿಂದಲೂ, ನದೀನದಗಳಿಂದಲೂ, ಭಾರಿಭಾರಿ ಅರಣ್ಯಗಳಿಂದಲೂ, ವಿಧವಿಧವಾದ ಜೀವರಾಶಿಗಳಿಂದಲೂ, ತುಂಬಿಹೋಗಿರುವ ಸಮಗ್ರಭೂಮಂಡಲವೆನಿಸಿದ ನಾನೇ ಸಂಕರ್ಷಣನ ಒಂದೇ ಒಂದು ಹೆಡೆಯ ಮೂಲೆಯಲ್ಲಿ ಅಡಕವಾಗಿಬಿಡುವೆನು. ಆತನ ನಾಮವನ್ನು ಜಪಿಸಿದ ಮಾತ್ರದಿಂದಲೇ ಮೂರು ಲೋಕಗಳನ್ನೂ ಕೊಂದ ಮಹಾಪಾಪಿಯೂ ಕೂಡ ತನ್ನ ಪಾಪಗಳಿಂದ ಬಿಡಲ್ಪಟ್ಟು ಮೋಕ್ಷವನ್ನು ಪಡೆಯುವನು.

ಏವಂ ಪ್ರಭಾವೋ ಭಗವಾನ್ಸರ್ವತೋ ಬಲವಾನ್ಸರ್ವಕಾರಣ-
ಕಾರಣಃ ಸರ್ವೇಶ್ವರೋ ದುರಂತವೀರ್ಯೋ ಮೂಲೇ ರಸಾಯಾಃ
ಸ್ಥಿತಸ್ತಸ್ಮಾತ್ಪರಃ ಕೋಽಪಿ ನಾಸ್ತಿ || ೧೭ ||

|| ಮಹಾನಂತ ಉವಾಚ ||

ಇತ್ಯುಕ್ತ್ವಾ ಗತೇ ಭೂಖಂಡೇ ಚಾಕ್ಷುಷಃ ಕನ್ಯಾ ಜ್ಯೋತಿಷ್ಮತೀ
ಮಮ ಮಾಧುರ್ಯಪ್ರಭಾವಂ ವಿಜ್ಞಾಯ ಪಿತ್ರಾಜ್ಞಾಂ ಗೃಹೀತ್ವಾ
ವಿಂಧ್ಯಾಚಲೇ ಮತ್ಪ್ರಾಪ್ತ್ಯರ್ಥಂ ವರ್ಷಾಣಾಂ ಲಕ್ಷಾಣಿ ಬೃಹ-
ತ್ತಪಸ್ತೇಪೇ || ೧೮ ||

---

೧೭. ಈ ರೀತಿಯಾಗಿ ಅತ್ಯದ್ಭುತವಾದ ಮಾಹಾತ್ಮ್ಯವುಳ್ಳ ಆ ಭಗವಂತನು ಈ ಜಗತ್ತಿನಲ್ಲಿರುವ ವಸ್ತುಗಳೆಲ್ಲವುಗಳಿಗಿಂತಲೂ ಹೆಚ್ಚು ಬಲವುಳ್ಳವನು. ಸಕಲ ವಿಧವಾದ ಕಾರಣವಸ್ತುಗಳಿಗೂ ಕಾರಣವೆನಿಸಿದವನು. ಆ ಸರ್ವೇಶ್ವರನ ಪರಾಕ್ರಮವು ಮಿತಿಗೇ ಒಳಪಡದಷ್ಟು ಹೇರಳವಾಗಿರುವುದು. ಆ ಪ್ರಭುವು ಭೂಮಿಯ ಕೆಳಗಡೆ ನೆಲಸಿರುವನು. ಆತನಿಗಿಂತಲೂ ಶ್ರೇಷ್ಠನಾದವನು ಮತ್ತಾವನೂ ದೊರೆಯುವುದಿಲ್ಲ."

೧೮. ಹೀಗೆಂಬುದಾಗಿ ಭೂಮಂಡಲವು ನಿಜಾಂಶವನ್ನು ತಿಳಿಸಿ ತನ್ನ ಪಾಡಿಗೆ ಹೊರಟುಹೋಯಿತು. ಈ ಸಂಗತಿಯೆಲ್ಲವನ್ನೂ ಅರಿತ ಆ ಚಾಕ್ಷುಷರಾಜಪುತ್ರಿಯಾದ ಜ್ಯೋತಿಷ್ಮತಿಯೆಂಬ ಕನ್ಯೆಯು ನನ್ನ ಸೌಂದರ್ಯವನ್ನೂ, ಮಾಹಾತ್ಮ್ಯವನ್ನೂ ಚೆನ್ನಾಗಿ ತಿಳಿದು ನನ್ನಲ್ಲಿಯೇ ನೆಟ್ಟಮನಸ್ಸುಳ್ಳವಳಾಗಿ ತಂದೆಯ ಅಪ್ಪಣೆಯನ್ನು ಪಡೆದು ವಿಂಧ್ಯಾದ್ರಿಯನ್ನು ಸೇರಿ ಅಲ್ಲಿ ಒಂದು ಲಕ್ಷವರ್ಷಗಳ ಕಾಲ ಅತ್ಯುಗ್ರವಾದ ತಪಸ್ಸನ್ನು ಮಾಡಿದಳು.

ಗ್ರೀಷ್ಮೇ ಪಂಚಾಗ್ನಿತಪ್ತಾ ವರ್ಷಾಸು ಸರ್ವಾಸಾರಿಣೀ ಶಿಶಿರ ಆಕಂಠ-ಮಗ್ನಾ ಶೀತೋದಕೇ ಭೂತ್ವಾ ಸ್ಥಂಡಿಲಶಾಯಿನೀ ಬಭೂವ ॥ ೧೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ
ಜ್ಯೋತಿಷ್ಮತ್ಯುಪಾಖ್ಯಾನಂ ನಾಮ ತೃತೀಯೋಽಧ್ಯಾಯಃ

---

೧೯. ಆ ತಪಸ್ಸಮಯದಲ್ಲಿ ಜ್ಯೋತಿಷ್ಮತಿಯು ನಡುಬೇಸಿಗೆಯಲ್ಲಿ ತನ್ನ ತಲೆಯ ಮೇಲೆ ಸೂರ್ಯನು ಸುಡುತ್ತಿರುವಾಗ ಸುತ್ತಮುತ್ತಲೂ ಬೆಂಕಿಗಳನ್ನು ಹೊತ್ತಿಸಿ ಅವುಗಳ ನಡುವೆ ನಿಲ್ಲುವಳು. ಮಳೆಗಾಲದಲ್ಲಿ ನಿರಾವರಣಪ್ರದೇಶದಲ್ಲಿ ನಿಂತು ಮಳೆಯಲ್ಲಿಯೇ ನೆನೆಯುವಳು. ಚಳಿಗಾಲದಲ್ಲಿ ಕೊರೆಯುತ್ತಿರುವ ನೀರಿನಲ್ಲಿ ಕುತ್ತಿಗೆಯವರೆಗೆ ಮುಳುಗುವಳು. ಅನಂತರ ಬರಿಯ ನೆಲದ ಮೇಲೆಯೇ ಮಲಗುವಳು. ಈ ರೀತಿಯಾಗಿ ಆ ಕನ್ಯೆಯು ತಪಸ್ಸುಮಾಡಿದಳು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ಬಲಭದ್ರಖಂಡದಲ್ಲಿ
ಜ್ಯೋತಿಷ್ಮತ್ಯುಪಾಖ್ಯಾನವೆಂಬ ಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ಚತುರ್ಥೋಽಧ್ಯಾಯಃ

॥ ಶ್ರೀಮಹಾನಂತ ಉವಾಚ ॥

ಅಥ ಜ್ಯೋತಿಷ್ಮತೀಂ ಶತಚಂದ್ರಪ್ರತೀಕಾಶಾಂ ನವಯೌವನಾಂ ಸುಂದರೀಂ ತಪಸ್ವಿನೀಂ ವೀಕ್ಷ್ಯ ಶಕ್ರಯಮಧನದಾಗ್ನಿವರುಣಸೋಮ ಸೂರ್ಯಮಂಗಲಬುಧಬೃಹಸ್ಪತಿಶುಕ್ರಶನಯಃ ಸರ್ವೇ ತದ್ರೂಪೋ-ದ್ದೀಪಿತಕಾಮಸಂಮೋಹಿತಚಿತ್ತಾಸ್ತದಾಶ್ರಮಮೇತ್ಯ ತಾಮೂಚುಃ॥ ೧ ॥

ನಾಲ್ಕನೆಯ ಅಧ್ಯಾಯವು

೧. ಆಲಿಸು. ಹೀಗಿರಲು ಆ ಜ್ಯೋತಿಷ್ಮತಿಗೆ ಹೊಸದಾಗಿ ಯೌವ್ವನವು ಪ್ರಾಪ್ತವಾಯಿತು. ಅವಳ ಮುಖವು ತನ್ನ ಕಾಂತಿಯಿಂದ ನೂರುಮಂದಿ ಚಂದ್ರರನ್ನೂ ಧಿಕ್ಕರಿಸುವಂತಿತ್ತು. ಈ ರೀತಿಯಾಗಿ ತಪಸ್ಸಿನಲ್ಲಿಯೇ ನಿರತಳಾಗಿದ್ದರೂ ಅತಿಶಯ ವಾದ ಸೌಂದರ್ಯದಿಂದ ಮೆರೆಯುತ್ತಿರುವ ಆ ಜ್ಯೋತಿಷ್ಮತಿಯನ್ನು ಕಂಡು ಅವಳ ರೂಪದಿಂದ ಮಿತಿಮೀರಿದ ಕಾಮಬಾಧೆಗೆ ಈಡಾಗಿ ಮೋಹಾವಿಷ್ಟರಾದ ಇಂದ್ರ, ಅಗ್ನಿ, ಯಮ, ವರುಣ, ಕುಬೇರ, ಸೂರ್ಯ, ಚಂದ್ರ, ಅಂಗಾರಕ, ಬುಧ, ಬೃಹಸ್ಪತಿ, ಶುಕ್ರ, ಶನಿ ಮೊದಲಾದ ದಿಕ್ಪಾಲಕರೂ, ಗ್ರಹಾಧಿಪತಿಗಳೂ ಆಕೆಯ ತಪೋವನಕ್ಕೆ ಬಂದು ಈ ರೀತಿಯಾಗಿ ನುಡಿದರು :—

ಹೇ ಸುಂದರಿ, ರಂಭೋರು, ಧನ್ಯಾಸಿ । ಕಸ್ಯಾರ್ಥಂ ತಪಃ ಕರೋಷಿ । ತೇ ವಯಸ್ತಪೋಯೋಗ್ಯಂ ನಾಸ್ತಿ । ಮನೋಭಿಪ್ರಾಯಂ ಸ್ವಕಮಸ್ಮಾಕಂ ವದೇತಿ ತಚ್ಛ್ರುತ್ವಾ ಜ್ಯೋತಿಷ್ಮತ್ಯುವಾಚ- ಭಗವಾನನಂತಃ ಸಹಸ್ರವದನೋ ಮಮ ಭರ್ತಾ ಭೂಯಾದೇತದರ್ಥಂ ತಪಸ್ತಪಾಮಿತಿ। ತದ್ವಚಃ ಶ್ರುತ್ವಾ ಸರ್ವೇ ಜಹಸುಃ। ಪೃಥಕ್ಪೃಥಕ್ತೇಷಾಂ ಪೂರ್ವಮಿಂದ್ರ ಇದಮಾಹ ॥ ೧ ॥

॥ ಇಂದ್ರ ಉವಾಚ ॥

ಸರ್ಪರಾಜಂ ವರಂ ಕರ್ತುಂ ಕಿಂ ವೃಥಾ ತಪಸೇ ಶುಭೇ ।
ದೇವರಾಜಂ ವರಯ ಮಾಂ ಸ್ವತಃ ಪ್ರಾಪ್ತಂ ಶತಕ್ರತುಂ ॥ ೩ ॥

---

೧. "ಎಲೌ ಸುಂದರಿ! ಬಾಳೆಯ ಕಂಭಗಳನ್ನು ಹೋಲುವ ಮುದ್ದಾದ ತೋಳುಗಳುಳ್ಳ ನೀನೇ ಧನ್ಯಳು! ನೀನೀಗ ತಪಸ್ಸನ್ನು ಮಾಡುತ್ತಿರುವುದಾದರೂ ಏಕೆ? ನಿನ್ನ ಈ ವಯಸ್ಸು ಯಾವ ವಿಧದಲ್ಲಿಯೂ ತಪಸ್ಸಿಗೆ ಉಚಿತವಾಗಿ ತೋರುವುದಿಲ್ಲವಲ್ಲ! ನಿನ್ನ ಮನಸ್ಸಿನಲ್ಲಿರುವ ಅಭಿಲಾಷೆಯಾದರೂ ಯಾವುದು? ಇದೆಲ್ಲವನ್ನೂ ನಮಗೆ ತಿಳಿಸು" ಎಂದರು. ಈ ರೀತಿಯಾಗಿ ತನ್ನನ್ನು ಆ ಇಂದ್ರಾದಿಗಳು ಪ್ರಶ್ನಿಸುತ್ತಲೇ ಆ ಜ್ಯೋತಿಷ್ಮತಿಯು ಅವರನ್ನು ಕುರಿತು "ಸಹಸ್ರ ಮುಖಗಳಿಂದ ಕಂಗೊಳಿಸುತ್ತಿರುವ ಸಾಕ್ಷಾದ್ಭಗವಂತನಾದ ಆ ಅನಂತನೇ ನನಗೆ ವರವಾಗಲಿ ಎಂಬ ಅಭಿಲಾಷೆಯಿಂದ ನಾನು ತಪಸ್ಸು ಮಾಡುತ್ತಿರುವೆನು" ಎಂದಳು. ಅದನ್ನು ಕೇಳಿ ಅವರೆಲ್ಲರೂ ಗಟ್ಟಿಯಾಗಿ ನಕ್ಕುಬಿಟ್ಟರು. ಅನಂತರ ಅವರೆಲ್ಲರೂ ಒಬ್ಬೊಬ್ಬರಾಗಿ ಅವಳನ್ನು ಕುರಿತು ತಮ್ಮ ತಮ್ಮ ಮನದಾಸೆಯನ್ನು ಹೇಳಿಕೊಳ್ಳತೊಡಗಿದರು. ಆಗ ಎಲ್ಲರಿಗಿಂತಲೂ ಮುಂಚೆ ಇಂದ್ರನು ಬಂದು—

೩. ಎಲೌ ಮಂಗಳಾಂಗಿ! ಸರ್ಪರಾಜನು ನಿನ್ನನ್ನು ವರಿಸಬೇಕೆಂದು ವ್ಯರ್ಥವಾಗಿ ಏತಕ್ಕೆ ತಪಸ್ಸು ಮಾಡುವೆ? ತಾನಾಗಿ ಬಂದು ಬೇಡುತ್ತಿರುವ ದೇವರಾಜನಾದ ಈ ಶತಕ್ರತುವನ್ನು ವರಿಸು" ಎಂದು ಪ್ರಾರ್ಥಿಸಿದನು.

॥ ಯಮ ಉವಾಚ ॥

ಯಮರಾಜಂ ವರಯ ಮಾಂ ದಂಡನೇತಾರಮಾಜಗತ್ ।
ಸರ್ವೋತ್ತಮಾ ತ್ವಂ ಮತ್ಪತ್ನೀ ಪಿತೃಲೋಕೇ ಭವಿಷ್ಯಸಿ ॥ ೪ ॥

॥ ಧನದ ಉವಾಚ ॥

ರಾಜರಾಜಂ ಹಿ ಮಾಂ ವಿದ್ಧಿ ನಿಧೀಶಂ ಹೇ ವರಾಂಗನೇ ।
ತ್ವಂ ಭಜಾಶು ವಿಶಾಲಾಕ್ಷಿ ತ್ಯಜ ಸಂಕರ್ಷಣೇ ರತಿಂ ॥ ೫ ॥

॥ ಅಗ್ನಿರುವಾಚ ॥

ಸರ್ವದೇವಮುಖಂ ವಿದ್ಧಿ ಸರ್ವಯಜ್ಞಪ್ರತಿಷ್ಠಿತಂ ।
ಭಜ ಮಾಂ ತ್ವಂ ವಿಶಾಲಾಕ್ಷಿ ವಿಹಾಯಾನ್ಯತ್ರ ವಾಸನಾಂ ॥ ೬ ॥

---

೪. ಬಳಿಕ ಯಮನು ಅವಳ ಬಳಿಗೆ ಬಂದು ಎಲೌ ಸುಂದರಿ! ಯಮರಾಜನಾದ ನಾನು ಬಂದಿರುವೆನು. ಈ ಜಗತ್ತಿನಲ್ಲಿರುವ ಪಾಪಿಗಳೆಲ್ಲರನ್ನೂ ದಂಡಿಸುವ ದಂಡಧರನೇ ನಾನು. ನನ್ನನ್ನು ವರಿಸು. ನೀನು ನನ್ನ ಪತ್ನಿಯೊಡನೆ ಪಿತೃಲೋಕದಲ್ಲಿ ಎಲ್ಲರಿಗಿಂತಲೂ ಉತ್ತಮವಾದ ಸೌಭಾಗ್ಯದಿಂದ ಮೆರೆಯುವಂತೆ" ಎಂದು ನುಡಿದನು.

೫. ಅನಂತರ ಕುಬೇರನು ಮುಂದೆ ಬಂದು ಎಲೌ ಶೋಭನಾಂಗಿ! ನನ್ನನ್ನು ರಾಜರಾಜನಾದ ಕುಬೇರನೆಂದು ತಿಳಿ. ನವನಿಧಿಗಳಿಗೂ ನಾನೇ ಅಧಿಪತಿಯಾಗಿರುವೆನು. ಎಲೆ ವಿಶಾಲಾಕ್ಷಿ! ಆ ಸಂಕರ್ಷಣನಲ್ಲಿ ನಿನ್ನ ಅನುರಾಗವನ್ನು ತೊರೆದು ನನ್ನನ್ನು ಮದುವೆಯಾಗು " ಎಂದು ನುಡಿದನು.

೬. ಆಮೇಲೆ ಅಗ್ನಿಯು ಬಳಿಗೆ ಬಂದು ಆಕೆಯನ್ನು ಕುರಿತು " ಎಲೆ ವಿಶಾಲಲೋಚನೆ! ಸಕಲ ದೇವತೆಗಳಿಗೂ ಮುಖವೆನಿಸಿರುವ ಯಜ್ಞೇಶ್ವರನೇ ನಾನೆಂದು ತಿಳಿ. ನನ್ನನ್ನೇ ಸಕಲ ಯಜ್ಞಗಳಲ್ಲಿಯೂ ಆರಾಧಿಸುವರು. ನೀನು ಮತ್ತಾರಲ್ಲೂ ಅಭಿಲಾಷೆಪಡದೆ ನನ್ನನ್ನೇ ವರಿಸು " ಎಂದು ಪ್ರಾರ್ಥಿಸಿದನು.

॥ ವರುಣ ಉವಾಚ ॥

ಲೋಕಪಾಲಂ ವರಯ ಮಾಂ ಪಾಶಿನಂ ಯಾದಸಾಂಪತಿಂ ।
ಸಪ್ತಾನಾಂ ಹಿ ಸಮುದ್ರಾಣಾಂ ವೈಭವಂ ಪಶ್ಯ ಭಾಮಿನಿ ॥ ೭ ॥

॥ ಸೂರ್ಯ ಉವಾಚ ॥

ಜಗಚ್ಚಕ್ಷುಃ ಸದಾಹಂ ವೈ ಚಂಡಾಂಶುಶ್ಚಾಕ್ಷುಷಾತ್ಮಜೇ ।
ವಿಹಾಯ ಪಾತಾಲಗತಿಂ ವರ ಮಾಂ ಸ್ವರ್ಗಭೂಷಣಂ ॥ ೮ ॥

॥ ಸೋಮ ಉವಾಚ ॥

ದ್ವಿಜರಾಜಶ್ಚೌಷಧೀಶೋ ನಕ್ಷತ್ರೇಶಃ ಸುಧಾಕರಃ ।
ಕಾಮಿನೀಬಲದೋಹಂ ವೈ ಭಜ ಮಾಂ ಗಜಗಾಮಿನಿ ॥ ೯ ॥

---

೭. ಇದಾದ ಬಳಿಕ ವರುಣನು ಅಲ್ಲಿಗೆ ಬಂದು “ ಎಲೌ ಭಾಮೆ ! ನನ್ನನ್ನು ವರುಣನೆನ್ನುವರು. ನಾನು ಜಲಜಂತುಗಳಿಗೆಲ್ಲಾ ಅಧಿಪತಿಯೆನಿಸಿರುವೆನಲ್ಲದೆ ಲೋಕಪಾಲನೂ ಆಗಿರುವೆನು. ನನ್ನನ್ನು ನೀನು ವರಿಸಿ, ಸಪ್ತಸಮುದ್ರಗಳ ವೈಭವವೆಲ್ಲವನ್ನೂ ಕಣ್ಣಾರೆ ನೋಡುವೆಯಂತೆ ” ಎಂದು ನುಡಿದನು.

೮. ಬಳಿಕ ಸೂರ್ಯನು ಆಕೆಯನ್ನು ಕುರಿತು “ ಎಲೆ ಚಾಕ್ಷುಷರಾಜನಂದಿನಿ ! ನಾನು ಈ ಜಗತ್ತಿಗೇ ಕಣ್ಣೆನಿಸಿರುವೆನು. ನನ್ನನ್ನು ಚಂಡಾಂಶುವೆನ್ನುವರು. ಆ ಸಂಕರ್ಷಣನಿಗಾಸೆಪಟ್ಟು ಪಾತಾಲಕ್ಕಿಳಿಯುವ ಬದಲು ಸ್ವರ್ಗಲೋಕಕ್ಕೆ ಭೂಷಣವೆನಿಸಿದ ನನ್ನನ್ನು ಒಲಿದು ಉತ್ತಮವಾದ ಗತಿಯನ್ನು ಹೊಂದುವೆಯಂತೆ ” ಎಂದನು.

೯. ಅವನಾದ ಮೇಲೆ ಚಂದ್ರನು ಮುಂದೆ ಬಂದು “ ಎಲೆ ಮದಗಜಗಮನೆ ! ನನ್ನನ್ನು ದ್ವಿಜರಾಜನೆನ್ನುವರು. ನಾನು ಓಷಧಿಗಳಿಗೆಲ್ಲಾ ಒಡೆಯನೆನಿಸಿರುವೆನು. ನನ್ನನ್ನೇ ನಕ್ಷತ್ರಗಳೆಲ್ಲಾ ಅಧಿಪತಿಯೆಂಬುದಾಗಿ ಗೌರವಿಸುವುವು. ನನ್ನ ಕಿರಣಗಳೆಲ್ಲವೂ ಅಮೃತಮಯವಾಗಿರುವುವು. ನಾನೇ ಕಾಮವಿವಶರಾದ ನಾರಿಯರಿಗೆ ಉತ್ತೇಜನವನ್ನೀಯುವವನು. ಆದುದರಿಂದ ನನ್ನನ್ನೇ ವರಿಸು ” ಎಂದು ಬೇಡಿದನು.

|| ಮಂಗಲ ಉವಾಚ ||

ಇಯಂ ಮಹೀ ಹಿ ಮೇ ಮಾತಾ ಪಿತಾ ಸಾಕ್ಷಾದುರುಕ್ರಮಃ ।
ಮಂಗಲಂ ಭಜ ಮಾಂ ಭದ್ರೇ ಭೂತ್ವಾ ಭೂರಿ ಭವಾರ್ಥಿನೀ || ೧೦ ||

|| ಬುಧ ಉವಾಚ ||

ಬುಧೋಽಹಂ ಬುದ್ಧಿಮಾನ್ವೀರಃ ಕಾಮಿನೀರಸವರ್ಧನಃ ।
ವಿಸೃಜ್ಯ ಸರ್ವನಾಕೇಶಾನ್ರಮಸ್ವ ತ್ವಂ ಮಯಾ ಸಹ || ೧೧ ||

|| ಬೃಹಸ್ಪತಿರುವಾಚ ||

ಗೀಷ್ಪತಿರ್ಧಿಷಣೋಽಹಂ ವೈ ಸುರಾಚಾರ್ಯೋ ಬೃಹಸ್ಪತಿಃ ।
ಸಾಕ್ಷಾದ್ದೇವಗುರುರ್ಲೋಕೇ ಭಜ ಮಾಂ ಮನ್ಯಸೇ ಶುಭೇ || ೧೨ ||

---

೧೦. ಅನಂತರ ಅಂಗಾರಕನು ಮುಂದೆ ಬಂದು "ಎಲೆ ಭದ್ರೆ! ನನ್ನನ್ನು ಮಂಗಲನೆನ್ನುವರು. ಈ ಭೂಮಿಯೇ ನನಗೆ ಮಾತೆಯಾಗಿರುವಳು. ಸಾಕ್ಷಾತ್ ತ್ರಿವಿಕ್ರಮನೇ ನನ್ನ ತಂದೆಯೆನಿಸಿರುವನು. ನೀನು ಅಪಾರವಾದ ಐಶ್ವರ್ಯ ಸುಖವನ್ನು ಅನುಭವಿಸುವೆಯಾದರೆ ನನ್ನನ್ನು ಮದುವೆಯಾಗು" ಎಂದನು.

೧೧. ಬಳಿಕ ಬುಧನು ಮುಂದೆ ಬಂದು ಎಲೆ ಸುಂದರಿ! ನಾನು ಬುಧನು. ಬುದ್ಧಿಶಕ್ತಿಯಲ್ಲಿಯೂ, ಪರಾಕ್ರಮದಲ್ಲಿಯೂ ಎಲ್ಲರಿಗಿಂತಲೂ ಮೇಲಾಗಿರುವೆನು. ಕಾಮಿನಿಯರಿಗೆ ಮಿತಿಮೀರಿದ ಆನಂದವನ್ನು ಉಂಟುಮಾಡುವವನು ನಾನೇ. ಆದುದರಿಂದ ಈ ಎಲ್ಲ ದೇವಾಧಿಪತಿಗಳನ್ನೂ ಬಿಟ್ಟು ನನ್ನನ್ನು ವರಿಸಿ ಸುಖವಾಗಿ ವಿಹರಿಸುತ್ತಿರು" ಎಂದು ಬೋಧಿಸಿದನು.

೧೨. ಆಮೇಲೆ ಬೃಹಸ್ಪತಿಯು ಆಕೆಯ ಬಳಿಸಾರಿ "ಎಲೆ ಶುಭಾಂಗಿ! ನಾನೇ ಬೃಹಸ್ಪತಿಯು. ಸಮಸ್ತವಾದ ವಾಕ್ಕುಗಳಿಗೂ, ಪ್ರಶ್ನೆಗೂ ಅಧಿಪತಿಯು ನಾನೇ ಆಗಿರುವೆನು. ನನ್ನನ್ನೇ ದೇವತೆಗಳೆಲ್ಲರೂ ಆಚಾರ್ಯನೆಂದು ಪೂಜಿಸುವರು. ಆದುದರಿಂದ ನನ್ನನ್ನೇ ನೀನು ಒಲಿದು ಮದುವೆಯಾಗು" ಎಂದು ನುಡಿದನು.

|| ಶುಕ್ರ ಉವಾಚ ||

ಸಾಕ್ಷಾದ್ದೈತ್ಯಗುರುಃ ಕಾವ್ಯೋ ಭಾರ್ಗವೋಽಹಂ ಮಹಾಮತೇ ।
ಸ್ವಶ್ರೇಯಸ್ತು ವಿಚಾರ್ಯೈವಂ ಭವ ಮದ್ಭಾಮಿನೀ ಭೃಶಂ || ೧೩ ||

|| ಶನಿರುವಾಚ ||

ಸರ್ವೇಷಾಂ ಬಲವಾನ್ಭದ್ರೇ ಅಹಂ ದೇವೋಪರಿ ಸ್ಥಿತಃ ।
ತ್ಯಜ ಶೋಕಂ ವರಯ ಮಾಂ ಲೋಕಭಸ್ಮಕರಂ ದೃಶಾ || ೧೪ ||

|| ಮಹಾನಂತ ಉವಾಚ ||

ಅಥ ಜ್ಯೋತಿಷ್ಮತೀ ತೇಷಾಂ ವಚಾಂಸಿ ಶ್ರುತ್ವಾರುಣನೇತ್ರಾ ಸ್ಫುರದ-
ಧರಾ ಚಲದ್ಭ್ರೂಭಂಗಾ ಪ್ರೋದ್ಯದ್ರೋಷಾಗ್ನಿಪ್ರಕರ್ಷೋಚ್ಚಲಚ್ಛಟಾ
ಮಾಂ ಪರಂ ಸಸ್ಮಾರ। ಪರಂ ಕ್ರೋಧಂ ಚ ಚಕಾರ || ೧೫ ||

---

೧೩. ಆ ಬೃಹಸ್ಪತಿಯಾದನಂತರ ಶುಕ್ರನು ಆಕೆಯನ್ನು ಕುರಿತು "ಎಲೆ ಮಹಾ ಪ್ರಾಜ್ಞಳೇ! ನನ್ನನ್ನು ದೈತ್ಯರಿಗೆಲ್ಲಾ ಗುರುವಾದ ಭಾರ್ಗವನೆನ್ನುವರು. ನಿನಗೆ ಶ್ರೇಯಸ್ಸು ಯಾವುದೆಂದು ಚೆನ್ನಾಗಿ ಆಲೋಚಿಸಿ ಬಳಿಕ ನನ್ನನ್ನು ಕೈಹಿಡಿಯುವೆಯಂತೆ" ಎಂದನು.

೧೪. ಅನಂತರ ಶನಿಯು ಅವಳ ಬಳಿಗೆ ಬಂದು "ಎಲೆ ಮಂಗಳಾಂಗಿ! ನಾನು ಎಲ್ಲರಿಗಿಂತಲೂ ಬಲಶಾಲಿಯಾಗಿರುವೆನು. ಎಲ್ಲರಿಗಿಂತಲೂ ಮೇಲೆ ನೆಲೆಸಿರುವೆನು. ನಾನು ಇಚ್ಛಿಸಿದರೆ ಬರಿಯ ನೋಟವೊಂದರಿಂದಲೇ ಈ ಜಗತ್ತೆಲ್ಲವನ್ನೂ ಸುಟ್ಟು ಬೂದಿಮಾಡಿಬಿಡಬಲ್ಲೆನು. ನಿನ್ನ ಶೋಕವೆಲ್ಲವನ್ನೂ ತೊರೆದು ನನ್ನನ್ನು ವರಿಸು" ಎಂದು ಹೇಳಿದನು.

೧೫. ಎಲೌ ಪ್ರಿಯೆ! ಈ ರೀತಿಯಾಗಿ ಅವರೆಲ್ಲರೂ ಒಬ್ಬೊಬ್ಬರಾಗಿ ನುಡಿದುದನ್ನು ಕೇಳಿ ಆ ಜ್ಯೋತಿಷ್ಮತಿಗೆ ಮಿತಿಮೀರಿದ ಕೋಪವುಂಟಾಯಿತು. ಆಕೆಯ ಕಣ್ಣುಗಳು ಕೆಂಡದಂತಾದುವು. ತುಟಿಗಳು ನಡುಗತೊಡಗಿದುವು. ಆಗ ಆಕೆಯು ನನ್ನನ್ನು ಸ್ಮರಿಸುತ್ತಾ ಇನ್ನು ಹೆಚ್ಚು ಕೋಪವನ್ನು ತಾಳಿದಳು.

ತೇನ ಸಖಂಡಂ ಮಹೀಮಂಡಲಂ ಬ್ರಹ್ಮಾಂಡಮಪಿ ಪರಂ ಚಾ-
ಬ್ರಹ್ಮಲೋಕಾನ್ದ್ರೃಥಮೇಜತ್ಸರ್ವತೋ ಮಹದ್ಭಯಂ ಬಭೂವ ॥ ೧೬ ॥

ತದೈವ ಶಕ್ರಾದ್ಯಾಃ ಶಾಪಭಯಭೀತಾಃ ಪ್ರಕಂಪಿತಾಃ ಕೃತಬಲಿ-
ಪಾಣಯಃ ಪಾದಪದ್ಮೇ ಪರಿತೋ ನಿಪೇತುಃ। ಪಾಹಿ ಪಾಹೀತಿ ಜಗು-
ಸ್ತೈರಿತ್ಥಂ ಶಾಂತಾಪಿ ಜ್ಯೋತಿಷ್ಮತೀ ಪೃಥಕ್ಪೃಥಕ್ತಾನ್ ಶಶಾಪ ॥ ೧೭ ॥

॥ ಜ್ಯೋತಿಷ್ಮತ್ಯುವಾಚ ॥

ಛಲಯಿತುಮಿಹ ಮಾಂ ಸಮಾಗತಸ್ತ್ವಂ
ಭವ ಖಲ ಪಂಗುರಧಃ ಸಮೀಕ್ಷಣಶ್ಚ ।
ಕೃಶತನುರತಿಕೃಷ್ಣಕುತ್ಸಿತಾಭೋ
ಭವ ಸಹಸಾಸಿತಮಾಷತೈಲಭಕ್ಷೀ ॥ ೧೮ ॥

---

೧೬. ಅದರಿಂದ ಭಾರತಾದಿ ನವಖಂಡಗಳಿಂದ ತುಂಬಿದ ಈ ಭೂಮಂಡಲವೂ, ಬ್ರಹ್ಮಲೋಕದವರೆಗಿನ ಬ್ರಹ್ಮಾಂಡವೆಲ್ಲವೂ ಚಲಿಸತೊಡಗಿತು. ಆಗ ಎಲ್ಲೆಲ್ಲೂ ಹೆದರಿಕೆಯಾವರಿಸಿತು.

೧೭. ಆಗ ಇಂದ್ರಾದಿ ದೇವತೆಗಳು ತಮಗೆ ಎಲ್ಲಿ ಶಾಪವು ಬರುವುದೋ ಎಂದು ಹೆದರಿ ತಲ್ಲಣಿಸುತ್ತಾ ನಡುಕದೊಡನೆ ಕೈಗಳನ್ನು ಜೋಡಿಸಿಕೊಂಡು ಆಕೆಯ ಕಾಲುಗಳ ಮೇಲೆ ತಲೆಯಿಟ್ಟು ನಮಸ್ಕರಿಸಿ ಕಾಪಾಡು! ಎಂದು ಅಂಗಲಾಚಿಕೊಂಡರು. ಈ ರೀತಿಯಾಗಿ ಅವರೆಲ್ಲರಿಂದ ಶಾಂತಿಯನ್ನು ವಹಿಸುವಂತೆ ಪ್ರಾರ್ಥಿಸಲ್ಪಟ್ಟರೂ ಕೂಡ ಆ ಜ್ಯೋತಿಷ್ಮತಿಯು ಅವರೆಲ್ಲರನ್ನೂ ಬೇರೆ ಬೇರೆಯಾಗಿ ಶಪಿಸಿದಳು.

೧೮. ಎಲೈ ಶನೈಶ್ಚರನೇ! ನೀನು ನನ್ನನ್ನು ಮೋಸಗೊಳಿಸಲು ಬಂದಿದ್ದೆಯಲ್ಲವೆ! ನಿನ್ನ ಕಾಲು ಕುಂಟಾಗಲಿ! ನಿನ್ನ ದೃಷ್ಟಿಯು ಯಾವಾಗಲೂ ಕೆಳಮುಖವಾಗಿಯೇ ಇರಲಿ! ನಿನ್ನ ದೇಹವು ಸವೆದು ಕಡ್ಡಿಯಂತಾಗಲಿ! ನಿನ್ನ ಮೈಯೆಲ್ಲವೂ ನೋಡಿದವರು ಅಸಹ್ಯಪಟ್ಟುಕೊಳ್ಳುವಂತೆ ಕಾಡಿಗೆಯ ಬಣ್ಣವನ್ನು ತಳೆಯಲಿ! ನಿನಗೆ ಉದ್ದು ಮತ್ತು ಎಳ್ಳೆಣ್ಣೆಯೇ ಆಹಾರವಾಗಿರಲಿ!"

ಹೇ ಶುಕ್ರ ಅಕ್ಷ್ಣಾ ಭವ ಕಾಣ ಆಶು
ಸ್ತ್ರೀಸಂಜ್ಞಕಸ್ತ್ವಂ ಭವ ಗೀಷ್ಪತೇಽತ್ರ ।
ಹೇ ಸೌಮ್ಯ ತೇ ವಾರದಿನಂ ಹಿ ಶೂನ್ಯಂ
ವದಂತಿ ಗಚ್ಛಂತಿ ನ ಕೇ ಕದಾಚಿತ್ ॥ ೧೯ ॥

ಹೇ ಮಂಗಲ ತ್ವಂ ಭವ ವಾನರಾನನೋ
ನಿಶಾಕರ ತ್ವಂ ಭವ ರಾಜಯಕ್ಷ್ಮವಾನ್ ।
ತ್ವಂ ಭಗ್ನದಂತೋ ಭವ ಭೋ ದಿವಾಕರ
ಪಾಶಿನ್ಸ್ರುಚಿಸ್ತೇ ಭವತಾಜ್ಜಲಂಧರೀ ॥ ೨೦ ॥

ತ್ವಂ ಸರ್ವಭಕ್ಷೋ ಭವತಾದುಷರ್ಬುಧ
ಮನುಷ್ಯಧರ್ಮನ್ಹೃತಪುಷ್ಪಕೋ ಭವ ।
ವೈವಸ್ವತ ತ್ವಂ ಬಹುಮಾನಭಂಗೋ
ಭವಾಶು ಯುದ್ಧೇ ಪ್ರಬಲೇನ ರಕ್ಷಸಾ ॥ ೨೧ ॥

---

೧೯. "ಎಲೆ ಶುಕ್ರನೆ! ನಿನ್ನ ಒಂದು ಕಣ್ಣು ಕುರುಡಾಗಲಿ! ಎಲೆ ಗುರುವೆ! ನಿನಗೆ ಸ್ತ್ರೀಯೆಂಬ ಸಂಜ್ಞೆಯುಂಟಾಗಲಿ! ಓ ಸೌಮ್ಯ (ಬುಧ) ನಿನ್ನ ದಿವಸವು ಶೂನ್ಯವೆಂದು ಪರಿಗಣಿಸಲ್ಪಡಲಿ! ಆ ದಿನದಲ್ಲಿ ಯಾವನೂ ಯಾವಾಗಲೂ ಯಾವೊಂದು ಶುಭಕಾರ್ಯವನ್ನೂ ಮಾಡದಿರುವಂತಾಗಲಿ!

೨೦. "ಎಲೆ ಮಂಗಲನೆ! ನಿನ್ನ ಮುಖವು ಕಪಿಯಂತಾಗಲಿ! ಓ ಚಂದ್ರ! ನಿನಗೆ ಕ್ಷಯರೋಗವು ಪ್ರಾಪ್ತವಾಗಲಿ! ಎಲೈ ಸೂರ್ಯನೇ! ನಿನ್ನ ಹಲ್ಲುಗಳೆಲ್ಲವೂ ಮುರಿದುಹೋಗಲಿ! ಓ ವರುಣಾ! ನಿನ್ನ ಶರೀರವು ಸರ್ವದಾ ನೀರನ್ನು ಸ್ರವಿಸುತ್ತಿರಲಿ!"

೨೧. "ಎಲೈ ಅಗ್ನಿಯೇ! ನೀನು ಸರ್ವಭಕ್ಷನಾಗು. ಎಲೈ ಕುಬೇರನೇ ನಿನ್ನ ಪುಷ್ಪಕವಿಮಾನವನ್ನು ಮತ್ತೊಬ್ಬರು ಅಪಹರಿಸುವಂತಾಗಲಿ! ಎಲೆ ಯಮ ಧರ್ಮರಾಜ! ನಿನ್ನ ಅಹಂಕಾರವು ಮುರಿಯಲ್ಪಡಲಿ! ಪ್ರಬಲನಾದ ರಾಕ್ಷಸನೊಬ್ಬನು ನಿನ್ನನ್ನು ಯುದ್ಧದಲ್ಲಿ ಚೆನ್ನಾಗಿ ಸೋಲಿಸಲಿ!"

ಮಾಂ ಹರ್ತುಮಾಗತ್ಯ ಸುರಾಧಮ ಸ್ಥಿತಃ
ಕರೋಷಿ ನಿಂದಾಂ ಪರಮಾತ್ಮನೋ ಗಿರಾ ।
ತವ ಪ್ರಿಯಾಂಕೋಪಿ ನೃಪೋ ಹರಿಷ್ಯತಿ
ಕರಿಷ್ಯತಿ ಸ್ವರ್ಗಸುಖಂ ಗತೇ ತ್ವಯಿ ॥ ೨೨ ॥

ಪಾಶೇನ ಬದ್ಧಂ ಯುಧಿ ನಿರ್ಜಿತಂ ತ್ವಾಂ
ಬಲಾದ್ಗೃಹೀತ್ವಾ ಖಲು ಕೋಪಿ ರಾಕ್ಷಸಃ ।
ಲಂಕಾಂ ಪುರೀಮೇತ್ಯ ದಿವಸ್ಪತೇ ವೈ
ಕಾರಾಗೃಹೇಂಧೇ ಕಿಲ ಕಾರಯಿಷ್ಯತಿ ॥ ೨೩ ॥

॥ ಶ್ರೀ ಮಹಾನಂತ ಉವಾಚ ॥

ಅಥ ಹ ವಾವ ತಯಾ ಶಪ್ತಾನಾಂ ದೇವಾನಾಂ ಮಧ್ಯೇ ಕುಪಿತಃ ಶಕ್ರೋಪಿ ತಾಂ ಶಶಾಪ। ಕೋಪಕಾರಿಣಿ ಸಂಕರ್ಷಣಂ ವರಮಪಿ ಪ್ರಾಪ್ಯಾತ್ರ ಜನ್ಮನಿ ಅನ್ಯತ್ರ ವಾ ಕದಾಚಿತ್ತವ ಪುತ್ರೋತ್ಸವೋ

---

೨೨. ಈ ರೀತಿಯಾಗಿ ಆ ಜ್ಯೋತಿಷ್ಮತಿಯು ಒಬ್ಬೊಬ್ಬರನ್ನಾಗಿ ಶಪಿಸುತ್ತಾ ಕೊನೆಗೆ ಇಂದ್ರನನ್ನು ಕುರಿತು "ಎಲೆ ಸುರಾಧಮ! ನನ್ನನ್ನು ನೀನು ಅಪಹರಿಸಲು ಬಂದೆಯಲ್ಲವೆ? ಅದೂ ಅಲ್ಲದೆ ಆ ಪರಪುರುಷನನ್ನು ಬಾಯಾರೆ ಬೈದೆಯಲ್ಲವೆ? ನಿನ್ನ ಮಡದಿಯನ್ನು ಯಾವನೋ ಒಬ್ಬ ರಾಜನು ಅಪಹರಿಸುವನು. ಮತ್ತು ನಿನ್ನನ್ನು ಅಮರಾವತಿಯಿಂದೋಡಿಸಿ ತಾನೇ ಅಧಿರಾಜನಾಗಿ ಸ್ವರ್ಗಸುಖವೆಲ್ಲವನ್ನೂ ಅನುಭವಿಸುವನು.

೨೩. ಇದೂ ಅಲ್ಲದೆ ರಾಕ್ಷಸನೋರ್ವನು ನಿನ್ನನ್ನು ಯುದ್ಧದಲ್ಲಿ ಗೆದ್ದು ಪಾಶಗಳಿಂದ ಬಲವಾಗಿ ಬಿಗಿದು ಲಂಕಾಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಕತ್ತಲೆ ಕವಿದಿರುವ ಸೆರೆಮನೆಯಲ್ಲಿ ಕೂಳೆಹಾಕುವನು" ಎಂದು ಶಪಿಸಿದಳು.

೨೪. ಹೀಗೆ ಅವರೆಲ್ಲರೂ ಆ ಜ್ಯೋತಿಷ್ಮತಿಯ ಶಾಪಕ್ಕೆ ಗುರಿಯಾಗಲು ಅವರಲ್ಲೊಬ್ಬನಾದ ಇಂದ್ರನು ತಾನೂ ಅವಳನ್ನು ಕುರಿತು ಶಪಿಸಿದನು:—ಎಲೆ ಕೋಪನೆ, (ಕೋಪದಿಂದ ವಿವೇಕವಿಲ್ಲದವಳು) ನೀನಪೇಕ್ಷಿಸಿದಂತೆ ಆ ಸಂಕರ್ಷಣನನ್ನೇ ಮದುವೆಯಾದರೂ ಈ ಜನ್ಮದಲ್ಲಾಗಲಿ ಅಥವಾ ಇನ್ನಾವ ಜನ್ಮದಲ್ಲಾಗಲಿ

ಮಾ ಭೂತ್ । ಏವಮುಕ್ತ್ವಾ ಶಕ್ರೋಽಪಿ ತತ್ತೇಜಸಾ ಧರ್ಷಿತಃ ಸರ್ವ ದೇವಗಣೈಃ ಸಹ ಸ್ವರ್ಗಂ ಜಗಾಮ । ಪುನಃ ಸಾ ತಪಸ್ಯೇಽಸೇ ॥ ೨೪ ॥

ಅಥ ತತ್ತಪೋ ದೃಷ್ಟ್ವಾ ಬ್ರಹ್ಮಾ ಬ್ರಹ್ಮವಿದ್ಭಿರ್ಬ್ರಾಹ್ಮಣೈ-ರ್ಬ್ರಾಹ್ಮ್ಯಾದಿಭಿಃ ಸಂವೃತಃ ಸರ್ವಜಗತ್ಕಾರಣಭೂತಃ ಸ್ವಭವನಾದ್ಧಂಸ ಯಾನೇನಾಗತವಾನ್ ॥ ೨೫ ॥

ಅಂಬರೇ ಸ್ಥಿತ್ವಾ ತಾಮಾಹ ಹೇ ಜ್ಯೋತಿಷ್ಮತಿ ಚಾಕ್ಷುಷಾತ್ಮಜೇ ತ್ವತ್ತಪಃ ಸಫಲಂ ಜಾತಂ ತೇನ ಸಿದ್ಧಾಸಿ ಪರಮಹಂ ಪ್ರಸನ್ನೋಽಸ್ಮಿ ವರಂ ಬ್ರೂಹೀತಿ ॥ ೨೬ ॥

ತಚ್ಛ್ರುತ್ವಾ ಕಂಠಜಲಾದ್ವಿನಿರ್ಗತ್ಯ ಬ್ರಹ್ಮಾಣಂ ಪ್ರಣಿಪತ್ಯ ಸ್ತುತ್ವಾ ಕೃತಾಂಜಲಿರಿತ್ಯಬ್ರವೀತ್ । ಹೇ ಭಗವನ್, ಯದಿ ಪ್ರಸನ್ನೋಽಸಿ

ನಿನಗೆ ಎಂದೆಂದಿಗೂ ಮಕ್ಕಳೇ ಆಗದಿರಲಿ " ಎಂಬುದಾಗಿ ಶಪಿಸಿದನು. ಅನಂತರ ಆ ಇಂದ್ರನು ಆಕೆಯ ತೇಜಸ್ಸನ್ನು ತಾಳಲಾರದೆ ಉಳಿದ ಎಲ್ಲ ದೇವತೆಗಳೊಡನೆ ಅಲ್ಲಿಂದ ಹೊರಟು ಸ್ವರ್ಗಲೋಕಕ್ಕೆ ತೆರಳಿದನು. ಇತ್ತಲಾಗಿ ಆ ಜ್ಯೋತಿಷ್ಮತಿಯು ಮತ್ತೆ ಎಂದಿನಂತೆ ತಪಸ್ಸಿಗೆ ಮೊದಲುಮಾಡಿದಳು.

೨೫. ಅವಳ ಅತಿಶಯವಾದ ತಪಸ್ಸನ್ನು ನೋಡಿ ಸಕಲ ಜಗತ್ತುಗಳಿಗೂ ಸೃಷ್ಟಿಕರ್ತನೆನಿಸಿದ ಬ್ರಹ್ಮನು ಬ್ರಹ್ಮಜ್ಞರಾದ ಬ್ರಾಹ್ಮಣರೊಡನೆಯೂ, ಬ್ರಹ್ಮಾದಿ ಸಪ್ತಮಾತೃಕೆಗಳೊಡನೆಯೂ ಸೇರಿ ಬ್ರಹ್ಮಲೋಕದಿಂದ ಹೊರಟು ತನ್ನ ವಾಹನ ವಾದ ಹಂಸವನ್ನೇರಿ ಅವಳು ತಪಸ್ಸುಮಾಡುತ್ತಿದ್ದಲ್ಲಿಗೆ ಬಂದನು.

೨೬. ಅಲ್ಲಿಗೆ ಬಂದು ಆಕಾಶದಲ್ಲಿಯೇ ನಿಂತು ಚಾಕ್ಷುಷಮನುಪುತ್ರಿಯಾದ ಅವಳನ್ನು ಕುರಿತು " ಅಮ್ಮಾ! ಜ್ಯೋತಿಷ್ಮತಿ! ನಿನ್ನ ತಪಸ್ಸು ಫಲಿಸಿತು! ನೀನು ಸಿದ್ಧಳಾದೆ (ಕೃತಾರ್ಥಳು), ನಾನು ಬಹುವಾಗಿ ಪ್ರಸನ್ನನಾಗಿರುವೆನು. ನಿನಗೆ ಬೇಕಾದ ವರವನ್ನು ಕೇಳಬಹುದು " ಎಂದನು.

೨೭. ಅದನ್ನು ಕೇಳಿ ಕುತ್ತಿಗೆಯವರೆಗೆ ಮುಳುಗಿದ್ದ ನೀರಿನಿಂದ ಈಚೆಗೆ ಬಂದು, ಆ ಜ್ಯೋತಿಷ್ಮತಿಯು ಬ್ರಹ್ಮನಿಗೆ ನಮಸ್ಕಾರ ಮಾಡಿ ಆತನನ್ನು ಸ್ತುತಿಸಿ, ಕೈಗಳನ್ನು ಜೋಡಿಸಿಕೊಂಡು, " ಹೇ ಭಗವನ್! ನೀನು ನಿಜವಾಗಿಯೂ ಪ್ರಸನ್ನ

ಕಿಲೇಹ ಸಂಕರ್ಷಣೋ ಭಗವಾನ್ಸಹಸ್ರವದನೋ ಮಮ ವರೋ ಭೂಯಾತ್। ಇತಿ ಶ್ರುತ್ವಾ ಹ ವಾವ ವಿಬುಧರ್ಷಭಃ ಪ್ರತ್ಯುವಾಚ ॥ ೨೭ ॥

ಹೇ ಪುತ್ರಿ, ತವ ಮನೋರಥೋ ದುರ್ಲಭೋಽಸ್ತಿ । ತಥಾಪಿ ಪೂರ್ಣಂ ಕರಿಷ್ಯಾಮಿ, ಅದ್ಯೈವ ವೈವಸ್ವತಮನ್ವಂತರಃ ಪ್ರಾಪ್ತೋಽಸ್ತಿ ಅಸ್ಯ ತ್ರಿನವಚತುರ್ಯುಗವಿಕಲ್ಪಿತೇ ಕಾಲೇ ಸತಿ ತತ್ರ ವರಃ ಸಂಕರ್ಷಣೋ ಭಗವಾನ್ ಭವಿಷ್ಯತಿ ॥ ೨೮ ॥

ತಚ್ಛ್ರುತ್ವಾ ಜ್ಯೋತಿಷ್ಮತೀ ಬ್ರಹ್ಮಾಣಮಾಹ । ದೇವದೇವ ಭಗವನ್ಮಹಾನ್ಕಾಲೋ ವರ್ತತೇ ಮಮ ಮನೋರಥಃ ಶೀಘ್ರಂ ಭೂಯಾತ್ ತ್ವಂ ಸರ್ವಕಾರ್ಯಂ ಕರ್ತುಂ ಸಮರ್ಥಃ ನ ಚೇತ್ತುಭ್ಯಂ ಶಾಪಂ ದಾಸ್ಯಾಮಿ, ಯಥಾ ದೇವೇಭ್ಯೋ ದತ್ತಃ ॥ ೨೯ ॥

ನಾಗಿರುವೆಯಾದರೆ ಸಹಸ್ರ ಮುಖಮಂಡಲಗಳಿಂದ ವಿರಾಜಿಸುತ್ತಿರುವ ಸಾಕ್ಷಾದ್ಭಗವಂತನಾದ ಸಂಕರ್ಷಣನೇ ನನಗೆ ಪತಿಯಾಗಲಿ" ಎಂಬುದಾಗಿ ತನ್ನ ಮನದಾಸೆಯನ್ನು ಬಿನ್ನವಿಸಿದಳು. ಅದನ್ನು ಕೇಳಿ ಆ ಸುರೇಶ್ವರನು—

೨೮. "ಎಲೆ ಮಗಳೆ! ನಿನ್ನ ಅಭಿಲಾಷೆಯು ನೆರವೇರಲು ಸಾಧ್ಯವಿಲ್ಲದುದಾದರೂ ಅದು ನೆರವೇರುವಂತೆ ಮಾಡುವೆನು. ಈಗತಾನೆ ವೈವಸ್ವತ ಮನ್ವಂತರವು ಆರಂಭವಾಗಿರುವುದು. ಇದರಲ್ಲಿ ಇಪ್ಪತ್ತೇಳು ಚತುರ್ಯುಗಗಳು ಮರಳಿದನಂತರ ಆ ಭಗವಂತನಾದ ಸಂಕರ್ಷಣನು ನಿನ್ನನ್ನು ಮದುವೆಯಾಗುವನು" ಎಂದನು.

೨೯. ಅದನ್ನು ಕೇಳಿ ಆ ಜ್ಯೋತಿಷ್ಮತಿಯು ಆತನನ್ನು ಕುರಿತು 'ಓ ದೇವ ದೇವ, ಕಾಲವು ಬಹು ಹೆಚ್ಚಾಯಿತು. ನನ್ನ ಮನದಾಸೆಯು ಬೇಗನೆ ಈಡೇರಬೇಕು. ನೀನು ಮನಸ್ಸು ಮಾಡಿದರೆ ಎಂತಹ ಕೆಲಸವಾದರೂ ಜರುಗಿಹೋಗುವುದು. ಹಾಗೆ ನೀನು ಮಾಡದಿದ್ದರೆ ದೇವತೆಗಳಿಗೆ ಕೊಟ್ಟಂತೆ ನಿನಗೂ ಶಾಪವನ್ನು ಕೊಟ್ಟು ಬಿಡುವೆನು' ಎಂದಳು.

ಇತಿ ಪ್ರೋಕ್ತೋ ಬ್ರಹ್ಮಾ ಶಾಪಭೀತಃ ಕ್ಷಣಂ ವಿಚಾರ್ಯ ಪುನರಾಹ। ಹೇ ರಾಜಪುತ್ರಿ ತ್ವಮಾನರ್ತಪತೇ ರೇವತಸ್ಯ ಕುಶಸ್ಥಲ್ಯಾಂ ಪುತ್ರೀ ಭವ। ತಸ್ಮಿನ್ಜನ್ಮನಿ ತ್ರಿನವಚತುರ್ಯುಗವಿಕಲ್ಪಿತಃ ಕಾಲಃ ಕೇನ-ಚಿತ್ಕಾರಣೇನ ಕ್ಷಣವದ್ಭವಿಷ್ಯತಿ। ಇತಿ ತಸ್ಯೈ ವರಂ ದತ್ವಾ ಬ್ರಹ್ಮಾ ತತ್ರೈವಾಂತರಧೀಯತ ॥ ೩೦ ॥

ಅಥ ಸಾಪ್ಯಾನರ್ತೇಷು ಕುಶಸ್ಥಲೀಪುರೇ ರೇವತಸ್ಯ ಭಾರ್ಯಾಯಾಂ ಜನ್ಮ ಲೇಭೇ। ತತ್ರ ಜ್ಯೋತಿಷ್ಮತೀ ರೇವತೀ ನಾಮ ರೂಪೌದಾರ್ಯ-ಗುಣಮಂಡಿತಾ ನವಶರತ್ಕಂಜನೇತ್ರಾ ವಿವಾಹಯೋಗ್ಯಾ ಬಭೂವ॥ ೩೧ ॥

ತಾಂ ರೇವತಃ ಸ್ನೇಹೇನಾಂತಃಪುರೇ ಸಭಾರ್ಯ ಉವಾಚ। ಕೀದೃಶಂ ವರಮಿಚ್ಛಸೀತಿ ವದ। ಶ್ರುತ್ವಾ ಸಾ ತದೋವಾಚ। ಸರ್ವೇಷಾಂ ಬಲವಾನ್ಸ ಮೇ ವರೋ ಭೂಯಾತ್ ॥ ೩೨ ॥

---

೩೦. ಆಗ ಬ್ರಹ್ಮನು ತನಗೂ ಎಲ್ಲಿ ಶಾಪವೊದಗುವುದೋ ಎಂದು ಹೆದರಿ, ಸ್ವಲ್ಪಹೊತ್ತು ಆಲೋಚಿಸಿ, ಪುನಃ ಆ ಜ್ಯೋತಿಷ್ಮತಿಯನ್ನು ಕುರಿತು "ಎಲೆ ರಾಜ ಪುತ್ರಿ! ಮುಂದೆ ನೀನು ಆನರ್ತದೇಶಾಧಿಪತಿಯಾದ ರೇವತನೆಂಬ ರಾಜನಿಗೆ ಮಗ ಳಾಗಿ ಕುಶಸ್ಥಲಿಯೆಂಬಲ್ಲಿ ಹುಟ್ಟುವೆ. ಆ ಜನ್ಮದಲ್ಲಿ ಈಗ ಹೇಳಿದ ಇಪ್ಪತ್ತೇಳು ಚತುರ್ಯುಗಪರಿಮಿತವಾದ ಕಾಲವು ಒಂದಾನೊಂದು ಕಾರಣದಿಂದ ಒಂದುಕ್ಷಣದಂತೆ ಕಳೆದುಹೋಗುವುದು" ಎಂಬುದಾಗಿ ವರವಿತ್ತು ಅಲ್ಲಿಯೇ ಕಣ್ಮರೆಯಾದನು.

೩೧. ಇತ್ತಲಾಗಿ ಆ ಜ್ಯೋತಿಷ್ಮತಿಯು ಆನರ್ತದೇಶದ ರಾಜಧಾನಿಯಾದ ಕುಶಸ್ಥಲಿಯಲ್ಲಿ ರೇವತರಾಜನ ಪತ್ನಿಯಲ್ಲಿ ಜನ್ಮವನ್ನು ತಾಳಿದಳು. ಆಗ ಆಕೆಗೆ ರೇವತಿಯೆಂದು ಹೆಸರಾಯಿತು. ಆ ರೇವತಿಯು ತನ್ನ ಅತಿಶಯವಾದ ಸೌಂದರ್ಯ ದಿಂದಲೂ, ಔದಾರ್ಯಾದಿ ಸದ್ಗುಣಗಳಿಂದಲೂ ಕಂಗೊಳಿಸುತ್ತಾ ಶರತ್ಕಾಲದ ಅರಳಿದ ತಾವರೆಯಂತಿರುವ ತನ್ನ ಕಣ್ಣುಗಳಿಂದ ಒಪ್ಪುತ್ತಾ, ವಿವಾಹಕ್ಕೆ ಉಚಿತ ವಾದ ವಯಸ್ಸನ್ನು ಹೊಂದಿದಳು.

೩೨. ಈ ರೀತಿ ವಿವಾಹ ಯೋಗ್ಯಳಾದ ತನ್ನ ಮಗಳನ್ನು ಕಂಡು ಆ ರೇವತ ರಾಜನು ಒಂದು ದಿನ ಅಂತಃಪುರದಲ್ಲಿ ತನ್ನ ಮಡದಿಯೊಂದಿಗೆ ಆ ರೇವತಿಯನ್ನು ಕುರಿತು ಮಿತಿಮೀರಿದ ವಾತ್ಸಲ್ಯದಿಂದ "ಅಮ್ಮಾ! ನೀನು ಎಂತಹ ವರನನ್ನು ಮದುವೆ ಯಾಗಬೇಕೆನ್ನುವೆ? ಹೇಳು" ಎನ್ನಲು, ಆ ರೇವತಿಯು "ಎಲ್ಲರಿಗಿಂತಲೂ ಯಾವನು ಬಲಶಾಲಿಯಾಗಿರುವನೋ ಅವನನ್ನೇ ನಾನು ವರಿಸುವೆನು" ಎಂದಳು.

ಇತಿ ಶ್ರುತ್ವಾ ರಾಜಾ ರೇವತಃ ಸಭಾರ್ಯೋಽಪಿ ಸುತಾಂ ನೀತ್ವಾ ದಿವ್ಯಂ ರಥಮಾರುಹ್ಯ ಬಲವಂತಂ ವರಂ ದೀರ್ಘಾಯುಷಂ ಪರಿಪ್ರಷ್ಟುಂ ಲೋಕಾನುಲ್ಲಂಘ್ಯ ಬ್ರಹ್ಮಲೋಕಂ ಗತವಾನ್ ॥ ೩೩ ॥

ತತ್ರ ಕ್ಷಣಮಾಸ್ಥಿತೋಽಭೂತ್ತೇನ ಕ್ಷಣೇನ ಭೂಲೋಕೇಽದ್ಯೈವ ತ್ರಿನವಚತುರ್ಯುಗವಿಕಲ್ಪಿತಃ ಕಾಲೋ ಜಾತಃ। ಸದ್ಯೈವ ಬ್ರಹ್ಮಲೋಕೇ ವರ್ತತೇ ರಂಭೋರು ತಸ್ಯಾಂ ತ್ವಂ ಸಂಲೀನಾ ಭೂತ್ವಾವೇಶಾವತಾರಿಣೀ ದ್ವಾರಕಾಂ ಪ್ರಾಪ್ಯ ರಮಸ್ವ ॥ ೩೪ ॥

॥ ಪ್ರಾಡ್ವಿಪಾಕ ಉವಾಚ ॥

ಇತ್ಥಂ ತದ್ವಾಕ್ಯಂ ಶ್ರುತ್ವಾ ನಾಗಲಕ್ಷ್ಮೀಃ ಸಂಕರ್ಷಣಂ ಭರ್ತಾರಮನುಜ್ಞಾಪ್ಯ ಬ್ರಹ್ಮಲೋಕಮೇತ್ಯ ರೇವತೀವಿಗ್ರಹೇ ಸ್ವಾವೇಶಂ ಚಕಾರ ॥ ೩೫ ॥

---

೩೩. ಅದನ್ನು ಕೇಳಿ ಆ ರೇವತರಾಜನು ಅಂಥ ಬಲಾಢ್ಯನಾದ ಪುರುಷನಾರೆಂದು ತಿಳಿದುಕೊಳ್ಳಲೋಸುಗ ತನ್ನ ಮಡದಿಯೊಡನೆ ಮಗಳಾದ ರೇವತಿಯನ್ನೂ ಕರೆದುಕೊಂಡು, ದಿವ್ಯವಾದ ರಥವೊಂದನ್ನೇರಿ, ಮೇಲಿನ ಲೋಕಗಳೆಲ್ಲವನ್ನೂ ದಾಟಿ ಬ್ರಹ್ಮಲೋಕಕ್ಕೆ ಬಂದನು.

೩೪. ಆ ಬ್ರಹ್ಮಸಭೆಯಲ್ಲಿ ರೇವತರಾಜನು ಒಂದು ಕ್ಷಣಕಾಲ ಕುಳಿತಿದ್ದನು. ಅಷ್ಟುಹೊತ್ತಿಗೇ ಈ ಭೂಲೋಕದಲ್ಲಿ ಇಪ್ಪತ್ತೇಳು ಚತುರ್ಯುಗಗಳಷ್ಟು ಪರಿಮಿತವಾದ ಕಾಲವು ಕಳೆದುಹೋಯಿತು. ಆ ರೇವತಿಯು ಈಗಲೂ ಬ್ರಹ್ಮಲೋಕದಲ್ಲಿಯೇ ಇರುವಳು. ಎಲೆ ರಂಭೋರು! ಆದುದರಿಂದ ನೀನೀಗಲೇ ಹೋಗಿ ಆ ರೇವತಿಯಲ್ಲಿ ಸೇರಿಹೋಗು. ಬಳಿಕ ಆವೇಶಾವತಾರದಿಂದ ದ್ವಾರಕೆಯಲ್ಲಿ ಹೋಗಿ ವಿಹರಿಸುತ್ತಿರು" ಎಂದನು.

೩೫. ಓ ಕುರುರಾಜ! ಈ ರೀತಿಯಾಗಿ ಆ ಸಂಕರ್ಷಣಮೂರ್ತಿಯು ನುಡಿದುದನ್ನು ಕೇಳಿ ಆತನ ಪತ್ನಿಯಾದ ನಾಗಲಕ್ಷ್ಮಿಯು ಆತನ ಅಪ್ಪಣೆಯನ್ನು ಪಡೆದು ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ರೇವತಿಯ ದೇಹದಲ್ಲಿ ತನ್ನನ್ನು ಆವೇಶಗೊಳಿಸಿದಳು.

ಅಥ ಸಂಕರ್ಷಣೋ ಭಗವಾನ್ಭೂರಿಭೂಮಿಭಾರಹರಣಾರ್ಥಂ ಲೋಕನಮಸ್ಕೃತಾದ್ಗೋಲೋಕಧಾಮಸಕಾಶಾದವತತಾರೇದಂ ಬಲಭದ್ರಸ್ಯ ಭಗವತ ಆಗಮನಂ ಮಯಾ ತೇ ಕಥಿತಂ ಸರ್ವದುರಿತಾಪಹರಣಂ ಮಂಗಲಾಯನಂ ಯುವರಾಜ ಕೌರವೇಂದ್ರ ಕಿಂ ಭೂಯಃ ಶ್ರೋತುಮಿಚ್ಛಸೀತಿ ॥ ೩೬ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ ಜ್ಯೋತಿಷ್ಮತ್ಯುಪಾಖ್ಯಾನೇ ರೇವತ್ಯುಪಾಖ್ಯಾನಂ ನಾಮ ಚತುರ್ಥೋಽಧ್ಯಾಯಃ

---

೩೬. ಅನಂತರ ಭಗವಂತನಾದ ಆ ಸಂಕರ್ಷಣನು ಭೂಮಿಯ ಭಾರವನ್ನು ಪರಿಹರಿಸುವ ಸಲುವಾಗಿ ಸರ್ವಜನರಿಂದಲೂ ನಮಸ್ಕರಿಸಲ್ಪಡುವ ದಿವ್ಯವಾದ ಆ ಗೋಲೋಕಧಾಮದಿಂದ ಭೂಮಿಯಲ್ಲಿ ಅವತರಿಸಿದನು. ಇದೇ ಭಗವಂತನಾದ ಆ ಬಲಭದ್ರನ ಆಗಮನಕ್ಕೆ ಕಾರಣವು. ಓ ಯುವರಾಜ! ಸಕಲ ಪಾಪಗಳನ್ನೂ ಪರಿಹರಿಸುವಂತಹ ಮಂಗಲದಾಯಕವಾದ ಈ ಚರಿತ್ರವನ್ನು ನಿನಗೆ ತಿಳಿಸಿದೆನು. ಕೌರವೇಂದ್ರ! ಇನ್ನು ಮೇಲೆ ಇನ್ನಾವುದನ್ನು ಕೇಳಬೇಕೆಂದಿರುವೆ " ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯಲ್ಲಿ ಜ್ಯೋತಿಷ್ಮತ್ಯುಪಾಖ್ಯಾನಾಂತರ್ಗತವಾದ ರೇವತ್ಯುಪಾಖ್ಯಾನವೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ಪಂಚಮೋಽಧ್ಯಾಯಃ

॥ ದುರ್ಯೋಧನ ಉವಾಚ ॥

ಮುನೀಂದ್ರಾಹೋ ಅಹಂ ಧನ್ಯೋಽಸ್ಮಿ । ಪುರಾ ಸಂಕರ್ಷಣಸ್ಯ ಭಕ್ತೋಽಸ್ಮಿ । ತ್ವಯಾ ಸ್ಮಾರಿತೋ ಭಗವತೋ ವಾಸುದೇವಸ್ಯ ಪ್ರಭಾವಂ ಮಹಾತ್ಮ್ಯಂ ಪರಮಾದ್ಭುತಂ ಶ್ರುತಮತ್ರಾವತಾರೌ ಭೂತ್ವಾ ಭೂಮ್ಯಾಂ ರಾಮಕೃಷ್ಣೌ ಪಿತುಃ ಪುರಾತ್ಕಥಂ ವ್ರಜೇ ಗತವಂತೌ ವ್ರಜವಾಸಿಭಿರ್ನ ಜ್ಞಾತೌ ಗುಪ್ತೌ ಕಥಮಭೂತಾಂ ಚ ತದುಚ್ಯತಾಂ॥ ೧ ॥

ಐದನೆಯ ಅಧ್ಯಾಯವು

೧. ಬಳಿಕ ದುರ್ಯೋಧನನು ಪ್ರಾಡ್ವಿಪಾಕಮುನಿಯನ್ನು ಕುರಿತು, “ಓ ಮುನೀಂದ್ರ ! ನಾನು ಧನ್ಯನಾದೆನು. ಮೊದಲು ನಾನು ಸಂಕರ್ಷಣನ ಭಕ್ತನಾಗಿದ್ದೆನು. ಈ ಅಂಶವು ಈಗ ನಿನ್ನಿಂದ ಮತ್ತೊಮ್ಮೆ ಸ್ಮರಣೆಗೆ ತರಲ್ಪಟ್ಟಿತು. ಭಗವಂತನಾದ ಆ ವಾಸುದೇವನ ಮಹಿಮೆಯೂ, ಪ್ರಭಾವವೂ ಅತ್ಯಾಶ್ಚರ್ಯಕರವಾದುದು. ಇದನ್ನು ನಾನೀಗ ನಿನ್ನ ಮುಖದಿಂದ ಕೇಳಿ ತಿಳಿದೆನು. ಆ ಪರಮಪುರುಷನೇ ಈಗ ಭೂಮಿಯಲ್ಲಿ ರಾಮ. ಕೃಷ್ಣ ಎಂಬೀರ್ವರ ರೂಪದಲ್ಲಿ ಅವತಾರ ಮಾಡಿರುವನಷ್ಟೆ ! ಆ ರಾಮಕೃಷ್ಣರಿಬ್ಬರೂ ತಮ್ಮ ತಂದೆಯಾದ ವಸುದೇವನು ವಾಸಿಸುತ್ತಿದ್ದ ಮಧುರಾ ನಗರದಿಂದ ಗೋಕುಲಕ್ಕೆ ಹೋದುದು ಹೇಗೆ ? ಮತ್ತು ಆ ಗೋಕುಲ ನಿವಾಸಿಗಳಾದ ಗೋಪಾಲಕರಿಗೆ ನಿಜಾಂಶವು ಗೊತ್ತಾಗದಂತೆ ಅವರಿಬ್ಬರೂ ಗುಟ್ಟಾಗಿ ಇದ್ದುದು ಹೇಗೆ ? ಈ ಅಂಶವೆಲ್ಲವನ್ನೂ ವಿವರಿಸಬೇಕು ” ಎಂದು ಪ್ರಾರ್ಥಿಸಿದನು.

॥ ಪ್ರಾಡ್ವಿಪಾಕ ಉವಾಚ ॥

ಅಥೈಕದಾ ಮಥುರಾಯಾಂ ಯದುಪುರ್ಯಾಮುಗ್ರಸೇನಾಗ್ರಜೋ ದೇವಕೋ ದೇವಕೀಂ ಸುತಾಂ ವಸುದೇವಾಯ ದದಾವಥ ವರವಧ್ವೋಃ ಪ್ರಯಾಣಕಾಲೇ ಕಂಸ ಉಗ್ರಸೇನಾತ್ಮಜಸ್ತಯೋಃ ಸ್ಯಂದನಂ ನೋದಯಾಮಾಸ ॥ ೨ ॥

ತದೈವ ದೇವವಾಣೀ ಕಂಸಮಾಹ । ರೇ ಯಾಂ ವಹಸೇಽಸ್ಯಾಶ್ಚಾ-ಷ್ಟಮೋ ಗರ್ಭೋಽ ಹಿ ತ್ವಾಂ ಹನಿಷ್ಯತಿ । ಇತಿ ಶ್ರುತ್ವಾ ಸ ಮಹಾಸುರಃ ಕಾಲನೇಮಿಸುತಃ ಕಂಸಃ ಖಡ್ಗಪಾಣಿರ್ಭಗಿನೀಂ ಹಂತುಂ ಪ್ರವೃತ್ತಃ ॥ ೩ ॥

ತದೈವ ವಸುದೇವಸ್ತಂ ಬೋಧಯಿತ್ವಾ ಪ್ರಾಹೈನಾಂ ಮಾ ಮಾರಯ। ಅಸ್ಯಾಃ ಪುತ್ರಾನ್ಸಮರ್ಪಯಿಷ್ಯೇ । ಯತಸ್ತೇ ಭಯಂ ಜಾತಂ ಮಮಾಪಿ । ಇತಿ ಶ್ರುತ್ವಾ ತದ್ವಾಕ್ಯಸಾರವಿತ್ಕಂಸಸ್ತೌ ಕಾರಾಗಾರೆ ಕಾರ-ಯಿತ್ವಾ ನಿಶ್ಚಲೋಽಪ್ಯಭವತ್ ॥ ೪ ॥

---

೨. ಆ ಪ್ರಾಡ್ವಿಪಾಕಮುನಿಯು ಈ ರೀತಿಯಾಗಿ ಹೇಳತೊಡಗಿದನು :— ಕುರುರಾಜ! ಆಲಿಸು. ಒಂದುಸಲ ಯದುಕುಲ ನಿವಾಸವಾದ ಮಧುರಾನಗರಿಯಲ್ಲಿ ಉಗ್ರಸೇನನ ಅಣ್ಣನಾದ ದೇವಕನೆಂಬವನು ತನ್ನ ಮಗಳಾದ ದೇವಕಿಯನ್ನು ವಸುದೇವನಿಗೆ ಕೊಟ್ಟು ಮದುವೆಮಾಡಿದನು. ಆ ಸಂದರ್ಭದಲ್ಲಿ ವಧೂವರರಾದ ದೇವಕೀ ವಸುದೇವರ ಮೆರವಣಿಗೆಯಾದಾಗ ಉಗ್ರಸೇನನ ಮಗನಾದ ಕಂಸನು ಅವರು ಮಂಡಿಸಿದ್ದ ತೇರನ್ನು ತಾನೇ ನಡೆಸಿದನು.

೩. ಆ ಸಮಯದಲ್ಲಿ ಅಶರೀರವಾಣಿಯೊಂದು ಕಂಸನನ್ನುದ್ದೇಶಿಸಿ "ಓ ಕಂಸ! ಯಾವಳು ಕುಳಿತಿರುವ ರಥವನ್ನು ನೀನು ನಡೆಸುತ್ತಿರುವೆಯೋ, ಅವಳ ಎಂಟನೆಯ ಗರ್ಭದಲ್ಲಿ ಜನಿಸಿದವನೇ ನಿನ್ನನ್ನು ಕೊಲ್ಲುವನು" ಎಂದು ನುಡಿಯಿತು. ಅದನ್ನು ಕೇಳುತ್ತಲೇ ಕಾಲನೇಮಿಯೆಂಬ ಮಹಾಸುರನ ಮಗನ ಅವತಾರವೆನಿಸಿದ ಆ ಕಂಸನು ಕೂಡಲೇ ಕತ್ತಿಯನ್ನು ತೆಗೆದುಕೊಂಡು ತನ್ನ ತಂಗಿಯನ್ನು ಕೊಲ್ಲಬಂದನು.

೪. ಆಗ ವಸುದೇವನು ಅವನನ್ನು ಕುರಿತು "ಓ ಕಂಸ! ನೀನು ಇವಳನ್ನು ಕೊಲ್ಲಬೇಡ! ಇವಳ ಮಗನಿಂದಲ್ಲವೇ ನಿನಗೂ, ನಿನ್ನಮೂಲಕ ನನಗೂ ಹೆದರಿಕೆ ಯುಂಟಾಗಿರುವುದು. ಆದುದರಿಂದ ಈ ದೇವಕಿಯು ಹೆರುವ ಮಕ್ಕಳನ್ನೆಲ್ಲಾ ನಾನು ನಿನಗೇ ಒಪ್ಪಿಸಿಬಿಡುವೆನು" ಎಂದು ಹೇಳಿ ಅವನನ್ನು ಸಮಾಧಾನಗೊಳಿಸಿದನು. ಈ ಮಾತನ್ನು ಕೇಳಿ ಆ ಕಂಸನು ಅದರ ಅಭಿಪ್ರಾಯವನ್ನು ಸರಿಯಾಗಿ ಮನಗಂಡು ಆ ದಂಪತಿಗಳನ್ನು ಸೆರೆಯಲ್ಲಿಡಿಸಿ ತಾನು ನಿಶ್ಚಿಂತನಾಗಿದ್ದನು.

ಅಥ ದೇವಕ್ಯಾಃ ಪ್ರಥಮಂ ಜಾತಂ ಪುತ್ರಂ ಕಂಸಾಯ ವಸುದೇವಃ ಪ್ರದದೌ। ತಂ ಸತ್ಯವಾದಿನಂ ಜ್ಞಾತ್ವಾ ಕಂಸೋಽರ್ಭಕಂ ನ ಜಘಾನ ॥ ೫ ॥

ಅಂಕಾನಾಂ ವಾಮತೋ ಗತಿಸ್ತಥಾ ದೇವಾನಾಂ ತಸ್ಮಾದಯಂ ವಾ ಶತ್ರುಃ ಸರ್ವೇ ಯಾದವಾ ದೇವಾಃ ಸಂತಿ ತವ ವಧಮಿಚ್ಛಂತೀತಿ ನಾರದವಾಕ್ಯಾತ್ ಪುನರ್ಜಾತಂ ಜಾತಮಪಿ ನಿಜಘಾನ ॥ ೬ ॥

---

೫. ಹೀಗಿರುವಾಗ ದೇವಕಿಗೆ ಮೊದಲನೆಯ ಮಗುವಾಯಿತು. ಕೂಡಲೆ ಆ ಗಂಡುಮಗುವನ್ನು ವಸುದೇವನು ತನ್ನ ಮಾತಿನಂತೆ ಕಂಸನಿಗೆ ಒಪ್ಪಿಸಿದನು. ಆಗ ಕಂಸನು ವಸುದೇವನು ಸತ್ಯವಾದಿಯೆಂಬುದಾಗಿ ಅರಿತು ಆ ಮಗುವನ್ನು ಕೊಲ್ಲಲಿಲ್ಲ.

೬. ಅಷ್ಟರಲ್ಲಿ ನಾರದ ಮಹರ್ಷಿಯು ಅಲ್ಲಿಗೆ ಬಂದನು. ಆತನು ಕಂಸನನ್ನು ಕುರಿತು "ಅಯ್ಯಾ! ಅಂಕಾನಾಂ ವಾಮತೋಗತಿಃ (ಸಂಖ್ಯೆಗಳೆಲ್ಲವೂ ಎಡಗಡೆಯೆ ಅನ್ವಯಿಸುವಂತಹವು). ಸಂಖ್ಯೆಗಳನ್ನು ಬರೆಯುವಾಗ ಏಕಸ್ಥಾನದ ಅಂಕಿಯನ್ನು ಮೊದಲು ಬರೆದು, ಕ್ರಮೇಣ ಅದರ ಹಿಂದೆಹಿಂದೆ ದಶಕಾದಿ ಸ್ಥಾನಗಳ ಅಂಕಿಗಳನ್ನು ಎಡಮಗ್ಗಲಾಗಿ ಬರೆಯುವುದು ರೂಢಿ. ಇದೂ ಅಲ್ಲದೆ, ಸಂಸ್ಕೃತದಲ್ಲಿ ಚತುರ್ನವತಿ (94) ಮುಂತಾದ ಸಂಖ್ಯೆಗಳನ್ನು ಉಚ್ಚಾರಣಕ್ರಮದಲ್ಲಿರುವಂತೆ ಬರೆಯದೆ, ಮೊದಲನೆಯ ಅಂಕವನ್ನು ಕಡೆಯಲ್ಲಿಯೂ, ಉಳಿದ ಅಂಕಗಳನ್ನು ಕ್ರಮಕ್ರಮವಾಗಿ ಹಿಂದೆ ಹಿಂದೆಯೂ ಬರೆಯುವ ಪದ್ಧತಿಯು ಪರಂಪರಾಗತವಾಗಿದೆ) ಎಂಬ ಮಾತನ್ನು ಕೇಳಿರುವೆಯಲ್ಲವೆ? ಅದರಂತೆಯೇ ಈ ದೇವತೆಗಳೆಲ್ಲರೂ ಮೇಲು ಮೇಲೆ ನಿನಗೆ ಅನುಕೂಲರಾಗಿ ಕಂಡರೂ ಒಳಗೆ ವಾಮಮಾರ್ಗ (ಪ್ರತಿಕೂಲಾಚರಣೆ) ವನ್ನೇ ಅವಲಂಬಿಸುತ್ತಿರುವರು. ಆದುದರಿಂದ ಈ ಮಗುವೇ ಏಕೆ ನಿನ್ನ ಶತ್ರುವಾಗಿರ ಬಾರದು? ಈ ದೇವತೆಗಳೆಲ್ಲರೂ ನಿನ್ನ ಸಾವನ್ನೇ ಕೋರುತ್ತಾ ಯಾದವ ವಂಶದಲ್ಲಿ ಜನಿಸುತ್ತಿರುವರು. ಈ ಅಂಶವನ್ನು ಚೆನ್ನಾಗಿ ಅರಿ" ಎಂದು ನುಡಿದನು. ಅದನ್ನು ಕೇಳಿದೊಡನೆಯೇ ಆ ಕಂಸನು ದೇವಕಿಯ ಆ ಪ್ರಥಮ ಶಿಶುವನ್ನು ಕೊಂದುಬಿಟ್ಟು ದಲ್ಲದೆ, ಮುಂದೆ ಹುಟ್ಟಿದ ಅವಳ ಮಕ್ಕಳೆಲ್ಲರನ್ನೂ ಕೊಲ್ಲುತ್ತಾ ಬಂದನು.

ಅಥ ಕಂಸಭಯಾತ್ಪಲಾಯಿತಾನಾಂ ಯದೂನಾಂ ಮಹಾನ್ಕಷ್ಟೋ ಬಭೂವ। ಅಥ ಸಪ್ತಮೋ ಗರ್ಭೋ ದೇವಕ್ಯಾ ಭಗವಾನನಂತೋ ಹ್ಯಭವತ್। ತತ್ತೇಜಃ ಶ್ರೀಕೃಷ್ಣಾಜ್ಞಯಾ ಯೋಗಮಾಯಯಾ ದೇವಕ್ಯುದರಾತ್ ಸಂನಿಕೃಷ್ಯ ವಸುದೇವಸ್ಯ ಭಾರ್ಯಾಯಾಂ ಕಂಸಭಯಾದ್ಗೋಕುಲಸ್ಥಿತಾಯಾಂ ರೋಹಿಣ್ಯಾಮರ್ಪಯಿತುಮಾಜಗಾಮ ॥ ೭ ॥

ತತ್ರೈತೇ ಶ್ಲೋಕಾಃ।
ದೇವಕ್ಯಾಃ ಸಪ್ತಮೋ ಗರ್ಭೋ ಹರ್ಷಶೋಕವಿವರ್ಧನೇ।
ವ್ರಜಂ ಪ್ರಣೀತೇ ರೋಹಿಣ್ಯಾಮನಂತೇ ಯೋಗಮಾಯಯಾ ॥
ಅಹೋ ಗರ್ಭಃ ಕ್ವ ವಿಗತ ಇತ್ಯೂಚುರ್ಮಾಥುರಾ ಜನಾಃ ॥ ೮ ॥

---

೭. ಹೀಗಿರುವಲ್ಲಿ ಆ ಕಂಸನ ಉಪಟಳವನ್ನು ತಡೆಯಲಾರವೆ ಹೆದರಿಕೆಯಿಂದ ಯಾದವರೆಲ್ಲರೂ ದಿಕ್ಕುಗೆಟ್ಟು ಓಡಿಹೋಗಿ ನಾನಾವಿಧವಾದ ಕಷ್ಟಗಳಿಗೆ ಗುರಿಯಾದರು. ಆ ಸಮಯಕ್ಕೆ ಸರಿಯಾಗಿ ಭಗವಂತನಾದ ಸಂಕರ್ಷಣನು ದೇವಕಿಯ ಏಳನೆಯ ಗರ್ಭದಲ್ಲಿ ನಿಜಾಂಶದಿಂದ ನೆಲಸಿದನು. ಆಗ ಶ್ರೀಕೃಷ್ಣನ ಅಪ್ಪಣೆಯಂತೆ ದೇವಕಿಯ ಬಸುರಿನಲ್ಲಿದ್ದ ಆ ತೇಜಸ್ಸನ್ನು ಆಕರ್ಷಿಸಿ ಕಂಸನ ಭಯದಿಂದ ಗೋಕುಲದಲ್ಲಿ ವಾಸಿಸುತ್ತಿದ್ದ ರೋಹಿಣಿಯೆಂಬ ವಸುದೇವನ ಮತ್ತೊಬ್ಬ ಪತ್ನಿಯಲ್ಲಿ ಅದನ್ನು ಇರಿಸಲು ಯೋಗಮಾಯೆಯು ಅಲ್ಲಿಗೆ ಬಂದಳು.

೮. ಹೀಗೆ ಆ ಅಂಶವನ್ನು ಮುಂದಿನ ಎರಡು ಪದ್ಯಗಳು ಈ ರೀತಿ ಬಣ್ಣಿಸುವುವು, "ದೇವಕಿಗೆ ಹರ್ಷವನ್ನೂ, ದುಃಖವನ್ನೂ ಉಂಟುಮಾಡುತ್ತಿರುವ ಆ ಏಳನೆಯ ಗರ್ಭವನ್ನು ಯೋಗಮಾಯೆಯು ಭಗವದಾಜ್ಞೆಯಂತೆ ಆಕರ್ಷಿಸಿ, ಗೋಕುಲದಲ್ಲಿದ್ದ ರೋಹಿಣಿಯ ಬಸಿರಿನಲ್ಲಿ ಇರಿಸಲು ಕೊಂಡೊಯ್ದಳು. ಈ ನಿಜಾಂಶವನ್ನರಿಯದ ಮಥುರೆಯ ನಿವಾಸಿಗಳು ದೇವಕಿಯ ಗರ್ಭವೇಕೆ ಇಳಿದುಹೋಯಿತೆಂದು ಆಶ್ಚರ್ಯಚಕಿತರಾದರು. (ದೇವಕಿಗೆ ತನ್ನ ಮಗುವು ಎಲ್ಲಿಯಾದರೂ ಸುಖವಾಗಿ ಬದುಕುವದಲ್ಲಾ ಎಂಬುದಾಗಿ ಆನಂದವೂ, ತಾನು ತನ್ನ ಮಗುವನ್ನೂ, ಆ ಮಗುವು ತಾಯಿಯಾದ ತನ್ನನ್ನೂ ಅಗಲಿರಬೇಕಾದ ಸಂದರ್ಭವೊದಗಿತಲ್ಲಾ ಎಂಬ ದುಃಖವೂ ಉಂಟಾದುದಾಗಿ ಗ್ರಹಿಸಬೇಕು).

ಅಥ ವ್ರಜೇ ಪಂಚದಿನೇಷು ಭಾದ್ರೇ
ಸ್ವಾತೌ ಚ ಷಷ್ಠ್ಯಾಂ ಚ ಸಿತೇ ಬುಧೇ ಚ ।
ಉಚ್ಚೈರ್ಗ್ರಹೈಃ ಪಂಚಭಿರಾವೃತೇ ಚ
ಲಗ್ನೇ ತುಲಾಖ್ಯೇ ದಿನಮಧ್ಯದೇಶೇ ॥ ೯ ॥

ಸುರೇಷು ವರ್ಷತ್ಸು ಚ ಪುಷ್ಪವರ್ಷಂ
ಘನೇಷು ಮುಂಚತ್ಸು ಚ ವಾರಿಬಿಂದೂನ್ ।
ಬಭೂವ ದೇವೋ ವಸುದೇವಪತ್ನ್ಯಾಂ
ವಿಭಾಸಯನ್ನಂದಗೃಹಂ ಸ್ವಭಾಸಾ ॥ ೧೦ ॥

ನಂದೋಽಪಿ ಕುರ್ವನ್ ಶಿಶುಜಾತಕರ್ಮ
ದದೌ ದ್ವಿಜೇಭ್ಯೋ ನಿಯುತಂ ಗವಾಂ ಚ ।
ಗೋಪಾನ್ಸಮಾಹೂಯ ಸುಗಾಯಕಾನಾಂ
ರಾವೈರ್ಮಹಾಮಂಗಲಮಾತತಾನ ॥ ೧೧ ॥

೯–೧೦. ಇದಾದ ಐದು ದಿನಗಳು ಕಳೆದನಂತರ ಭಾದ್ರಪದ ಶುದ್ಧ ಷಷ್ಠೀ ಬುಧವಾರ ಸ್ವಾತೀ ನಕ್ಷತ್ರ ! ತುಲಾ ಲಗ್ನ ! ಮಧ್ಯಾಹ್ನ ! ಉಚ್ಚಸ್ಥಾನದಲ್ಲಿ ಐದು ಗ್ರಹಗಳು ! ಇಂಥ ಶುಭಸಮಯದಲ್ಲಿ ಭಗವಂತನಾದ ಸಂಕರ್ಷಣನು ತನ್ನ ತೇಜಸ್ಸಿನಿಂದ ನಂದನ ಮನೆಯನ್ನು ಬೆಳಗುತ್ತ, ವಸುದೇವ ಪತ್ನಿಯಾದ ರೋಹಿಣಿಯಲ್ಲಿ ಜನಿಸಿದನು. ಆಗ ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು. ಮೇಘಗಳು ಶೀತಲವಾದ ಮಳೆಹನಿಗಳನ್ನು ಸುರಿಸಿದುವು.

೧೧. ಆಗ ನಂದನು ಸಂತೋಷದಿಂದ ಆ ಮಗುವಿಗೆ ಜಾತಕರ್ಮವನ್ನು ನಡೆಸಿ, ಬ್ರಾಹ್ಮಣರಿಗೆ ಹತ್ತುಲಕ್ಷ ಹಸುಗಳನ್ನು ದಾನಮಾಡಿದುದಲ್ಲದೆ ಗೋಪಾಲಕರೆಲ್ಲರೊಡನೆಯೂ ಕಲೆತು, ಗಾಯಕರ ಸುಮಧುರವಾದ ಸಂಗೀತದೊಂದಿಗೆ ಭಾರಿಯಾದ ಉತ್ಸವವನ್ನು ನಡೆಸಿದನು.

ಅಥಾಷ್ಟಮೋ ದೇವಕ್ಯಾಃ ಪರಿಪೂರ್ಣತಮೋ ಭಗವಾಂಛ್ರೀಕೃಷ್ಣ ಚಂದ್ರೋಽವತತಾರ। ತದೈವ ತದಾಜ್ಞಯಾ ನಿಶೀಥೇ ತಂ ಪ್ರೇಂಖೇ ನಿಧಾಯ ನಂದಪತ್ನ್ಯಾಂ ಜಾತಾಯಾಂ ಯೋಗನಿದ್ರಾಯಾಂ ಸಂಸುಪ್ತೇ ಜಗತಿ ಸತಿ ಯಮುನಾಮುತ್ತೀರ್ಯ ಮಹಾವನಮೇತ್ಯ ಯಶೋದಾ-ಶಯನೇ ಸುತಂ ನಿಧಾಯ ತಾಂ ಸುತಾಮಾದಾಯ ಪುನರ್ವಸು-ದೇವೋ ಗೃಹಾನಾಯಯೌ ॥ ೧೨ ॥

ಅಥ ಕಾರಾಗಾರೇ ಬಾಲಧ್ವನಿಂ ಶ್ರುತ್ವಾ ಶತ್ರುಭೀತಃ ಕಂಸಃ ಸಮಾಗತ್ಯ ಜಾತಮಾತ್ರಾಂ ಕನ್ಯಾಂ ಗೃಹೀತ್ವಾ ಶಿಲಾಪೃಷ್ಠೇ ಪಾತ-ಯಾಮಾಸ ॥ ೧೩ ॥

ತದೈವ ತದ್ಧಸ್ತಾತ್ಸಮುತ್ಪತ್ಯಾಂಬರೇ ಯೋಗನಿದ್ರಾಭೂತ್ವಾ ಸಿದ್ಧ-ಚಾರಣಗಂಧರ್ವವಿದ್ಯಾಧರಮುನಿಗಣೈಃ ಸ್ತೂಯಮಾನಾ ಕಂಸಮಿದ-

---

೧೨. ಇತ್ತಲಾಗಿ ದೇವಕಿಯ ಎಂಟನೆಯ ಗರ್ಭದಲ್ಲಿ ಪರಿಪೂರ್ಣತಮನಾದ ಸಾಕ್ಷಾತ್ ಶ್ರೀಕೃಷ್ಣಚಂದ್ರನೇ ಪೂರ್ಣಾಂಶದಿಂದ ಅವತರಿಸಿದನು. ಆ ಭಗವಂತನು ಅವತರಿಸಿದೊಡನೆಯೇ ಆತನ ಮಾತಿನಂತೆ ವಸುದೇವನು ಅರ್ಧರಾತ್ರಿಯಲ್ಲಿಯೇ ಶಿಶುರೂಪದಿಂದ ಇದ್ದ ಆತನನ್ನು ತೊಟ್ಟಲಿನಲ್ಲಿಟ್ಟುಕೊಂಡು, ಜನರೆಲ್ಲರೂ ಗಾಢ ನಿದ್ರೆಯಲ್ಲಿ ಮಲಗಿರುವುದನ್ನು ಅರಿತು, ಯಮುನಾನದಿಯನ್ನು ದಾಟಿ, ಅದರ ಆಚೆಯ ಕರೆಯಲ್ಲಿದ್ದ ಗೋಕುಲವನ್ನು ಸೇರಿ, ನಂದಪತ್ನಿಯಾದ ಯಶೋದೆಯ ಬಳಿಯಲ್ಲಿ ಮಲಗಿಸಿ, ಆಕೆಯು ಹೆತ್ತಿದ್ದ ಯೋಗಮಾಯೆಯನ್ನು ಎತ್ತಿಕೊಂಡು, ಮರಳಿ ತಾನಿದ್ದ ಸೆರೆಮನೆಗೇ ಬಂದನು.

೧೩. ಈ ಕಾರ್ಯವೆಲ್ಲವೂ ಮುಗಿದನಂತರ ಎಳೆಮಗುವು ಅತ್ತ ಧ್ವನಿಯು ಕೇಳಿಸಲು, ತನ್ನ ಶತ್ರುವು ಜನಿಸಿದನೆಂಬ ಹೆದರಿಕೆಯಿಂದ ತಲ್ಲಣಿಸುತ್ತಿದ್ದ ಕಂಸನು ಅಲ್ಲಿಗೆ ಬಂದು ಆಗತಾನೆ ಹುಟ್ಟಿದ್ದ ಆ ಕನ್ಯಾಶಿಶುವನ್ನು ಕೈಲಿ ಹಿಡಿದುಕೊಂಡು ಬಂಡೆಯಮೇಲೆ ಅಪ್ಪಳಿಸಿ ಕೊಲ್ಲಹೋದನು.

೧೪. ಅಷ್ಟರಲ್ಲಿಯೇ ಆತನ ಹಿಡಿತದಿಂದ ತಪ್ಪಿಸಿಕೊಂಡು ಶಿಶುರೂಪದಿಂದಿದ್ದ ಆ ಯೋಗಮಾಯೆಯು ಆಕಾಶಕ್ಕೆ ಹಾರಿ ತನ್ನ ನಿಜರೂಪದಿಂದ ಶೋಭಿಸಿದಳು. ಆಗ ಆಕೆಯನ್ನು ಸಿದ್ಧರೂ, ಚಾರಣರೂ, ಗಂಧರ್ವರೂ, ವಿದ್ಯಾಧರರೂ, ಮುನಿಗಳೂ ಗುಂಪುಗುಂಪಾಗಿ ನಿಂತು ಸ್ತೋತ್ರಮಾಡತೊಡಗಿದರು. ಆಗ ಆ ಯೋಗಮಾಯೆಯು ಕಂಸನನ್ನು ಕುರಿತು 'ಎಲೈ ದುಷ್ಟನೇ, ನಿನ್ನ ಶತ್ರುವು ಇನ್ನೆಲ್ಲಿಯೋ ಹುಟ್ಟಿರುವನು.

ಮಾಹ। ಹೇ ಖಲ ತವ ಪೂರ್ವಶತ್ರುರ್ಯತ್ರ ಕ್ವ ವಾ ಜಾತೋ ವೃಥಾ ದೇವಕೀವಸುದೇವೌ ದೀನೌ ದುನೋಷಿ ಇತ್ಯುಕ್ತ್ವಾ ಸಾ ವಿಂಧ್ಯಾಚಲಂ ಜಗಾಮ ॥ ೧೪ ॥

ಇತ್ಯುಕ್ತೋ ವಿಸ್ಮಿತಃ ಕಂಸೋ ದೇವಕೀಂ ವಸುದೇವಂ ಚ ವಿಮುಚ್ಯ ಪೂತನಾದೀನ್ ದೈತ್ಯಾನ್ಸಮಾಹೂಯ ಚಾನಿರ್ದಶಾನ್ನಿರ್ದಶಾನ್ಬಾಲಾನ್ಹಂತುಮಾಜ್ಞಾಂ ಚಕಾರ ತೇಽಪಿ ತಥಾ ಚಕ್ರುಃ ॥ ೧೫ ॥

ಅಥ ನಂದೋಽಪಿ ಪುತ್ರೋತ್ಸವಂ ಶ್ರುತ್ವಾ ಮಹೋತ್ಸವಂ ಚಕಾರ। ಏವಂ ಕಂಸಭಯಮಿಷೇಣ ವ್ರಜಂ ಪ್ರಾಪ್ತೌ ರಾಮಕೃಷ್ಣೌ ಸ್ವಮಾಯಯಾ ಲಕ್ಷಿತೌ ವ್ರಜವಾಸಿನಾಂ ಕೃಪಾಂ ಕರ್ತುಂ ಜಾತಮಾತ್ರಾವದ್ಭುತಾಂ ಬಾಲಲೀಲಾಂ ಚಕ್ರತುಃ। ಕೌರವೇಂದ್ರ ಭೂಯಃ ಶ್ರೋತುಮಿಚ್ಛಸಿ ಕಿಂ ॥ ೧೬ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ ಶ್ರೀಬಲಭದ್ರ ಶ್ರೀಕೃಷ್ಣಜನ್ಮೋತ್ಸವೋ ನಾಮ ಪಂಚಮೋಽಧ್ಯಾಯಃ

ಸುಮ್ಮನೆ ಏತಕ್ಕೆ ದೇವಕಿಯನ್ನೂ, ವಸುದೇವನನ್ನೂ ಹಿಂಸೆಮಾಡುವೆ ?' ಎಂಬುದಾಗಿ ಹೇಳಿ ಅಲ್ಲಿಂದ ಕಣ್ಮರೆಯಾಗಿ ವಿಂಧ್ಯಪರ್ವತಕ್ಕೆ ಹೊರಟುಹೋದಳು.

೧೫. ಹೀಗೆ ಆ ಯೋಗಮಾಯೆಯು ಆಡಿದ ಮಾತನ್ನು ಕೇಳಿ ಕಂಸನು ವಿಶೇಷವಾಗಿ ಆಶ್ಚರ್ಯವನ್ನು ತಾಳಿ, ದೇವಕೀ ವಸುದೇವರಿಬ್ಬರನ್ನೂ ಸೆರೆಯಿಂದ ಬಿಡಿಸಿದುದಲ್ಲದೆ, ಗುಟ್ಟಾಗಿ ಪೂತನಾ ಮೊದಲಾದ ರಾಕ್ಷಸರನ್ನು ಕರೆದು, ಹತ್ತು ವರ್ಷಕ್ಕಿಂತಲೂ ಕಡಿಮೆಯಿರುವ ಬಾಲಕರೆಲ್ಲರನ್ನೂ ಹಿಡಿದು ಹಿಡಿದು ಕೊಲ್ಲುವಂತೆ ಆಜ್ಞಾಪಿಸಿದನು. ಆ ರಾಕ್ಷಸರೂ ಸಹ ಅದರಂತೆಯೇ ಮಾಡುತ್ತಾ ಬಂದರು.

೧೬. ಇತ್ತಲಾಗಿ ನಂದನು ತನಗೆ ಗಂಡುಮಗುವಾದ ಸುದ್ದಿಯನ್ನು ಕೇಳಿ, ಬಹು ಸಂತೋಷದಿಂದ ಭಾರಿಯಾದ ಉತ್ಸವವನ್ನು ನಡೆಸಿದನು. ಓ ಕೌರವೇಂದ್ರ! ಈ ರೀತಿಯಾಗಿ ಆ ರಾಮಕೃಷ್ಣರಿಬ್ಬರೂ ಕಂಸನ ಭಯವೆಂಬ ನೆಪದ ಮೇಲೆ ತಮ್ಮ ಮಾಯಾಪ್ರಭಾವದಿಂದ ಯಾರಿಗೂ ಗೊತ್ತಾಗದಂತೆ ಹುಟ್ಟಿದೊಡನೆಯೇ ಗೋಕುಲವನ್ನು ಸೇರಿದರು. ಅಲ್ಲಿ ಆ ವ್ರಜನಿವಾಸಿಗಳಾದ ಗೋಪಾಲಕರನ್ನು ಅನುಗ್ರಹಿಸಲು ಅತ್ಯಾಶ್ಚರ್ಯಕರವಾದ ಬಗೆಬಗೆಯ ಬಾಲಲೀಲೆಗಳನ್ನು ತೋರಿದರು. ಓ ಕುರುರಾಜ! ಇನ್ನು ಏನನ್ನು ಕೇಳಬೇಕೆಂದಿರುವೆ ? ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಬಲಭದ್ರಖಂಡದಲ್ಲಿ ಬಲಭದ್ರ ಕೃಷ್ಣ ಜನ್ಮೋತ್ಸವವೆಂಬ ಐದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ಷಷ್ಠೋಽಧ್ಯಾಯಃ

॥ ದುರ್ಯೋಧನ ಉವಾಚ ॥

ಮುನೀಂದ್ರ ರಾಮೋಽನಂತೋಽನಂತಲೀಲಃ ಶ್ರೀಕೃಷ್ಣೋಽಪಿ ಚ ಭೂಮ್ಯಾಂ ಭೂತ್ವಾ ರರಾಜ। ತಸ್ಯ ಸಂಕ್ಷೇಪೇಣ ಚರಿತ್ರಂ ವದ ವ್ರಜೇ ಕಿಂ ಮಥುರಾಯಾಂ ಕಿಂ ದ್ವಾರಕಾಯಾಂ ಕಿಮತ್ರ ಕಿಮನ್ಯತ್ರ ಕಿಂ ಚಕಾರ ॥ ೧ ॥

॥ ಪ್ರಾಡ್ವಿಪಾಕ ಉವಾಚ ॥

ಅಥ ಹ ವಾವ ಶ್ರೀಕೃಷ್ಣೋ ಜಾತಮಾತ್ರೋಽದ್ಭುತಾಂ ಲೀಲಾಂ ಪೂತನಾಮೋಕ್ಷಶಕಟಾಸುರತೃಣಾವರ್ತವಧಯುಕ್ತಾಂ ವಿಶ್ವರೂಪ-

---

ಆರನೆಯ ಅಧ್ಯಾಯವು

೧. ಅನಂತರ ದುರ್ಯೋಧನನು ಆ ಪ್ರಾಡ್ವಿಪಾಕನನ್ನು ಕುರಿತು—"ಮುನೀಂದ್ರ ! ಸಂಕರ್ಷಣ ಮೂರ್ತಿಯಾದ ಬಲರಾಮನೂ, ನಾನಾ ಲೀಲಾ ವಿಶಾರದನಾದ ಶ್ರೀಕೃಷ್ಣನೂ ಭೂಮಿಯಲ್ಲಿ ಅವತರಿಸಿದರಷ್ಟೆ ? ಅವರ ಚರಿತ್ರವನ್ನು ನನಗೆ ಸಂಕ್ಷೇಪವಾಗಿ ತಿಳಿಸು. ಅವರೀರ್ವರೂ ಗೋಕುಲದಲ್ಲಿಯೂ, ಮಥುರೆಯಲ್ಲಿಯೂ, ಅನಂತರ ದ್ವಾರಕೆಯಲ್ಲಿಯೂ ಯಾವಾವ ಕಾರ್ಯಗಳನ್ನು ನಡೆಸಿದರು ? ಈ ಸ್ಥಳಗಳಲ್ಲದೆ ಇನ್ನೂ ಅಲ್ಲಲ್ಲಿ ಅವರು ನಡೆಸಿದ ಕಾರ್ಯಗಳೇನು ? ಇವನ್ನು ನನಗೆ ತಿಳಿಸಬೇಕು" ಎಂದು ಪ್ರಶ್ನಿಸಿದನು.

೨. ಆಗ ಪ್ರಾಡ್ವಿಪಾಕಮುನಿಯು ಈ ರೀತಿ ಹೇಳತೊಡಗಿದನು :—ಆ ಶ್ರೀಕೃಷ್ಣನು ಹುಟ್ಟಿದ ಕೂಡಲೇ ಅತ್ಯಾಶ್ಚರ್ಯಕರವಾದ ಲೀಲೆಗಳನ್ನು ತೋರ್ಪಡಿಸಿದನು. ಅವನ್ನು ವಿವರಿಸುವೆನು. ಅವನು ಪೂತನೆಯನ್ನು ಸಂಹರಿಸಿದನು. ಬಳಿಕ ಶಕಟಾಸುರನನ್ನು ಮುರಿದು ಕೆಡಹಿದನು. ಅನಂತರ ತೃಣಾವರ್ತನೆಂಬ ರಾಕ್ಷಸ

ದರ್ಶನದಧಿಚೌರ್ಯ ಬ್ರಹ್ಮಾಂಡದರ್ಶನ ಯಮುಲಾರ್ಜುನದ್ರುಮಖಂಡ-ಭಂಗಾದಿಸಂಯುಕ್ತಾಂ ದುರ್ವಾಸಸೋ ಮಾಯಾದರ್ಶನವೈಭವಾಂ ಶ್ರೀಮದ್ಗರ್ಗಚಾರ್ಯವರ್ಣಿತರಾಧಾಕೃಷ್ಣನಾಮೌದಾರ್ಯ-ಮಾಹಾತ್ಮ್ಯಯುಕ್ತಾಂ ಸುರಜ್ಯೇಷ್ಠಕಾರಿತವೃಷಭಾನುವರನಂದಿನೀ ವಿವಾಹರಾಸಮಂಡಲಕಥಾಮಂಡಿತಾಂ ಚಕಾರ ॥ ೨ ॥

ತತಃ ಶ್ರೀವೃಂದಾವನಾಗಮನೇ ಸತಿ ವತ್ಸಾಸುರಬಕಾಸುರಾದ್ಯ-ಸುರಾಣಾಂ ವಧಂ ಕೃತ್ವಾ ಗೋಪಾಲೈಃ ಸಹ ಗೋಚಾರಣೇ ವೃಂದಾ-ವನಾದಿವನೇಷು ವಿಚಚಾರ ॥ ೩ ॥

ನನ್ನು ಕೊಂದನು. ಆಮೇಲೆ ಯಶೋದೆಗೆ (ಮಣ್ಣನ್ನು ತಿಂದನೆಂಬ ನೆವದಿಂದ) ಬಾಯ್ದೆರೆದು ವಿಶ್ವರೂಪವನ್ನು ತೋರಿಸಿದನು. ಗೋವಳರ ಮನೆಗಳಲ್ಲಿ ಮೊಸರನ್ನು ಕದ್ದನು. ತನ್ನಲ್ಲಿಯೇ ತನ್ನ ತಪ್ಪೇನೂ ಇಲ್ಲವೆಂದು ತೋರ್ಪಡಿಸುವವನಂತೆ ಬ್ರಹ್ಮಾಂಡಗಳೆಲ್ಲವೂ ಅಡಗಿರುವುದನ್ನು ತೋರ್ಪಡಿಸಿದನು. ಅಂಬೆಗಾಲಿಡುವ ನೆವದಿಂದ ಜೋಡಿ ಬಿಳಿಯ ಮತ್ತಿಮರಗಳನ್ನುರುಳಿಸಿದನು. ದುರ್ವಾಸನಂತಹ ಮಹರ್ಷಿಗೂ ಮಂಕು ಕವಿಯುವಂತೆ ತನ್ನ ಮಾಯೆಯನ್ನು ಪ್ರದರ್ಶಿಸಿದನು. ಬಳಿಕ ಗರ್ಗಾಚಾರ್ಯನಿಂದ ತಾನು ತನ್ನ ಪ್ರಿಯೆಯಾದ ರಾಧೆಯೊಡನೆ ದಿವ್ಯವಾದ ನಾಮಾವಳಿಗಳಿಂದ ಸ್ತುತಿಸಲ್ಪಟ್ಟನು. ಸುರರೆಲ್ಲರಿಗೂ ಜ್ಯೇಷ್ಠನೆನಿಸಿದ ಸಾಕ್ಷಾತ್ ಚತುರ್ಮುಖಬ್ರಹ್ಮನಿಂದಲೇ ವೃಷಭಾನುವಿನ ಪುತ್ರಿಯಾದ ರಾಧಿಕೆಯೊಡನೆ ವಿವಾಹ ಮಂಗಲವನ್ನೂ ನೆರವೇರಿಸಲ್ಪಟ್ಟನು. ಅನಂತರ ದಿವ್ಯವಾದ ರಾಸಲೀಲೆಯನ್ನು ತೋರ್ಪಡಿಸಿದನು. ಆಮೇಲೆ ವೃಂದಾವನಕ್ಕೆ ಪ್ರಯಾಣಬೆಳಸಿ ಅಲ್ಲಿ ಕರುವಿನ ರೂಪದಿಂದ ಬಂದ ವತ್ಸಾಸುರನನ್ನೂ, ಬಕನೇ ಮೊದಲಾದ ಇತರ ರಾಕ್ಷಸರನ್ನೂ ಕೊಂದು ಕೆಡಹಿದನು. ಗೋಪಾಲಕರೊಡನೆ ಹಸುಗಳನ್ನು ಮೇಯಿಸುತ್ತ ಆ ವೃಂದಾವನದಲ್ಲಿಯೂ ಅದರ ಅಕ್ಕಪಕ್ಕದ ವನಗಳಲ್ಲಿಯೂ ಸಂಚರಿಸಿದನು.

೩. ಒಂದಾನೊಂದುಸಲ ಗೋಪಾಲಕರೊಡನೆ ತಾಲವನವನ್ನು ಪ್ರವೇಶಿಸಿದಾಗ ಬಲರಾಮನು ಅಲ್ಲಿ ಗಾರ್ದಭರೂಪದಿಂದ ಗಟ್ಟಿಯಾಗಿ ಅರಚುತ್ತಾ, ತನ್ನ ಕಾಲುಗಳಿಂದಲೇ ಸಿಕ್ಕಿದವರೆಲ್ಲರನ್ನೂ ಒದೆಯುತ್ತಾ, ಕೊಲ್ಲುತ್ತಿದ್ದ ಧೇನುಕನೆಂಬ ರಾಕ್ಷಸನನ್ನು ನಿಡಿದಾದ ತನ್ನೆರಡು ತೋಳುಗಳಿಂದಲೂ ಹಿಡಿದು ಗರಗರನೆ ತಿರುಗಿಸಿ, ತಾಳೆಯ ಮರದಮೇಲೆ ಬೀಳುವಂತೆ ಎಸೆದುಬಿಟ್ಟನು. ರಾಕ್ಷಸನು ಮರಳಿ ತನ್ನ ಕಡೆಗೆ ಬರಲು, ನೆಲದಮೇಲೆ ಅವನನ್ನು ಕೆಡಹಿ ಅಜ್ಜುಗುಜ್ಜು ಮಾಡಿದನು. ಈ ರೀತಿಯಾಗಿ ಆ ಧೇನುಕ ರಾಕ್ಷಸನು ಬಲರಾಮನ ಮುಷ್ಟಿಪ್ರಹಾರವನ್ನು ತಡೆಯಲಾರದೆ ತಲೆಯೊಡೆದುಹೋಗಿ, ಕೆಲಹೊತ್ತು ಮೂರ್ಛಾಕ್ರಾಂತನಾಗಿ ಬಿದ್ದಿದ್ದು ಕೊನೆಗೆ ತನ್ನ ಪ್ರಾಣಗಳನ್ನೇ ತೊರೆದುಬಿಟ್ಟನು.

ಅಥ ತಾಲವನೇ ಧೇನುಕಾಸುರಂ ಖರಸ್ವನಂ ಸ್ವಪದ್ಭ್ಯಾಂ ತಾಡ-ಯಂತಂ ಭುಜದಂಡಾಭ್ಯಾಂ ಗೃಹೀತ್ವಾ ಮಹಾಬಲೋ ಬಲದೇವ-ಸ್ತಾಲವೃಕ್ಷೇ ತಂ ಪಾತಯಿತ್ವಾ ಪುನರಾಪತಂತಂ ತಂ ಭೂಪೃಷ್ಠೇ ಪೋಥಯಾಮಾಸ। ಸ ಮೂರ್ಛಿತೋ ಭಗ್ನಮಸ್ತಕಃ ಸದ್ಯಸ್ತನ್ಮುಷ್ಟಿ-ಪ್ರಹಾರೇಣ ನಿಧನಂ ಜಗಾಮ ॥ ೪ ॥

ಅಥ ಶ್ರೀಕೃಷ್ಣಃ ಕಾಲಿಯದಮನದಾವಾಗ್ನಿಪಾನಾದೀನಿ ಚರಿತ್ರಾಣಿ ಕೃತ್ವಾ ಶ್ರೀರಾಧಾಪ್ರೇಮಪ್ರಕಾಶಪ್ರೀತಿಪರೀಕ್ಷಣವೃಂದಾವನವಿಹಾರ ದಾನಮಾನಲೀಲಾಹಾವಯುಕ್ತಾಂ ಶಂಖಚೂಡವಧಾದಿಶಿವಾಸೂರ್ಯೋ-ಪಾಖ್ಯಾನಕಥಾಂ ಕಥನೀಯಾಂ ಲೀಲಾಂ ಚಕಾರ ॥ ೫ ॥

ಅಥೈಕದಾ ಗಿರಿರಾಜಪೂಜನೇ ಕೃತೇ ಭಗ್ನಬಲಿರಿಂದ್ರಃ ಸಾಂವರ್ತ-ಮೇಘಮಂಡಲೈರ್ವ್ರಜಮಂಡಲೇ ವವರ್ಷ। ತದಾ ಭಗವಾನ್ಸ್ವಯಾ-

---

೪. ಅನಂತರ ಶ್ರೀಕೃಷ್ಣನು ಯಮುನಾನದಿಯ ಮಡುವಿನಲ್ಲಿ ಕಾಲಿಯನನ್ನು ದಮನಮಾಡಿದನು. ಹಬ್ಬಿ ಬರುತ್ತಿದ್ದ ಕಾಳ್ಗಿಚ್ಚನ್ನು ಬಾಯ್ದೆರೆದು ನುಂಗಿಬಿಟ್ಟನು. ಈ ರೀತಿಯಾಗಿ ಇನ್ನೂ ಅನೇಕ ಆಶ್ಚರ್ಯಕರವಾದ ಸಾಹಸ ಕೃತ್ಯಗಳನ್ನು ಮಾಡಿದ ನಂತರ ಆ ಶ್ರೀಕೃಷ್ಣನು ತನ್ನಲ್ಲಿ ರಾಧೆಗೆ ಇರುವಂತಹ ನಿರತಿಶಯವಾದ ಪ್ರೇಮ ವೆಂತಹುದೆಂಬುದನ್ನು ಪರೀಕ್ಷಿಸಿದನು. ವೃಂದಾವನದಲ್ಲಿ ವಿಧವಿಧವಾಗಿ ವಿಹರಿಸಿದನು. ಪ್ರಣಯಸೂಚಕವಾದಂತಹ ನಾನಾವಿಧವಾದ ದಾನಲೀಲೆಗಳನ್ನೂ, ಮಾನಲೀಲೆ ಗಳನ್ನೂ ಪ್ರದರ್ಶಿಸಿದನು. ಶಂಖಚೂಡನೇ ಮೊದಲಾದ ದುಷ್ಟರನ್ನು ಸಂಹರಿಸಿದನು. ಅನಂತರ ಶಿವಾಸೂರ್ಯೋಪಾಖ್ಯಾನವೆಂಬುದಾಗಿ ಪ್ರಸಿದ್ಧವಾದ ಲೋಕೋತ್ತರ ಲೀಲಾಮಯವಾದ ಚರಿತ್ರೆಯನ್ನು ತೋರ್ಪಡಿಸಿದನು.

೫-೬. ಅನಂತರ ಒಂದುಸಲ ಎಂದಿನಂತೆ ನಡೆಯುತ್ತಿದ್ದ ಇಂದ್ರೋತ್ಸವ ವನ್ನು ನಿಲ್ಲಿಸಿ ಶ್ರೀಕೃಷ್ಣನು ಗೋವರ್ಧನ ಪರ್ವತದ ಪೂಜೆಯನ್ನು ಮಾಡಿಸಿದಾಗ

ತುರಂ ವ್ರಜಂ ವೀಕ್ಷ್ಯ ಮಾ ಭೈಷ್ಟೇತ್ಯಭಯಂ ದತ್ವಾ ಏಕಕರೇಣ ಗಿರಿರಾಜಂ ಸಮುತ್ಪಾಟ್ಯೋಚ್ಛಿಲೀಂಧ್ರಂ ಬಾಲ ಇವ ದಧಾರ। ಹ ವಾವ ಸಪ್ತವರ್ಷೋ಼ಯಃ ಸಪ್ತಾಹಂ ಸುಸ್ಥಿರಂ ಸ್ಥಿತಃ ॥ ೬ ॥

ಅಥೇಂದ್ರಃ ಸರ್ವದೇವಗಣೈರ್ಭಯಭೀತಃ ಶ್ರೀಕೃಷ್ಣಚಂದ್ರಶ್ರೀಮತ್ಪಾದಾರವಿಂದದ್ವಯಂ ಪ್ರಣಮ್ಯ ಕಿರೀಟೇನ ನತಃ ಸ್ತುತ್ವಾ ತದಭಿಷೇಕಂ ಕೃತ್ವಾ ಮಹೇಂದ್ರರಾಟ್ ಸುರಭಿಸುರಮುನಿಭಿಃ ಸಾರ್ಧಂ ಸ್ವರ್ಗಂ ಜಗಾಮ ॥ ೭ ॥

ತನ್ನ ಉತ್ಸವವು ನಡೆಸಲ್ಪಡಲಿಲ್ಲವೆಂದು ಆಕ್ರೋಶದಿಂದ ಇಂದ್ರನು ಸಂವರ್ತಕಾದಿ ಮೇಘಗಳಿಗೆ ಆಜ್ಞೆಮಾಡಿ ಗೋಕುಲದ ಮೇಲೆ ವಿಪರೀತವಾಗಿ ಮಳೆ ಸುರಿಸಿದನು. ಆಗ ಭಯದಿಂದ ನಡಗತೊಡಗಿದ ಗೋಕುಲನಿವಾಸಿಗಳನ್ನು ಕಂಡು ಆ ಭಗವಂತನಾದ ಶ್ರೀಕೃಷ್ಣನು ಹೆದರಬೇಡಿರೆಂದು ಅಭಯವನ್ನಿತ್ತು ತನ್ನ ಒಂದೇ ಕೈಯಿಂದ ಗಿರಿರಾಜನಾದ ಆ ಗೋವರ್ಧನ ಪರ್ವತವನ್ನು ಬುಡಸಹಿತ ಕಿತ್ತು, ಹುಡುಗನು ದೊಡ್ಡದಾದ ನಾಯಿಕೊಡೆ(ಅಣಬೆ)ಯನ್ನು ಹಿಡಿಯುವಂತೆ ಲೀಲಾಮಾತ್ರದಿಂದ ಎತ್ತಿ ಹಿಡಿದುಬಿಟ್ಟನು. ಆಗಿನ್ನೂ ಅವನಿಗೆ ಏಳು ವರ್ಷಗಳು ವಯಸ್ಸು, ಆತನು ಆ ಪರ್ವತವನ್ನು ಹೀಗೆ ಏಳು ದಿನಗಳು ಪೂರ್ತಿ ಅಲುಗಾಡದೆ ಸ್ಥಿರವಾಗಿ ಧರಿಸಿ ನಿಂತಿದ್ದನು.

೭. ಈ ಅದ್ಭುತವನ್ನು ಕಂಡು ಇಂದ್ರನಿಗೂ ಹೆದರಿಕೆಯುಂಟಾಯಿತು. ಕೂಡಲೆ ಅವನು ದೇವತೆಗಳೆಲ್ಲರೊಡನೆ ಶ್ರೀಕೃಷ್ಣಚಂದ್ರನಿದ್ದಲ್ಲಿಗೆ ಬಂದು ಆತನ ಮಂಗಲಮಯವಾದ ಪಾದಪದ್ಮಗಳಿಗೆ ತನ್ನ ಕಿರೀಟವು ತಗಲುವಂತೆ ನಮಸ್ಕಾರ ಮಾಡಿ ವಿಧವಿಧವಾಗಿ ಸ್ತುತಿಸಿ ಆ ಶ್ರೀಕೃಷ್ಣನಿಗೆ ಗೋವಿಂದ ಪಟ್ಟಾಭಿಷೇಕವನ್ನು ಮಾಡಿ ಕಾಮಧೇನುವಿನೊಡನೆಯೂ ದೇವತೆಗಳು ಮತ್ತು ಋಷಿಗಳೊಂದಿಗೂ ಸ್ವರ್ಗಲೋಕಕ್ಕೆ ಹಿಂದಿರುಗಿದನು.

ತದದ್ಭುತಂ ಗೋವರ್ಧನೋದ್ಧಾರಣಂ ದೃಷ್ಟ್ವಾ ಗೋಪಾ ವಿಸಿಸ್ಮ್ಯುಃ।
ತೇಽಭ್ಯಮುಕ್ತಾರೋಹಣಾದಿವೈಭವಂ ಸಂಪರ್ಶಯಾಮಾಸುಃ ॥ ೮ ॥

ಅಥ ಶ್ರುತಿರೂಪರ್ಷಿರೂಪಾ ಮೈಥಿಲಾ ಕೌಶಲಾಯೋಧ್ಯಾಪುರ-ವಾಸಿನೀ ಯಜ್ಞಸೀತಾ ಪುಲಿಂದಕಾ ರಮಾ ವೈಕುಂಠ ಶ್ವೇತದ್ವೀಪೋರ್ಧ್ವ ವೈಕುಂಠಾಜಿತಪದಶ್ರೀಲೋಕಾಚಲವಾಸಿನೀ ಸಖೀ ದಿವ್ಯಾ ದಿವ್ಯಾ-ತ್ರಿಗುಣವೃತ್ತಿಭೂಮಿಗೋಪೀಜನದೇವಶ್ರೀಜಾಲಂಧರೀ ಬರ್ಹಿಷ್ಮತೀ

---

೮. ಈ ಅತ್ಯಾಶ್ಚರ್ಯಕರವಾದ ಗೋವರ್ಧನೋದ್ಧಾರಣ ಲೀಲೆಯನ್ನು ಕಂಡು ಗೋಪಾಲಕರೆಲ್ಲರೂ ಬೆಕ್ಕಸ ಬೆರಗಾದರು. ಆಗ ಆ ಗೋಪರು ಶ್ರೀಕೃಷ್ಣನ ಪರಮೇಶ್ವರತ್ವವನ್ನು ಪರೀಕ್ಷಿಸಲೆಳಸಿ ರಾಧಾವಿವಾಹವ್ಯಾಜವನ್ನು ಹೂಡಿ ವೃಷಭಾನುವಿನಿಂದ ಪ್ರೇರಿತರಾದ ಮಧ್ಯಸ್ಥಗಾರರ ಮುಖಾಂತರ ಮುತ್ತಿನ ಸರಗಳನ್ನು ಕಳುಹಿಸಲು ಅದನ್ನು ಕಂಡು ತನ್ನಲ್ಲಿ ಅಷ್ಟು ವೈಭವವಿಲ್ಲವೆಂದು ಪರಿತಪಿಸುತ್ತಿದ್ದ ತನ್ನ ತಂದೆ ನಂದಗೋಪನ ವ್ಯಥೆಯನ್ನು ಹೋಗಲಾಡಿಸಲು ಶ್ರೀಕೃಷ್ಣನು ಆ ಮುತ್ತಿನ ಸರಗಳಲ್ಲಿ ಒಂದನ್ನು ಕಿತ್ತು ಆ ಮುತ್ತುಗಳನ್ನೆಲ್ಲಾ ಹೊಲದಲ್ಲಿ ಬಿತ್ತಲು ಕ್ಷಣ ಮಾತ್ರದಲ್ಲಿಯೇ ಅವು ಗಿಡಗಳಾಗಿ ಬೆಳೆದು ದಪ್ಪದಪ್ಪ ಮುತ್ತುಗಳ ತೆನೆಯನ್ನೇ ಬಿಟ್ಟುವು. ಇದನ್ನು ಕಂಡು ಗೋಪಾಲಕರು ಶ್ರೀಕೃಷ್ಣನ ಪರಮೇಶ್ವರತ್ವವನ್ನು ಒಪ್ಪಿಕೊಂಡರು.

೯. ಇದಾದ ಮೇಲೆ ಶ್ರೀಕೃಷ್ಣನು ವ್ರಜಮಂಡಲದಲ್ಲಿ ಬೇರೆಬೇರೆಯಾಗಿ ಗೋಪಕನ್ಯೆಯರೊಡನೆ ಕಲೆತು ರಾಸಲೀಲೆಯನ್ನು ತೋರ್ಪಡಿಸಿದನು. ಆ ಗೋಪಕನ್ಯೆಯರಲ್ಲಿ ಕೆಲವರು ಶ್ರೀಕೃಷ್ಣನ ಸಹವಾಸಸೌಖ್ಯವನ್ನು ಬಯಸಿ ಬಂದಿದ್ದ ಋಷಿಗಳ ಅವತಾರವೆನಿಸಿದ ಗೋಪಿಯರು. ಕೆಲವರು ಋಷಿಸ್ವರೂಪರು. ಕೆಲವರು ಮೈಥಿಲದೇಶದ ಗೋಪಕನ್ಯೆಯರು, ಮತ್ತೆ ಕೆಲವರು ಅಯೋಧ್ಯಾಪುರ ನಿವಾಸಿಗಳೆನಿಸಿದವರು. ಇನ್ನು ಕೆಲವರು ಯಜ್ಞಸೀತಾ ಎಂಬ ಹೆಸರಿನವರು. ಬೇರೆ ಕೆಲವರು ಪುಲಂದದೇಶೋದ್ಭವರಾದ ಸ್ತ್ರೀಯರ ರೂಪಾಂತರವೆನಿಸಿದವರು. ಇನ್ನೂ ಕೆಲವರು ಶ್ರೀವೈಕುಂಠ, ಶ್ವೇತದ್ವೀಪ, ಊರ್ಧ್ವವೈಕುಂಠ, ಅಜಿತಪದ, ಶ್ರೀಲೋಕಾಚಲ ಮುಂತಾದುವುಗಳಲ್ಲಿ ಶ್ರೀದೇವಿಯ ಸಖಿಯರಾಗಿದ್ದರು. ಕೆಲವು ಮಂದಿ ರೂಪಾಂತರವನ್ನು ಧರಿಸಿ ಬಂದಿದ್ದ ದಿವ್ಯಸ್ತ್ರೀಯರು. ಆ ದಿವ್ಯಾಂಗನೆಯರು, ತ್ರಿಗುಣವೃತ್ತಿಗಳು, ಭೂನಿವಾಸಿಗಳಾದ ಗೋಪಿಯರು, ಕೆಲವು ಮಂದಿ ಜಲಂಧರ

ಪುರಂಧ್ರೀ ಅಪ್ಸರಃಸುತಲವಾಸಿನೀನಾಗೇಂದ್ರಕನ್ಯಾದಿಭಿರ್ಗೋಪೀ-ಯೂಥೈಃ ಪೃಥಕ್ಪೃಥಕ್ ಶ್ರೀಕೃಷ್ಣೋ ವ್ರಜಮಂಡಲೇ ರಾಸ-ಮಂಡಲಂ ಚಕಾರ ॥ ೯ ॥

ಏಕದಾ ಗಾಶ್ಚಾರಯನ್ಸಬಲಃ ಶ್ರೀಕೃಷ್ಣೋ ಗೋಪಾಲಬಾಲೈ-ರ್ಭಾಂಡೀರೇ ಬಾಲಲೀಲಾಂ ವಾಹ್ಯವಾಹಕಲಕ್ಷಣಾಂ ಕೃತವಾನ್ । ತತ್ರ ಪ್ರಲಂಬೋ ಗೋಪರೂಪೀ ದೈತ್ಯೋ ವಿಹಾರೇ ವಿಹಾರವಿಜಯಂ ರಾಮಂ ಸ್ವಪೃಷ್ಠೇ ನಿಧಾಯೋವಾಹ ॥ ೧೦ ॥

ಅಥ ಹ ವಾವ ಮಥುರಾಂ ಗಂತುಮುದ್ಯತಂ ಗಿರೀಂದ್ರಸ್ಯ ಸದೃಶ-ದೇಹಂ ತಮುದ್ವೀಕ್ಷ್ಯ ಪೃಷ್ಠಗತೋ ಬಲದೇವೋ ಮಹಾಬಲೋ

ದೇಶದವರು, ಕೆಲವು ಮಂದಿ ಬರ್ಹಿಷ್ಮತೀಪುರನಿವಾಸಿನಿಯರು, ಕೆಲವರು ಅಪ್ಸರೆಯರು, ಕೆಲವರು ಸುತಲ ಲೋಕವಾಸಿನಿಯರು, ಕೆಲವರು ನಾಗರಾಜನ ಕುಮಾರಿಯರು. ಈ ರೀತಿಯಾಗಿ ಗೋಪೀರೂಪವನ್ನು ಧರಿಸಿ ಬಂದಿದ್ದ ಅವರೆಲ್ಲರೊಡನೆ ಶ್ರೀಕೃಷ್ಣನು ಬೇರೆಬೇರೆಯಾಗಿ ರಾಸಕ್ರೀಡೆಯನ್ನು ತೋರ್ಪಡಿಸಿದನು.

೧೦. ಇದಾದನಂತರ ಒಂದಾನೊಂದುಸಲ ಶ್ರೀಕೃಷ್ಣನು ಬಲರಾಮನೊಡನೆ ಹಸುಗಳನ್ನು ಮೇಯಿಸುತ್ತಾ, ಗೋಪಬಾಲಕರಿಂದೊಡಗೂಡಿ ಭಾಂಡೀರವೆಂಬ ಆಲದ ಮರದ ಬಳಿ ಸೋತವರು, ಗೆದ್ದವರು ಇವರನ್ನು ಹೆಗಲಮೇಲೆ ಹೊತ್ತುಕೊಂಡು ಹೋಗಬೇಕೆಂದು ನಿಬಂಧನೆಯುಳ್ಳ ಆಟವೊಂದನ್ನು ಆಡುತ್ತಿದ್ದಾಗ ಪ್ರಲಂಬನೆಂಬ ರಾಕ್ಷಸನೊಬ್ಬನು ಗೋಪಾಲಕನಂತೆ ವೇಷವನ್ನು ಧರಿಸಿ, ತಾನು ಅವರೊಡನೆ ಸೇರಿ ಆಟವಾಡುತ್ತಾ ಸೋತುಹೋದುದರಿಂದ ತನ್ನನ್ನು ಸೋಲಿಸಿದ ಬಲರಾಮನನ್ನು ಹೆಗಲ ಮೇಲೆ (ನಿಬಂಧನೆಯಂತೆ) ಹೊತ್ತುಕೊಂಡು ಹೋಗತೊಡಗಿದನು.

೧೧. ಹೀಗೆ ಹೋಗುತ್ತಿರುವಾಗ ಆ ರಾಕ್ಷಸನು ಬೆಟ್ಟದಂತೆ ದೊಡ್ಡದಾಗಿ ಬೆಳೆದು, ತನ್ನನ್ನು ಹೊತ್ತುಕೊಂಡು ಮಥುರೆಯಕಡೆಗೆ ನುಗ್ಗತೊಡಗಿದುದನ್ನು ಕಂಡು ಮಹಾ ಬಲಶಾಲಿಯಾದ ಬಲರಾಮನು ಮಹಾ ಕೋಪವನ್ನು ತಾಳಿ 'ದೇವೇಂದ್ರನು

ರುಷಾ ಮುಷ್ಟಿನಾ ಶಿರಸಿ ಮಹಾದ್ರಿಂ ಯಥಾದ್ರಿಭಿತ್ತಾಡ।
ತೇನ ಸದ್ಯೋ ವಿಶೀರ್ಣಮಸ್ತಕೋ ವಜ್ರಹತೇ ಗಿರಿವ ಸದ್ದೈತ್ಯೋ
ಭೂಮ್ಯಾಂ ನಿಪಪಾತ ॥ ೧೧ ॥

ಏಕದಾ ಗ್ರೀಷ್ಮೇ ಮುಂಜಾರಣ್ಯಗತಾಸು ಗೋಷು ಗೋಪಾಲೇಷು
ಚ ಸತ್ಸು ಸದ್ಯಃ ಸಂಭೂತೋ ದಾವಾಗ್ನಿಃ ಪ್ರಲಯಾಗ್ನಿರಿವ ವವೃಧೇ।
ತತಃ ಕೃಷ್ಣ ರಾಮೇತಿ ವದತಃ ಪಾಹಿ ಪಾಹೀತಿ ಗೋಪಾಲಾನ್ ಶರಣಂ
ಗತಾನ್ ವೀಕ್ಷ್ಯ ಲೋಚನಾನಿ ನಿಮೀಲಯತಾಶು ಮಾ ಭೈಷ್ಟೇತ್ಯುಕ್ತ್ವಾ
ತಮಗ್ನಿಮಪಿಬತ್ ॥ ೧೨ ॥

ಅಥ ಹವಾವ ಭಾಂಡೀರಾದ್ಯಮುನಾತೀರೇ ಗೋಪಾಲಗೋಗಣಂ
ನೀತ್ವಾ ಪ್ರಾಪ್ತೋಽಭೂತ್ತತ್ರಾಶೋಕವನೇ ಯಜ್ಞಪತ್ನ್ಯಾನೀತಂ
ಭೋಜನಂ ಕೃತವಾನ್ ॥ ೧೩ ॥

ಪರ್ವತವನ್ನು ವಜ್ರಾಯುಧದಿಂದ ಪ್ರಹರಿಸುವಂತೆ' ಆ ರಾಕ್ಷಸನ ತಲೆಯ ಮೇಲೆ ತನ್ನ ಮುಷ್ಟಿಯಿಂದ ಬಲವಾಗಿ ಅಪ್ಪಳಿಸಿ ಹೊಡೆದನು. ಕೂಡಲೇ ಆ ದೈತ್ಯನು ತಲೆಯೊಡೆಯಲ್ಪಟ್ಟು, ಸಿಡಿಲು ಬಡಿದ ಬೆಟ್ಟದಂತೆ ನೆಲದ ಮೇಲೆ ಬಿದ್ದು ಪ್ರಾಣಬಿಟ್ಟನು.

೧೨. ಇನ್ನೊಂದುಸಲ ಬೇಸಗೆಯಲ್ಲಿ ಹಸುಗಳೆಲ್ಲವೂ ಮೇಯುತ್ತಾ ಮುಂಜಾರಣ್ಯವೆಂಬಲ್ಲಿಗೆ (ನೊದೆ ಹುಲ್ಲು ಹೆಚ್ಚಾಗಿ ಬೆಳೆದಿದ್ದ ಕಾವಲು) ಹೋದುವು. ಅವುಗಳನ್ನು ಕಾಯುತ್ತಾ ಗೋಪಾಲಕರೂ ಅವುಗಳ ಹಿಂದೆಯೇ ಅಲ್ಲಿಗೆ ಬಂದರು. ಆಗಅಕಸ್ಮಿಕವಾಗಿ ಇದ್ದಕ್ಕಿದ್ದಂತೆ ಭಯಂಕರವಾದ ಕಾಳ್ಕಿಚ್ಚೊಂದು ಹೊತ್ತಿಕೊಂಡು ಪ್ರಳಯಾಗ್ನಿಯಂತೆ ಸರಸರನೆ ಹಬ್ಬುತ್ತಾ ಬಂದಿತು. ಆಗ ಗೋಪಾಲಕರೆಲ್ಲರೂ ಭಯದಿಂದ ತತ್ತಳಿಸುತ್ತಾ, ಓ ಕೃಷ್ಣ! ಓ ಬಲರಾಮ! ಕಾಪಾಡು, ಕಾಪಾಡು, ಎಂದು ಕೂಗಿಕೊಳ್ಳತೊಡಗಿದರು. ಹೀಗೆ ಸಂಕಟಕ್ಕೆ ಸಿಕ್ಕಿ ತನ್ನನ್ನೇ ಮರೆಹೊಕ್ಕ ಆ ಗೋಪಾಲಕರನ್ನು ಕಂಡು "ಹೆದರಬೇಡಿರಿ, ನೀವೆಲ್ಲರೂ ಬೇಗನೆ ಕಣ್ಣುಮುಚ್ಚಿಕೊಳ್ಳಿ" ಎಂದು ಹೇಳಿ ಶ್ರೀಕೃಷ್ಣನು ಆ ಕಾಳ್ಕಿಚ್ಚನ್ನು ತಾನೇ ನುಂಗಿಬಿಟ್ಟನು.

೧೩. ಇನ್ನೊಮ್ಮೆ ಭಾಂಡೀರವಟದಿಂದ ಗೋಪಾಲ ಬಾಲಕರೊಡನೆಯೂ, ಗೋವುಗಳೊಡನೆಯೂ ಕೂಡಿ ಯಮುನಾ ನದಿಯ ತೀರಕ್ಕೆ ಬರುತ್ತಿದ್ದಾಗ ಅಶೋಕವನವೆಂಬಲ್ಲಿ ಯಜ್ಞನಿರತರಾದ ಬ್ರಾಹ್ಮಣರ ಪತ್ನಿಯರು ತನಗಿತ್ತ ಅನ್ನಪಾನಾದಿಗಳನ್ನು ಸೇವಿಸಿದನು.

ಅಥ ಚೈಕದಾ ವ್ರಜೇ ನಂದರಾಜೇ ವರುಣಗ್ರಸ್ತೇ ವರುಣಸ್ಯ ಮಾನಭಂಗಂ ಕೃತ್ವಾ ನಂದಾದಿಭ್ಯೋ ಗೋಪೇಭ್ಯೋಽಪಿ ಸರ್ವಲೋಕ ನಮಸ್ಕೃತಂ ವೈಕುಂಠಂ ದರ್ಶಯಾಮಾಸ ॥ ೧೪ ॥

ಅಥಾಂಬಿಕಾವನೇ ಶ್ರೀಕೃಷ್ಣಃ ಸರಸ್ವತೀತೀರೇ ನಂದಂ ಗ್ರಸಂತಂ ಸುದರ್ಶನಂ ಸರ್ಪಂ ಕಿಲಾಖಿಲಲೋಕಪಾಲವಂದಿತೇನ ಶ್ರೀಮಚ್ಚರಣಾರವಿಂದೇನ ಸ್ಪೃಷ್ಟ್ವಾ ಸರ್ಪದೇಹಾತ್ತಂ ಮೋಚಯಾಮಾಸ ॥ ೧೫ ॥

ಅಥ ಸಬಲಃ ಶ್ರೀಕೃಷ್ಣೋಽನಿಲಾಯನಕ್ರೀಡಾಯಾಂ ಚೋರಪಾಲಕಲಕ್ಷಣಾಯಾಂ ಚೋರರೂಪಂ ವ್ಯೋಮಾಸುರಂ ಕಂಸಸಖಂ ಭುಜದಂಡಾಭ್ಯಾಂ ಗೃಹೀತ್ವಾ ದಶದಿಶಾಸು ಭ್ರಾಮಯಿತ್ವಾ ಭೂಪೃಷ್ಠೇ ಪೋಥಯಾಮಾಸ ॥ ೧೬ ॥

---

೧೪. ಬೇರೊಂದುಸಲ ಗೋಕುಲದಲ್ಲಿ ಯಮುನಾನದಿಗೆ ಸ್ನಾನಕ್ಕೆ ಇಳಿದ ನಂದಗೋಪನನ್ನು ವರುಣದೂತನೊಬ್ಬನು ತನ್ನ ಲೋಕಕ್ಕೆ ಎಳೆದೊಯ್ಯಲು, ಶ್ರೀಕೃಷ್ಣನು ಅಲ್ಲಿಗೆ ಹೋಗಿ ವರುಣನ ಸೊಕ್ಕನ್ನು ಅಡಗಿಸಿ ನಂದನನ್ನು ಗೋಕುಲಕ್ಕೆ ಕರೆತಂದುದಲ್ಲದೆ, ಆ ನಂದನಿಗೂ ಅವನ ಅನುಯಾಯಿಗಳಾದ ಗೋಪಾಲಕರೆಲ್ಲರಿಗೂ ಸಕಲ ಲೋಕಗಳಿಂದಲೂ ನಮಸ್ಕರಿಸಲ್ಪಡುವಂತಹ ವೈಕುಂಠವನ್ನು ಸಂದರ್ಶನ ಮಾಡಿಸಿದನು.

೧೫. ಮತ್ತೊಂದುಬಾರಿ ಸುದರ್ಶನನೆಂಬ ಗಂಧರ್ವನೊಬ್ಬನು ಶಾಪವಶದಿಂದ ಸರ್ಪ ದೇಹವನ್ನು ತಾಳಿ, ಅಂಬಿಕಾವನವೆಂಬಲ್ಲಿ ನಂದಗೋಪನನ್ನು ನುಂಗತೊಡಗಿದಾಗ ಶ್ರೀಕೃಷ್ಣನು ಸಮಸ್ತ ಲೋಕಪಾಲಕರಿಂದಲೂ ನಮಸ್ಕರಿಸಲ್ಪಡುವಂತಹ ಮಂಗಲಕರವಾದ ತನ್ನ ಪಾದಾರವಿಂದದಿಂದ ಆ ಸರ್ಪವನ್ನು ಸ್ಪರ್ಶಿಸಿ, ಆ ದುಷ್ಟ ಜನ್ಮದಿಂದ ಆ ಗಂಧರ್ವನನ್ನು ಬಿಡಿಸಿ ಅನುಗ್ರಹಿಸಿದನು.

೧೬. ಇದಾದನಂತರ ಒಮ್ಮೆ ಬಲರಾಮನೊಡನೆಯೂ, ಇತರ ಗೋಪಾಲಕರೊಡನೆಯೂ ಸೇರಿ "ಒಬ್ಬನು ಮರೆಯಲ್ಲಿ ಅಡಗಿ ಕುಳಿತುಕೊಳ್ಳುವುದು. ಮತ್ತೊಬ್ಬನು ಹುಡುಕಿ ಕಳ್ಳನಂತೆ ಅವನನ್ನು ಹೊರಕ್ಕೆಳೆತರುವುದು." ಈ ರೀತಿಯ ಆಟವಾಡುತ್ತಿದ್ದಾಗ ತನ್ನ ರೂಪವನ್ನು ಮರೆಸಿಕೊಂಡು ಇವರೊಡನೆ ಆಟವಾಡುತ್ತಾ, ಕಳ್ಳನಂತೆ ಮರೆಯಾಗಿ ಕುಳಿತು ಸಿಕ್ಕಿಬಿದ್ದ ವ್ಯೋಮಾಸುರನೆಂಬ ಕಂಸನ ಸ್ನೇಹಿತನನ್ನು ಶ್ರೀಕೃಷ್ಣನು ತನ್ನೆರಡು ತೋಳುಗಳಿಂದಲೂ ಹಿಡಿದು, ಗರಗರನೆ ಸುತ್ತಲೂ ತಿರುಗಿಸಿ ನೆಲದ ಮೇಲೆ ಬಲವಾಗಿ ಅಪ್ಪಳಿಸಿ ಹೊಡೆದು ಕೊಂದುಬಿಟ್ಟನು.

ತಥಾರಿಷ್ಟಾಸುರಂ ಕಂಸಪ್ರಣೋದಿತಂ ವೃಷರೂಪಶೃಂಗಯೋಃ ಸಮುದ್ಧೃತ್ಯ ಪಾತಯಾಮಾಸ । ಅಥ ನಾರದಮುಖಾಚ್ಛ್ರುತ ಶ್ರೀಕೃಷ್ಣಕಥೇನ ಕಂಸೇನ ಪ್ರಣೋದಿತಂ ಕೇಶಿನಂ ಶ್ರೀಕೃಷ್ಣಸ್ತನ್ಮುಖಸ್ವಭುಜಪ್ರವೇಶೇನ ಸಂಮಮರ್ದೇತ್ಥಮನೇಕಾ ಲೀಲಾಃ ಸಹಸಾ ವ್ರಜಮಂಡಲೇ ಬಲೇನ ಕಾರಯಾಮಾಸ ॥ ೧೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ ಪ್ರಾಡ್ವಿಪಾಕ ದುರ್ಯೋಧನಸಂವಾದೇ ರಾಮಕೃಷ್ಣವ್ರಜಲೀಲಾವರ್ಣನಂ ನಾಮ ಷಷ್ಠೋಽಧ್ಯಾಯಃ

---

೧೭. ಇದೇ ರೀತಿಯಾಗಿ ಕಂಸನಿಂದ ಪ್ರೇರಿತನಾದ ಅರಿಷ್ಟನೆಂಬ ದೈತ್ಯನು ವೃಷಭರೂಪದಿಂದ ತನ್ನನ್ನು ಕೊಲ್ಲಬರಲು ಶ್ರೀಕೃಷ್ಣನು ಅವನ ಕೊಂಬುಗಳನ್ನೇ ಕಿತ್ತುಕೊಂಡು ಅದರಿಂದಲೇ ಅವನನ್ನು ಹೊಡೆದು ಸಂಹರಿಸಿಬಿಟ್ಟನು. ಈ ಸಂಗತಿಯನ್ನು ನಾರದಮಹರ್ಷಿಯು ಕಂಸನಿಗೆ ತಿಳಿಸಲು, ಕಂಸನು ಕೇಶಿಯೆಂಬ ದಾನವನನ್ನು ಕೃಷ್ಣನನ್ನು ಕೊಲ್ಲುವಂತೆ ಪ್ರೇರಿಸಿ ಕಳುಹಿಸಿದನು. ಆ ಕೇಶಿಯು ಕುದುರೆಯಂತೆ ಆಕಾರವನ್ನು ತಾಳಿ, ಶ್ರೀಕೃಷ್ಣನನ್ನು ಕೊಲ್ಲಲು ಬಾಯಿ ತೆರೆದುಕೊಂಡು ಬರಲು, ಶ್ರೀಕೃಷ್ಣನು ಆತನ ಬಾಯೊಳಕ್ಕೆ ತನ್ನ ತೋಳನ್ನೇ ತೂರಿ ಅದರಿಂದಲೇ ಅವನನ್ನು ಕೊಂದುಬಿಟ್ಟನು. ಓ ದುರ್ಯೋಧನ! ಈ ರೀತಿಯಾಗಿ ಶ್ರೀಕೃಷ್ಣನು ಬಲರಾಮನೊಂದಿಗೆ ಗೋಕುಲದಲ್ಲಿ ಅನೇಕವಾದ ಲೀಲೆಗಳನ್ನು ತೋರ್ಪಡಿಸಿದನು" ಎಂದನು.

ಇಲ್ಲಿಗೆ ಗರ್ಗಸಂಹಿತೆಯ ಬಲಭದ್ರಖಂಡದಲ್ಲಿ ರಾಮಕೃಷ್ಣ ಲೀಲಾವರ್ಣನವೆಂಬ ಆರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ಸಪ್ತಮೋಽಧ್ಯಾಯಃ

॥ ಪ್ರಾಡ್ವಿಪಾಕ ಉವಾಚ ॥

ಅಥ ಮಥುರಾಯಾಂ ರಾಮಕೃಷ್ಣೌ ಯಾನಿ ಚರಿತ್ರಾಣಿ ಕೃತವಂತೌ ತಾನಿ ಸಂಕ್ಷೇಪೇಣ ಯುವರಾಜ ಶೃಣುತಾತ್। ಅಥ ಕಾಲನೇಮಿಸುತೇನ ಕಂಸೇನ ಪ್ರಯುಕ್ತೋಽಕ್ರೂರೋ ರಾಮಕೃಷ್ಣೌ ಸಮಾನೇತುಂ ವ್ರಜಮಂಡಲಮಾಗತವಾ॑ ॥ ೧ ॥

ತತ್ರ ಗಂತುಮಭ್ಯುದಿತಂ ನಂದರಾಜಸೂನುಂ ವೀಕ್ಷ್ಯ ಗೋಪೀಗಣಾ ವಿರಹಾತುರಾ ಬಭೂವುಃ। ಪೃಥಕ್ಪೃಥಕ್ತಾನಾಶ್ವಾಸ್ಯ ಭಗವಾನ್ರಥಮಾರುಹ್ಯ ಸಬಲೋಽಕ್ರೂರೇಣ ಯದುಪುರೀಂ ಗಚ್ಛನ್ಮಾರ್ಗೇ ಯಮುನಾಜಲೇಷು ಶ್ವಾಫಲ್ಕಾಯ ಸ್ವಧಾಮ ದರ್ಶಯಾಮಾಸ ॥ ೨ ॥

ಏಳನೆಯ ಅಧ್ಯಾಯವು

೧. ಪ್ರಾಡ್ವಿಪಾಕಮುನಿಯು ಹೇಳತೊಡಗಿದನು ;—" ಕುರು ಯುವರಾಜ ! ಆಲಿಸು. ಇದಾದ ಬಳಿಕ ಬಲರಾಮಕೃಷ್ಣರು ಮಧುರೆಯಲ್ಲಿ ತೋರ್ಪಡಿಸಿದ ಲೀಲೆಗಳನ್ನು ವಿವರಿಸುವೆನು, ಆಲಿಸು. ಕೇಶಿಸಂಹಾರವಾದನಂತರ ಕಾಲನೇಮಿಯೆಂಬ ಅಸುರನ ಪುತ್ರನೆನಿಸಿದ ಆ ಕಂಸನು ರಾಮಕೃಷ್ಣರನ್ನು ಮಧುರೆಗೆ ಕರೆತರುವಂತೆ ಅಕ್ರೂರನನ್ನು ಆಜ್ಞಾಪಿಸಲು, ಆತನು ಹಾಗೆಯೇ ಆಗಲೆಂದು ವ್ರಜಮಂಡಲಕ್ಕೆ ಬಂದನು.

೨. ಆ ಅಕ್ರೂರನೊಡನೆ ಮಧುರೆಗೆ ಹೊರಡಲು ಶ್ರೀಕೃಷ್ಣನು ಸಿದ್ಧನಾದುದನ್ನು ಕಂಡು ಗೋಪಾಂಗನೆಯರೆಲ್ಲರೂ ವಿರಹವ್ಯಥೆಗೆ ಈಡಾದರು. ಅವರೆಲ್ಲರನ್ನೂ ಒಬ್ಬೊಬ್ಬರನ್ನಾಗಿ ಶ್ರೀಕೃಷ್ಣನು ಸಮಾಧಾನಪಡಿಸಿ, ಬಲರಾಮನನ್ನು ಜೊತೆಯಲ್ಲಿ ಕರೆದುಕೊಂಡು ಅಕ್ರೂರನ ರಥದಲ್ಲಿ ಕುಳಿತು ಮಧುರೆಗೆ ಹೋಗುತ್ತಾ, ಮಾರ್ಗಮಧ್ಯದಲ್ಲಿ ಸಿಕ್ಕಿದ ಯಮುನಾನದಿಯಲ್ಲಿ ಶ್ವಫಲ್ಕಪುತ್ರನಾದ ಅಕ್ರೂರನಿಗೆ ತನ್ನ ದಿವ್ಯ ಸ್ವರೂಪವನ್ನು ಸಂದರ್ಶನಮಾಡಿಸಿದನು. (ತೋರ್ಪಡಿಸಿದನು,)

ಅಥ ಪೂರ್ವಾಹ್ಣೇ ಮಥುರೋಪವನೇ ಸ್ಥಿತ್ವಾಽಪರಾಹ್ಣೇ ಮಥುರಾ-ಪುರೀಂ ಸರ್ವತೋ ದದರ್ಶ। ಅಥ ರಾಮಕೃಷ್ಣೌ ದೇವೌ ಪುರಾಣೌ ಪುರುಷೌ ಲೀಲಯಾ ನರವರವೇಷಧರೌ ದಿದೃಕ್ಷವಃ ಪೌರಾಶ್ಚ ಪುರಂಧ್ರ್ಯಃ ಕರ್ಮಾಣಿ ತ್ಯಕ್ತ್ವಾ ವ್ಯಧಾವನ್ನಾಪಗಾ ಉದಧಿಮಿವ। ತೌ ಕೋಟಿಕಂದರ್ಪಹರಸೌಂದರ್ಯಂ ಸ್ವಂ ಸಂದರ್ಶಯಂತೌ ಚೇತೋಹರಂತೌ ವಿಚೇರತುಃ ಸ್ಮ ॥ ೩ ॥

ಅಥ ಭಗವಾನ್ರಾಜಮಾರ್ಗೇ ತದ್ಯಾಚಿತವಸ್ತ್ರಾಣ್ಯದಾಸ್ಯಂತಂ ರಜಕಂ ರಂಗಕಾರಂ ಕರಾಗ್ರೇಣ ಸರ್ವೇಷಾಂ ಪಶ್ಯತಾಂ ನಿಜಘಾನ। ತಥಾ ವಸ್ತ್ರವೇಷಂ ಕುರ್ವತೇ ವಾಯಕಾಯ ಸ್ವಸಾರೂಪ್ಯಂ ಪ್ರಾದಾತ್ ॥ ೪ ॥

---

೩. ಬಳಿಕ ಅಲ್ಲಿಂದ ಪ್ರಯಾಣ ಬೆಳಸಿ ಮಧ್ಯಾಹ್ನವಾಗುವ ಮೊದಲೇ ಮಥುರೆಯ ಬಳಿಗೆ ಬಂದು ಆ ಪುರದ ಉಪವನದಲ್ಲಿ ಇಳಿದುಕೊಂಡರು. ಮಧ್ಯಾಹ್ನವಾದ ಮೇಲೆ ಮಥುರಾನಗರಿಯನ್ನೆಲ್ಲಾ ನೋಡಲು ಹೊರಟರು. ಲೀಲಾರ್ಥವಾಗಿ ಮನುಷ್ಯ ವೇಷವನ್ನು ಧರಿಸಿ ಬರುತ್ತಿರುವ ಪುರಾಣಪುರುಷರಾದ ಆ ಶ್ರೀಕೃಷ್ಣ ಬಲರಾಮರನ್ನು ನೋಡಬೇಕೆಂಬ ಕುತೂಹಲದಿಂದ ಪುರಜನರೂ, ಸಚ್ಚರಿತ್ರರಾದ ಆ ಪುರದ ಸ್ತ್ರೀಯರೂ ಸಹ ತಾವು ಮಾಡುತ್ತಿದ್ದ ಕೆಲಸಗಳನ್ನು ಅಲ್ಲಿಗಲ್ಲಿಗೇ ಬಿಟ್ಟು, ಸಮುದ್ರವನ್ನು ಸೇರಲು ಕಾತುರತೆಯಿಂದೋಡುವ ನದೀನದಗಳಂತೆ ಓಡೋಡಿ ಬಂದರು. ಆ ರಾಮಕೃಷ್ಣರಿಬ್ಬರೂ ಕೋಟಿ ಮನ್ಮಥರನ್ನೂ ಹೀಯಾಳಿಸುವಂತಿದ್ದ ತಮ್ಮ ದಿವ್ಯ ಸೌಂದರ್ಯದಿಂದ ಅವರೆಲ್ಲರ ಮನಸ್ಸನ್ನೂ ಅಪಹರಿಸುತ್ತಾ ಆ ಮಥುರಾ ನಗರಿಯಲ್ಲಿ ಓಡಾಡತೊಡಗಿದರು.

೪. ಹಾಗೆ ಸಂಚರಿತ್ತಿದ್ದಾಗ ಭಗವಂತನಾದ ಶ್ರೀಕೃಷ್ಣನು ರಾಜಮಾರ್ಗವೊಂದರಲ್ಲಿ ಬಟ್ಟೆಗಳನ್ನು ಮಡಿಮಾಡಿ ತರುತಿದ್ದ ಅಗಸನೊಬ್ಬನು ತಾನು ಕೇಳಿದ ಬಟ್ಟೆಗಳನ್ನು ಕೊಡದೆ ಮದಾಂಧತೆಯಿಂದ ಸಲ್ಲದ ರೀತಿಯಲ್ಲಿ ವ್ಯವಹರಿಸಲು ಸುತ್ತಲೂ ಇದ್ದ ಜನರೆಲ್ಲರೂ ನೋಡುತ್ತಿರುವಂತಯೇ (ತನ್ನ)ಕೈಯಿಂದ ಪ್ರಹರಿಸಿ ಕೊಂದುಬಿಟ್ಟನು. ಇದಾದನಂತರ ತಮ್ಮಿಬ್ಬರಿಗೂ ಉಚಿತವಾದ ವಸ್ತ್ರಗಳನ್ನು ವೇಷಭೂಷಣಗಳನ್ನೂ ಇತ್ತ ನೇಯಿಗೆಯವನೊಬ್ಬನಿಗೆ ತನ್ನ ಸಾರೂಪ್ಯವನ್ನು ಅನುಗ್ರಹಿಸಿದನು.

ತತಃ ಸೈರಂಧ್ರೀಂ ಕುಬ್ಜಾಂ ತ್ರಿವಕ್ರಾಂ ಚಂದನಾದಾನನಿಮಿಷೇ-
ಣರ್ಜ್ವೀಂ ತ್ರಿಲೋಕಸುಂದರೀಂ ಕೃತ್ವಾ ತತೋ ವೈಶ್ಯಜನಾನ್ಸಮಾಭಾಷ್ಯ
ಮಥುರಾರ್ಭಕೈಃ ಸಹಿತೋ ಧನುಃಸ್ಥಲೇ ವಿವೇಶ । ಅಥ ಹೇಮಚಿತ್ರಂ
ಸಪ್ತತಾಲಕಂ ಸಹಸ್ರಶಃ ಪುರುಷೈರ್ನೇತುಮಶಕ್ಯಂ ಬೃಹದ್ಭಾರಂ
ಚಾಷ್ಟಧಾತುಮಯಂ ಲಕ್ಷಭಾರಸಮಂ ಯಜ್ಞಮಂಡಪಧೃತಂ
ಕಂಸಾಯ ಭಾರ್ಗವೇಣ ದತ್ತಂ ಸಾಕ್ಷಾಚ್ಛೇಷಮಿವ ಕುಂಡಲೀ-
ಭೂತಂ ಕೋದಂಡಂ ವೈಷ್ಣವಂ ವೀಕ್ಷ್ಯ ಪ್ರಸಹ್ಯಾದದೇ ॥ ೫ ॥

ತದೈವ ಪಶ್ಯತಾಂ ಲೋಕಾನಾಂ ಸಜ್ಯಂ ಕೃತ್ವಾ ಲೀಲಯಾಕೃಷ್ಯ
ಕರ್ಣಪರ್ಯಂತಂ ದೋರ್ದಂಡಾಭ್ಯಾಂ ಯಥೇಕ್ಷುದಂಡಂ ವೇತಂಡಃ
ಶುಂಡಾದಂಡೇನ ಕೋದಂಡಂ ಮಧ್ಯತೋ ಬಭಂಜ ॥ ೬ ॥

---

೫. ಬಳಿಕ ಅಲ್ಲಿಂದ ಹೊರಟು ರಾಜಮಾರ್ಗವಲ್ಲಿಯೇ ಬರುತ್ತಾ, ಮೈಯಲ್ಲಿ ಮೂರುಕಡೆ ಸೊಟ್ಟು ಸೊಟ್ಟಗೆ ಬಾಗಿಹೋಗಿ ಕುಬ್ಜೆಯೆಂದು ಪ್ರಸಿದ್ಧಳಾಗಿದ್ದ ಸೈರಂಧ್ರಿಯೊಬ್ಬಳನ್ನು ಅವಳಿತ್ತ ಚಂದನಾನುಲೇಪನವನ್ನು ತೆಗೆದುಕೊಳ್ಳುವ ನೆವದಿಂದ ಅವಳು ಸೊಟ್ಟೆಲ್ಲವೂ ಹೋಗಿ ನೆಟ್ಟಗಾಗುವಂತೆ ತಿದ್ದಿ ಆ ಸೈರಂಧ್ರಿಯು ಮೂರುಲೋಕದಲ್ಲೆ ನಿರುಪಮಸೌಂದರ್ಯಶಾಲಿನಿಯೆನಿಸುವಂತೆ ಅನುಗ್ರಹಿಸಿದನು. ಅದಾದನಂತರ ಆ ನಗರದ ಪ್ರಮುಖರನ್ನು ಮಾತನಾಡಿಸಿಕೊಂಡು ಬರುತ್ತಾ ಆ ಊರಿನ ಬಾಲಕರೊಡನೆ ಕಲೆತು ಕಂಸನ ಧನುಶ್ಶಾಲೆಯನ್ನು ಹೊಕ್ಕನು. ಅಲ್ಲಿ ಹಿಂದೆ ಪರಶುರಾಮನಿಂದ ಕಂಸನಿಗೆ ಕೊಡಲ್ಪಟ್ಟಿದ್ದ ಸಪ್ತತಾಲಪ್ರಮಾಣವುಳ್ಳ ವೈಷ್ಣವಧನುಸ್ಸನ್ನು ಚಿನ್ನದ ಎಳೆಗಳಿಂದ ಚಿತ್ರಿಸಿದ್ದರು. ಅದು ಅಷ್ಟ ಲೋಹಗಳಿಂದ ನಿರ್ಮಿಸಲ್ಪಟ್ಟು ಲಕ್ಷಭಾರಗಳಷ್ಟು ತೂಕವುಳ್ಳದ್ದಾಗಿ ಸಾವಿರ ಜನಗಳಿಂದಲೂ ಸಹ ಅಲುಗಾಡಿಸಲೂ ಸಹ ಸಾಧ್ಯವಿಲ್ಲದುದಾಗಿತ್ತು. ಅದನ್ನು ಧನುರ್ಮಹವೆಂಬ ಯಾಗದಲ್ಲಿ ಪುರಜನರೆಲ್ಲರೂ ಅರ್ಚಿಸಿದ್ದರು. ಸುರುಳಿ ಸುತ್ತಿಕೊಂಡಿರುವ ಆದಿಶೇಷನೋ ಎನ್ನುವಂತೆ ತೋರುತ್ತಿದ್ದ ಆ ಅದ್ಭುತ ಧನುಸ್ಸನ್ನು ಕಾಣುತ್ತಲೇ ಭಗವಂತನಾದ ಶ್ರೀಕೃಷ್ಣನು ತಟಕ್ಕನೆ ಅದಕ್ಕೆ ಕೈಹಾಕಿ ತೆಗೆದುಕೊಂಡನು.

೬. ಕೂಡಲೆ ಅಲ್ಲಿದ್ದ ಜನರೆಲ್ಲರೂ ನೋಡುನೋಡುತ್ತಿರುವಂತೆಯೇ ಸ್ವಲ್ಪವೂ ಆಯಾಸವಿಲ್ಲದೆ ಲೀಲಾಮಾತ್ರದಿಂದ ಆ ಧನುಸ್ಸಿಗೆ ಹೆದೆಯೇರಿಸಿ ಕಿವಿಯವರಿಗೂ ಎಳೆದು 'ಆನೆಯು ತನ್ನ ಸೊಂಡಲಿನಿಂದ ಕಬ್ಬಿನ ಜಲ್ಲೆಯನ್ನು ತುಂಡರಿಸುವಂತೆ' ಆ ಧನುಸ್ಸಿನ ಮಧ್ಯಕ್ಕೆ ಸರಿಯಾಗಿ ಮುರಿದುಬಿಟ್ಟನು.

ಭಜ್ಯಮಾನಧನುಷ್ಟಂಕಾರೇಣ ಸಪ್ತಲೋಕಬಿಲೈಃ ಸಹ ಸರ್ವಂ ಬ್ರಹ್ಮಾಂಡಂ ನನಾದ। ತತಸ್ತಾರಾ ದಿಗ್ಗಜಾಶ್ಚ ವಿಚೇಲುಃ। ಸರ್ವಂ ಭೂಖಂಡಮಂಡಲಂ ಸ್ಥಾಲೀವ ಘಟಿಕಾದ್ವಯಮಾತ್ರಂ ಪ್ರಚಕಂಪೇ ॥೭॥

ಅಥಾಪರಾಹ್ಣೇ ರಂಗಭೂಮಿದ್ವಾರಿ ದ್ವಿಪಂ ಕುವಲಯಾಪೀಡಂ ಸಮೇತ್ಯ ಕ್ಷಣಂ ಬಾಲಲೀಲಯಾ ಯುದ್ಧಂ ಕೃತ್ವಾ ಶುಂಡಾದಂಡೇ ಸಂಗೃಹೀತ್ವಾ ತ್ರಿತಸ್ತತೋ ಭ್ರಾಮಯಿತ್ವಾ ಬಾಲಕಃ ಕಮಂಡಲುಮಿವ ಭೂಪೃಷ್ಠೇ ತಂ ಪಾತಯಾಮಾಸ ॥ ೮ ॥

ತಮಿತ್ಥಂ ನಿಹತ್ಯ ರಂಗಭೂಮೌ ಕಂಸಸಭಾಯಾಂ ಜನಿತಾಯಾಂ ಯಥಾಭಾವಂ ದರ್ಶನಂ ದತ್ವಾ ಮಲ್ಲಯುದ್ಧಂ ಕೃತ್ವಾ ಚಾಣೂರ-ಮುಷ್ಟಿಕಕೂಟಶಲತೋಶಲಕಾನ್ಕಂಸಸ್ಯಾಗ್ರೇ ಸರ್ವೇಷಾಂ ಪಶ್ಯತಾಂ ಭೂಪೃಷ್ಠೇ ರಾಮಕೃಷ್ಣೌ ಪಾತಯಾಮಾಸತುಃ ॥ ೯ ॥

---

೭. ಆ ಧನುಸ್ಸನ್ನು ಮುರಿಯುವಾಗ ಉಂಟಾದ ಲಟಲಟನೆಂಬ ಸದ್ದಿನಿಂದ ಮೇಲಿನ ಮತ್ತು ಕೆಳಗಿನ ಏಳು ಲೋಕಗಳಿಂದಲೂ ಕೂಡಿದಂತಹ ಬ್ರಹ್ಮಾಂಡವೇ ತುಂಬಿಹೋಯಿತು. ಅದರಿಂದ ನಕ್ಷತ್ರಗಳೂ, ದಿಗ್ಗಜಗಳೂ ತಮ್ಮ ತಮ್ಮ ಸ್ಥಾನದಿಂದ ಚಲಿಸಿದುವು. ಸಮಸ್ತವಾದ ಭೂಮಂಡಲವೂ ಉರುಳಿಸಲ್ಪಟ್ಟ ಸ್ಥಾಲೀ ಪಾತ್ರೆಯಂತೆ ಎರಡುಗಳಿಗೆಗಳ ಕಾಲ ನಡುಗಿಹೋಯಿತು.

೮. ಇದೆಲ್ಲಾ ಆದ ಮೇಲೆ ಮಧ್ಯಾಹ್ನದನಂತರ ಶ್ರೀಕೃಷ್ಣನು ಜಟ್ಟಿಯ ಕಾಳಗಕ್ಕೆಂದು ರಂಗಭೂಮಿಗೆ (ಕಾಳಗದ ಕಳ) ಬರುತ್ತಿದ್ದಾಗ ಅದರ ಬಾಗಿಲಲ್ಲಿ ನಿಂತಿದ್ದ ಕುವಲಯಾಪೀಡವೆಂಬ ಕಂಸನ ಮದ್ದಾನೆಯೊಡನೆ ಹುಡುಗನಂತೆ ಲೀಲೆಯನ್ನು ತೋರುತ್ತಾ ಕೆಲಹೊತ್ತು ಹೋರಾಡುತ್ತಿದ್ದು ಕೊನೆಗೆ ಅದರ ಸೊಂಡಿಲನ್ನು ಹಿಡಿದುಕೊಂಡು ಅಲ್ಲಿಂದಿಲ್ಲಿಗೆ ಗರಗರನೆ ತಿರುಗಿಸಿ ಹುಡುಗನು ಗಡಿಗೆಯನ್ನು ಕುಕ್ಕುವಂತೆ ಕೆಡಹಿ ಕೊಂದುಬಿಟ್ಟನು.

೯. ಹೀಗೆ ಕುವಲಯಾಪೀಡವೆಂಬ ಮದ್ದಾನೆಯನ್ನು ಸಂಹರಿಸಿದನಂತರ ಆ ರಾಮಕೃಷ್ಣರಿಬ್ಬರೂ ಕಳವನ್ನು (ಕೆಮ್ಮಣ್ಣುಮಟ್ಟಿ) ಹೊಕ್ಕು ಅಲ್ಲಿ ಸೇರಿದ್ದ ಸಭೆಯಲ್ಲಿ ಕುಳಿತಿದ್ದ ಸಭಾಸದರಿಗೆಲ್ಲಾ ಅವರವರ ಮನೋಭಾವನೆಗೆ ತಕ್ಕಂತೆ ತೋರುತ್ತಾ ತಮ್ಮ ಮೇಲೆ ಹೋರಾಡಲು ಬಂದ ಚಾಣೂರ, ಮುಷ್ಟಿಕ, ಕೂಟ ಶಲ, ತೋಶಲಕರೆಂಬ ಜಟ್ಟಿಗಳನ್ನು ಕಂಸನೂ ಇತರ ಸಭಾಸದರಾದ ಮಹಾಜನರೂ ನೋಡುತ್ತಿರುವಂತೆಯೇ ಮಲ್ಲಯುದ್ಧದಲ್ಲಿ ಸೋಲಿಸಿ ನೆಲನಮೇಲೆ ಕೆಡಹಿಬಿಟ್ಟರು.

ಅಥ ತತ್ಕರ್ಮ ವೀಕ್ಷ್ಯ ದುರ್ವಚನಾನಿ ವಿಕತ್ಥಮಾನಸ್ಯ ಕಂಸಸ್ಯ ಮಧುಸೂದನಃ ಸಹಸೋತ್ಪತ್ಯ ಮಂಚಂ ಮಹೋನ್ನತಂ ಸಮಾರುರೋಹ ॥ ೧೦ ॥

ತತಃ ಸತ್ವರಂ ಮೃತ್ಯುಮಿವಾಗತಂ ವೀಕ್ಷ್ಯ ಮಂಚಾದುತ್ಥಾಯ ತಂ ನಿರ್ಭರ್ತ್ಸಯನ್ನುನ್ಮನಾ ದ್ರುತಂ ಕಂಸಃ ಖಡ್ಗಚರ್ಮಣೀ ಜಗೃಹೇ। ಹರಿಃ ಸಹಸಾ ಚರ್ಮಾಸಿಸಂಯುಕ್ತಂ ಕಂಸಂ ಸವಿಷಂ ಫಣೀಂದ್ರಮಿವ ತುಂಡಾವಿಭಾಗಾಭ್ಯಾಂ ವಿರಾಡಿವ ದೋರ್ದಂಡಾಭ್ಯಾಂ ಬಲಾತ್ ಸಮುಗ್ರಹೀತ್ ॥ ೧೧ ॥

ಯಥಾ ತಾರ್ಕ್ಷ್ಯತುಂಡಾತ್ಫಣೀವ ಕಂಸೋ ಭುಜಬಂಧಾದ್ಬಲಾದ್ವಿನಿರ್ಗತ್ಯ ಪತತ್ಖಡ್ಗಚರ್ಮಾ ಪುನರುದ್ಯತೋಽಭೂತ್। ಪುನರ್ಮಂಚೇ ಬಲಿನೌ ವೇಗಾನ್ಮರ್ದಯಂತೌ ಶೈಲೇ ಸಿಂಹಾವಿವ ಶುಶುಭಾತೇ ॥ ೧೨ ॥

---

೧೦. ಈ ಅದ್ಭುತವಾದ ಸಾಹಸವನ್ನು ಕಂಡು ಸಿಕ್ಕಿದಂತೆ ಕೆಟ್ಟ ಮಾತುಗಳಿಂದ ನಿಂದಿಸತೊಡಗಿದ ಕಂಸನನ್ನು ಕಂಡು ಶ್ರೀಕೃಷ್ಣನು ತಟಕ್ಕನೆ ಅವನು ಕುಳಿತಿದ್ದ ಉನ್ನತವಾದ ಪೀಠಕ್ಕೆ ನೆಗೆದು ಸರಸರನೆ ಹತ್ತಿಹೋದನು.

೧೧. ಈ ರೀತಿಯಾಗಿ ಬೇಗಬೇಗನೆ ಮೃತ್ಯುವಿನಂತೆ ಬರುತ್ತಿರುವ ಆ ಕೃಷ್ಣನನ್ನು ಕಂಡು ವಿಹ್ವಲಚಿತ್ತನಾದ ಕಂಸನು ತಾನು ಕುಳಿತಿದ್ದ ಪೀಠದಿಂದ ಜಗ್ಗನೆದ್ದು ನಿಂದಾವಾಕ್ಯಗಳನ್ನಾಡುತ್ತಾ ಸರಕ್ಕನೆ ಕತ್ತಿ ಗುರಾಣಿಯನ್ನು ಕೈಗೆ ತೆಗೆದುಕೊಂಡನು. ಕೂಡಲೇ ಶ್ರೀಕೃಷ್ಣನು ಗರುಡನು ತನ್ನ ಕೊಕ್ಕಿನ ಎರಡು ಕಡೆಗಳಿಂದಲೂ ವಿಷಭರಿತವಾದ ಸರ್ಪವನ್ನು ಕಚ್ಚಿ ಹಿಡಿಯುವಂತೆ ಆ ಕಂಸನು ಕತ್ತಿ ಗುರಾಣಿಗಳನ್ನು ಕೈಗೆ ತೆಗೆದುಕೊಂಡಿದ್ದಂತೆಯೇ ಆ ಕಂಸನನ್ನು ಬಲವಾಗಿ ತನ್ನೆರಡು ಕೈಗಳಿಂದಲೂ ಬಲವಾಗಿ ಅದುಮಿ ಹಿಡಿದನು.

೧೨. ಬಳಿಕ ಕಂಸನು ಗರುಡನ ಕೊಕ್ಕಿನಿಂದ ತಪ್ಪಿಸಿಕೊಳ್ಳುವ ಹಾವಿನಂತೆ ಆ ಕೃಷ್ಣನ ತೋಳತೆಕ್ಕೆಯಿಂದ ತನ್ನನ್ನು ಬಲವಂತವಾಗಿ ಬಿಡಿಸಿಕೊಂಡು ಕತ್ತಿ ಗುರಾಣಿಗಳನ್ನು ಝಳಪಿಸುತ್ತಾ ಹೋರಾಡಲು ನಿಂತನು. ಆಗ ಆ ಬಲಶಾಲಿಗಳಿಬ್ಬರೂ ತಾವು ನಿಂತಿದ್ದ ಮಂಚವನ್ನು ತಮ್ಮ ವೇಗದಿಂದ ಜಗ್ಗಿಸುತ್ತಾ ಬೆಟ್ಟದ ಮೇಲೆ ಹೋರಾಡುವ ಸಿಂಹಗಳಂತೆ ತೋರಿದರು.

ತತೋ ಬಲಾದುತ್ಪತಂತಂ ಕಂಸಂ ಶತಹಸ್ತಮಂಬರೇ ಕೃಷ್ಣ ಉತ್ಪಪಾತ ಶ್ಯೇನಂ ಶ್ಯೇನ ಇವ ತಂ ಸಮುಗ್ರಹೀತ್। ಪುನರ್ಗಚ್ಛಂತಂ ದೈತ್ಯಪುಂಗವಂ ಪ್ರಚಂಡಭುಜದಂಡಾಭ್ಯಾಂ ಗೃಹೀತತ್ರೈಲೋಕ್ಯಾಧಾರ ಇತಸ್ತತೋ ಭ್ರಾಮಯಿತ್ವಾ ಮಹಾಂಬರಾನ್ಮಂಚೋಪರಿ ಪಾತಯಾಮಾಸ ॥ ೧೩ ॥

ತತಸ್ತಡಿತ್ಪಾತಾದ್ದ್ರುಮಖಂಡ ಇವ ಭಗ್ನದಂಡೋ ಮಂಚೋ ಬಭೂವ ಸವಜ್ರಾಂಗಃ ಪತಿತೋಽಪಿ ಕಿಂಚಿದ್ವ್ಯಾಕುಲಃ ಸಹಸೋತ್ಥಾಯ ಮಹಾತ್ಮನಾ ಪುನರ್ಯುಯುಧೇ। ಪುನಸ್ತಂ ಭುಜದಂಡಾಭ್ಯಾಂ ಭಗವಾನ್ಗೃಹೀತ್ವಾ ಮಂಚೇ ಕ್ಷಿಪ್ತ್ವಾ ಹೃದಯಮಾರುಹ್ಯ ತನ್ಮೌಲಿಂ ಗೃಹೀತ್ವಾ ಸದ್ಯಃ ಕೇಶೇಷು ಪ್ರಗೃಹ್ಯ ಮಂಚಾದ್ರಂಗೋಪರಿ

---

೧೩. ಬಳಿಕ ಕಂಸನು ಚಳಕದಿಂದ ತಪ್ಪಿಸಿಕೊಂಡು ನೂರುಮೊಳದಷ್ಟು ಎತ್ತರಕ್ಕೆ ಮೇಲೆ ಹಾರಿದನು. ಅದನ್ನು ಕಂಡು ಕೃಷ್ಣನೂ ಸಹ ತಾನೂ ಮೇಲಕ್ಕೆ ನೆಗೆದು ಗಿಡಗನನ್ನು ಅಟ್ಟಿಸಿಕೊಂಡು ಹೋಗುವ ಬೇರೊಂದು ಗಿಡಗದಂತೆ ಅವನನ್ನು ಮತ್ತೆ ಹಿಡಿದನು. ಪುನಃ ಆ ಕಂಸನು ಬಿಡಿಸಿಕೊಂಡು ಹೋಗಲೆಳಸುತ್ತಲೇ ಲೋಕಗಳಿಗೂ ಆಧಾರಭೂತನಾದ ಆ ಶ್ರೀಕೃಷ್ಣನು ತನ್ನೆರಡು ತೋಳುಗಳಿಂದಲೂ ಅವನನ್ನು ಬಿಗಿಯಾಗಿ ಹಿಡಿದು ಇತ್ತಲಿಂದತ್ತ ಗರಗರನೆ ತಿರುಗಿಸಿ ತಾವಿದ್ದ ಆ ಆಕಾಶದಿಂದ ಅವನನ್ನು ಅವನು ಕುಳಿತಿದ್ದ ಪೀಠದ ಮೇಲಕ್ಕೆ ಕೆಡವಿದನು.

೧೪. ಆ ರೀತಿ ಕಂಸನು ಮೇಲಿಂದ ಬೀಳುತ್ತಲೇ ಆ ಪೀಠವು ಸಿಡಿಲು ಬಡಿಯಲ್ಪಟ್ಟ ಮರದ ತಾಳಿನಂತೆ ತುಂಡುತುಂಡಾಗಿ ಹೋಯಿತು. ಆ ಕಂಸನು ವಜ್ರದಂತೆ ಕರ್ಕಶವಾದ ದೇಹವುಳ್ಳವನಾದರೂ ಆ ಏಟಿನಿಂದ ಸ್ವಲ್ಪಮಟ್ಟಿಗೆ ಕಳವಳಕ್ಕೀಡಾದನು. ಆದರೂ ಅದನ್ನು ಲಕ್ಷ್ಯಮಾಡದೆ ಪುನಃ ಆ ಮಹಾತ್ಮನಾದ ಶ್ರೀಕೃಷ್ಣನೊಡನೆ ಹೋರಾಡತೊಡಗಿದನು. ಆಗ ಶ್ರೀಕೃಷ್ಣನು ಕಂಸನನ್ನು ಮತ್ತೆ ತನ್ನ ತೋಳುಗಳಿಂದ ಗಟ್ಟಿಯಾಗಿ ಹಿಡಿದು ಅವನ ಪೀಠದ ಮೇಲೆ ಕೆಡವಿದುದಲ್ಲದೆ ಅವನ ಎದೆಯಮೇಲೆ ಹತ್ತಿ ಕುಳಿತು (ಅವನ) ಕಿರೀಟವನ್ನು ಕಿತ್ತೆಸೆದು ಕೂದಲಿಗೆ

ಪಾತಯಿತ್ವಾ ಶೈಲಾದ್ಗಂಡಶಿಲಾಮಿವ ತಸ್ಯೋಪರಿಷ್ಟಾತ್ಸನಾತನಃ ಸರ್ವಾಧಾರೋಽನಂತೋಽನಂತವಿಕ್ರಮೋ ವೇಗಾತ್ಸ್ವಯಂ ನಿಪಪಾತ। ತಯೋರ್ನಿಪಾತೇನ ನಿಮ್ನಾಭೂತಂ ಭೂಖಂಡಮಂಡಲಂ ಸ್ಥಾಲೀವ ದಂಡತ್ರಯಂ ಸಹಸಾ ಚಕಂಪೇ ॥ ೧೪ ॥

ಅಥ ಸಂಪರೇತಂ ಭೋಜರಾಜಂ ಯದುರಾಜೋ ಭೂಮಿಗತಂ ನಾಗೇಂದ್ರಮ್ಮೃಗೇಂದ್ರ ಇವ ಸರ್ವೇಷಾಂ ಪಶ್ಯತಾಂ ವಿಚಕರ್ಷ। ತದೈವ ಭೂಭುಜಾಂ ಹಾಹಾಕಾರ ಆಸೀತ್। ಅಹೋ ವೈರಭಾವೇನ ಯಂ ಭಜನ್ಕಂಸೋಽಪಿ ತಸ್ಯ ಸಾರೂಪ್ಯಂ ಭೃಂಗಿಣಃ ಕೀಟಕ ಇವ ಜಗಾಮ ॥ ೧೫ ॥

ಕೈಹಾಕಿ ಎಳೆದಾಡುತ್ತಾ ಬೆಟ್ಟದ ಮೇಲಿಂದ ಬಂಡೆಯ ಮೇಲಕ್ಕೆ ತಳ್ಳುವಂತೆ ಆ ಪೀಠದಿಂದ ಕಳದಮೇಲಕ್ಕೆತ್ತಿ ಹಾಕಿಬಿಟ್ಟನು. ಕೂಡಲೇ ಸರ್ವಾಧಾರನೂ, ಅಪರಿಮಿತ ಪರಾಕ್ರಮಿಯೂ, ಅಂತರಹಿತನೂ, ಸನಾತನನೂ ಆದ ಶ್ರೀಕೃಷ್ಣನು ವೇಗದಿಂದ ಅವನ ಮೇಲೆ ಬಿದ್ದನು. ಈ ರೀತಿಯಾಗಿ ಕಂಸನೂ, ಶ್ರೀಕೃಷ್ಣನೂ ಮೇಲಿನಿಂದ ಬೀಳುತ್ತಲೇ ಈ ಭೂಮಂಡಲವು ಹಳ್ಳವಾಗಿ ಹೋಯಿತು. ಬ್ರಹ್ಮಾಂಡವೂ ಸಹ ಪಾತ್ರೆಯಂತೆ ಅಲ್ಲಾಡಿಬಿಟ್ಟಿತು.

೧೫. ಹೀಗೆ ತನ್ನ ಮೇಲೆ ಶ್ರೀಕೃಷ್ಣನು ಬಿದ್ದುದರಿಂದ ಕಂಸನು ಗತಪ್ರಾಣನಾದನು. ಕೂಡಲೇ ಶ್ರೀಕೃಷ್ಣನು ಅಲ್ಲಿದ್ದ ಜನರೆಲ್ಲರೂ ನೋಡುತ್ತಿರುವಂತೆ ಮೃತನಾದ ಆ ಕಂಸನನ್ನು ಸತ್ತ ಆನೆಯನ್ನು ಸಿಂಹವು ಎಳೆದಾಡುವಂತೆ ಅಲ್ಲೆಲ್ಲಾ ನೆಲದ ಮೇಲೆ ಎಳೆದಾಡಿದನು. ಅದನ್ನು ಕಂಡು ಅಲ್ಲಿ ನೆರೆದಿದ್ದ ರಾಜರೆಲ್ಲಾ ಹಾಹಾಕಾರವನ್ನು ಮಾಡಿದರು. ಆಹಾ! ಆಶ್ಚರ್ಯವನ್ನು ಏನೆಂದು ವರ್ಣಿಸಲಿ. ಆ ಕಂಸನು ಶ್ರೀಕೃಷ್ಣನನ್ನು ದ್ವೇಷಿಸುತ್ತಲೇ ಇದ್ದರೂ ಆ ಶ್ರೀಕೃಷ್ಣನನ್ನು ಸರ್ವದಾ ಧ್ಯಾನಿಸುತ್ತಿದ್ದರ ಫಲವಾಗಿ ಭೃಂಗಕೀಟನ್ಯಾಯದಂತೆ ಆತನ ಸಾರೂಪ್ಯವನ್ನೇ ಪಡೆದನು.

ತತಃ ಕಂಸಂ ಮೃತಂ ಸಹಸಾ ವೀಕ್ಷ್ಯ ಸಮಾಗತಾ೯ ತಸ್ಯಾನು-ಜಾನ್ಖಡ್ಗಚರ್ಮಧರಾನ್ದೃಷ್ಟ್ವಾ ಬಲಭದ್ರೋ ಮುದ್ಗರಂ ನೀತ್ವಾ ಸರ್ವತೋಽಭಿಜಘಾನ। ತದಾ ದೇವದುಂದುಭಯೋ ನೇದುರ್ಜಯ-ಧ್ವನಿಶ್ಚಾಭೂದ್ದೇವಾಃ ಪುಷ್ಪೈರ್ವವೃಷುರ್ವಿದ್ಯಾಧರ್ಯೋ ನನೃತು-ರ್ವಿದ್ಯಾಧರಗಂಧರ್ವಕಿನ್ನರಾ ಜಗುಃ ॥ ೧೬ ॥

ಅಥ ಸರ್ವಾನಾಶ್ವಾಸ್ಯ ಪಿತರೌ ವಿಮೋಕ್ಷ್ಯೋಗ್ರಸೇನಾಯ ರಾಜ್ಯಂ ದತ್ವೋಪವೀತಂ ಪ್ರಾಪ್ಯ ಸಂದೀಪನಾದ್ವಿದ್ಯಾ ಅಧೀತ್ಯ ತಸ್ಮೈ ಮೃತಂ ಸುತಂ ದಕ್ಷಿಣಾಂ ದತ್ವಾ ಶಂಖಂ ಹತ್ವಾ ಮಥುರಾಮೇತ್ಯ ವರ್ಸ ವ್ರಜಶಾಂತ್ಯೈ ಚೋದ್ಧವಂ ಪ್ರೇಷಯಿತ್ವಾ ಪುನಃ ಸ್ವಯಂ ವ್ರಜಂ ಗತ್ವಾ ರಾಧಾಯೈ ಗೋಪೀಭ್ಯೋ ದರ್ಶನಂ ದತ್ವಾ ರಾಸಮಧ್ಯೇ

---

೧೬. ಅನಂತರ ತಮ್ಮ ಅಣ್ಣನಾದ ಕಂಸನನ್ನು ಕೃಷ್ಣನು ಸಂಹರಿಸಿದುದನ್ನು ಕಂಡು ಕೋಪವನ್ನು ತಾಳಿ ಕತ್ತಿ ಗುರಾಣಿಗಳನ್ನು ಹಿಡಿದು ತಮ್ಮ ಮೇಲೆ ಬೀಳಬಂದ ಕಂಸನ ತಮ್ಮಂದಿರನ್ನು ಬಲರಾಮನು ತನ್ನ ಕೈಲಿದ್ದ ಮುದ್ಗರದಿಂದ ಹೊಡೆದು ಕೊಂದನು. ಆಗ ದೇವದುಂದುಭಿಗಳು ಮೊಳಗಿದುವು. ಎಲ್ಲೆಲ್ಲೂ ಜಯಜಯ ಧ್ವನಿಗಳಾದುವು. ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು. ವಿದ್ಯಾಧರಾಂಗನೆಯರು ನರ್ತನಮಾಡಿದರು. ವಿದ್ಯಾಧರರೂ, ಗಂಧರ್ವರೂ, ಕಿನ್ನರರೂ ಇಂಪಾಗಿ ಗಾನ ಮಾಡಿದರು.

೧೭. ಬಳಿಕ ಶ್ರೀಕೃಷ್ಣನು ಕಂಸನ ಬಂಧುಗಳೆಲ್ಲರನ್ನೂ ಸಮಾಧಾನಗೊಳಿಸಿ ಸೆರೆಯಲ್ಲಿದ್ದ ತನ್ನ ತಂದೆ ತಾಯಿಗಳನ್ನು ಬಿಡಿಸಿ ತಾತನಾದ ಉಗ್ರರಾಜನಿಗೆ ಮಥುರಾರಾಜ್ಯವನ್ನು ಅರ್ಪಿಸಿದನು. ಅನಂತರ ಉಪನಯನವಾದ ಮೇಲೆ ಗುರುವಾದ ಸಾಂದೀಪನಬಳಿ ಸಕಲ ವಿದ್ಯೆಗಳನ್ನೂ ಕಲಿತು ಆತನಿಗೆ ಗುರುದಕ್ಷಿಣೆಯೆಂದು ಸತ್ತುಹೋಗಿದ್ದ ಆತನ ಮಗನನ್ನು ಬದುಕಿಸಿ ಒಪ್ಪಿಸಿದುದಲ್ಲದೆ, ಶಂಖರೂಪದಿಂದಿದ್ದ ಪಂಚಜನನೆಂಬ ದೈತ್ಯನನ್ನು ಕೊಂದು ಮತ್ತೆ ಮಥುರಾನಗರಿಯನ್ನು ಸೇರಿ ಸುಖವಾಗಿ ವಾಸಮಾಡುತ್ತಿದ್ದನು. ಬಳಿಕ ಗೋಕುಲದ ಜನಗಳನ್ನು ಸಮಾಧಾನಪಡಿಸಲು ಉದ್ಧವನನ್ನು ಅಲ್ಲಿಗೆ ಕಳುಹಿಸಿ ಕೆಲವು ದಿನಗಳನಂತರ ತಾನೂ ಅಲ್ಲಿಗೆ ಹೋಗಿ ರಾಧೆಗೂ, ಇತರ ಗೋಪಿಯರಿಗೂ ದರ್ಶನವನ್ನಿತ್ತು ರಾಸಮಂಡಲದ

ಭೂಮೋಕ್ಷಂ ಕೃತ್ವಾ ಪುನರ್ಮಥುರಾಯಾಂ ಮಾಥುರೇಶೋ ರರಾಜ। ರಾಮೋಽಪಿ ಕೋಲವಧಂ ಕೃತ್ವಾ ತಸ್ಯಾಂ ವಿರರಾಜೇತಿ ತಯೋ- ರ್ಮಥುರಾಯಾಂ ಸಹಸ್ರಶಃ ಪವಿತ್ರಾಣಿ ವಿಚಿತ್ರಾಣಿ ಚರಿತ್ರಾಣಿ ಬಭೂವುಃ ॥ ೧೭ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ
ಮಾಥುರಲೀಲಾವರ್ಣನಂ ನಾಮ ಸಪ್ತಮೋಽಧ್ಯಾಯಃ

ಮಧ್ಯದಲ್ಲಿ ವಿಹರಸಿತ್ತಿದ್ದು ಅಲ್ಲಿಂದ ಕಣ್ಮರೆಯಾಗಿ ಮತ್ತೆ ಮಧುರೆಯಲ್ಲಿ ಮಧುರೇಶ್ವರನಾಗಿ ವಿರಾಜಿಸಿದನು. ಇತ್ತಲಾಗಿ ಬಲರಾಮನೂ ಸಹ ಕೋಲಾಸುರನನ್ನು ಸಂಹರಿಸಿ ಮಧುರೆಯಲ್ಲೇ ನೆಲಸಿ ಕಂಗೊಳಿಸಿದನು. ಈ ರೀತಿಯಾಗಿ ಮಧುರಾ ನಗರದಲ್ಲಿ ಆ ಬಲರಾಮಕೃಷ್ಣರ ಪಾವನವೂ ವಿಚಿತ್ರವೂ ಆದ ಸಾವಿರಾರು ಚರಿತ್ರಗಳು ನಡೆದವು.

ಇಲ್ಲಿಗೆ ಗರ್ಗಸಂಹಿತೆಯ ಬಲಭದ್ರಖಂಡದಲ್ಲಿ ಮಧುರಾಲೀಲಾ ವರ್ಣನವೆಂಬ
ಏಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ಅಷ್ಟಮೋಽಧ್ಯಾಯಃ

॥ ಪ್ರಾಡ್ವಿಪಾಕ ಉವಾಚ ॥

ಅಥ ಯುವರಾಜ ಧಾರ್ತರಾಷ್ಟ್ರ ತಯೋರ್ದ್ವಾರಕಾಲೀಲಾಂ ಸಂಕ್ಷೇಪೇಣ ಶೃಣುತಾತ್ । ತತಃ ಕಂಸಸ್ಯ ಪಾರೋಕ್ಷ್ಯಂ ಸೌಹೃದಂ ಕುರ್ವಂತಂ ಸಮಾಗತಂ ಜರಾಸಂಧಂ ಜಿತ್ವಾ ದ್ವಾರಕಾಖ್ಯಂ ಸಮುದ್ರೇ ದುರ್ಗಂ ನಿರ್ಮಾಯ ತತ್ರೈಕರಾತ್ರೇಣ ಜ್ಞಾತೀನ್ಸಮಾಧಾಯ ಮುಚುಕುಂದದೃಶಾ ಕಾಲಂ ಘಾತಯಿತ್ವಾ ಪುನಶ್ಚ ರಾಮಕೃಷ್ಣೌ ಪ್ರವರ್ಷಣಾದ್ರಿಮೇತ್ಯ ತಸ್ಮಾದ್ದ್ವಾರಕಾಯಾಂ ಜಗ್ಮತುಃ ॥ ೧ ॥

ಎಂಟನೆಯ ಅಧ್ಯಾಯವು.

೧. ಪ್ರಾಡ್ವಿಪಾಕಮುನಿಯು ಹೇಳತೊಡಗಿದನು :—“ಯುವರಾಜ ದುರ್ಯೋಧನ! ಈಗ ನಿನಗೆ ಆ ಬಲರಾಮ ಕೃಷ್ಣರಿಬ್ಬರು ದ್ವಾರಕಾನಗರದಲ್ಲಿ ನಡೆಸಿದ ಲೀಲೆಗಳನ್ನು ಸಂಕ್ಷೇಪವಾಗಿ ವಿವರಿಸುವೆನು ಆಲಿಸು :-ಕಂಸನು ಹತನಾದ ನಂತರ ಅವನಿಗೆ ಪರೋಕ್ಷವಾಗಿ ಸಹಾಯಮಾಡುತ್ತಿದ್ದ ಜರಾಸಂಧನು ಕೃಷ್ಣನ ಮೇಲೆ ದಂಡೆತ್ತಿ ಬಂದು ಪುನಃ ಪುನಃ ಪರಾಜಿತನಾದನು. ಈ ಉಪಟಳವನ್ನು ತಪ್ಪಿಸಲು ಶ್ರೀಕೃಷ್ಣನು ಸಮುದ್ರ ಮಧ್ಯದಲ್ಲಿ ಶತ್ರುಗಳಿಗೆ ದುರ್ಗಮವೆನಿಸಿದ ದ್ವಾರಕಾ ಎಂಬ ನಗರವನ್ನು ನಿರ್ಮಿಸಿ, ಅಲ್ಲಿ ತನ್ನ ಬಂಧುಗಳೆಲ್ಲರನ್ನೂ ಒಂದೇ ರಾತ್ರಿಯಲ್ಲಿಯೇ ಬರಮಾಡಿಕೊಂಡು ಅಲ್ಲಿ ನೆಲಸುವಂತೆ ಮಾಡಿದನು. ಇದಾದ ನಂತರ ದುಷ್ಟನಾದ ಕಾಲಯವನನ್ನು ಮುಚುಕುಂದನೆಂಬ ರಾಜರ್ಷಿಯ ದೃಷ್ಟಿಪಾತದಿಂದ ಭಸ್ಮೀಭೂತನನ್ನಾಗಿ ಮಾಡಿದನು. ಬಳಿಕ ರಾಮಕೃಷ್ಣರಿಬ್ಬರೂ ಪ್ರವರ್ಷಣವೆಂಬ ಪರ್ವತಕ್ಕೆ ಹೋಗಿದ್ದು ಅಲ್ಲಿಂದ ದ್ವಾರಕೆಗೆ ಹಿಂದಿರುಗಿದರು.

ಅಥ ಬ್ರಹ್ಮಲೋಕಾತ್ಸಮಾಗತೋ ರೈವತೋ ಸುತಾಂ ರತ್ನಯುತಾಂ ವಿಧಿವದ್ಬಲಶಾಲಿನೇ ಬಲಭದ್ರಾಯ ದತ್ವಾ ತಪಃ ಕರ್ತುಂ ಬದರ್ಯಾಖ್ಯಂ ಗತವಾರ್ || ೨ ||

ಅಥ ಶ್ರೀಕೃಷ್ಣಃ ಶತ್ರೂಣಾಂ ಪಶ್ಯತಾಂ' ಕುಂಡಿನಪುರಾದ್ರುಕ್ಮಿಣೀಂ ಜಹಾರ। ತಥಾ ಜಾಂಬವತೀಂ ಸತ್ಯಭಾಮಾಂ ಕಾಲಿಂದೀಂ ಮಿತ್ರವಿಂದಾಂ ನಾಗ್ನಿಜಿತೀಂ ಭದ್ರಾಂ ಲಕ್ಷ್ಮಣಾಂ ಚ ಭೌಮಂ ಹತ್ವಾ ಷೋಡಶಸಹಸ್ರಂ ಶತಂ ಚ ರಾಜಕನ್ಯಾ ಉವಾಹ || ೩ ||

ರಾಜರ್ ಭೀಷ್ಮಕಕನ್ಯಾಯಾಂ ರುಕ್ಮಿಣ್ಯಾಂ ಶ್ರೀಕೃಷ್ಣಸ್ಯ ಪುತ್ರಃ ಪ್ರಥಮಂ ಕಾಮದೇವಾವತಾರಃ ಪಿತೃಸಮಸುಂದರ ಆಸೀತ್। ತಸ್ಮಾದನಿರುದ್ಧಃ ಸುರಜ್ಯೇಷ್ಠಾವತಾರೋಽಭೂತ್ || ೪ ||

---

೨. ರಾಮಕೃಷ್ಣರು ದ್ವಾರಕೆಗೆ ಬಂದ ಮೇಲೆ ಬ್ರಹ್ಮಲೋಕಕ್ಕೆ ಮಗಳೊಡನೆ ತೆರಳಿದ್ದ ರೈವತರಾಜನು ಅಲ್ಲಿಗೆ ಬಂದು ತನ್ನ ಮಗಳಾದ ರೇವತಿಯನ್ನು ನಾನಾವಿಧವಾದ ರತ್ನಾಭರಣಾದಿಗಳಿಂದಲಂಕರಿಸಿ, ಬಲಶಾಲಿಯಾದ ಬಲರಾಮನಿಗೆ ಇತ್ತು, ವಿವಾಹ ಮಹೋತ್ಸವವನ್ನು ಜೆಳಿಸಿ ತಾನು ತಪಸ್ಸುಮಾಡಲು ಬದರಿಕಾಶ್ರಮಕ್ಕೆ ಹೊರಟುಹೋದನು.

೩. ಇದಾದನಂತರ ಶ್ರೀಕೃಷ್ಣನು ಕುಂಡಿನಪುರವನ್ನು ಪ್ರವೇಶಿಸಿ, ಶತ್ರುಗಳೆಲ್ಲರೂ ನೋಡುತ್ತಿರುವಂತೆಯೇ ತನ್ನನ್ನು ಒಲಿದಿದ್ದ ರುಕ್ಮಿಣಿಯನ್ನು ಅಪಹರಿಸಿಕೊಂಡು ಬಂದನು. ಅನಂತರ ಜಾಂಬವತಿಯನ್ನೂ, ಸತ್ಯಭಾಮೆಯನ್ನೂ, ಕಾಲಿಂದಿ, ಮಿತ್ರವಿಂದೆ, ನಾಗ್ನಜಿತಿ(ಸತ್ಯ)ಭದ್ರೆ, ಲಕ್ಷ್ಮಣೆಯೆಂಬ ರಾಜಕುಮಾರಿಯರನ್ನೂ ಮದುವೆಯಾದುದಲ್ಲದೆ ಭೂಪುತ್ರನಾದ ನರಕಾಸುರನನ್ನು ಸಂಹರಿಸಿ ಅವನು ಸೆರೆಯಲ್ಲಿಟ್ಟಿದ್ದ ಹದಿನಾರುಸಾವಿರಮಂದಿ ರಾಜಕುಮಾರಿಯರನ್ನು ಮದುವೆ ಮಾಡಿಕೊಂಡನು.

೪. ಓ ಯುವರಾಜ! ಭಿಷ್ಮಕರಾಜನ ಪುತ್ರಿಯಾದ ರುಕ್ಮಿಣಿಯಲ್ಲಿ ಶ್ರೀಕೃಷ್ಣನಿಗೆ ಮನ್ಮಥನ ಅವತಾರವೆನಿಸಿದ ಪ್ರದ್ಯುಮ್ನನು ಮಗನಾಗಿ ಜನಿಸಿದನು. ಆ ಪ್ರದ್ಯುಮ್ನನು ಸೌಂದರ್ಯದಲ್ಲಿ ತನ್ನ ತಂದೆಗೆ ಸರಿಸಮನಾಗಿದ್ದನು. ಆ ಪ್ರದ್ಯುಮ್ನನಿಗೆ ಬ್ರಹ್ಮನ ಅಂಶದಿಂದ ಜನಿಸಿದ ಅನಿರುದ್ಧನು ಮಗನಾದನು.

ಅಥೈಕದೋಗ್ರಸೇನೋ ರಾಜಸೂಯಾಧ್ವರೇ ನಾಗವಲ್ಲೀಂ ಗೃಹೀತ್ವಾ ದಿಗ್ವಿಜಯಾರ್ಥೀ ನಿರ್ಗತಃ ಪ್ರದ್ಯುಮ್ನೋ ಯಾದವೈರ್ಭ್ರಾತೃಭಿಃ ಸಹ ಜಂಬೂದ್ವೀಪೇ ನವಖಂಡವಿಜಯಂ ಕುರ್ವನ್ ಕಾಮುದುಘನದಸಮೀಪೇ ವಸಂತಮಾಲತೀಪುರಾಧೀಶೇನ ಪತಂಗೇನ ಗಂಧರ್ವರಾಜೇನ ಯುಯುಧೇ || ೫ ||

ತತ್ರ ಗದಾಯುದ್ಧೇ ಗದಾಮಾದಾಯ ಗದೋ ಬಲದೇವಾನುಜೋ ಗದಾಧರಂ ಸ್ವಗದಯಾ ಪತಂಗಂ ತತಾಡ। ಸೋಽಪಿ ತಂ ಹೃದಿ ಚೌಜಸಾ ಜಘಾನೇತ್ಥಂ ತಯೋರ್ಗದಾಯುದ್ಧಂ ಘಟಿಕಾದ್ವಯಂ ಬಭೂವ। ಪತಂಗಗದಾಪ್ರಹಾರೇಣ ಗದೋ ಯುದ್ಧೇ ಮೂರ್ಚ್ಛಾಂ ಜಗಾಮ || ೬ ||

---

೫. ಹೀಗಿರುವಲ್ಲಿ ಯದುರಾಜನಾದ ಉಗ್ರಸೇನನು (ಒಮ್ಮೆ) ರಾಜಸೂಯ ಯಾಗವನ್ನು ಮಾಡಲೆಳಸಿದನು. ಆಗ ಪ್ರದ್ಯುಮ್ನನು ದಿಗ್ವಿಜಯವನ್ನು ಮಾಡಿಕೊಂಡು ಬರಲು ವೀಳೆಯವನ್ನು ತೆಗೆದುಕೊಂಡು ಯಾದವರೊಡನೆಯೂ, ತನ್ನ ತಮ್ಮಂದಿರೊಡನೆಯೂ ಹೊರಟು ಜಂಬೂದ್ವೀಪದಲ್ಲಿರುವ ಒಂಭತ್ತು ಖಂಡಗಳನ್ನೂ ಗೆದ್ದು ಬರುತ್ತಾ ಕಾಮುದುಘವೆಂಬ ನದದ ಬಳಿಯಲ್ಲಿ ತನ್ನೊಡನೆ ಸೆಣಸಬಂದ ವಸಂತಮಾಲತೀ ಎಂಬ ನಗರದ ಅಧಿಪತಿಯಾದ ಪತಂಗನೆಂಬ ಗಂಧರ್ವರಾಜನೊಂದಿಗೆ ಯುದ್ಧಮಾಡಿದನು.

೬. ಆ ಯುದ್ಧದಲ್ಲಿ ಬಲಭದ್ರನ ತಮ್ಮನಾದ ಗದನೆಂಬ ವೀರನು ಗದಾಪಾಣಿಯಾಗಿ ಹೋರಾಡಲು ಬಂದ ಆ ಗಂಧರ್ವರಾಜನಾದ ಪತಂಗನೊಂದಿಗೆ ತಾನೂ ಗದಾಹಸ್ತನಾಗಿ ಹೋರಾಡುತ್ತಾ ಅವನನ್ನು ತನ್ನ ಗದೆಯಿಂದ ಬಲವಾಗಿ ಪ್ರಹರಿಸಿದನು. ಆ ಪತಂಗನೂ ಸಹ ಅದಕ್ಕೆ ಪ್ರತಿಯಾಗಿ ತನ್ನ ಗದೆಯಿಂದ ಆ ಗದನ ಎದೆಯ ಮೇಲೆ ಜೋರಾಗಿ ಅಪ್ಪಳಿಸಿದನು. ಈ ರೀತಿಯಾಗಿ ಅವರಿಗೆ ಎರಡು ಗಳಿಗೆಗಳ ಕಾಲ ಗದಾಯುದ್ಧವು ಜರುಗಿತು. ಹೀಗೆಯೇ ಕಾದಾಡುತ್ತಿರುವಾಗ ಪತಂಗನ ಗದಾಪ್ರಹಾರದಿಂದ ಗದನು ಕ್ಷಣಹೊತ್ತು ಮೂರ್ಛಿತನಾಗಿ ಬಿದ್ದುಬಿಟ್ಟನು.

ತದಾ ಹಾಹಾಕಾರೇ ಜಾತೇ ಕೋಟಿಮಾರ್ತಂಡಸನ್ನಿಭೋ ಬಲಭದ್ರ ಆವಿರ್ಭೂತ್ವಾ ಗಂಧರ್ವಾಣಾಂ ಸರ್ವಂ ಬಲಂ ಹಲಾಗ್ರೇಣ ಸಮಾಕೃಷ್ಯ ತದುಪರಿ ಕ್ಲಿಷ್ಟಮುಸಲತಾಡನಂ ಚಕಾರ। ತೇನ ಯುಗಪತ್ಸರ್ವಂ ಸೈನ್ಯಂ ಸಭಟದ್ವಿಪರಥಂ ಚೂರ್ಣೀಬಭೂವ ॥ ೭ ॥

ಅಥ ಪತಂಗೋಽಪಿ ವಿರಥೋ ಭಯಭೀತಸ್ತಸ್ಮಾತ್ಪುರೀಂ ಗತ್ವಾ ಪುನರ್ಯೋದ್ಧುಂ ಯಾದವೈಃ ಸೇನಾವ್ಯೂಹಂ ಚಕಾರ। ತಚ್ಛ್ರುತ್ವಾ ಕ್ರುದ್ಧೋ ಬಲಭದ್ರೋ ಗಂಧರ್ವಾಣಾಂ ಮಹಾಪುರೀಂ ಶತಯೋಜನ-ವಿಸ್ತೀರ್ಣಾಂ ವಸಂತಮಾಲತೀನಾಮ್ನೀಂ ಸರ್ವಾಂ ಹಲೇನ ಸಂವಿ-ದಾರ್ಯ ಸಹಸಾ ಕಾಮದುಘೇನ ಸಂಕರ್ಷಣೋ ವಿಚಕರ್ಷ ॥ ೮ ॥

---

೭. ಆಗ ಹಾಹಾ ಎಂದು ಎಲ್ಲೆಲ್ಲೂ ಧ್ವನಿಯುಂಟಾಗಿ ಕೋಲಾಹಲ ವುಂಟಾಯಿತು. ಆಗ ಬಲರಾಮನು ಕೋಟಿ ಸೂರ್ಯರಿಗೆಣೆಯಾದ ತೇಜಸ್ಸಿನಿಂದ ಮೆರೆಯುತ್ತ ಆ ಯುದ್ಧರಂಗದಲ್ಲಿ ಆವಿರ್ಭವಿಸಿ ಆ ಗಂಧರ್ವಸೇನೆಯಲ್ಲವನ್ನೂ ತನ್ನ ಆಯುಧವಾದ ಮುಸಲ(ಒನಕೆ)ದಿಂದ ಜೋರಾಗಿ ಪ್ರಹರಿಸಿದನು. ಆ ಮುಸಲ ಪ್ರಹಾರದಿಂದ ಗಂಧರ್ವಸೇನೆಯಲ್ಲಿದ್ದ ಆನೆ, ಕುದುರೆ, ಕಾಲಾಳು ತೇರು ಎಲ್ಲವೂ ನುಚ್ಚುನೂರಾಗಿಬಿಟ್ಟಿತು.

೮. ಆಗ ಗಂಧರ್ವರಾಜನಾದ ಪತಂಗನೂ ಸಹ ತನ್ನ ರಥ ಮುರಿಯಲ್ಪಟ್ಟುದರಿಂದ ಭಯದಿಂದ ತತ್ತಳಿಸುತ್ತಾ ತನ್ನ ಊರಿಗೆ ಪಲಾಯನಮಾಡಿದನು. ಅಲ್ಲಿ ಯಾದವರೊಂದಿಗೆ ಮರಳಿ ಯುದ್ಧಮಾಡಬೇಕೆಂದು ನಿರ್ಧರಿಸಿ ತನ್ನ ಸೇನೆಯನ್ನು ವ್ಯೂಹವಾಗಿ ನಿಲ್ಲಿಸುತಿದ್ದನು. ಈ ಸಂಗತಿಯನ್ನು ಕೇಳಿ ಬಲಭದ್ರನು ಕುಪಿತನಾಗಿ ನೂರು ಯೋಜನಗಳಷ್ಟು ವಿಸ್ತಾರವಾಗಿರುವ ವಸಂತಮಾಲತೀ ಎಂಬ ಆ ಗಂಧರ್ವಮಹಾನಗರಿಯನ್ನು ತನ್ನ ಹಲಾಗ್ರದಿಂದ (ನೇಗಿಲ ತುದಿಯಿಂದ) ಛಿದ್ರ ಛಿದ್ರವಾಗಿ ಸೀಳಿದುದಲ್ಲದೆ ಅದನ್ನು ಕಾಮದುಘವೆಂಬ ನಗರದೊಳಕ್ಕೆ ಸೆಳಯತೊಡಗಿದನು,

ಅಥಾಹ ವಾವ ಪತಿತೈರ್ಗೃಹೈರ್ಹಾಹಾಕಾರೇ ಜಾತೇ ತಿರ್ಯಕ್ಪ್ರೋತಮಿವಾಘೂರ್ಣಾಂ ಸಮುಸ್ತಾಂ ನಗರೀಂ ವೀಕ್ಷ್ಯ ಗಂಧರ್ವೇಶಃ ಪತಂಗಃ ಕೃತಾಂಜಲಿರ್ಧರ್ಷಿತೋ ವಿಶ್ವಕರ್ಮಕೃತಾನಾಂ ವಿಮಾನಾನಾಂ ದ್ವಿಲಕ್ಷಂ ಗಜಾನಾಂ ಚತುರ್ಲಕ್ಷಂ ಚಾಶ್ವಶತಾರ್ಬುದಂ ಚ ದಿವ್ಯಾನಾಂ ರತ್ನಾನಾಂ ಭಾರಂ ದಶಶತಾರ್ಬುದಂ ಚ ಬಲಿಂ ನೀತ್ವಾ ಬಲಶಾಲಿನೇ ಬಲಾಯ ದತ್ವಾ ಪ್ರದಕ್ಷಿಣೀಕೃತ್ಯ ಪ್ರಣನಾಮ ॥ ೯ ॥

ಅಥ ತಥಾ ಸಾಂಬಮೋಕ್ಷಾರ್ಥಂ ಬಲಭದ್ರ ಇಹಾಗತೋ ಭವತಾಂ ಪಶ್ಯತಾಂ ಪುರಮಿದಂ ಹಲಾಗ್ರೇಣ ಸಂವಿದಾರ್ಯ ಶ್ರೀಗಂಗಾಂ ಸಾಕ್ಷಾತ್ಸಂಕರ್ಷಣೋ ವಿಚಕರ್ಷ ತಥೈವ ನಾಗಕನ್ಯಾಭಿರ್ಗೋಪೀಭಿರ್ನಿರ್ಮಿತೇ ರಾಸಮಂಡಲೇ ಕಾಲಿಂದೀಂ ಹಲಾಗ್ರೇಣ ವಿಚಕರ್ಷ ॥ ೧೦ ॥

---

೯. ಆ ಸೆಳೆತದಿಂದ ಆ ನಗರದಲ್ಲಿದ್ದ ಸೌಧಗಳೆಲ್ಲವೂ ಬುಡಸಮೇತವಾಗಿ ಉರುಳಿದುವು. ಎಲ್ಲೆಲ್ಲೂ ಹಾಹಾಕಾರವುಂಟಾಯಿತು. ಈ ರೀತಿ ಇದ್ದಕ್ಕಿದ್ದಂತೆ ತನ್ನ ನಗರಿಯು ಹೊಳೆಯಲ್ಲಿ ಹಾಯುತ್ತಿರುವ ಹರಿಗೋಲು ಅಲ್ಲಿಯ ಸುಳಿಗೆ ಸಿಕ್ಕಿ ಗರಗರನೆ ತಿರುಗುವಂತೆ ತಿರುಗತೊಡಗಿದುದನ್ನು ನೋಡಿ ಗಂಧರ್ವರಾಜನಾದ ಪತಂಗನು ತನ್ನ ಕಡೆಯ ಗಂಧರ್ವರೆಲ್ಲರೊಡನೆ ಬದ್ಧಾಂಜಲಿಯಾಗಿ ಬಂದು ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಎರಡು ಲಕ್ಷ ವಿಮಾನಗಳನ್ನೂ, ನಾಲ್ಕು ಲಕ್ಷ ಆನೆಗಳನ್ನೂ, ಒಂದುನೂರು ಅರ್ಬುದ ಕುದುರೆಗಳನ್ನೂ ಒಂದುಸಾವಿರ ಅರ್ಬುದ ಗಳಷ್ಟು ಸಂಖ್ಯೆಯ ದಿವ್ಯವಾದ ರತ್ನಗಳಿಂದ ತುಂಬಿದ ಭಾರ (ಹೊರೆ)ಗಳನ್ನೂ ಕಾಣಿಕೆಯನ್ನಾಗಿ ಆ ಬಲಶಾಲಿಯಾದ ಬಲಭದ್ರನಿಗೆ ಅರ್ಪಿಸಿ ಪ್ರದಕ್ಷಿಣೆ ಬಂದು ನಮಸ್ಕಾರಮಾಡಿದನು.

೧೦. ಇದಾದ ಬಳಿಕ ಆ ಬಲಭದ್ರನು ನೀವು ಸೆರೆಹಾಕಿದ್ದ ಸಾಂಬನನ್ನು ಬಿಡಿಸಲು ಇಲ್ಲಿಗೆ ಬಂದು ನೀವೆಲ್ಲರೂ ನೋಡುತ್ತಿದ್ದಂತೆಯೇ ನಿಮ್ಮ ನಗರಿಯಾದ ಈ ಹಸ್ತಿನಾವತಿಯನ್ನು ತನ್ನ ಹಲಾಗ್ರದಿಂದ ಸೀಳು ಸೀಳು ಮಾಡಿ ಗಂಗಾನದಿಗೆ ಎಸೆದುಬಿಟ್ಟನು. ಇದೇ ರೀತಿ ಗೋಪೀರೂಪದಿಂದ ಅವತರಿಸಿದ್ದ ನಾಗಕನ್ಯೆಯ ರೊಂದಿಗೆ ರಾಸಮಂಡಲದಲ್ಲಿ ವಿಹರಿಸುತ್ತಾ ತನ್ನ ಮಾತಿನಂತೆ ಬಳಿಗೆ ಬರದಿದ್ದ ಯಮುನಾನದಿಯನ್ನೂ ನೇಗಿಲ ತುದಿಯಿಂದ ಸೀಳು ಸೀಳುಮಾಡಿ ಸೆಳೆದುಬಿಟ್ಟನು.

ಅಥೈಕದಾ ದ್ವಿವಿದೋ ನಾಮ ವಾನರಃ ಸುಗ್ರೀವಸಚಿವೋ ಭೌಮಸಖೋ ನಾರದೇನ ಪ್ರೇರಿತೋ ಹರಿಂ ಯೋದ್ಧುಕಾಮೋಽವತರ ದ್ರೈವತಕಾಚಲಮೇತ್ಯ ಬಲೇಽ ಘಟಿಕಾಚತುಷ್ಟಯಂ ಯುಯುಧೇ ದ್ರುಮದಂಡಶಿಲಾಮುಷ್ಟಿಭಿರ್ವಿನಿಷ್ಫಂತಂ ತಂ ಬಲಭದ್ರೋ ಮುಸಲೇನ ಮೂರ್ಧ್ನಿ ನಿರ್ಜಘಾನ ಪುನರ್ನ ಮೃತಂ ಮುಷ್ಟಿನಾ ಘಾತಿಯಿತ್ವಾ ಪಲಾಯಂತಂ ಭುಜದಂಡಭ್ಯಾಂ ಗೃಹೀತ್ವಾ ರೈವತಕಾಚಲಪೃಷ್ಠೇ ಪಾತಯಿತ್ವಾಚ್ಯುತಾಗ್ರಜೋ ದೃಢೇನ ಮುಷ್ಟಿನಾ ಹೃದಿ ತಂ ತತಾಡ। ತತ್ಪತನೇನ ಸಟಂಕಃ ಶೈಲೇಂದ್ರಃ ಕಮಂಡಲುರಿವ ಚಕಂಪೇ　　॥ ೧೧ ॥

ಅಥ ಹ ವಾವ ರಾಜನ್ನದ್ಯ ಭವತಾಂ ಪಾಂಡವೈಃ ಸಹ ಯುದ್ಧೋದ್ಯಮಂ ಶ್ರುತ್ವಾ ತೀರ್ಥಾಭಿಷೇಕವ್ಯಾಜೇನ ಬ್ರಾಹ್ಮಣೈರ್ನಾಗರೈಃ ಸಹಿತಃ

---

೧೧. ಹೀಗೆಯೇ ಇರುತ್ತಿರಲು ಒಮ್ಮೆ ಸುಗ್ರೀವನ ಮಂತ್ರಿಯಾದ ದ್ವಿವಿದನೆಂಬ ವಾನರನು ನಾರದನ ಮಾತಿನಂತೆ ಶ್ರೀ ಕೃಷ್ಣನೊಡನೆ ಹೋರಾಡಳೆಲಸಿ ರೈವತಕ ಪರ್ವತಕ್ಕೆ ಬಂದನು. ಆ ದ್ವಿವಿದನಿಗೆ ನರಕಾಸುರನ ಸಖ್ಯವೂ ಇತ್ತು. ಆ ವಾನರನು ನಾಲ್ಕು ಘಳಿಗೆಗಳ ಕಾಲ ಮರಗಳಿಂದಲೂ, ಬಂಡೆಗಳಿಂದಲೂ, ಮುಷ್ಟಿಗಳಿಂದಲೂ ಪ್ರಹರಿಸುತ್ತಾ ಬಲರಾಮನೊಡನೆ ಹೊಡೆದಾಡತೊಡಗಿದನು. ಆಗ ಬಲಭದ್ರನು ತನ್ನ ಒನಕೆಯಿಂದ ಆ ದ್ವಿವಿದನ ತಲೆಯ ಮೇಲೆ ಬಲವಾಗಿ ಪ್ರಹರಿಸಿದನು. ಆದರೂ ಆ ವಾನರನು ಸಾಯಲಿಲ್ಲ. ಆಗ ಬಲರಾಮನು ತನ್ನ ಮುಷ್ಟಿಯಿಂದ ಜೋರಾಗಿ ಪ್ರಹರಿಸಿ ಯುದ್ಧರಂಗದಿಂದ ಪಲಾಯನಮಾಡತೊಡಗಿದ ಆ ವಾನರನನ್ನ ತನ್ನೆರಡು ತೋಳುಗಳಿಂದಲೂ ಗಟ್ಟಿಯಾಗಿ ಹಿಡಿದುಕೊಂಡು ಆ ರೈವತಕ ಪರ್ವತದ ಬಂಡೆಯ ಮೇಲೆ ಬಲವಾಗಿ ಕೆಡಹಿ ಬಿಟ್ಟುದಲ್ಲದೆ ತನ್ನ ಮುಷ್ಟಿಯಿಂದ ಅವನ ಎದೆಯ ಮೇಲೆ ಅಪ್ಪಳಿಸಿ ಹೊಡೆದನು. ಆ ವಾನರನು ಕೆಳಗೆ ಬಿದ್ದ ಏಟಿಗೆ ಆ ಭಾರಿ ಪರ್ವತವೂ ಸಹ ಸಾಮಾನ್ಯವಾದ ಮಡಕೆಯೊಂದರಂತೆ ಅದುರಿಹೋಯಿತು.

೧೨. ಇದಾದನಂತರ ಈಗ ನಿಮಗೂ ಪಾಂಡವರಿಗೂ ಯುದ್ಧವು ನಡೆಯುವ ಸಿದ್ಧತೆಯನ್ನು ಅರಿತು, ತೀರ್ಥಯಾತ್ರೆಯ ನೆಪದಿಂದ ದ್ವಾರಕಾನಿವಾಸಿಗಳಾದ ಬ್ರಾಹ್ಮಣರೊಂದಿಗೂ ಇತರ ಜನರೊಂದಿಗೂ ಹೊರಟು, ದ್ವಾರಕಾನಗರಿಯನ್ನು ಪ್ರದಕ್ಷಿಣೆಯಾಗಿ ಬಂದು ಬಳಿಕ ಸಿದ್ಧಾಶ್ರಮವನ್ನು ಮತ್ತು ಪ್ರಭಾಸ ತೀರ್ಥಗಳಲ್ಲಿ ಸ್ನಾನಮಾಡಿ, ಅಲ್ಲಿಂದ ಪಶ್ಚಿಮದಿಕ್ಕಿಗೆ ಸರಸ್ವತೀ ನದಿಯ ಅಂಚಿ ನಲ್ಲಿಯೇ ಅದರ ಉದ್ಗಮಸ್ಥಾನದ ಕಡೆಗೆ ಬರುತ್ತಾ, ಸೈಂಧವಾರಣ್ಯ, ಜಂಬೂದ್ವೀಪ, ಮಾರ್ಗ,

ಪುರಾದ್ವಿನಿರ್ಗತೋ ದ್ವಾರಕಾಂ ಪ್ರದಕ್ಷಿಣೀಕೃತ್ಯ ಸಿದ್ಧಾಶ್ರಮಪ್ರಭಾಸಯೋಃ ಸ್ನಾತ್ವಾ ಪಶ್ಚಿಮಾಯಾಂ ದಿಶಿ ಸರಸ್ವತೀಪ್ರತಿಸ್ರೋತಸೈಂಧವಾರಣ್ಯಜಂಬೂಮಾರ್ಗೋತ್ಪಲಾವತೀಬುರ್ದಹೇಮವಂತಸಿಂಧೂನುಪಸ್ಪೃಶ್ಯ ಪೃಥಕ್ಬಿಂದುಸರಸ್ತ್ರಿತಕೂಪಸುದರ್ಶನಾತ್ರಿತ್ರೌಶನಸಾಗ್ನೇಯವಾಯುವಸೌದಾಸಗುಹತೀರ್ಥಶ್ರಾದ್ಧದೇವಾದೀನಿ ತೀರ್ಥಾನಿ ಸ್ನಾತ್ವೋತ್ತರಸ್ಯಾಂ ದಿಶಿ ಕೈಲಾಸಕರವೀರಮಹಾಯೋಗಗಣೇಶ-ಕೌಬೇರಪ್ರಾಗ್ಜ್ಯೋತಿಷರಂಗವಲ್ಲೀಸೀತಾರಾಮಕ್ಷೇತ್ರಚೈತ್ರದೇಶವಸಂತತಿಲಕಾದಶಾರ್ಣಭದ್ರಾಕೂರ್ಮತೀರ್ಥಪುಷ್ಪಮಾಲಾಚಿತ್ರವನಚಂದ್ರ-ಕಾಂತಾನೈಃಶ್ರೇಯಸಮನುಪರ್ವತಚಕ್ಷುಃಕಾಮಶಾಲಿನೀಕಾಮವನವೇದಕ್ಷೇತ್ರಸೀತಾಪೃಥುತೀರ್ಥತಪೋಭೂಮಿಲೀಲಾವತೀವೇದನಗರಗಾಂಧರ್ವಶಕ್ರಭೀಮರಥೀಶ್ರೀಜಾಹ್ನವೀಕಾಲಿಂದೀಹರಿದ್ವಾರಕುರುಕ್ಷೇತ್ರಮಥುರಾಪುಷ್ಕರೇಷುಸ್ನಾತ್ವಾ ಪುನಸ್ತಸ್ಮಾಚ್ಛಾಂಭಲಂ ಸೌಕರಂ ಪ್ರಾಪ್ಯ ಚಾನ್ಯಾನಿ ಕುರ್ವನ್ ತೀರ್ಥಾನಿ ಸಾಕ್ಷಾತ್ಸಂಕರ್ಷಣೋ ನೈಮಿಷಾರಣ್ಯಂ ಜಗಾಮ ॥ ೧೨ ॥

ಉತ್ಪಲಾವತಿ, ಅರ್ಬುದಪರ್ವತ, ಹೇಮವಂತ, ಸಿಂಧು ಮುಂತಾದ ಕ್ಷೇತ್ರಗಳಲ್ಲಿ ಸ್ನಾನವನ್ನು ಮಾಡಿ, ಅಲ್ಲಿಂದ ಬಿಂದುಸರಸ್ಸು, ತ್ರಿತವೆಂಬ ಕೂಪ, ಸುದರ್ಶನ, ಅತ್ರಿ, ಶುಕ್ರ, ವಾಯು, ಅಗ್ನಿ, ಸೌದಾಸ, ಗುಹ ಎಂಬುವರ ಹೆಸರಿನಿಂದ ಪ್ರಸಿದ್ಧವಾದ ತೀರ್ಥಗಳಲ್ಲಿಯೂ, ಯಮತೀರ್ಥ ಮೊದಲಾದ ತೀರ್ಥಗಳಲ್ಲಿಯೂ ಸ್ನಾನಾದಿಗಳನ್ನು ಬೇರೆ ಬೇರೆಯಾಗಿ ಆಚರಿಸಿ, ಅಲ್ಲಿಂದ ಉತ್ತರಕ್ಕೆ ಹೊರಟು ಕೈಲಾಸ, ಕರವೀರ, ಮಹಾಯೋಗ, ಗಣೇಶ, ಕುಬೇರ, ಪ್ರಾಗ್ಜ್ಯೋತಿಷ, ರಂಗವಲ್ಲೀ ಎಂಬ ಕ್ಷೇತ್ರಗಳನ್ನೂ, ಸೀತಾರಾಮ ಕ್ಷೇತ್ರವನ್ನೂ, ಚೈತ್ರದೇಶ, ವಸಂತತಿಲಕಾ. ದಶಾರ್ಣಾ, ಭದ್ರಾ, ಕೂರ್ಮತೀರ್ಥ, ಪುಷ್ಪಮಾಲಾ, ಚಿತ್ರವನ, ಚಂದ್ರಕಾಂತಾ, ನೈಶ್ರೇಯಸ, ಮನುಪರ್ವತ, ಚಕ್ಷುಸ್ಸು, ಕಾಮಶಾಲಿನೀ, ಕಾಮವನ, ವೇದಕ್ಷೇತ್ರ, ಸೀತಾತೀರ್ಥ, ಪೃಥುತೀರ್ಥ, ತಪೋಭೂಮಿ, ಲೀಲಾವತೀ, ವೇದನಗರ, ಗಾಂಧರ್ವ, ಶಕ್ರ, ಭೀಮರಥೀ, ಶ್ರೀಗಂಗಾನದಿ, ಯಮುನಾ, ಹರಿದ್ವಾರ, ಕುರುಕ್ಷೇತ್ರ, ಮಥುರಾ, ಪುಷ್ಕರ ಮುಂತಾದ ತೀರ್ಥಗಳನ್ನೂ, ಕ್ಷೇತ್ರಗಳನ್ನೂ, ವನಗಳನ್ನೂ, ನದಿಗಳನ್ನೂ ಸಂದರ್ಶಿಸಿ, ಅಲ್ಲೆಲ್ಲಾ ಸ್ನಾನಾದಿಗಳನ್ನು ನೆರವೇರಿಸಿ, ಅಲ್ಲಿಂದ ಶಾಂಭಲ, ಸೌಕರ ಮುಂತಾದ ಇತರ ತೀರ್ಥಕ್ಷೇತ್ರಗಳನ್ನೂ ಸಂದರ್ಶಿಸುತ್ತಾ ನೈಮಿಶಾರಣ್ಯಕ್ಕೆ ಬಂದನು.

ತಂ ಸಮಾಗತಂ ವೀಕ್ಷ್ಯ ಶೌನಕಾದಯೋ ಮುನಯಃ ಸಮುತ್ಥಾಯ ಪ್ರವವಂದಿರೇ ಚಾರ್ಚಯನ್ || ೧೩ ||

ತತ್ರ ವೇದವ್ಯಾಸಶಿಷ್ಯಂ ರೋಮಹರ್ಷಣಮಪ್ರತ್ಯುತ್ಥಾಯಿನಂ ವೀಕ್ಷ್ಯ ಕರಸ್ಥೇನ ಕುಶಾಗ್ರೇಣ ತಂ ಜಘಾನೇತಿ ತದಾ ಹಾಹೇತಿ ವಾದಿನೋ ಮುನೀನ್ವೀಕ್ಷ್ಯ ಲೋಕಪಾವನೋಽಪಿ ಲೋಕಸಂಗ್ರಹಾರ್ಥಂ ದ್ವಾದಶಮಾಸಾನ್ ತೀರ್ಥಸ್ನಾನೇ ವಿಶುದ್ಧಯೇ ಮನೋ ದಧೇ || ೧೪ ||

ತತ್ರೇಲ್ವಲಸುತೋ ಬಲ್ವಲೋ ನಾಮ ದೈತ್ಯ ಉಪಾವೃತ್ತೇ ಪರ್ವಣಿ ಪಾಂಸುವರ್ಷಣಪ್ರಚಂಡೇನ ವಾಯುನಾ ಪೂಯಶೋಣಿತವಿಣ್ಮೂತ್ರಸುರಾಮಾಂಸದುರ್ಗಂಧೇನ ಸಮಾಗತಃ ಖೇ ದೃಷ್ಟೋಽಭೂತ್ । ಅಥ

---

೧೩. ಆ ಬಲಭದ್ರನು ಬಂದುದನ್ನು ಕಂಡೊಡನೆಯೇ ಅಲ್ಲಿದ್ದ ಶೌನಕಾದಿ ಮಹರ್ಷಿಗಳು ಝುಗ್ಗನೆದ್ದು ಆತನಿಗೆ ನಮಸ್ಕರಿಸಿ ಸತ್ಕಾರವನ್ನು ಮಾಡಿದರು.

೧೪. ಆದರೆ ವೇದವ್ಯಾಸ ಮಹರ್ಷಿಯ ಶಿಷ್ಯನೂ, ಪೌರಾಣಿಕನೂ ಆದ ರೋಮಹರ್ಷಣನು ಆ ಬಲರಾಮನನ್ನು ನೋಡಿಯೂ ಎದ್ದು ನಿಂತು ಗೌರವಿಸಲಿಲ್ಲ. ಅದನ್ನು ಕಂಡು ಕುಪಿತನಾದ ಬಲದೇವನು ತನ್ನ ಕೈಲಿದ್ದ ದರ್ಭೆಯ ಕೊನೆಯಿಂದ ಅವನನ್ನು ಪ್ರಹರಿಸಿದನು. ಇದನ್ನು ಕಂಡು ಹಾಹಾಕಾರ ಮಾಡತೊಡಗಿದ ಶೌನಕಾದಿ ಮುನಿಗಳನ್ನು ಕಂಡು, ಆ ಬಲಭದ್ರನು ತಾನು ಲೋಕವನ್ನೇ ಪಾವನಗೊಳಿಸುವನಾಗಿದ್ದರೂ ಲೋಕದ ವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಹನ್ನೆರಡು ತಿಂಗಳುಗಳ ಕಾಲ ತೀರ್ಥಯಾತ್ರೆಯನ್ನು ಮಾಡಿ ಆ ಪಾಪವನ್ನು ಪರಿಹರಿಸಿಕೊಳ್ಳಬೇಕೆಂದು ನಿರ್ಧರಿಸಿದನು.

೧೫. ಓ ಯುವರಾಜ! ಆ ಶೌನಕಾದಿಗಳಿದ್ದಲ್ಲಿ ಇಲ್ವಲನ ಮಗನಾದ ಬಲ್ವಲನೆಂಬ ದೈತ್ಯನು ಪರ್ವಕಾಲವು ಬಂದಿತೆಂಬುದನ್ನು ಅರಿತು ಪ್ರಚಂಡವಾದ ಬಿರುಗಾಳಿಯನ್ನು ಸೃಷ್ಟಿಸಿ, ಧೂಳು ಮುಸುಕುವಂತೆ ಮಾಡಿ ಕೀವು ರಕ್ತಗಳನ್ನೂ, ಮಲ ಮೂತ್ರಗಳನ್ನೂ, ದುರ್ಗಂಧ ಪೂರಿತವಾದ ಮದ್ಯಮಾಂಸಗಳನ್ನೂ ಸುರಿಸುತ್ತಾ ಆಕಾಶದಲ್ಲಿ ಕಾಣಿಸಿಕೊಂಡನು. ಆ ಬಲ್ವಲನ ಸ್ವರೂಪವನ್ನು ಏನೆಂದು

ಲಲಜ್ಜಿಹ್ವಂ ವಜ್ರಾಂಗಂ ಭಿನ್ನಕಜ್ಜಲಾಂಜನಚಯಕೃಷ್ಣಂ ತಪ್ತತಾಮ್ರ-
ಶ್ಮಶ್ರುಭಯಂಕರಂ ಬ್ರಹ್ಮಶಾಂತಯೇ ಹಲಾಗ್ರೇಣ ಸಮಾಕೃಷ್ಯ
ಗಗನಾನ್ಮುಸಲೇನ ಮೂರ್ಧ್ನಿ ಬಲಭದ್ರಸ್ತಂ ತತಾಡ। ತತ್ತಾಡನೇನಾ-
ಕಾಶಾತ್ಸೋಽಪಿ ಕಮಂಡಲುರಿವ ವ್ಯಸುಃ ಪಪಾತ ॥ ೧೫ ॥

ಅಥ ಪ್ರಸನ್ನಾ ಮುನಯೋಽಪಿ ರಾಮಂ ಸಂಸ್ತುತ್ಯಾವಿತಥಾಶಿಷಃ
ಪ್ರಯುಜ್ಯ ವೃತ್ರಘ್ನಂ ವಿಬುಧಾ ಇವಾಭ್ಯಷಿಂಚನ್। ತೈರಭ್ಯನುಜ್ಞಾತಃ
ಸರಯೂಕೌಶಿಕೀಮಾನಸಸರೋವರಗಂಡಕೀಗೌತಮೀಷು ಸ್ನಾತ್ವಾ-
ಯೋಧ್ಯಾನಂದಿಗ್ರಾಮಬರ್ಹಿಷ್ಮತೀಬ್ರಹ್ಮಾವರ್ತಾದೀನ್ಯುಪಸ್ಪೃಶ್ಯ
ತೀರ್ಥರಾಜಂ ಪ್ರಯಾಗಂ ಜಗಾಮ। ತತ್ರಾಯುತಗಜದಾನಂ
ಚಕಾರ ॥ ೧೬ ॥

ಹೇಳಲಿ ? ವಜ್ರದಂತಹ ಮೈ. ಹೊರಳುತ್ತಿರುವ ನಾಲಿಗೆ! ಕಾಡಿಗೆಯ ರಾಶಿಯನ್ನೇ ಲೇಪಿಸಿದಂತೆ ತೋರುವ ಕಪ್ಪಾದ ಮೈ ಬಣ್ಣ! ಕಾಸಿದ ತಾಮ್ರದಂತೆ ಕೆಂಪಾದ ಮೀಸೆ! ಈ ರೀತಿಯಾಗಿ ನೋಡಿದರೇನೇ ಹೆದರಿಕೆಯಾಗುವಂತಿದ್ದ ಆ ದೈತ್ಯನನ್ನು ಕಂಡು ಆ ಶೌನಕಾದಿಗಳನ್ನು ಸಮಾಧಾನಗೊಳಿಸುವ ಸಲುವಾಗಿ ಅವನ ಮೇಲೆ ತನ್ನ ನೇಗಿಲನ್ನು ಬೀಸಿ ಕೆಳಗೆಳೆದುದಲ್ಲದೆ, ತನ್ನ ಮುಸಲಾಯುಧದಿಂದ ತಲೆಯ ಮೇಲೆ ಬಲವಾಗಿ ಪ್ರಹರಿಸಿದನು. ಆ ಪ್ರಹಾರದಿಂದ ಆ ದೈತ್ಯನು ಜೀವಿತವನ್ನು ತೊರೆದು, ಆಕಾಶದಿಂದ ಎಸೆಯಲ್ಪಟ್ಟ ಮಡಕೆಯಂತೆ ಕೆಳಗೆ ಬಿದ್ದನು.

೧೬. ಆ ರೀತಿ ದೈತ್ಯನು ಹತನಾದುದನ್ನು ಕಂಡು ಸುಪ್ರೀತರಾದ ಆ ಶೌನಕಾದಿ ಮುನಿಗಳು ಬಲರಾಮನನ್ನು ಬಹು ವಿಧವಾಗಿ ಕೊಂಡಾಡಿ, ಅಮೋಘವಾದ ಆಶೀರ್ವಾದಗಳನ್ನು ಮಾಡಿ, ದೇವತೆಗಳು ದೇವೇಂದ್ರನನ್ನು ಹೇಗೋ ಹಾಗೆ ಆತನನ್ನು ತೀರ್ಥಜಲದಿಂದ ಅಭಿಷೇಕಮಾಡಿದರು. ಅನಂತರ ಬಲಭದ್ರನು ಅವರನ್ನು ಬೀಳ್ಕೊಂಡು ಅಲ್ಲಿಂದ ಹೊರಟು ಸರಯೂ, ಕೌಶಿಕೀ, ಮಾನಸ ಸರೋವರ, ಗಂಡಕೀ, ಗೌತಮೀ ಮೊದಲಾದುವುಗಳಲ್ಲಿ ಸ್ನಾನಮಾಡಿ, ಅಯೋಧ್ಯಾ, ನಂದಿಗ್ರಾಮ, ಬರ್ಹಿಷ್ಮತಿ, ಬ್ರಹ್ಮಾವರ್ತ ಮೊದಲಾದ ಪುಣ್ಯಸ್ಥಳಗಳನ್ನು ಸಂದರ್ಶಿಸಿ, ಅಲ್ಲೆಲ್ಲಾ ಸ್ನಾನಾದಿಗಳನ್ನು ಮಾಡಿ, ಅಲ್ಲಿಂದ ತೀರ್ಥರಾಜನೆನಿಸಿದ ಪ್ರಯಾಗ ಕ್ಷೇತ್ರಕ್ಕೆ ಬಂದನು. ಅಲ್ಲಿ ಹತ್ತುಸಹಸ್ರ ಆನೆಗಳನ್ನು ದಾನಮಾಡಿದನು.

ತತಶ್ಚಿತ್ರಕೂಟವಿಂಧ್ಯಾಚಲಕಾಶೀವಿಪಾಶಾಶೋಣಮಿಥಿಲಾ ಗಯಾದಿಷುಸ್ನಾತ್ವಾ ಗಂಗಾಸಾಗರಸಂಗಮಂ ಜಗಾಮ। ತತ್ರ ಸುವರ್ಣಶೃಂಗಾಂಬರಸಂಯುಕ್ತಂ ಪೃಥಕ್ಸುವರ್ಣರತ್ನಭಾರಸಹಿತಂ ಗವಾಂ ಕೋಟಿಶತಂ ಬ್ರಾಹ್ಮಣೇಭ್ಯಃ ಪ್ರಾದಾತ್। ತತಃ ಕ್ರಮಶೋ ದಕ್ಷಿಣಸ್ಯಾಂ ದಿಶಿ ಮಹೇಂದ್ರಾದ್ರಿಸಪ್ತಗೋದಾವರೀವೇಣೀಪಂಪಾ ಭೀಮರಥೀಸ್ಕಂದಕ್ಷೇತ್ರಶ್ರೀಶೈಲವೆಂಕಟಕಾಂಚೀಕಾವೇರಿಶ್ರೀರಂಗರ್ಷಭಾದ್ರಿಸಾಮುದ್ರಸೇತುಕೃತಮಾಲಾತಾಮ್ರಪರ್ಣೀಮಲಯಾಚಲ ಕುಲಾಚಲದಕ್ಷಿಣಸಿಂಧುಫಲಗುಣಪಂಚಾಪ್ಸರೋಗೋಕರ್ಣಶೂರ್ಪಾರಕ ತಾಪೀಪಯೋಷ್ಣೀನಿರ್ವಿಂಧ್ಯಾದಂಡಕರೇವಾಮಾಹಿಷ್ಮತ್ಯವಂತಿಕಾದೀನಿ ತೀರ್ಥಾನಿ ಸಾಕ್ಷಾತ್ಸಂಕರ್ಷಣಃ ಕರಿಷ್ಯತಿ ಸ್ಮ ತತಸ್ತ್ವತ್ಸಹಾಯಾರ್ಥಂ ವಿಶಸನೇ ಚಾಗಮಿಷ್ಯತಿ ॥ ೧೭ ॥

---

೧೭. ಅಲ್ಲಿಂದ ಹೊರಟು ಚಿತ್ರಕೂಟ, ವಿಂಧ್ಯಾಚಲ, ಕಾಶಿ, ವಿಪಾಶಾ, ಶೋಣನದ, ಮಿಥಿಲಾ, ಗಯಾ ಮೊದಲಾದ ತೀರ್ಥಕ್ಷೇತ್ರಗಳಲ್ಲಿ ಸ್ನಾನಮಾಡಿ, ಅಲ್ಲಿಂದ ಮುಂದೆ ಗಂಗಾಸಾಗರ ಸಂಗಮಕ್ಕೆ ಬಂದು, ಅಲ್ಲಿ ಚಿನ್ನದ ಒಡವೆಗಳಿಂದಲೂ ಅಲಂಕೃತವಾದ ಒಂದುನೂರುಕೋಟಿ ಗೋವುಗಳನ್ನು ಒಂದೊಂದಕ್ಕೂ ಒಂದೊಂದು ಭಾರ ಚಿನ್ನ ಮತ್ತು ರತ್ನಗಳ ದಕ್ಷಿಣೆಯೊಡನೆ ಬ್ರಾಹ್ಮಣರಿಗೆ ದಾನಮಾಡಿ, ಅಲ್ಲಿಂದ ಕ್ರಮವಾಗಿ ದಕ್ಷಿಣಕ್ಕೆ ಬರುತ್ತಾ, ಮಹೇಂದ್ರಪರ್ವತ, ಸಪ್ತಗೋದಾವರಿ, ವೇಣೀ ನದಿ, ಪಂಪಾಸರೋವರ, ಭೀಮರಥೀನದಿ, ಸ್ಕಂದಕ್ಷೇತ್ರ, ಶ್ರೀಶೈಲ, ವೆಂಕಟಾಚಲ, ಕಾಂಚೀ, ಕಾವೇರಿ, ಶ್ರೀರಂಗ, ಋಷಭಾದ್ರಿ, ಸೇತು, ಕೃತಮಾಲಾ, ತಾಮ್ರಪರ್ಣಿ, ಮಲಯಾಚಲ, ಕುಲಾಚಲ, ದಕ್ಷಿಣಸಮುದ್ರ, ಫಲಗುಣಕ್ಷೇತ್ರ, ಪಂಚಾಪ್ಸರಸ್ಸು, ಗೋಕರ್ಣ, ಶೂರ್ಪಾರಕ, ತಾಪೀ, ಪಯೋಷ್ಣೀ, ನಿರ್ವಿಂಧ್ಯಾ, ದಂಡಕಾವನ, ನರ್ಮದಾ, ಮಾಹಿಷ್ಮತಿ, ಉಜ್ಜಯನೀ ಮೊದಲಾದ ತೀರ್ಥ, ಕ್ಷೇತ್ರ, ನದೀ, ನದ, ನಗರಾರಣ್ಯಗಳೆಂಬ ಪವಿತ್ರ ಸ್ಥಳಗಳನ್ನು ಸಂದರ್ಶಿಸಿ ಯಾತ್ರೆಯನ್ನು ಮಾಡುವನು. ಆದಾದ ಮೇಲೆ ನಿನ್ನ ಸಹಾಯಕ್ಕಾಗಿ ವಿಶಸನವೆಂಬಲ್ಲಿಗೆ ಬರಲಿರುವನು.

ಇದಂ ಬಲಭದ್ರಚರಿತ್ರಂ ಪವಿತ್ರಂ ಸರ್ವಪಾಪಾಭಿಹರಣಂ ತೀರ್ಥಯಾತ್ರಾವರ್ಣನಂ ನಿತರಾಂ ಮಯಾ ವರ್ಣಿತಂ ಸರ್ವಮಂಗಲಕರಣಂ ಕೌರವೇಂದ್ರ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ ಪ್ರಾಡ್ವಿಪಾಕ-ದುರ್ಯೋಧನಸಂವಾದೇ ದ್ವಾರಕಾಲೀಲಾವರ್ಣನಂ ನಾಮಾಷ್ಟಮೋಽಧ್ಯಾಯಃ

---

೧೮. ಈ ಬಲಭದ್ರ ಚರಿತ್ರವು ಪರಮಪಾವನವಾದುದು. ಇದರಿಂದ ಸಮಸ್ತವಾದ ಪಾಪಗಳೂ ಪರಿಹಾರವಾಗುವುವು. ಓ ಕೌರವೇಂದ್ರ ! ಮಂಗಲದಾಯಕವಾದ ತೀರ್ಥಯಾತ್ರಾ ವೃತ್ತಾಂತವನ್ನು ನಿನಗೆ ವಿಶದವಾಗಿ ತಿಳಿಸಿರುವೆನು. ಇದರ ಮೇಲೆ ಇನ್ನೇನು ಕೇಳಬೇಕೆಂದಿರುವೆ ? ತಿಳಿಸು " ಎಂದನು.

ಇಲ್ಲಿಗೆ ಗರ್ಗಸಂಹಿತೆಯ ಬಲಭದ್ರಖಂಡದಲ್ಲಿ ದ್ವಾರಕಾಲೀಲಾವರ್ಣನವೆಂಬ ಎಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ನವಮೋಽಧ್ಯಾಯಃ

॥ ದುರ್ಯೋಧನ ಉವಾಚ ॥

ಮುನಿಶಾರ್ದೂಲ ಭಗವನ್ ಭಗವಾನ್ಬಲಭದ್ರಕಃ ನಾಗಕನ್ಯಾಭಿ-ರ್ಗೋಪೀಭಿಃ ಕದಾ ಕಾಲಿಂದೀಕೂಲೇ ವಿಜಹಾರ ॥ ೧ ॥

॥ ಪ್ರಾಡ್ವಿಪಾಕ ಉವಾಚ ॥

ಏಕದಾ ದ್ವಾರಕಾನಗರಾದ್ಧಿ ತಾಲಾಂಕಂ ರಥಮಾಸ್ಥಾಯ ಸುರಾನ್ದಿದೃಕ್ಷುಃ ಪರಮುತ್ಕಂಠೋ ನಂದರಾಜಗೋಕುಲಗೋಪಾಲಗೋಪೀ-ಗಣಸಂಕುಲಃ ಸಂಕರ್ಷಣ ಆಗತಶ್ಚಿರೋತ್ಕಂಠಾಭ್ಯಾಂ ನಂದರಾಜ-

---

ಒಂಭತ್ತನೆಯ ಅಧ್ಯಾಯವು

೧. ಬಳಿಕ ಕುರುರಾಜನಾದ ದುರ್ಯೋಧನನು ಪ್ರಾಡ್ವಿಪಾಕಮಹರ್ಷಿಯನ್ನು ಕುರಿತು "ಹೇ ಭಗವನ್! ಭಗವತ್ಸ್ವರೂಪನಾದ ಆ ಬಲಭದ್ರನು ಗೋಪಿಯರ ರೂಪದಿಂದ ಅವತರಿಸಿದ್ದ ನಾಗಕನ್ಯೆಯರೊಡನೆ ಯಾವಾಗ ವಿಹರಿಸಿದನು ? ಈ ಅಂಶವನ್ನು ತಿಳಿಸಬೇಕು" ಎನ್ನಲು ಆ ಮುನಿಯು ಇಂತೆಂದನು :—

೨. ಒಂದು ಸಲ ಆ ಬಲಭದ್ರನು ತಾಲಧ್ವಜದಿಂದ ಪರಿಶೋಭಿಸುತ್ತಿರುವ ರಥವನ್ನೇರಿ ಕುಳಿತು ತನ್ನ ಬಂಧುಗಳನ್ನು ನೋಡಿಬರಬೇಕೆಂಬ ಆಸೆಯಿಂದ ದ್ವಾರಕಾನಗರಿಯನ್ನು ಬಿಟ್ಟು ಅಲ್ಲಿಂದ ಹೊರಟು ನಂದಗೋಪನು ವಾಸಿಸುತ್ತಿದ್ದ ಗೋಕುಲಕ್ಕೆ ಅತಿಶಯವಾದ ಕುತೂಹಲವನ್ನು ತಾಳಿ ಬಂದನು. ಆತನು ಬರುತ್ತಲೇ ಗೋವುಗಳೂ, ಗೋಪಾಲಕರೂ, ಗೋಪಾಂಗನೆಯರೂ ಗುಂಪು ಗುಂಪಾಗಿ ಬಂದು

ಯಶೋದಾಭ್ಯಾಂ ಪರಿಷಿಕ್ತೋ ಗೋಪೀಗೋಪಾಲಗೋಭಿರ್ವಿಲಿತ್ವಾ
ತತ್ರ ದ್ವೌ ಮಾಸೌ ವಾಸಂತಿಕೌ ಚಾವಾತ್ಸೀತ್ ॥ ೨ ॥

ಅಥ ಚ ಯಾ ನಾಗಕನ್ಯಾಃ ಪೂರ್ವೋಕ್ತಾಸ್ತಾ ಗೋಪಕನ್ಯಾ ಭೂತ್ವಾ ಬಲಭದ್ರಪ್ರಾಪ್ತ್ಯರ್ಥಂ ಗರ್ಗಾಚಾರ್ಯಾದ್ ಬಲಭದ್ರಪಂಚಾಗಂ ಗೃಹೀತ್ವಾ ತೇನೈವ ಸಿದ್ಧಾ ಬಭೂವುಃ। ತಾಭಿರ್ಬಲದೇವ ಏಕದಾ ಪ್ರಸನ್ನಃ ಕಾಲಿಂದೀಕೂಲೇ ರಾಸಮಂಡಲಂ ಸಮಾರೇಭೇ। ತದೈವ ಚೈತ್ರಪೂರ್ಣಿಮಾಯಾಂ ಪೂರ್ಣಚಂದ್ರೋಽರುಣವರ್ಣಃ ಸಂಪೂರ್ಣಂ ರಂಜಯನ್ವಿರೇಜೇ ॥ ೩ ॥

ಆತನನ್ನು ಬಳಸಿಕೊಂಡು ನಿಂತರು. ಬಹು ದಿವಸಗಳಿಂದಲೂ ಕಾಣದೆ ಹಂಬಲಿಸುತ್ತಿದ್ದ ಯಶೋದೆಯೂ, ನಂದಗೋಪನೂ ಆ ಬಲಭದ್ರನನ್ನು ಪ್ರೀತಿಯಿಂದ ಆಲಿಂಗಿಸಿದರು. ಅನಂತರ ಬಲಭದ್ರನು ತನ್ನ ಹಿಂದಿನ ಗೆಳೆಯರಾದ ಗೋಪಾಲಕರೊಡನೆಯೂ, ಗೋಪಿಯರೊಡನೆಯೂ, ಗೋವುಗಳೊಡನೆಯೂ ಕಲೆತು, ಆ ಗೋಕುಲದಲ್ಲಿಯೇ ವಸಂತಋತುವಿನ ಎರಡು ತಿಂಗಳುಕಾಲ ಪೂರ್ತಿ ವಾಸವಾಗಿದ್ದನು.

೩. ಕುರುರಾಜ! ಹಿಂದೆ ನಿನಗೆ ನಾಗಕನ್ಯೆಯರ ವಿಷಯವನ್ನು ತಿಳಿಸಿದ್ದೆನಷ್ಟೆ! ಆ ನಾಗಕನ್ಯೆಯರೇ ಗೋಪಾಂಗನೆಯರ ರೂಪದಿಂದ ಅವತರಿಸಿದ್ದರು. ಆ ಗೋಪಸ್ತ್ರೀಯರು ಬಲಭದ್ರನನ್ನು ಪಡೆಯಲೆಳಸಿ ಗರ್ಗಾಚಾರ್ಯನಿಂದ ಉಪದೇಶಿಸಲ್ಪಟ್ಟ ಬಲಭದ್ರ ಪಂಚಾಂಗವನ್ನು (ಪದ್ಧತಿ–ಪಟಲ–ಸ್ತೋತ್ರ–ಕವಚ–ಸಹಸ್ರನಾಮಾವಳಿ) ಸ್ವೀಕರಿಸಿ ಅದರ ಅನುಷ್ಠಾನದಿಂದಲೇ ಸಿದ್ಧಿಯನ್ನು ಪಡೆದರು. ಈ ಪಂಚಾಂಗ ಕ್ರಮದಿಂದ ಸಂತುಷ್ಟನಾದ ಬಲಭದ್ರನು ಒಂದುಸಲ ತನ್ನನ್ನೇ ನಂಬಿದ್ದ ಆ ಗೋಪಾಂಗನೆಯರೊಡನೆ ಯಮುನಾ ನದೀತೀರದಲ್ಲಿ ರಾಸಲೀಲೆಗೆ ಉಪಕ್ರಮಿಸಿದನು. ಆದಿನ ಚೈತ್ರ ಶುದ್ಧ ಪೂರ್ಣಿಮೆ. ಪೂರ್ಣ ಚಂದ್ರನು ಉದಯ ಸಮಯದಲ್ಲಿ ಕೆಂಪಾದ ಕಾಂತಿಯಿಂದ ಕೂಡಿದ್ದರೂ ಕ್ರಮಕ್ರಮವಾಗಿ ಮೇಲೇರುತ್ತಾ ತನ್ನ ಶುಭ್ರವಾದ ಬೆಳದಿಂಗಳಿನಿಂದ ಯಮುನಾ ತೀರದಲ್ಲಿದ್ದ ವನಪ್ರದೇಶವನ್ನೆಲ್ಲಾ ಬೆಳ್ಳನೆ ಬೆಳಗುತ್ತಾ ಕಂಗೊಳಿಸಿದನು.

ಶೀತಲಾ ಮಂದಯಾನಾಃ ಕಮಲಮಕರಂದರೇಣುವೃಂದಸಂವೃತಾಃ ಸರ್ವತೋ ವಾಯವಃ ಪರಿವವುಃ ಕಲಿಂದಗಿರಿನಂದಿನೀ ಚಲಲಹರೀ-ಭಿರಾನಂದದಾಯಿನೀ ಪುಲಿನಂ ವಿಮಲಂ ಹ್ಯಾಚಿತಂ ಚಕಾರ। ತಥಾ ಚ ಕುಂಜಪ್ರಾಂಗಣನಿಕುಂಜಪುಂಜೈಃ ಸ್ಫುರಲ್ಲಲಿತಪಲ್ಲವ ಪುಷ್ಪಪರಾಗೈ-ರ್ಮಯೂರಕೋಕಿಲಪುಂಸ್ಕೋಕಿಲಕೂಜಿತೈರ್ಮಧುಮತ್ತಮಧುಪ-ಮಧುರಧ್ವನಿಭಿರ್ವ್ರಜಭೂಮಿರ್ವಿಭ್ರಾಜಮಾನಾ ಬಭೂವ ॥ ೪ ॥

ತತ್ರ ಕ್ವಣಝಂಟಿಕನೂಪುರಃ ಸ್ಫುರನ್ಮಣಿಮಯಕಟಕಕಟಿಸೂತ್ರ-ಕೇಯೂರ ಹಾರಕಿರೀಟಕುಂಡಲಯೋರುಪರಿ ಕಮಲಪತ್ರೈರ್ನೀಲಾಂ-

---

೪. ಆ ಸಮಯದಲ್ಲಿ ಕಮಲವನದ ಮೇಲೆ ಹಾಯ್ದು ಅವುಗಳ ಮಕರದಿಂದ ದೊಂದಿಗೂ ಧೂಳಿಯೊಂದಿಗೂ ಕಲೆತು ಬರುತ್ತಿರುವ ತಂಪಾದ ಸುಳಿಗಾಳಿಯು ಎಲ್ಲೆಡೆಯಲ್ಲಿಯೂ ಮೆಲ್ಲಮೆಲ್ಲನೆ ಸುಳಿಯತೊಡಗಿತು. ಆ ಸುಳಿಗಾಳಿಯ ಅಲೆತಕ್ಕೆ ಸಿಕ್ಕಿ ಮೆಲುಮೆಲನೆ ಅಲುಗುತ್ತಿರುವಂತಹ ತನ್ನ ಕಿರುದೆರೆಗಳ ಸಾಲಿನಿಂದ ಯಮುನಾ ನದಿಯು ಎಂತಹವರಿಗೂ ಅತಿಶಯವಾದ ಆಹ್ಲಾದವುಂಟಾಗುವಂತೆ ತನ್ನ ತೀರ ಪ್ರದೇಶದಲ್ಲಿ ಶುಭ್ರವಾಗಿ ಹೊಳೆಯುತ್ತಿದ್ದ ಮರಳಿನ ರಾಶಿಯನ್ನು ಸ್ಪರ್ಶಿಸುತ್ತಾ, ಮೆಲುಮೆಲನೆ ಹರಿಯುತ್ತಿತ್ತು. ಆ ಯಮುನೆಯ ಕರೆಯಲ್ಲಿ ಬೆಳೆದಿದ್ದ ಲತಾಗೃಹ ಗಳೂ, ಅವುಗಳ ಮುಂದಿನ ಹಸಿರು ಬಯಲುಗಳೂ, ಆ ಲತಾಗೃಹಗಳ ಮೇಲೆ ಥಳ ಥಳಿಸುತ್ತಿರುವ ಎಳೆಯ ಚಿಗುರುಗಳೂ, ಪರಾಗದಿಂದ ನಿಬಿಡವಾಗಿರುವಂತಹ ಪುಷ್ಪ ಗಳೂ, ಕೋಗಿಲೆ, ನವಿಲು ಮೊದಲಾದ ಹಕ್ಕಿಗಳ ಇಂಪಾದ ದನಿಯೂ, ಹೂಗಳಲ್ಲಿ ತುಂಬಿರುವ ಬಂಡನ್ನು (ಮಕರಂದ) ಹೀರಿ ಹೀರಿ ಮತ್ತೇರಿರುವಂತಹ ದುಂಬಿಗಳ ಇಂಚರವೂ ವ್ರಜಭೂಮಿಯ (ಗೋಕುಲದ) ಸೌಂದರ್ಯವನ್ನು ಹೆಚ್ಚಿಸುತ್ತಿದ್ದುವು.

೫. ಆ ಸಮಯದಲ್ಲಿ ಗೋಪೇಶ್ವರನಾದ ಆ ಬಲಭದ್ರನು, ಯಕ್ಷರಾಜನಾದ ಕುಬೇರನು ಯಕ್ಷಸ್ತ್ರೀಯರೊಡನೆ ವಿಹರಿಸುವಂತೆ ತನ್ನಲ್ಲಿ ಅನುರಾಗಶಾಲಿನಿಯರಾದ ಗೋಪಾಂಗನೆಯರೊಡನೆ ಆ ರಾಸಮಂಡಲದಲ್ಲಿ ವಿಹರಿಸಿದನು. ಆಗಿನ ಆತನ

ಬರೋ ವಿಮಲಕಮಲಪತ್ರಾಕ್ಷೋ ಯಕ್ಷೀಭಿರ್ಯಕ್ಷರಾಡಿವ ಗೋಪೀ-ಭಿರ್ಗೋಪರಾಡ್ರಾಸಮಂಡಲೇ ರೇಜೇ ॥ ೫ ॥

ಅಥ ವರುಣಪ್ರೇಷಿತಾ ವಾರುಣೀದೇವೀ ಪುಷ್ಪಭಾರಗಂಧಲೋಭಿ-ಮಿಲಿಂದನಾದಿತವೃಕ್ಷಕೋಟರೇಭ್ಯಃ ಪತಂತೀ ಸರ್ವತೋ ವನಂ ಸುರಭೀ ಚಕಾರ। ತತ್ಪಾನಮದವಿಹ್ವಲಃ ಕಮಲವಿಶಾಲತಾಮ್ರಾಕ್ಷೋ ಮಕರ-ಧ್ವಜಾವೇಶಚಲದ್ಧುರ್ಯಾಂಗಭಂಗೋ ವಿಹಾರಖೇದಪ್ರಸ್ವೇದಾಂಬು-ಕಣೈರ್ಗಲದ್ಗಂಡಸ್ಥಲಪತ್ರಭಂಗೋ ಗಜೇಂದ್ರಗತಿರ್ಗಜೇಂದ್ರಶುಂಡಾ-ದಂಡಸಮದೋರ್ದಂಡಮಂಡಿತೋ ಗಜೀಭಿರ್ಗಜರಾಜೇಂದ್ರ ಇವೋ

ವೇಷವನ್ನು ಏನೆಂದು ವರ್ಣಿಸಲಿ ? ಜಣಜಣರೆನ್ನುತ್ತಿರುವಂತಹ ಕಿರುಗೆಜ್ಜೆಗಳಿಂದ ಅಂದವಾಗಿರುವಂತಹ ಕಾಲಂದುಗೆ! ಥಳಥಳಿಸುತ್ತಿರುವಂತಹ ರತ್ನಖಚಿತವಾದ ಕಡಗ! ಉಡಿದಾರ! ತೋಳುಬಳೆ! ಕತ್ತಿನಸರ! ಕಿರೀಟ! ಕಿವಿಯೋಲೆಗಳು! ಮುಡಿಯಮೇಲೆ ಅಂದವಾಗಿ ಸಿಂಗರಿಸಿಕೊಂಡಿದ್ದ ಕಮಲದಲಗಳು! ಉಟ್ಟ ನೀಲ ವರ್ಣದ ಪಟ್ಟೆಮಡಿ! ಶುಭ್ರವಾದ ಕಮಲದ ಎಸಳಿನಂತೆ ಅಗಲವಾದ ಕಣ್ಣುಗಳು! ಇಂತಹ ಮಧುರವಾದ ವೇಷ ಭೂಷಣಗಳಿಂದ ಆ ಬಲಭದ್ರನು ರಾಸಮಂಡಲದಲ್ಲಿ ಗೋಪಿಯರೊಡನೆ ಕಂಗೊಳಿಸಿದನು.

೬. ಆ ಸಮಯಕ್ಕೆ ಸರಿಯಾಗಿ ಬಲಭದ್ರನಿಗೆ ಸಂತೋಷವುಂಟಾಗಲೆಂದು ವರುಣನಿಂದ ಕಳುಹಿಸಲ್ಪಟ್ಟ ವಾರುಣಿಯು (ಮದಿರಾಧಿದೇವತೆ) ಆ ವ್ರಜ ಮಂಡಲದಲ್ಲಿ ಹೂಗೊಂಚಲುಗಳ ಸುವಾಸನೆಗೆ ಮನಸೋತು ಇನಿದನಿಯನ್ನು ಮಾಡುತ್ತಾ ಮುಸುರುತ್ತಿರುವ ದುಂಬಿಗಳಿಂದ ಆವರಿಸಲ್ಪಟ್ಟ ಮರಗಳ ಪೊಟರೆಗಳಿಂದ ಆವಿರ್ಭವಿಸಿ ಧಾರಾಕಾರವಾಗಿ ಹರಿಯುತ್ತಾ ತನ್ನ ಸುವಾಸನೆಯಿಂದ ಆ ಯಮುನಾ ತೀರದಲ್ಲಿದ್ದ ವನರಾಜಿಯೆಲ್ಲವನ್ನೂ ತುಂಬಿಬಿಟ್ಟಿತು. ಆ ವಾರುಣಿಯ ಧಾರೆಯ ನ್ನೀಂಟುತ್ತಲೇ ಆ ಬಲಭದ್ರನಿಗೆ ಮತ್ತೇರಿ ಮನಸ್ಸು ವಿಹ್ವಲವಾಯಿತು.

ನ್ಮತ್ತಃ ಸಿಂಹಾಸಂನ್ಯಸ್ತಹಲೇಶೋ ಮುಸಲಪಾಣಿಃ ಕೋಟೀಂದುಪೂ. ರ್ಣಮಂಡಲಸಂಕಾಶಃ ಪ್ರೋದ್ಗಮದ್ರತ್ನಮಂಜೀರಪ್ರಚಲನೂಪುರ-ಪ್ರಕ್ವಣತ್ಕನಕಕಿಂಕಿಣೀಭಿಃ ಕಂಕಣಸ್ಫುರತ್ತಾಟಂಕಪುರಟಹಾರಶ್ರೀಕಂ-ಠಾಂಗುಲೀಯಶಿರೋಮಣಿಭಿಃ ಪ್ರವಿಡಂಬಿನೀಕೃತಸರ್ಪಿಣೀಶ್ಯಾಮ-ವೇಣೀಕುಂತಲಲಲಿತಗಂಡಸ್ಥಲಪತ್ರಾವಲಭಿಃ ಸುಂದರೀಭಿರ್ಭಗವಾ-ನ್ಭುವನೇಶ್ವರೋ ವಿಭ್ರಾಜಮಾನೋ ವಿರರಾಜ। ಅಥ ಚ ರೇಮೇ ॥ ೬ ॥

ಮನಸ್ಸಿನಲ್ಲಿ ಮದನ ವಿಕಾರವಂಕುರಿಸಿತು. ಧೃಢವಾಗಿದ್ದ ಅಂಗಗಳು ಕಮಲದ ಎಸಳಿನಂತೆ ಅಗಲವಾಗಿ ಶುಭ್ರವಾಗಿದ್ದ ಕಂಗಳ ತುದಿಯಲ್ಲಿ ನಸುಗೆಂಪು ಮೂಡ ತೊಡಗಿ ಮದಪರವಶತೆಯಿಂದ ಕಂಪಿಸತೊಡಗಿದುವು. ಮತ್ತೂ ಇದುವರಿಗೆ ರಾಸ ಮಂಡಲದಲ್ಲಿ ವಿಹರಿಸುತ್ತಿದ್ದುದರಿಂದ ಬಳಲಿಕೆಯುಂಟಾಗಿ ಹಣೆಯಲ್ಲೂ, ಕಪೋಲ ಪ್ರದೇಶದಲ್ಲೂ ಬೆವರಿನ ಹನಿಗಳು ಸಾಲಾಗಿ ಮೂಡಿ ಮುಖಮಂಡಲದಲ್ಲಿ ಚಿತ್ರಿಸಿದ್ದ ಮಕರಿಕಾದಿ ಪತ್ರಗಳನ್ನು ಸ್ವಲ್ಪ ಸ್ವಲ್ಪವಾಗಿ ಅಳಿಸತೊಡಗಿದ್ದುವು. ಆಗ ಮಧುಪಾನ ದಿಂದ ಮತ್ತೇರಿದ್ದ ಆ ಬಲಭದ್ರನು ಮದ್ದಾನೆಯಂತೆ ತೂಗಾಡುತ್ತಾ ಮದ್ದಾನೆಯ ಸೊಂಡಲಿನಂತೆ ದುಂಡಗಿರುವ ತನ್ನ ತೋಳುಗಳಿಂದ ಕಂಗೊಳಿಸುತ್ತಾ ಹೆಣ್ಣಾನೆ ಗಳೊಡನೆ ಬರುತ್ತಿರುವ ಮದಿಸಿದ ಸಲಗದಂತೆ ತನ್ನನ್ನು ಬಳಸಿ ಬರುತ್ತಿರುವ ಗೋಪಾಂಗನೆಯರ ನಡುವೆ ಬರುತ್ತಿದ್ದನು. ಆ ಸೊಗಸನ್ನೇನೆಂದು ಹೇಳಲಿ? ಸಿಂಹದಂತೆ ಉಬ್ಬಿರುವ ಹೆಗಲಿನ ಮೇಲೆ ಮೆರೆಯುತ್ತಿರುವ ಹಲಾಯುಧ! ಮತ್ತೊಂದು ಕೈಲಿ ಮೆರೆಯುತ್ತಿರುವ ಮುಸಲಾಯುಧ! ಏಕಕಾಲದಲ್ಲಿ ಉದಿಸಿದ ಕೋಟಿ ಪೂರ್ಣ ಚಂದ್ರರಿಗೆ ಸರಿಸಮವೆನಿಸಿದ ಕಾಂತಿಯಿಂದ ಶೋಭಿಸುತ್ತಿರುವ ಮುಖಮಂಡಲ! ಮತ್ತು ರತ್ನಖಚಿತವಾದ ಕಾಲಂದುಗೆಗಳಲ್ಲಿ ಚಲಿಸುತ್ತಾ ಜಣಜಣರೆನ್ನುತ್ತಿರುವ ಚಿನ್ನದ ಕಿರುಗಂಟೆಗಳ ಸಾಲುಗಳಿಂದಲೂ, ಕಡಗ, ಓಲೆ, ಸರ, ಉಂಗರ, ಜಡೆಬಿಲ್ಲೆ ಮೊದಲಾದ ಆಭರಣಗಳಿಂದಲೂ, ಹಾವನ್ನು ಹೋಲುತ್ತಿದ್ದ ಕಪ್ಪಾದ ಉದ್ದನೆಯ ಜಡೆಗಳಿಂದಲೂ, ಕಪೋಲ ಪ್ರದೇಶದಲ್ಲಿ ರಚಿತವಾಗಿದ್ದ ಪತ್ರಲೇಖೆಗಳಿಂದಲೂ ಕಂಗೊಳಿಸುತ್ತಾ, ತನ್ನ ಸುತ್ತಲೂ ಬಳಸಿ ಬರುತ್ತಿರುವ ಚಲುವೆಯರಾದ ಗೋಪಾಂಗನೆಯರು! ಈ ರೀತಿ ಸೊಗಸಿನಿಂದ ಬರುತ್ತಿದ್ದ ಆ ಬಲಭದ್ರನು ಅತಿಶಯ ವಾಗಿ ಕಂಗೊಳಿಸಿದನು.

ಅಥ ಹ ವಾವ ಕಾಲಿಂದೀಕೂಲಕಾಂತಾರಪರ್ಯಟನವಿಹಾರಪರಿಶ್ರಮೋದ್ಯತ್ಸ್ವೇದಬಿಂದುವ್ಯಾಪ್ತಮುಖಾರವಿಂದಃ ಸ್ನಾನಾರ್ಥಂ ಜಲಕ್ರೀಡಾರ್ಥಂ ಯಮುನಾಂ ದೂರಾತ್ಸ ಆಜುಹಾವ। ತತಸ್ತ್ವನಾಗತಾಂ ತಟಿನೀಂ ಹಲಾಗ್ರೇಣ ಕುಪಿತೋ ವಿಚಕರ್ಷ ಇತಿ ಹೋವಾಚ ಚ ॥ ೭ ॥

ಅದ್ಯ ಮಾಮವಜ್ಞಾಯ ನಾಯಾಸಿ। ಮಯಾಹೂತಾಪಿ ಮುಸಲೇನ ತ್ವಾಂ ಕಾಮಚಾರಿಣೀಂ ಶತಧಾ ನೇಷ್ಯೇ। ಏವಂ ನಿರ್ಭರ್ತ್ಸಿತಾ ಸಾ ಭೂರಿಭೀತಾ ಯಮುನಾ ಚಕಿತಾ ತತ್ಪಾದಯೋಃ ಪತಿತೋವಾಚ ॥ ೮ ॥

---

೭. ಆ ಬಲದೇವನು ಯಮುನಾನದಿಯ ತೀರದಲ್ಲಿರುವ ವನಪ್ರದೇಶದ ನಡುವೆ ವಿಶೇಷವಾಗಿ ವಿಹರಿಸಿದುದರಿಂದಲೂ, ಅಲ್ಲೆಲ್ಲಾ ತಿರುಗಾಡಿದುದರಿಂದಲೂ ಬಳಲಿಕೆಯುಂಟಾಗಿ ಆತನ ಮುಖಮಂಡಲದಲ್ಲಿ ಬೆವರು ಹನಿಗಳು ಮೂಡಿದುವು. ಆಗ ಬಲದೇವನು ಆ ಬಳಲಿಕೆಯನ್ನು ಕಳೆಯಲೋಸುಗ ಸ್ನಾನವನ್ನೂ, ಜಲವಿಹಾರವನ್ನೂ ಮಾಡಲೆಳಸಿ, ದೂರದಿಂದಲೇ ಯಮುನಾನದಿಯನ್ನು ತನ್ನ ಬಳಿಯಲ್ಲಿ ಹರಿಯುವಂತೆ ಕರೆದನು. ಆತನ ಮಾತನ್ನು ಕೇಳಿದರೂ ಯಮುನೆಯು ಬಲಭದ್ರನ ಬಳಿಗೆ ಬರಲಿಲ್ಲ. ಆಗ ಆತನಿಗೆ ಬಹು ಕೋಪವುಂಟಾಯಿತು. ಕೂಡಲೇ ಕೈಯಲಿದ್ದ ನೇಗಿಲಿನಿಂದ ಹಿಡಿದೆಳೆಯುವೆನೆಂದು ಸಂಕಲ್ಪಿಸಿದನು.

೮. ಬಳಿಕ "ಎಲೆ ದುಷ್ಟೆ! ನಾನಾಗಿ ಕರೆದರೂ ನೀನು ನನ್ನನ್ನು ಲೆಕ್ಕಿಸದೆ ಬಳಿಗೆ ಬರಲೊಲ್ಲೆಯಲ್ಲವೆ? ಎಲೆ ಸ್ವಚ್ಛಂದಚಾರಿಣಿ! ಇದೋ ಈಗಲೇ ನಿನ್ನನ್ನು ನನ್ನ ಮುಸಲಾಯುಧದಿಂದ ನೂರಾರು ತುಂಡುಗಳಾಗಿ ಸೀಳಿಬಿಡುವೆನು, ಎಂದು ನುಡಿದು ನೇಗಿಲಿನಿಂದ ಹಿಡಿದೆಳೆದನು. ಕೂಡಲೇ ಆ ಯಮುನೆಯು ಬಹುವಾಗಿ ಹೆದರಿ, ಅವನ ಕಾಲ್ಗಳ ಮೇಲೆ ಬಿದ್ದು ನಮಸ್ಕರಿಸಿ ಕಳವಳದಿಂದ ಇಂತೆಂದಳು :—

ರಾಮ ರಾಮ, ಸಂಕರ್ಷಣ, ಬಲಭದ್ರ, ಮಹಾಬಾಹೋ, ತವ ಪರಂ ವಿಕ್ರಮಂ ನ ಜಾನೇ ಯಸ್ಯೈಕಸ್ಮಿನ್ಮೂರ್ಧ್ನಿಸರ್ಷಪವತ್ಸರ್ವಂ ಭೂರಿ ಭೂಖಂಡಮಂಡಲಂ ದೃಶ್ಯತೇ । ತಸ್ಯ ತವ ಪರಮಾನು-ಭಾವಮಜಾನಂತೀಂ ಪ್ರಪನ್ನಾಂ ಮಾಂ ಮೋಕ್ತುಂ ಯೋಗ್ಯೋಽಸಿ । ತ್ವಂ ಭಕ್ತವ-ತ್ಸಲೋಽಸಿ ॥ ೯ ॥

ಇತ್ಯೇವಂ ಯಾಚಿತೋ ಬಲಭದ್ರೋ ಯಮುನಾಂ ತತೋ ವ್ಯಮುಂಚತ್ಪುನಃ ಕರೇಣುಭಿಃ ಕರೀವ ಗೋಪೀಭಿರ್ಗೋಪರಾಡ್ಜಲಂ ವಿಜಗಾಹ । ಪುನರ್ಜಲಾದ್ವಿನಿರ್ಗತ್ಯ ತಟಸ್ಥಾಯ ಬಲಭದ್ರಾಯ ಸಹಸಾ ಯಮುನಾ ಚೋಪಾಯನಂ ನೀಲಾಂಬರಾಣಿ ಹೇಮರತ್ನ-ಮಯಭೂಷಣಾನಿ ದಿವ್ಯಾನಿ ಚ ದದೌ । ಹ ಪಾವ ತಾನಿ ಗೋಪೀ-ಯೂಥಾಯ ಪೃಥಕ್ಪೃಥಕ್ ವಿಭಜ್ಯ ಸ್ವಯಂ ನೀಲಾಂಬರೇ ವಸಿತ್ವಾ

---

೯. "ಓ ರಾಮ! ಓ ಮಹಾಬಾಹು! ಹೇ ಸಂಕರ್ಷಣ! ಹೇ ಬಲಭದ್ರ! ನಿನ್ನ ಪರಾಕ್ರಮಾತಿಶಯವನ್ನು ನಾನರಿಯೆನು. ಯಾವ ನಿನ್ನ ಒಂದು ಹೆಡೆಯ ಒಕ್ಕಡೆಯಲ್ಲಿ ಈ ಸಮಗ್ರವಾದ ಭೂಮಂಡಲವೆಲ್ಲವೂ ಸಾಸಿವೆಯ ಕಾಳಿನಷ್ಟು ಸಣ್ಣದಾಗಿ ತೋರುವುದೋ, ಆ ನಿನ್ನ ಮಹಿಮಾತಿಶಯವನ್ನು ನಾನು ಅರಿಯುವದೆಂತು? ನೀನು ಭಕ್ತರಲ್ಲಿ ವಾತ್ಸಲ್ಯವುಳ್ಳವನಲ್ಲವೇ? ನಿನ್ನನ್ನೇ ಮರೆಹೊಕ್ಕಿರುವ ನನ್ನನ್ನು ಶಿಕ್ಷಿಸದೆ ನೀನು ಬಿಟ್ಟುಬಿಡಬೇಕು" ಎಂದು ಪ್ರಾರ್ಥಿಸಿದಳು.

೧೦. ಹೀಗೆ ಯಮುನಾನದಿಯು ತನ್ನನ್ನು ಪ್ರಾರ್ಥಿಸಿದುದನ್ನು ಕಂಡು, ಪ್ರಸನ್ನನಾದ ಬಲದೇವನು ಅವಳನ್ನು ಹಿಂಸಿಸದೆ ಬಿಟ್ಟುಬಿಟ್ಟನು. ಬಳಿಕ ಹೆಣ್ಣಾನೆಗಳೊಡನೆ ವಿಹರಿಸುವ ಗಂಡು ಸಲಗದಂತೆ ಆ ಗೋಪೇಶ್ವರನಾದ ಬಲಭದ್ರನು ಗೋಪಾಂಗನೆಯರೊಡಗೂಡಿ ಆ ಯಮುನೆಯ ನೀರಿನಲ್ಲಿ ವಿಹರಿಸಿದನು. ಆ ಜಲವಿಹಾರವು ಮುಗಿದನಂತರ ಆ ಬಲಭದ್ರನು ದಡದ ಮೇಲಕ್ಕೆ ಬಂದುದನ್ನು ಕಂಡು ಯಮುನಾನದಿಯು ನೀಲವಾದ ಎರಡು ದುಕೂಲಗಳನ್ನೂ, ರತ್ನಖಚಿತವಾಗಿ ಸುವರ್ಣದಿಂದ ನಿರ್ಮಿಸಲ್ಪಟ್ಟಿದ್ದ ದಿವ್ಯವಾದ ಆಭರಣಗಳನ್ನೂ ತೆಗೆದುಕೊಂಡು ಬಂದು ಆತನಿಗೆ ಕಾಣಿಕೆಯಾಗಿ ಒಪ್ಪಿಸಿದಳು. ಆ ಆಭರಣಗಳೆಲ್ಲವನ್ನೂ ಬಲಭದ್ರನು ಬೇರೆ

ಕಾಂಚನೀಂ ಮಾಲಾಂ ನವರತ್ನಮಯೀಂ ಧೃತ್ವಾ ಮಹೇಂದ್ರೋ ವಾರಣೇಂದ್ರ ಇವ ಬಲಭದ್ರೋ ವಿರೇಜೇ ॥ ೧೦ ॥

ಇತ್ಥಂ ಕೌರವೇಂದ್ರ, ಯಾದವೇಂದ್ರಸ್ಯ ರಮತಃ ಸರ್ವಾ ವಾಸಂತಿಕೀರ್ನಿಶಾ ವ್ಯತೀತಾ ಬಭೂವುಃ। ಭಗವತೋ ಬಲಭದ್ರಸ್ಯ ಹಸ್ತಿನಾಪುರಮಿವ ವೀರ್ಯಂ ಸೂಚಯತೀವ ಹ್ಯದ್ಯಾಪಿ ಚ ಕೃಷ್ಟವರ್ತ್ಮನಾ ಯಮುನಾ ವಹತಿ। ಇಮಾಂ ರಾಮಸ್ಯ ರಾಸಕಥಾಂ ಯಃ ಶೃಣೋತಿ ಶ್ರಾವಯತಿ ಚ ಸ ಸರ್ವಪಾಪಪಟಲಂ ಛಿತ್ವಾ ತಸ್ಯ ಪರಸ್ಪರಮಾನಂದಪದಂ ಪ್ರತಿಯಾತಿ। ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಶ್ರೀಬಲಭದ್ರಖಂಡೇ ಪ್ರಾಡ್ವಿಪಾಕ-ದುರ್ಯೋಧನಸಂವಾದೇ ರಾಸಕ್ರೀಡಾವರ್ಣನಂ ನಾಮ ನವಮೋಽಧ್ಯಾಯಃ.

ಬೇರೆಯಾಗಿ ವಿಂಗಡಿಸಿ, ತನ್ನೊಡನೆ ಬಂದಿದ್ದ ಆ ಗೋಪಾಂಗನೆಯರಿಗೆ ಕೊಟ್ಟು, ತಾನು ಆ ನೀಲವಸ್ತ್ರಗಳನ್ನು ಉಟ್ಟು, ನವರತ್ನಗಳನ್ನು ಮೆಟ್ಟಿ, ಚಿನ್ನದಿಂದ ರಚಿಸಲ್ಪಟ್ಟಿದ್ದ ದಿವ್ಯವಾದ ಮಾಲಿಕೆಯೊಂದನ್ನು ಕೊರಳಿನಲ್ಲಿ ಧರಿಸಿ, ದೇವೇಂದ್ರನ ಐರಾವತದಂತೆ ವಿರಾಜಿಸಿದನು.

೧೧. ಓ ಕುರುರಾಜ! ಈ ರೀತಿಯಾಗಿ ಯಾದವೇಂದ್ರನಾದ ಆ ಬಲಭದ್ರನು ಗೋಕುಲದಲ್ಲಿ ವಿಹರಿಸುತ್ತಿರಲು ವಸಂತರಾತ್ರಿಗಳೆಲ್ಲವೂ ಕಳೆದುಹೋದುವು. ಭಗವಂತನಾದ ಆ ಬಲರಾಮನ ಪರಾಕ್ರಮವನ್ನು ಹಸ್ತಿನಾವತಿಯಂತೆ ಆ ಯಮುನಾನದಿಯು ಈಗಲೂ ಸಹ ನೇಗಿಲಿನಿಂದೆಳೆದ ದಾರಿಯಲ್ಲೇ ಹರಿಯುತ್ತಾ ಜಗತ್ತಿಗೆ ಸೂಚಿಸುತ್ತಿರುವುದು. ಓ ರಾಜೇಂದ್ರ! ಈ ಬಲಭದ್ರನ ರಾಸಲೀಲಾವೃತ್ತಾಂತವನ್ನು ಯಾವನು ಶ್ರವಣಮಾಡುವನೋ ಮತ್ತು ಯಾವನು ಇನ್ನೊಬ್ಬರಿಗೋಸ್ಕರ ಕೀರ್ತನೆ ಮಾಡುವನೋ ಆತನು ಸಮಸ್ತವಾದ ಪಾಪರಾಶಿಯೆಲ್ಲವನ್ನೂ ಪರಿಹರಿಸಿಕೊಂಡು ಉತ್ತಮೋತ್ತಮವೆನಿಸಿದ ಆನಂದದಾಯಕವಾದ ಆತನ ನಿವಾಸವನ್ನು ಸೇರುವನು" ಎಂದನು.

ಇಲ್ಲಿಗೆ ಗರ್ಗಸಂಹಿತೆಯ ಬಲಭದ್ರ ಖಂಡದಲ್ಲಿ ರಾಸಲೀಲಾ ವರ್ಣನವೆಂಬ ಒಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ದಶಮೋಽಧ್ಯಾಯಃ

॥ ದುರ್ಯೋಧನ ಉವಾಚ ॥

ಭಗವನ್ಗರ್ಗಾಚಾರ್ಯೇಣ ಗೋಪೀಯೂಥಾಯ ಕಥಂ ದತ್ತಂ ಬಲಭದ್ರಪಂಚಾಂಗಂ ತತ್ಕೃಪಯಾ ವದತಾತ್ ತ್ವಂ ಸರ್ವಜ್ಞೋಽಸಿ ॥ ೧ ॥

॥ ಪ್ರಾಡ್ವಿಪಾಕ ಉವಾಚ ॥

ಕೌರವೇಂದ್ರ, ಏಕದಾ ಗರ್ಗಾಚಾರ್ಯಃ ಕಲಿಂದನಂದಿನೀಂ ಸ್ನಾತುಂ ಗರ್ಗಾಚಲಾದ್ವ್ರಜಮಂಡಲಂ ಚಾಜಗಾಮ । ತತ್ರೈಕಾಂತೇ ಮುರುಲ್ಲೀಲೈಜಲ್ಲಲಿತಲತಾತರುಪಲ್ಲವಪುಷ್ಪಗಂಧಮತ್ತಮಿಲಿಂದಪುಂಜೇ

ಹತ್ತನೆಯ ಅಧ್ಯಾಯವು

೧. ಬಳಿಕ ಕುರುರಾಜನಾದ ದುರ್ಯೋಧನನು ಪ್ರಾಡ್ವಿಪಾಕಮುನಿಯನ್ನು ಕುರಿತು "ಹೇ ಭಗವನ್ ! ನೀನು ಎಲ್ಲವನ್ನೂ ಬಲ್ಲವನು. ಆದುದರಿಂದ ಶ್ರೀ ಗರ್ಗಮುನಿಯು ಗೋಪಿಯರಿಗೆ ಉಪದೇಶಿಸಿದ ಬಲಭದ್ರಪಂಚಾಂಗವನ್ನು ದಯವಿಟ್ಟು ನನಗೆ ತಿಳಿಸಬೇಕು" ಎಂದು ಪ್ರಾರ್ಥಿಸಿದನು.

೨. ಆಗ ಪ್ರಾಡ್ವಿಪಾಕಮುನಿಯು ಈ ರೀತಿ ನುಡಿಯತೊಡಗಿದನು :— ಕೌರವೇಂದ್ರ ! ಆಲಿಸು. ಒಮ್ಮೆ ಗರ್ಗಾಚಾರ್ಯನು ಯಮುನಾನದಿಯಲ್ಲಿ ಸ್ನಾನ ಮಾಡಲೆಳಸಿ ತಾನು ವಾಸವಾಗಿದ್ದ ಗರ್ಗಪರ್ವತದಿಂದ ಹೊರಟು ಗೋಕುಲಕ್ಕೆ ಬಂದನು. ಅಲ್ಲಿ ಸ್ನಾನವನ್ನು ಮಾಡಿದನಂತರ ಆ ನದಿಯ ದಡದಲ್ಲಿಯೇ ಒಂದು ವಿಜನವಾದ ಲತಾಗೃಹದಲ್ಲಿ ಕುಳಿತು ಶ್ರೀರಾಮಕೃಷ್ಣರನ್ನು ಧ್ಯಾನಿಸುತ್ತಾ ಅದ

ಕಾಲಿಂದೀಕೂಲಕಲಿತನಿಕುಂಜೇ ಶ್ರೀರಾಮಕೃಷ್ಣ ಧ್ಯಾನತತ್ಪರಂ ಗರ್ಗಾ-ಚಾರ್ಯಂ ಪ್ರಣಮ್ಯ ನಾಗೇಂದ್ರಕನ್ಯಾಃ ಸ್ಮ ಇತಿ ಜಾತಿಸ್ಮರಾ ಗೋಪ-ಕನ್ಯಾಃ ಶ್ರೀಮದ್ಬಲಭದ್ರಪ್ರಾಪ್ತ್ಯರ್ಥಂ ಸೇವನಂ ಪಪ್ರಚ್ಛುಸ್ತಾಸಾಂ ಪರಮಾಂ ಭಕ್ತಿಂ ವೀಕ್ಷ್ಯ ಪದ್ಧತಿಪಟಲಸ್ತೋತ್ರಕವಚಸಹಸ್ರನಾಮಾನಿ ಗೋಪೀಯೂಥಾಯ ಸ ಪ್ರದದೌ। ಕಿಂ ಭೂಯಸ್ತ್ವಂ ತದ್ಗ್ರಹಣಂ ಕರ್ತುಮಿಚ್ಛಸಿ ವದತಾತ್ ॥ ೨ ॥

॥ ದುರ್ಯೋಧನ ಉವಾಚ ॥

ರಾಮಸ್ಯ ಪದ್ಧತಿಂ ಬ್ರೂಹಿ ಯಯಾ ಸಿದ್ಧಿಂ ವ್ರಜಾಮ್ಯಹಂ।
ತ್ವಂ ಭಕ್ತವತ್ಸಲೋ ಬ್ರಹ್ಮನ್ಗುರುದೇವ ನಮೋಽಸ್ತು ತೇ ॥ ೩ ॥

ರಲ್ಲಿಯೇ ಮಗ್ನನಾಗಿದ್ದನು. ಆ ಲತಾಗೃಹವು ಎಳೆಗಾಳಿಗಳ ಸುಳಿತಕ್ಕೆ ಸಿಲುಕಿ ಅಲುಗುತ್ತಿರುವ ಬಳ್ಳಿಯ ಎಳೆ ಚಿಗುರುಗಳಿಂದಲೂ ಅರಳಿದ ಹೂಗಳ ಸುವಾಸನೆಯನ್ನು ಹೀರಿ ಹೀರಿ ಮದಿಸಿಹೋಗಿದ್ದ ದುಂಬಿಗಳಿಂದಲೂ ರಮಣೀಯವಾಗಿದ್ದಿತು. ಇಂಥ ಲತಾಗೃಹದಲ್ಲಿ ಕುಳಿತು ಶ್ರೀರಾಮಕೃಷ್ಣರ ಧ್ಯಾನದಲ್ಲಿಯೇ ಮುಳುಗಿಹೋಗಿದ್ದ ಶ್ರೀಗರ್ಗಾಚಾರ್ಯರನ್ನು ಕಂಡು ತಾವೆಲ್ಲರೂ ಹಿಂದಿನ ಜನ್ಮದಲ್ಲಿ ನಾಗರಾಜನ ಕುಮಾರಿಯಾಗಿದ್ದವರು ಎಂಬುದನ್ನು ಅರಿತಿದ್ದ ಗೋಪಕನ್ನಿಕೆಯರೆಲ್ಲರೂ ಆತನ ಬಳಿಸಾರಿ ಶ್ರೀಬಲಭದ್ರನನ್ನು ಪಡೆಯಲು ಯಾವ ರೀತಿ ಆತನ ಸೇವೆಯನ್ನು ಮಾಡಬೇಕು ? ಎಂಬುದಾಗಿ ಪ್ರಶ್ನಿಸಿದರು. ಆ ಗೋಪಕನ್ನಿಕೆಯರ ನಿರತಿಶಯವಾದ ಭಕ್ತಿಯನ್ನು ಕಂಡು ಗರ್ಗಾಚಾರ್ಯರು ಅವರಿಗೆ ಶ್ರೀಬಲಭದ್ರ ಪ್ರಾಪ್ತಿಕರವಾದ ಪದ್ಧತಿ, ಪಟಲ, ಸ್ತೋತ್ರ, ಕವಚ, ಸಹಸ್ರನಾಮಗಳೆಂಬ ಅಂಗಪಂಚಕವನ್ನು ಉಪದೇಶಿಸಿದನು. "ಓ ಕುರುರಾಜ ನೀನೂ ಸಹ ಆ ಅಂಗಪಂಚಕವನ್ನು ಉಪದೇಶಹೊಂದಲು ಅಪೇಕ್ಷಿಸುವೆಯೇನು ? ಹಾಗಿದ್ದಲ್ಲಿ ನಮಗೆ ತಿಳಿಸು" ಎಂದು ಪ್ರಾಡ್ವಿಪಾಕಮುನಿಯು ನುಡಿಯಲು,

೩. ಆ ದುರ್ಯೋಧನನು ಆ ಮುನಿಯನ್ನು ಕುರಿತು ಓ ಬ್ರಹ್ಮಜ್ಞ ! ಓ ಗುರುದೇವ ! ನಿನ್ನನ್ನು ನಮಸ್ಕರಿಸುವೆನು. ಯಾವುದರ ಬಲದಿಂದ ನಾನು ಸಿದ್ಧಿಯನ್ನು ಪಡೆಯುವೆನೋ ಅಂತಹ "ಶ್ರೀಬಲಭದ್ರ ಪದ್ಧತಿಯನ್ನು ನನಗೆ ಉಪದೇಶಿಸು" ಎಂದನು. ಆಗ ಪ್ರಾಡ್ವಿಪಾಕಮುನಿಯು ಇಂತೆಂದನು :—ಎಲೈ ರಾಜಶ್ರೇಷ್ಠನೇ ಆಲಿಸು.

॥ ಪ್ರಾಡ್ವಿಪಾಕ ಉವಾಚ ॥

ರಾಮಮಾರ್ಗಸ್ಯ ನಿಯಮಂ ಶೃಣು ಪಾರ್ಥಿವಸತ್ತಮ ।
ಯೇನ ಪ್ರಸನ್ನೋ ಭವತಿ ಬಲಭದ್ರೋ ಮಹಾಪ್ರಭುಃ ॥ ೪ ॥

ಸಹಸ್ರವದನೋ ದೇವೋ ಭಗವಾನ್ಭುವನೇಶ್ವರಃ ।
ನ ದಾನೈರ್ನ ಚ ತೀರ್ಥೈಶ್ಚ ಭಕ್ತ್ಯಾ ಲಭ್ಯಸ್ತ್ವನನ್ಯಯಾ ॥ ೫ ॥

ಸತ್ಸಂಗಮೇತ್ಯಾಶು ಶಿಕ್ಷೇದ್ಭಕ್ತಿಂ ವೈ ಶ್ರೀಹರೇರ್ಗುರೋಃ ।
ಸ ಸಿದ್ಧಃ ಕಥಿತೋ ಜಾತಂ ಯಸ್ಯ ವೈ ಪ್ರೇಮಲಕ್ಷಣಂ ॥ ೬ ॥

ಬ್ರಾಹ್ಮೇ ಮುಹೂರ್ತೇ ಉತ್ಥಾಯ ರಾಮ ಕೃಷ್ಣೇತಿ ಚಾಬ್ರುವನ್ ।
ನತ್ವಾ ಗುರುಂ ಭುವಂ ಚೈವ ತತೋ ಭೂಮ್ಯಾಂ ಪದಂ ನ್ಯಸೇತ್ ॥ ೭ ॥
ವಾಯುರ್ಜಪಸ್ಸ್ಪೃಶ್ಯ ರಹಸಿ ಸ್ಥಿತೋ ಭೂತ್ವಾ ಕುಶಾಸನೇ ।

---

೪. ಮಹಾಪ್ರಭುವಾದ ಆ ಬಲಭದ್ರನು ಯಾವುದರಿಂದ ಸುಪ್ರೀತನಾಗುವನೋ ಆ ರಾಮಮಾರ್ಗದ ನಿಯಮಗಳನ್ನು ತಿಳಿಸುವೆನು.

೫. ಸಕಲ ಲೋಕಗಳಿಗೂ ಪ್ರಭುವೂ, ಸಹಸ್ರಮುಖಗಳುಳ್ಳವನೂ ಆದ ಆ ಭಗವಂತನು ಅನನ್ಯವಾದ ಭಕ್ತಿಯೊಂದರಿಂದಲ್ಲದೆ ದಾನಗಳಿಂದಲೂ, ತೀರ್ಥಸೇವನೆಗಳಿಂದಲೂ ಲಭ್ಯನಾಗಲಾರನು. (ಲಭಿಸಲಾರನು)

೬. ಮಾನವನು ಸತ್ಪುರುಷರ ಸಹವಾಸವನ್ನು ಕೈಗೊಂಡು ಸದ್ಗುರುವಿನ ಉಪದೇಶದಿಂದ ಶ್ರೀಹರಿಯಲ್ಲಿ ಭಕ್ತಿಯನ್ನು ನೆಲೆಗೊಳಿಸಬೇಕು. ಈರೀತಿಯಾಗಿ ಯಾವ ಮಾನವನಿಗೆ ಪ್ರೇಮವಿಶೇಷರೂಪವಾದ ಶ್ರೀಹರಿಯ ಭಕ್ತಿಯು ಉಂಟಾಗುವುದೋ ಅವನೇ ಈ ಪ್ರಪಂಚದಲ್ಲಿ ಕೃತಾರ್ಥನಾದವನೆಂದು ಭಾವಿಸಲ್ಪಡುವನು.

೭. ಆ ಭಕ್ತನಾದವನು ಪ್ರತಿನಿತ್ಯವೂ ಬ್ರಾಹ್ಮಮುಹೂರ್ತದಲ್ಲಿಯೇ ನಿದ್ರೆಯಿಂದೆಚ್ಚೆತ್ತು ರಾಮ ಕೃಷ್ಣ ಎಂದು ಮುಂತಾಗಿ ಬಾಯಲ್ಲಿ ಉಚ್ಚರಿಸುತ್ತ ಮೇಲಕ್ಕೆದ್ದು ತನ್ನ ಗುರುವಿಗೂ ಭೂಮಾತೆಗೂ ನಮಸ್ಕರಿಸಿ ಬಳಿಕ ನೆಲದಮೇಲೆ ಕಾಲಿಡಬೇಕು.

ಹಸ್ತಾವುತ್ಸಂಗ ಆದಾಯ ಸ್ವನಾಸಾಗ್ರನಿರೀಕ್ಷಣಃ ॥ ೮ ॥

ಧ್ಯಾಯೇತ್ಪರಂ ಹರಿಂ ದೇವಂ ಬಲಭದ್ರಂ ಸನಾತನಂ ।
ಗೌರಂ ನೀಲಾಂಬರಂ ಹೃದ್ಯಂ ವನಮಾಲಾವಿಭೂಷಿತಂ ॥ ೯ ॥

ಏವಂ ಧ್ಯಾನಪರೋ ನಿತ್ಯಂ ಪ್ರೀತ್ಯರ್ಥಂ ಹಲಿನಃ ಪ್ರಭೋಃ ।
ತ್ರಿಕಾಲಸಂಧ್ಯಾಕೃಚ್ಛುದ್ಧೋ ಮೌನೀ ಕ್ರೋಧವಿವರ್ಜಿತಃ ॥ ೧೦ ॥

ಅಕಾಮೀ ಗತಲೋಭಶ್ಚ ನಿರ್ಮೋಹಃ ಸತ್ಯವಾಗ್ಭವೇತ್ ।
ದ್ವಿವಾರಂ ಜಲಪಾನಾರ್ಥೀ ಏಕಭುಕ್ತೋ ಜಿತೇಂದ್ರಿಯಃ ॥ ೧೧ ॥

೮–೯ ಅನಂತರ (ಶೌಚಾದಿ ಕೃತ್ಯಗಳನ್ನೂ, ಸ್ನಾನವನ್ನೂ ಮಾಡಿಬಂದ ನಂತರ) ಏಕಾಂತವಾದ ಸ್ಥಳದಲ್ಲಿ ದರ್ಭಾಸನದ ಮೇಲೆ ಕುಳಿತು ಶುದ್ಧಾಚಮನವನ್ನು ಮಾಡಿ ಬಳಿಕ ಪದ್ಮಾಸನಸ್ಥಿತನಾದ ತನ್ನ ತೊಡೆಗಳ ಮೇಲೆ ಎರಡು ಕೈಗಳನ್ನೂ ಇಟ್ಟುಕೊಂಡು ಮೂಗಿನ ತುದಿಯಲ್ಲಿಯೇ ತನ್ನ ದೃಷ್ಟಿಯನ್ನು ನೆಲೆಗೊಳಿಸಿ ಪರಾತ್ಪರನಾದ ಶ್ರೀಹರಿಸ್ವರೂಪನೂ, ಸನಾತನನೂ ಮತ್ತು ಬಿಳಿದಾದ ಮೈಬಣ್ಣದಿಂದಲೂ, ನೀಲವಾದ ವಸನದಿಂದಲೂ, ಧರಿಸಿರುವ ವನಮಾಲೆಯಿಂದಲೂ ರಮಣೀಯವಾಗಿ ಕಂಗೊಳಿಸುತ್ತಿರುವಂತಹ ಆ ಬಲಭದ್ರನನ್ನು ಧ್ಯಾನಮಾಡಬೇಕು.

೧೦–೧೧. ಈ ರೀತಿಯಾಗಿ ಆ ಬಲಭದ್ರದ ಪ್ರೀತಿಯನ್ನು ಗಳಿಸಿಕೊಳ್ಳಲು ಭಕ್ತನಾದವನು ಪ್ರತಿನಿತ್ಯವೂ ಧ್ಯಾನಾಸಕ್ತನಾಗಬೇಕಲ್ಲದೆ ಕಾಲತ್ರಯದಲ್ಲಿಯೂ ಸಂಧ್ಯಾವಂದನೆಯನ್ನು ಬಿಡದೆ ಆಚರಿಸುತ್ತಾ ಅಂತರಂಗದಲ್ಲಿಯೂ, ಬಹಿರಂಗದಲ್ಲಿಯೂ ಶುದ್ಧನೆನಿಸಿ ನಿರರ್ಥಕವಾಗಿ ಮಾತುಗಳನ್ನಾಡದೆ ಮೌನದಿಂದಿರುತ್ತಾ ಕಾಮಕ್ರೋಧಗಳನ್ನೂ, ಲೋಭ, ಮೋಹಗಳನ್ನೂ ತ್ಯಜಿಸಿದವನಾಗಿ ನಿಜವೊಂದನ್ನೇ ನುಡಿಯುತ್ತಾ ದಿನದಲ್ಲಿ ಎರಡು ಬಾರಿ ಮಾತ್ರ ನೀರನ್ನೂ, ಒಂದು ಬಾರಿ ಮಾತ್ರ ಅನ್ನವನ್ನೂ ಸೇವಿಸುತ್ತಾ ಇಂದ್ರಿಯ ನಿಗ್ರಹಿಯಾಗಿರಬೇಕು.

ಕ್ಷೌಮಾಂಬರೋ ಭೂಮಿಶಾಯೀ ಭೂತ್ವಾ ಪಾಯಸಭೋಜನಃ |
ಏವಂ ನಿರ್ಜಿತಷಡ್ವರ್ಗೋ ಭವೇದೇಕಾಗ್ರಮಾನಸಃ || ೧೨ ||

ತಸ್ಯ ಪ್ರಸನ್ನೋ ಭವತಿ ಸದಾ ಸಂಕರ್ಷಣೋ ಹರಿಃ |
ಪರಿಪೂರ್ಣತಮಃ ಸಾಕ್ಷಾತ್ಸರ್ವಕಾರಣಕಾರಣಃ || ೧೩ ||

ಇತ್ಥಂ ಶ್ರೀಬಲಭದ್ರಸ್ಯ ಕಥಿತಾ ಪದ್ಧತಿರ್ಮಯಾ |
ಕೌರವೇಂದ್ರ ಮಹಾಬಾಹೋ ಕಿಂ ಭೂಯಃ ಶ್ರೋತುಮಿಚ್ಛಸಿ || ೧೪ ||

|| ದುರ್ಯೋಧನ ಉವಾಚ ||

ಮುನೀಂದ್ರ ದೇವದೇವಸ್ಯ ಪಟಲಂ ಬ್ರೂಹಿ ಮೇ ಪ್ರಭೋಃ |
ಯೇನ ಸೇವಾಂ ಕರಿಷ್ಯಾಮಿ ತತ್ಪದಾಂಬುಜಯೋಃ ಸದಾ || ೧೫ ||

---

೧೨. ಮತ್ತು ನಾರು ಬಟ್ಟೆಯನ್ನೇ ಉಡುತ್ತಾ ನೆಲದ ಮೇಲಯೇ ಮಲಗುತ್ತಾ ಕ್ಷೀರವನ್ನು ಮಾತ್ರವೇ ಭುಜಿಸುತ್ತಾ ಕಾಮಕ್ರೋಧಾದಿಗಳನ್ನು ಜಯಿಸಿ ದೃಢಚಿತ್ತತೆಯಿಂದಿರಬೇಕು.

೧೩. ಹಾಗಿದ್ದರೆ ಮಾತ್ರ ಸಂಪೂರ್ಣತಮನೂ, ಸಕಲಕಾರಣಗಳಿಗೂ ಕಾರಣನೆನಿಸಿದವನೂ, ಸಾಕ್ಷಾತ್ ಶ್ರೀಹರಿಸ್ವರೂಪನೂ ಆದ ಭಗವಾನ್ ಸಂಕರ್ಷಣನು ಅಂತಹ ನಿಯಮಶೀಲನಾದ ಭಕ್ತನ ವಿಷಯದಲ್ಲಿ ಸುಪ್ರೀತನಾಗುವನು.

೧೪. ಓ ಮಹಾಬಾಹೂ! ಕೌರವೇಂದ್ರ! ಈ ರೀತಿಯಾಗಿ ನಿನಗೆ ಶ್ರೀಬಲಭದ್ರ ಮಹಾಪದ್ಧತಿಯನ್ನು ಉಪದೇಶಿಸಿದೆನು. ಮತ್ತಿನ್ನೇನನ್ನು ಕೇಳಬೇಕೆಂದಿರುವೆ? ಎಂಬುದಾಗಿ ಆ ಪ್ರಾಡ್ವಿಪಾಕಮುನಿಯು ಪ್ರಶ್ನಿಸಲು, ಆ ದುರ್ಯೋಧನನು–

೧೫. "ಓ ಮುನೀಂದ್ರ! ದೇವದೇವನಾದ ಆ ಪ್ರಭುವಿನ ಪಟಲವನ್ನು ನನಗೆ ಉಪದೇಶಿಸುವನಾಗು. ಹಾಗಾದಲ್ಲಿ ನಾನು ಆ ದೇವನ ಪದಪಂಕಜಗಳನ್ನು ಸೇವಿಸಲು ಅನುಕೂಲವಾಗುವುದು" ಎಂದು ಪ್ರಾರ್ಥಿಸಿದನು.

॥ ಪ್ರಾಡ್ವಿಪಾಕ ಉವಾಚ ॥

ಬಲಸ್ಯ ಪಟಲಂ ಗುಹ್ಯಂ ವಿದ್ಧಿ ಸಿದ್ಧಿಪ್ರದಾಯಕಂ ।
ಏಕಾಂತೇ ಬ್ರಹ್ಮಣಾ ದತ್ತಂ ನಾರದಾಯ ಮಹಾತ್ಮನೇ ॥ ೧೬ ॥

ಪ್ರಣವಂ ಪೂರ್ವಮುದ್ಧೃತ್ಯ ಕಾಮಬೀಜಂ ತತಃ ಪರಂ ।
ಕಾಲಿಂದೀಭೇದನಪದಂ ಸಂಕರ್ಷಣಮತಃ ಪರಂ ॥ ೧೭ ॥

ಚತುರ್ಥ್ಯಂತಂ ದ್ವಯಂ ಕೃತ್ವಾ ಸ್ವಾಹಾ ಪಶ್ಚಾದ್ವಿಧಾಯ ಚ ।
ಮಂತ್ರರಾಜಮಿಮಂ ರಾಜನ್ಬ್ರಹ್ಮೋಕ್ತಂ ಷೋಡಶಾಕ್ಷರಂ ॥ ೧೮ ॥

ಜಪೇಲ್ಲಕ್ಷಂ ವ್ರತೀ ಭೂತ್ವಾ ಸಹಸ್ರಾಣಿ ಚ ಷೋಡಶ ।
ಇಹಾಮುತ್ರ ಪರಾಂ ಸಿದ್ಧಿಂ ಸಂಪ್ರಾಪ್ನೋತಿ ನ ಸಂಶಯಃ ॥ ೧೯ ॥

---

೧೬. ಆಗ ಆ ಪ್ರಾಡ್ವಿಪಾಕಮುನಿಯು ಇಂತೆಂದನು :—ಓ ಕುರುರಾಜ ! ಈ ಬಲಭದ್ರ ಪಟಲವು ಮಹಾರಹಸ್ಯವಾದುದು. ಮತ್ತು ಸಿದ್ಧಿಯನ್ನು ಉಂಟು ಮಾಡುವಂತಹುದು. ಇದನ್ನು ಬ್ರಹ್ಮನು ಮಹಾತ್ಮನಾದ ನಾರದಮಹರ್ಷಿಗೆ ಏಕಾಂತದಲ್ಲಿ ಉಪದೇಶಿಸಿರುವನು.

೧೭–೧೮. ಆದಿಯಲ್ಲಿ ಪ್ರಣವವನ್ನೂ, ಅನಂತರ ಕಾಮಬೀಜವನ್ನೂ, ಬಳಿಕ 'ಕಾಳಿಂದೀಭೇದನ' ಎಂಬ ಪದವನ್ನೂ ಅನಂತರ ಸಂಕರ್ಷಣ ಎಂಬ ಪದವನ್ನೂ ಚತುರ್ಥ್ಯಂತವಾಗಿ ಉಚ್ಚರಿಸಿ ಕೊನೆಯಲ್ಲಿ ಸ್ವಾಹಾ ಎಂಬುದನ್ನು ಉಚ್ಚರಿಸಿದರೆ ಅದು ಷೋಡಶಾಕ್ಷರಗಳುಳ್ಳ ಬ್ರಹ್ಮಪ್ರೋಕ್ತವಾದ ಮಂತ್ರರಾಜವೆನಿಸುವುದು. (ಓಂ ಕ್ಲೀಂ ಕಾಲಿಂದೀ ಭೇದನಾಯ ಸಂಕರ್ಷಣಾಯ ಸ್ವಾಹಾ" ಎಂದು ಮಂತ್ರೋದ್ಧಾರವಾಗುವುದು.)

೧೯. ಈ ಮಂತ್ರರಾಜವನ್ನು ಭಕ್ತನಾದವನು ನಿಯಮಪರನಾಗಿ ಒಂದುಲಕ್ಷ ಹದಿನಾರು ಆವೃತ್ತಿ ಜಪಿಸಬೇಕು. ಹೀಗೆ ಜಪಿಸಿದಲ್ಲಿ ಆತನು ಇಹದಲ್ಲಿಯೂ ಪರದಲ್ಲಿಯೂ ಉತ್ತಮವಾದ ಸಿದ್ಧಿಯನ್ನು ಪಡೆಯುವನು. ಇದರಲ್ಲಿ ಸಂಶಯವಿಲ್ಲ.

ಅಥ ಜಪ್ತಸ್ಯ ಮಂತ್ರಸ್ಯ ಮಹಾಪೂಜಾಂ ಸಮಾಚರೇತ್ ।
ದ್ವಾತ್ರಿಂಶತ್ಪತ್ರಸಂಯುಕ್ತಂ ಕರ್ಣಿಕಾಕೇಸರೋಜ್ಜ್ವಲಂ ॥ ೨೦ ॥

ಭವ್ಯಂ ಕಂಜಂ ಪಂಚವರ್ಣಂ ಲಿಖಿತ್ವಾ ಸ್ಥಂಡಿಲೇ ಶುಭೇ ।
ತಸ್ಯೋಪರಿ ನ್ಯಸೇದ್ರಾಜನ್ ಹೇಮಸಿಂಹಾಸನಂ ಶುಭಂ ॥ ೨೧ ॥

ತಸ್ಮಿನ್ ಶ್ರೀಬಲದೇವಸ್ಯ ಪರಾಮರ್ಚಾಂ ಪ್ರಪೂಜಯೇತ್ ।

"ಓಂ ನಮೋ ಭಗವತೇ ಪುರುಷೋತ್ತಮಾಯ ವಾಸುದೇವಾಯ ಸಂಕರ್ಷಣಾಯ ಸಹಸ್ರವದನಾಯ ಮಹಾನಂತಾಯ ಸ್ವಾಹಾ"। ಅನೇನ ಮಂತ್ರೇಣ ಶಿಖಾಬಂಧನಂ ಕೃತ್ವಾ ಸರ್ವತಸ್ತಂ ಪ್ರಣಮ್ಯ ತತ್ಸಂಮುಖೋ ಭೂತ್ವಾ ಸ್ವಯಂ ನತೋ ಭವೇತ್ ॥

"ಓಂ ಜಯಜಯಾನಂತ ಬಲಭದ್ರ ಕಾಮಪಾಲ ತಾಲಾಂಕ ಕಾಲಿಂದೀಭಂಜನ ಆವಿರಾವಿರ್ಭೂಯ ಮಮ ಸಂಮುಖೋ ಭವೇತಿ"। ಅನೇನ ಮಂತ್ರೇಣಾವಾಹನಂ ಕುರ್ಯಾತ್ ॥

೨೦–೨೧. ಈ ರೀತಿ ಮಂತ್ರರಾಜನನ್ನು ಜಪಿಸಿದನಂತರ ಮಹಾಪೂಜೆಯನ್ನು ಮಾಡಬೇಕು. ಶುದ್ಧವಾದಂತಹ ನೆಲದ ಮೇಲೆ ಪಂಚವರ್ಣಗಳಿಂದ (ಬಣ್ಣಬಣ್ಣದ ರಂಗೋಲಿಗಳಿಂದ) ಮೂವತ್ತೆರಡು ಎಸಳುಗಳೂ ಕರ್ಣಿಕೆ ಮತ್ತು ಕೇಸರಗಳೂ ಉಜ್ವಲವಾಗಿ ಕಾಣುವಂತೆ ಮುದ್ದಾಗಿ ಕಮಲವನ್ನು ಚಿತ್ರಿಸಬೇಕು. ಆ ಕಮಲದ ಮೇಲೆ ಶುಭಕರವಾದ ಸ್ವರ್ಣಸಿಂಹಾಸನವನ್ನು ಸಿದ್ಧಗೊಳಿಸಬೇಕು.

೨೨. ಆ ಸಿಂಹಪೀಠದಲ್ಲಿ ಶ್ರೇಷ್ಠವಾದ ಅರ್ಚೆಯನ್ನು (ಪೂಜಾವಿಗ್ರಹ) ನಿಲ್ಲಿಸಿ ಅದನ್ನು ಪೂಜಿಸಬೇಕು. ಆ ಪೂಜಾಕ್ರಮವನ್ನು ವಿವರಿಸುವೆನು. "ಓಂ ನಮೋ ಭಗವತೇ ಪುರುಷೋತ್ತಮಾಯ ವಾಸುದೇವಾಯ ಸಂಕರ್ಷಣಾಯ ಸಹಸ್ರವದನಾಯ ಮಹಾನಂತಾಯ ಸ್ವಾಹಾ" ಎಂಬ ಮಂತ್ರದಿಂದ ಭಕ್ತನು ತನ್ನ ಶಿಖೆಯನ್ನು ಬಂಧಿಸಿಕೊಂಡು ಅದೇ ಮಂತ್ರವನ್ನು ಉಚ್ಚರಿಸುತ್ತಾ ಸರ್ವ ದಿಕ್ಕುಗಳಲ್ಲಿಯೂ ಆ ಬಲಭದ್ರನನ್ನೇ ನಮಸ್ಕರಿಸಿದ ಬಳಿಕ ಅರ್ಚಾವಿಗ್ರಹಪಮುರಾಗಿ ನಮಸ್ಕರಿಸಿ ಕುಳಿತುಕೊಳ್ಳಬೇಕು. ಅನಂತರ "ಓಂ ಜಯ ಜಯ ಅನಂತ, ಬಲಭದ್ರ, ಕಾಮಪಾಲ, ತಾಲಾಂಕ, ಕಾಲಿಂದೀಭಂಜನ ಆವಿರಾವಿರ್ಭೂಯ ಮಮ ಸಂಮುಖೋ ಭವ" (ಓ ಅನಂತ, ಬಲಭದ್ರ, ಕಾಮಪಾಲ, ತಾಲಧ್ವಜ,

" ಓಂ ನಮಸ್ತೇಽಸ್ತು ಸೀರಪಾಣೇ ಹಲಮುಸಲಧರ ರೌಹಿಣೇಯ ನೀಲಾಂಬರ ರಾಮ ರೇವತೀರಮಣ ನಮಸ್ತೇಽಸ್ತು "। ಅನೇನ-ಮಂತ್ರೇಣಾಸನಪಾದ್ಯಾರ್ಘ್ಯಸ್ನಾನಮಧುಪರ್ಕಧೂಪದೀಪಯಜ್ಞೋಪವೀತನೈವೇದ್ಯವಸ್ತ್ರಭೂಷಣಗಂಧಪುಷ್ಪಾಕ್ಷತಪುಷ್ಪಾಂಜಲಿನೀರಾಜನಾದೀನುಪಚಾರಾನ್ಪ್ರಕಲ್ಪಯೇತ್ ॥

"ಓಂ ವಿಷ್ಣವೇ ಮಧುಸೂದನಾಯ ವಾಮನಾಯ ತ್ರಿವಿಕ್ರಮಾಯ ಶ್ರೀಧರಾಯ ಹೃಷೀಕೇಶಾಯ ಪದ್ಮನಾಭಾಯ ದಾಮೋದರಾಯ ಸಂಕರ್ಷಣಾಯ ವಾಸುದೇವಾಯ ಪ್ರದ್ಯುಮ್ನಾಯಾನಿರುದ್ಧಾಯಾ-ಧೋಕ್ಷಜಾಯ ಪುರುಷೋತ್ತಮಾಯ ಶ್ರೀಕೃಷ್ಣಾಯ ನಮಃ" ಇತಿ ಪಾದಗುಲ್ಫಜಾನೂರುಕಟ್ಯುದರಪಾರ್ಶ್ವಪೃಷ್ಠಭುಜಕಂಧರನೇತ್ರಶಿ-ರಾಂಸಿ ಪೃಥಕ್ಪೃಥಕ್ ಪೂಜಯಾಮೀತಿ ಮಂತ್ರೇಣ ಸರ್ವಾಂಗ-ಪೂಜಾಂ ಕುರ್ಯಾತ್ ॥

ಕಾಲಿಂದೀಭೇದನ! ನೀನು ಜಯಶೀಲನಾಗು. ನನ್ನೆದುರಿಗೆ ಆವಿರ್ಭವಿಸಿ ನನಗಭಿಮುಖನಾಗು) ಎಂಬ ಮಂತ್ರದಿಂದ ಆಸನವನ್ನೂ ಪಾದ್ಯ ಮತ್ತು ಅರ್ಘ್ಯಗಳನ್ನೂ ಅರ್ಪಿಸುವುದಲ್ಲದೆ ಸ್ನಾನ, ಮಧುಪರ್ಕ, ಧೂಪ, ದೀಪ, ಯಜ್ಞೋಪವೀತ, ನೈವೇದ್ಯ, ವಸ್ತ್ರ, ಭೂಷಣ, ಗಂಧ, ಪುಷ್ಪ, ಅಕ್ಷತ, ಪುಷ್ಪಾಂಜಲಿ (ಮಂತ್ರಪುಷ್ಪ) ನೀರಾಜನ ಮೊದಲಾದ ಸಕಲ ಉಪಚಾರಗಳನ್ನೂ ಪ್ರತ್ಯೇಕವಾಗಿ ಮಾಡಬೇಕು. ಮತ್ತು ಓಂ ವಿಷ್ಣವೇ ಮಧುಸೂದನಾಯ, ವಾಮನಾಯ, ತ್ರಿವಿಕ್ರಮಾಯ, ಶ್ರೀಧರಾಯ, ಹೃಷೀಕೇಶಾಯ, ಪದ್ಮನಾಭಾಯ, ದಾಮೋದರಾಯ, ಸಂಕರ್ಷಣಾಯ, ವಾಸುದೇವಾಯ, ಪ್ರದ್ಯುಮ್ನಾಯ, ಅನಿರುದ್ಧಾಯ, ಅಧೋಕ್ಷಜಾಯ, ಪುರುಷೋತ್ತಮಾಯ, ಶ್ರೀಕೃಷ್ಣಾಯ ನಮಃ " ಎಂಬ ಮಂತ್ರಗಳಿಂದ ಕ್ರಮವಾಗಿ ಪಾದ, ಗುಲ್ಫ, ಜಾನು, ಊರು, ಕಟಿ, ಉದರ, ಪಾರ್ಶ್ವ, ಪೃಷ್ಠ, ಭುಜ, ಕಂಧರ, ನೇತ್ರ ಶಿರಸ್ಸುಗಳನ್ನು ಪ್ರತ್ಯೇಕವಾಗಿ ಪೂಜಿಸಬೇಕು. (ವಿಷ್ಣವೇ ನಮಃ ಪಾದೌ ಪೂಜಯಾಮಿ, ಮಧುಸೂದನಾಯ ನಮಃ ಗುಲ್ಫೇ ಪೂಜಯಾಮಿ, ಎಂಬೀ ಕ್ರಮದಿಂದ ಸರ್ವಾಂಗಗಳನ್ನೂ ಅರ್ಚಿಸಬೇಕು.) ಇದಾದನಂತರ ಶಂಖ, ಚಕ್ರ, ಗದೆ, ಪದ್ಮ, ಅಸಿ (ನಂದಕವೆಂಬ ಕತ್ತಿ), ಧನಸ್ಸು (ಶಾರ್ಙ್ಗ) ಬಾಣಗಳು, ಹಲ, ಮುಸಲ, ಕೌಸ್ತುಭ, ವನಮಾಲೆ, ಶ್ರೀವತ್ಸ, ಪೀತಾಂಬರ, ನೀಲಾಂಬರ, ವಂಶೀವೇತ್ರ

ಅಥ ಶಂಖಚಕ್ರಗದಾಪದ್ಮಾಸಿಧನುರ್ಬಾಣಹಲಮುಸಲಕೌಸ್ತುಭವನಮಾಲಾಶ್ರೀವತ್ಸಪೀತಾಂಬರನೀಲಾಂಬರವಂಶೀವೇತ್ರಗರುಡಾಂಕತಾಲಾಂಕರಥದಾರುಕಸುಮತಿಕುಮುದಕುಮುದಾಕ್ಷ ಶ್ರೀದಾಮಾದೀನ್ಪ್ರಣವಪೂರ್ವೇಣ ಚತುರ್ಥ್ಯಂತೇನ ನಮಃ ಸಂಯುಕ್ತೇನ ನಾಮಮಂತ್ರೇಣ ಪೃಥಕ್ಸಂಪೂಜ್ಯ। ತಥಾ ವಿಷ್ವಕ್ಸೇನವೇದವ್ಯಾಸದುರ್ಗಾವಿನಾಯಕದಿಕ್ಪಾಲಗ್ರಹಾದೀನ್ಕಮಲೇ ಸರ್ವತಃ । ಸ್ವೇಸ್ವೇ ಸ್ಥಾನೇ ಸಂಪೂಜಯೇತ್। ಪುನಃ ಪರಿಸಮೂಹನಾದಿಸ್ಥಾಲೀಪಾಕವಿಧಾನೇನ ವೈಶ್ವಾನರಂ ಸಂಪೂಜ್ಯ ಪೂರ್ವೋಕ್ತೇನ ಮೂಲಮಂತ್ರೇಣ ಪಂಚವಿಂಶತಿಸಹಸ್ರಾಣ್ಯಾಹುತೀರ್ಜುಹುಯಾತ್ । ತಥಾಷ್ಟೌ ಸಹಸ್ರಾಣಿ ದ್ವಾದಶಾಕ್ಷರೇಣ ತಥಾಷ್ಟೌ ಸಹಸ್ರಾಣಿ ಚತುರ್ವ್ಯೂಹಮಂತ್ರೇಣಾಹುತೀರ್ಜುಹುಯಾತ್। ತತೋಽಗ್ನಿಂ ಪ್ರದಕ್ಷಿಣೀಕೃತ್ಯ ನಮಸ್ಕೃತ್ಯಾಚಾರ್ಯಂಮಹಾರ್ಹವಸ್ತ್ರಸುವರ್ಣಾಭರಣತಾಮ್ರಪಾತ್ರಸವತ್ಸಗೋಸುವರ್ಣದಕ್ಷಿಣಾಭಿಃ ಸಂಪೂಜ್ಯ, ತಥಾ ಬ್ರಾಹ್ಮಣಾನ್ಭೋಜನಾದ್ಯೈಃ ಸಂಪೂಜ್ಯ ನಗರಜನೇಭ್ಯೋ ಭೋಜನಂ ದತ್ವಾಚಾರ್ಯಾನ್ಪ್ರಣಮೇತ್। ಇತ್ಥಂ ಬಲಸ್ಯ ಪಟಲಾನುಸಾರೇಣ ಯೋಽನುಸ್ಮರತಿ

(ಕೊಳಲು) ಗರುಡಧ್ವಜದ ಮತ್ತು ತಾಲಧ್ವಜದ ರಥಗಳು, ಕುಮುದ, ಕುಮುದಾಕ್ಷ, ಶ್ರೀದಾಮ ಮೊದಲಾದ ಅನುಚರರು ಇವರೆಲ್ಲರನ್ನೂ ಓಂಕಾರಪೂರ್ವಕವೂ, ನಮೋಂತವೂ ಆದ ಚತುರ್ಥ್ಯಂತ ನಾಮಮಂತ್ರಗಳಿಂದ ಬೇರೆಬೇರೆಯಾಗಿ ಅರ್ಚಿಸಬೇಕು. (ಓಂ ಶಂಖಾಯನಮಃ, ಓಂ ಚಕ್ರಾಯನಮಃ, ಓಂ ಗದಾಯೈ ನಮಃ ಎಂಬೀ ರೀತಿಯಾದ ನಾಮಮಂತ್ರಗಳಿಂದ ಅರ್ಚಿಸಬೇಕು.) ವಿಷ್ವಕ್ಸೇನ, ವೇದವ್ಯಾಸ, ದುರ್ಗಾ. ಗಣಪತಿ, ದಿಕ್ಪಾಲಕ, ನವಗ್ರಹಗಳು ಮೊದಲಾದವರನ್ನು ಆ ಸಿಂಹಪೀಠದ ಕೆಳಗಡೆ ಬರೆದಿರುವ ಕಮಲದಲ್ಲಿ ಸುತ್ತಲೂ ಅವರವುಗಳ ಸ್ಥಾನದಲ್ಲಿ ಪೂಜಿಸಬೇಕು, ಅನಂತರ ಹೋಮಕುಂಡದ ಬಳಿಗೆ ಬಂದು ಪರಿಸಮೂಹಾದಿ ಸ್ಥಾಲೀಪಾಕಕ್ರಮದಿಂದ ಯಜ್ಞೇಶ್ವರನನ್ನು ಸಂಪೂಜಿಸಿದ ಬಳಿಕ ಮೇಲೆ ಹೇಳಿದ "ಓಂ, ಕ್ಲೀಂ, ಕಾಳಿಂದೀ ಭೇದನಾಯ ಸಂಕರ್ಷಣಾಯ ಸ್ವಾಹಾ" ಎಂಬ ಮೂಲ ಮಂತ್ರದಿಂದ ಇಪ್ಪತ್ತೈದು ಸಹಸ್ರಾವೃತ್ತಿ ಆಹುತಿಗಳನ್ನು ಅರ್ಪಿಸಬೇಕು. ಆಮೇಲೆ "ಓಂ ನಮೋ ಭಗವತೇ ವಾಸುದೇವಾಯ" ಎಂಬ ದ್ವಾದಶಾಕ್ಷರ ಮಂತ್ರದಿಂದ

ಇಹಾಮುತ್ರ ಸಿದ್ಧಿಸಮೃದ್ಧಿಭಿಃ ಸಂವೃತೋ ಭವತಿ ॥
ಶ್ರೀರಾಮಪಟಲಂ ಗುಹ್ಯಂ ಮಯಾ ತೇ ಹ್ಯನುವರ್ಣಿತಂ ।
ಸರ್ವಸಿದ್ಧಿಪ್ರದಂ ರಾಜನ್ಕಿಂ ಭೂಯಃ ಶ್ರೋತುಮಿಚ್ಛಸಿ ॥ ೨೨ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ ಪ್ರಾಡ್ವಿಪಾಕ-ದುರ್ಯೋಧನಸಂವಾದೇ ಪದ್ಧತಿಪಟಲವರ್ಣನಂ ನಾಮ ದಶಮೋಽಧ್ಯಾಯಃ.

ಎಂಟುಸಾವಿರ ಆಹುತಿಗಳನ್ನೂ " ಓಂ ನಮೋ ವಾಸುದೇವಾಯ, ಪ್ರದ್ಯುಮ್ನಾಯ, ಅನಿರುದ್ಧಾಯ, ಸಂಕರ್ಷಣಾಯ " ಎಂಬ ಚತುರ್ವ್ಯೂಹ ಮಂತ್ರದಿಂದ ಎಂಟು ಸಹಸ್ರ ಆಹುತಿಗಳನ್ನೂ ಯಜ್ಞೇಶ್ವರನಿಗರ್ಪಿಸಬೇಕು. ಈ ರೀತಿ ಹೋಮಮಾಡಿದ ನಂತರ ಯಜ್ಞೇಶ್ವರನನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸಿ ಆಚಾರ್ಯನಿಗೆ ಮಹಾರ್ಹವಾದ ವಸ್ತ್ರಗಳನ್ನೂ, ಸ್ವರ್ಣಾಭರಣಗಳನ್ನೂ, ತಾಮ್ರಪಾತ್ರೆಗಳನ್ನೂ, ವತ್ಸಸಹಿತವಾದ ಗೋವುಗಳನ್ನೂ. (ಹಾಲು ಕೊಡುವ ಹಸು) ಸುವರ್ಣದಕ್ಷಿಣೆಯನ್ನೂ ಇತ್ತು ಸತ್ಕರಿಸಿ ಬ್ರಾಹ್ಮಣಾದಿಗಳನ್ನು ಭೋಜನಾದಿಗಳಿಂದ ತೃಪ್ತಿಪಡಿಸುವುದಲ್ಲದೆ ಇತರೆ ಪಟ್ಟಣಿಗರೆಲ್ಲರಿಗೂ ಊಟಉಪಚಾರಗಳನ್ನು ನೆರವೇರಿಸಿ ಆಚಾರ್ಯರನ್ನು ನಮಸ್ಕರಿಸಬೇಕು. ಇದೀಗ ಬಲಭದ್ರಪಟಲವು. ಇದಕ್ಕೆ ಅನುಸಾರವಾಗಿ ಯಾವ ಸಾಧಕನು ನಡೆಯುವನೋ ಆತನಿಗೆ ಇಹಪರಗಳಲ್ಲಿ ಸಿದ್ಧಿಯೂ, ಭೋಗಭಾಗ್ಯಗಳೂ ಉಂಟಾಗುವುವು. ಓ ರಾಜೇಂದ್ರ ! ಅತಿರಹಸ್ಯವಾದೀ ಬಲರಾಮಪಟಲವನ್ನು ನಿನಗೆ ತಿಳಿಸಿರುವೆನು. ಇದು ಸಕಲವಾದ ಸಿದ್ಧಿಗಳನ್ನೂ ಕೈಗೂಡಿಸುವುದು. ಮತ್ತೆ ಏನನ್ನು ಕೇಳಬೇಕೆಂದಿರುವೆ ? ಎಂದನು.

ಇಲ್ಲಿಗೆ ಶ್ರೀಗರ್ಗಸಂಹಿತೆಯ ಬಲಭದ್ರಖಂಡದಲ್ಲಿ ಬಲಭದ್ರಪದ್ಧತಿಪಟಲ ವರ್ಣನವೆಂಬ ಹತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ಏಕಾದಶೋಽಧ್ಯಾಯಃ

॥ ದುರ್ಯೋಧನ ಉವಾಚ ॥

ಸ್ತೋತ್ರಂ ಶ್ರೀಬಲದೇವಸ್ಯ ಪ್ರಾಡ್ವಿಪಾಕ ಮಹಾಮುನೇ ।
ವದ ಮಾಂ ಕೃಪಯಾ ಸಾಕ್ಷಾತ್ಸರ್ವಸಿದ್ಧಿಪ್ರದಾಯಕಂ ॥ ೧ ॥

॥ ಪ್ರಾಡ್ವಿಪಾಕ ಉವಾಚ ॥

ಸ್ತವರಾಜಂ ತು ರಾಮಸ್ಯ ವೇದವ್ಯಾಸಕೃತಂ ಶುಭಂ ।
ಸರ್ವಸಿದ್ಧಿಪ್ರದಂ ರಾಜನ್ ಶೃಣು ಕೈವಲ್ಯದಂ ನೃಣಾಂ ॥ ೨ ॥

ಹನ್ನೊಂದನೆಯ ಅಧ್ಯಾಯವು

೧. ಈ ರೀತಿಯಾಗಿ ಪ್ರಾಡ್ವಿಪಾಕಮುನಿಯು ಪ್ರಶ್ನಿಸಲು ದುರ್ಯೋಧನನು ಆತನನ್ನು ಕುರಿತು "ಓ ಮಹರ್ಷಿ! ಸರ್ವಸಿದ್ಧಿಪ್ರದಾಯಕವಾದ ಶ್ರೀಬಲಭದ್ರ ಸ್ತೋತ್ರವನ್ನು ದಯವಿಟ್ಟು ನನಗೆ ತಿಳಿಸಬೇಕು" ಎಂದು ಪ್ರಾರ್ಥಿಸಿದನು.

೨. ಆಗ ಪ್ರಾಡ್ವಿಪಾಕಮುನಿಯು ಇಂತು ನುಡಿಯತೊಡಗಿದನು. ರಾಜೇಂದ್ರ! ಆಲಿಸು. ಈ ಬಲಭದ್ರ ಸ್ತವರಾಜವನ್ನು ವೇದವ್ಯಾಸಮುನಿಯು ರಚಿಸಿರುವನು. ಇದು ಸಕಲ ಶುಭಗಳನ್ನೂ ಕರುಣಿಸುವುದು. ಸಮಸ್ತವಾದ ಸಿದ್ಧಿಗಳನ್ನೂ ಉಂಟುಮಾಡಿ ಕೊಡುವುದಲ್ಲದೆ ಕೊನೆಗೆ ಮೋಕ್ಷವನ್ನೂ ಸಿದ್ಧಿಮಾಡಿಕೊಡುವುದು.

ದೇವಾದಿದೇವ ಭಗವನ್ಕಾಮಪಾಲ ನಮೋಽಸ್ತು ತೇ ।
ನಮೋಽನಂತಾಯ ಶೇಷಾಯ ಸಾಕ್ಷಾದ್ರಾಮಾಯ ತೇ ನಮಃ ॥ ೩ ॥

ಧರಾಧರಾಯ ಪೂರ್ಣಾಯ ಸ್ವಧಾಮ್ನೇ ಸೀರಪಾಣಯೇ ।
ಸಹಸ್ರಶಿರಸೇ ನಿತ್ಯಂ ನಮಃ ಸಂಕರ್ಷಣಾಯ ತೇ ॥ ೪ ॥

ರೇವತೀರಮಣ ತ್ವಂ ವೈ ಬಲದೇವಾಚ್ಯುತಾಗ್ರಜ ।
ಹಲಾಯುಧ ಪ್ರಲಂಬಘ್ನ ಪಾಹಿ ಮಾಂ ಪುರುಷೋತ್ತಮ ॥ ೫ ॥

ಬಲಾಯ ಬಲಭದ್ರಾಯ ತಾಲಾಂಕಾಯ ನಮೋ ನಮಃ ।
ನೀಲಾಂಬರಾಯ ಗೌರಾಯ ರೌಹಿಣೇಯಾಯ ತೇ ನಮಃ ॥ ೬ ॥

ಧೇನುಕಾರಿರ್ಮುಷ್ಟಿಕಾರಿಃ ಕೂಟಾರಿರ್ಬಲ್ವಲಾಂತಕಃ ।
ರುಕ್ಮ್ಯರಿಃ ಕೂಪಕರ್ಣಾರಿಃ ಕುಂಭಾಂಡಾರಿಸ್ತ್ವಮೇವ ಹಿ ॥ ೭ ॥

---

೩. ಈ ಸ್ತವರಾಜವು ಈ ರೀತಿಯಿರುವುದು. " ಓ ದೇವಾದಿದೇವ, ಭಗವಂ, ಕಾಮಪಾಲ ನಿನಗೆ ನಮಸ್ಕಾರವು. ಅನಂತನೂ, ಶೇಷನೂ, ಬಲರಾಮಸ್ವರೂಪ ದಿಂದ ಪ್ರತ್ಯಕ್ಷನಾಗಿರುವವನೂ ಆದ ನಿನಗೆ ನಮಸ್ಕಾರವು.

೪. ಈ ಭೂಮಂಡಲವನ್ನು ಧರಿಸಿರುವವನೂ, ಪೂರ್ಣಾವತಾರನೂ, ತೇಜೋ ರೂಪನೂ, ಸೀರಪಾಣಿಯೂ, ಸಹಸ್ರ ಶಿರಸ್ಸುಗಳಿಂದ ವಿರಾಜಿಸುವವನೂ ಆದ ಸಂಕರ್ಷಣಮೂರ್ತಿಯಾದ ನಿನ್ನನ್ನು ನಮಸ್ಕರಿಸುವೆನು.

೫. ಓ ರೇವತೀರಮಣ! ಬಲದೇವ! ಕೃಷ್ಣಾಗ್ರಜ! ಹಲಾಯುಧ! ಪ್ರಲಂಬಸಂಹಾರಿ! ಓ ಪುರುಷಶ್ರೇಷ್ಠ! ನನ್ನನ್ನು ಕಾಪಾಡು.

೬. ಓ ಬಲದೇವ! ಬಲಭದ್ರನೂ, ತಾಲಧ್ವಜನೂ, ನೀಲವಸನದಿಂದಲೂ, ಗೌರವರ್ಣದಿಂದಲೂ ರಾರಾಜಿಸುವವನೂ, ರೋಹಿಣೀ ಪುತ್ರನೂ ಆದ ನಿನ್ನನ್ನು ನಮಿಸುವೆನು.

೭. ಓ ಬಲಭದ್ರ! ಧೇನುಕನನ್ನು ಸಂಹರಿಸಿದವನು ನೀನು! ಮುಷ್ಟಿಕನನ್ನು ನಿಗ್ರಹಿಸಿದವನು ನೀನು! ಕೂಟನನ್ನೂ, ವಲ್ವಲನನ್ನೂ ಸಾವಿಗೀಡು ಮಾಡಿದವನು ನೀನು. ನೀನೇ ರುಕ್ಮಿಯನ್ನೂ, ಕೂಪಕರ್ಣನನ್ನೂ, ಕುಭಾಂಡನನ್ನೂ ಕೊಂದವನು.

ಕಾಲಿಂದೀಭೇದನೋಽಸಿ ತ್ವಂ ಹಸ್ತಿನಾಪುರಕರ್ಷಕಃ ।
ದ್ವಿವಿದಾರಿರ್ಯಾದವೇಂದ್ರೋ ವ್ರಜಮಂಡಲಮಂಡನಃ　　　॥ ೮ ॥

ಕಂಸಭ್ರಾತೃಪ್ರಹಂತಾಸಿ ತೀರ್ಥಯಾತ್ರಾಕರಃ ಪ್ರಭುಃ ।
ದುರ್ಯೋಧನಗುರುಃ ಸಾಕ್ಷಾತ್ಪಾಹಿ ಪಾಹಿ ಪ್ರಭೋ ತ್ವತಃ　　　॥ ೯ ॥

ಜಯ ಜಯಾಽಚ್ಯುತ ದೇವ ಪರಾತ್ಪರ
ಸ್ವಯಮನಂತ ದಿಗಂತಗತಶ್ರುತ ।
ಸುರಮುನೀಂದ್ರ ಫಣೀಂದ್ರ ವರಾಯ ತೇ
ಮುಸಲಿನೇ ಬಲಿನೇ ಹಲಿನೇ ನಮಃ　　　॥ ೧೦ ॥

---

೮. ಓ ರಾಮ ! ಕಾಲಿಂದಿಯನ್ನು ಸೀಳುಸೀಳಾಗುವಂತೆ ಭೇದಿಸಿದವನೂ, ಕುರುರಾಜಧಾನಿಯಾದ ಹಸ್ತಿನಾವತಿಯನ್ನು ಸೆಳೆದವನೂ, ದ್ವಿವಿದನೆಂಬ ವಾನರನನ್ನು ಸಂಹರಿಸಿದವನೂ, ಯಾದವರಿಗೆಲ್ಲಾ ಪ್ರಭುವೆನಿಸಿ ವ್ರಜಮಂಡಲಕ್ಕೆ ಭೂಷಣನೆನಿಸಿದವನೂ ನೀನೇ ಆಗಿರುವೆ.

೯. ಹೇ ಪ್ರಭೋ ! ನೀನು ಕಂಸನ ತಮ್ಮನನ್ನು ನಿಗ್ರಹಿಸಿದೆ. ಲೋಕವ್ಯವಸ್ಥೆಗಾಗಿ ತೀರ್ಥಯಾತ್ರೆಯನ್ನು ಮಾಡಿದೆ. ದುರ್ಯೋಧನನಿಗೆ ಗುರುವಾಗಿ ಗದಾಶಿಕ್ಷಣವನ್ನಿತ್ತೆ. ಓ ದೇವ ! ನಮ್ಮನ್ನು ಕಾಪಾಡು ! ಕಾಪಾಡು.

೧೦. ಹೇ ನಾಶರಹಿತ ! ಹೇ ತೇಜೋಮಯ ! ಹೇ ಪರಾತ್ಪರ ! ನೀನು ಸರ್ವೋತ್ಕರ್ಷದಿಂದ ಮೆರೆಯುವವನಾಗು. ದಿಕ್ಕುದಿಕ್ಕುಗಳಲ್ಲಿಯೂ ಅನಂತನೆಂಬ ದಿವ್ಯನಾಮದಿಂದ ಪ್ರಸಿದ್ಧನಾಗಿರುವ ಓ ಪ್ರಭು, ನೀನು ಜಯಶೀಲನಾಗು. ದೇವತೆಗಳಿಗೂ, ಮಹರ್ಷಿಗಳಿಗೂ ಪ್ರಭುವೂ, ಫಣಿರಾಜನೂ, ಮುಸಲಹಲಧಾರಿಯೂ, ಮಹಾಬಲನೂ ಆದ ಓ ಪುರುಷಶ್ರೇಷ್ಠ ! ನಿನ್ನನ್ನು ನಮಸ್ಕರಿಸುವೆನು.

ಯಃ ಪಠೇತ್ಸತತಂ ಸ್ತವನಂ ನರಃ
ಸ ತು ಹರೇಃ ಪರಮಂ ಪದಮಾವ್ರಜೇತ್ ।
ಜಗತಿ ಸರ್ವಬಲಂ ತ್ವರಿಮರ್ದನಂ
ಭವತಿ ತಸ್ಯ ಧನಂ ಸ್ವಜನಂ ಧನಂ ॥ ೧೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಬಲಭದ್ರಖಂಡೇ
ಬಲಭದ್ರಸ್ತವರಾಜವರ್ಣನಂ ನಾಮ
ಏಕಾದಶೋಽಧ್ಯಾಯಃ.

---

೧೧. ಯಾವ ಮಾನವನು ಈ ಸ್ತವರಾಜವನ್ನು ಪ್ರತಿದಿನವೂ ಪಠಿಸುವನೋ ಅವನು ಉತ್ತಮೋತ್ತಮವಾದ ಶ್ರೀಹರಿಯ ದಿವ್ಯಲೋಕವನ್ನು ಪಡೆಯುವನು. ಮತ್ತು ಆ ಮಾನವನು ಇಹಲೋಕದಲ್ಲಿರುವವರೆಗೂ ಸಕಲ ಬಲಗಳಿಂದಲೂ ಪರಿವೃತನಾಗಿ ಶತ್ರುಗಳನ್ನು ನಿಗ್ರಹಿಸುವುದಲ್ಲದೆ ಬೇಕಾದಷ್ಟು ಧನವನ್ನೂ, ಆಪ್ತರಾದ ಜನರನ್ನೂ ಪಡೆದು ಸುಖಿಸುವನು.

ಇಲ್ಲಿಗೆ ಗರ್ಗಸಂಹಿತೆಯ ಬಲಭದ್ರಖಂಡದಲ್ಲಿ ಸ್ತವರಾಜವರ್ಣನವೆಂಬ
ಹನ್ನೊಂದನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ದ್ವಾದಶೋಽಧ್ಯಾಯಃ

॥ ದುರ್ಯೋಧನ ಉವಾಚ ॥

ಗೋಪೀಭ್ಯಃ ಕವಚಂ ದತ್ತಂ ಗರ್ಗಾಚಾರ್ಯೇಣ ಧೀಮತಾ ।
ಸರ್ವರಕ್ಷಾಕರಂ ದಿವ್ಯಂ ದೇಹಿ ಮಹ್ಯಂ ಮಹಾಮುನೇ ॥ ೧ ॥

॥ ಪ್ರಾಡ್ವಿಪಾಕ ಉವಾಚ ॥

ಸ್ನಾತ್ವಾ ಜಲೇ ಕ್ಷೌಮಧರಃ ಕುಶಾಸನಃ
ಪವಿತ್ರಪಾಣಿಃ ಕೃತಮಂತ್ರಮಾರ್ಜನಃ ।
ಸ್ಮೃತ್ವಾಥ ನತ್ವಾ ಬಲಮಚ್ಯುತಾಗ್ರಜಂ
ಸಂಧಾರಯೇದ್ವರ್ಮ ಸಮಾಹಿತೋ ಭವೇತ್ ॥ ೨ ॥

ಹನ್ನೆರಡನೆಯ ಅಧ್ಯಾಯವು

೧. ಬಳಿಕ ದುರ್ಯೋಧನನು ಪ್ರಾಡ್ವಿಪಾಕಮುನಿಯನ್ನು ಕುರಿತು "ಓ ಮಹರ್ಷೀ! ಮಹಾಪ್ರಾಜ್ಞನಾದ ಗರ್ಗಾಚಾರ್ಯನು ಗೋಪಿಯರಿಗೆ ಬಲಭದ್ರ ಕವಚವನ್ನು ಉಪದೇಶಿಸಿದನಲ್ಲವೇ ? ಸಕಲ ರಕ್ಷಾಕರವಾದ ಆ ದಿವ್ಯಕವಚವನ್ನು ನನಗೆ ದಯವಿಟ್ಟು ಉಪದೇಶಿಸಬೇಕು" ಎಂದು ಪ್ರಾರ್ಥಿಸಲು,

೨. ಆ ಮಹರ್ಷಿಯು ಇಂತು ಹೇಳತೊಡಗಿದನು :—ಸಾಧಕನಾದವನು ಶುದ್ಧವಾದ ಜಲದಲ್ಲಿ ಸ್ನಾನಮಾಡಿ ನಾರುಮಡಿಯನ್ನುಟ್ಟು ದರ್ಭಾಸನದ ಮೇಲೆ ಕುಳಿತುಕೊಂಡು ಮಂತ್ರಪೂರ್ವಕವಾಗಿ ಮಾರ್ಜನೆಯನ್ನು ಮಾಡಿಕೊಂಡನಂತರ ಶ್ರೀಕೃಷ್ಣನ ಅಗ್ರಜನಾದ ಆ ಬಲಭದ್ರನನ್ನು ಮನಸ್ಸಿನಲ್ಲಿ ಧ್ಯಾನಿಸಿ ಆತನಿಗೆ ನಮಸ್ಕರಿಸಿದ ಬಳಿಕ ಚಿತ್ತೈಕಾಗ್ರತೆಯಿಂದ ಈ ಕವಚವನ್ನು ಧರಿಸಬೇಕು.

ಗೋಲೋಕಧಾಮಾಧಿಪತಿಃ ಪರೇಶ್ವರಃ
ಪರೇಷು ಮಾಂ ಪಾತು ಪವಿತ್ರಕೀರ್ತನಃ ।
ಭೂಮಂಡಲಂ ಸರ್ಷಪವದ್ವಿಲಕ್ಷ್ಯತೇ
ಯನ್ಮೂರ್ಧ್ನಿ ಮಾಂ ಪಾತು ಸ ಭೂಮಿಮಂಡಲೇ ॥ ೩ ॥

ಸೇನಾಸು ಮಾಂ ರಕ್ಷತು ಸೀರಪಾಣಿ-
ರ್ಯುದ್ಧೇ ಸದಾ ರಕ್ಷತು ಮಾಂ ಹಲೀ ಚ ।
ದುರ್ಗೇಷು ಚಾವ್ಯಾನ್ಮುಸಲೀ ಸದಾ ಮಾಂ
ವನೇಷು ಸಂಕರ್ಷಣ ಆದಿದೇವಃ ॥ ೪ ॥

ಕಲಿಂದಜಾವೇಗಹರೋ ಜಲೇಷು
ನೀಲಾಂಬರೋ ರಕ್ಷತು ಮಾಂ ಸದಾಗ್ನೌ ।
ವಾಯೌ ಚ ರಾಮೋಽವತು ಖೇ ಬಲಶ್ಚ
ಮಹಾರ್ಣವೇಽನಂತವಪುಃ ಸದಾ ಮಾಂ ॥ ೫ ॥

---

೩. ದಿವ್ಯವಾದ ಗೋಲೋಕಕ್ಕೆ ಅಧಿಪತಿಯೂ, ಪರಮಪುರುಷನೂ, ಪಾವನವಾದ ಕೀರ್ತಿಯುಳ್ಳವನೂ ಆದ ಆ ದೇವನು ಶತ್ರುಗಳ ನಡುವೆ ನನ್ನನ್ನು ಕಾಪಾಡಲಿ. ಯಾವಾತನ ಹೆಡೆಯೊಂದರ ಮೂಲೆಯಲ್ಲಿ ಸಮಸ್ತವಾದ ಈ ಭೂಮಂಡಲವೆಲ್ಲವೂ ಸಾಸಿವೆಯ ಕಾಳಿನಷ್ಟು ಸಣ್ಣದಾಗಿ ತೋರುವುದೋ ಆ ಅನಂತನು ಭೂಮಿಯ ಮೇಲೆ ನನ್ನನ್ನು ರಕ್ಷಿಸಲಿ.

೪. ಸೇನೆಗಳ ನಡುವೆ ಇರುವ ನನ್ನನ್ನು ಸೀರ (ನೇಗಿಲು) ಪಾಣಿಯು ಕಾಪಾಡಲಿ. ಯುದ್ಧದಲ್ಲಿ ಹಲಧಾರಿಯು ಸರ್ವದಾ ನನ್ನನ್ನು ಸಲಹಲಿ. ದುರ್ಗ ಪ್ರದೇಶಗಳಲ್ಲಿ ಮುಸಲಧರನು ನನ್ನನ್ನು ರಕ್ಷಿಸಲಿ. ಆದಿದೇವನಾದ ಸಂಕರ್ಷಣನು ಅಡವಿಯ ನಡುವೆ ನನ್ನನ್ನು ಕಾಪಾಡಲಿ.

೫. ನಾನು ನೀರಿನ ನಡುವಿರುವಾಗ ಕಾಲಿಂದಿಯ ದರ್ಪವನ್ನು ನಿಗ್ರಹಿಸಿದ ಆ ಪ್ರಭುವು ಸಂರಕ್ಷಿಸಲಿ. ನೀಲವಸನಧಾರಿಯಾದ ಆ ದೇವನು ಸರ್ವಕಾಲ ದಲ್ಲಿಯೂ ಬೆಂಕಿಯಿಂದ ನನ್ನನ್ನು ಕಾಪಾಡಲಿ. ಗಾಳಿಯ ನಡುವೆ ರಾಮನೂ, ಆಕಾಶಮಧ್ಯದಲ್ಲಿ ಬಲನೂ ಮಹಾಸಮುದ್ರದಲ್ಲಿ ಅನಂತನೂ ನನ್ನನ್ನು ಸಲಹಲಿ.

ಶ್ರೀವಾಸುದೇವೋಽವತು ಪರ್ವತೇಷು
ಸಹಸ್ರಶೀರ್ಷಾ ಚ ಮಹಾವಿವಾದೇ ।
ರೋಗೇಷು ಮಾಂ ರಕ್ಷತು ರೌಹಿಣೇಯೋ
ಮಾಂ ಕಾಮಪಾಲೋಽವತು ವಾ ವಿಪತ್ಸು ॥ ೬ ॥

ಕಾಮಾತ್ಸದಾ ರಕ್ಷತು ಧೇನುಕಾರಿಃ
ಕ್ರೋಧಾತ್ಸದಾ ಮಾಂ ದ್ವಿವಿದಪ್ರಹಾರೀ ।
ಲೋಭಾತ್ಸದಾ ರಕ್ಷತು ಬಲ್ವಲಾರಿ-
ರ್ಮೋಹಾತ್ಸದಾ ಮಾಂ ಕಿಲ ಮಾಗಧಾರಿಃ ॥ ೭ ॥

ಪ್ರಾತಃ ಸದಾ ರಕ್ಷತು ವೃಷ್ಣಿಧುರ್ಯಃ
ಪ್ರಾಹ್ಣೇ ಸದಾ ಮಾಂ ಮಥುರಾಪುರೇಂದ್ರಃ ।
ಮಧ್ಯಂದಿನೇ ಗೋಪಸಖಃ ಪ್ರಪಾತು
ಸ್ವರಾಟ್ ಪರಾಹ್ಣೇಽವತು ಮಾಂ ಸದೈವ ॥ ೮ ॥

---

೬. ಶ್ರೀವಾಸುದೇವನು ಪರ್ವತಗಳಲ್ಲಿ ನನ್ನನ್ನು ಸಂರಕ್ಷಿಸಲಿ. ಭಾರಿ ಜಗಳಗಳಲ್ಲಿ ಸಹಸ್ರಶೀರ್ಷನು ನನ್ನನ್ನು ಸಲಹಲಿ. ರೋಗಗಳು ಪ್ರಾಪ್ತವಾದಾಗ ರೌಹಿಣೇಯನೂ, ಇತರ ಆಪತ್ತುಗಳಲ್ಲಿ ಕಾಮಪಾಲನೂ ನನ್ನನ್ನು ಕಾಪಾಡಲಿ.

೭. ಧೇನುಕಾಸುರಸಂಹಾರಿಯು ನಾನು ಕಾಮವಶನಾಗದಂತೆ ನೋಡಿಕೊಳ್ಳಲಿ. ದ್ವಿವಿದಸಂಹಾರಿಯು ಕ್ರೋಧವುಂಟಾಗದಂತೆ ನನ್ನನ್ನು ಸಲಹಲಿ. ವಲ್ವಲವೈರಿಯು ಲೋಭದಿಂದ ನನ್ನನ್ನು ಉದ್ಧರಿಸಲಿ. ಮಾಗಧವೈರಿಯು (ಜರಾಸಂಧನ ವೈರಿ) ಮೋಹವುಂಟಾಗದಂತೆ ನನ್ನನ್ನು ಸಲಹಲಿ.

೮. ವೃಷ್ಣಿಗಳ ಮುಂದಾಳಾದ ಆ ದೇವನು ಬೆಳಗ್ಗೆ ಕಾಪಾಡಲಿ. ಬಿಸಿಲೇರುವ ಹೊತ್ತಿನಲ್ಲಿ (ಹಗಲಿನ ಮೊದಲಲ್ಲಿ) ಮಥುರಾನಗರಾಧೀಶನು ಸರ್ವದಾ ರಕ್ಷಿಸಲಿ. ಮಧ್ಯಾಹ್ನವಲ್ಲಿ ಗೋಪಸಖನು ಕಾಪಾಡಲಿ. ಇಳಿಹೊತ್ತಿನಲ್ಲಿ ಸ್ವರಾಜನಾದ ಆ ಪ್ರಭುವು ಸದಾಕಾಲವೂ ಸಂರಕ್ಷಿಸಲಿ.

ಸಾಯಂ ಫಣೀಂದ್ರೋಽವತು ಮಾಂ ಸದೈವ
ಪರಾತ್ಪರೋ ರಕ್ಷತು ಮಾಂ ಪ್ರದೋಷೇ ।
ಪೂರ್ಣೇ ನಿಶೀಥೇ ಚ ದುರಂತವೀರ್ಯಃ
ಪ್ರತ್ಯೂಷಕಾಲೇಽವತು ಮಾಂ ಸದೈವ ॥ ೯ ॥

ವಿದಿಕ್ಷು ಮಾಂ ರಕ್ಷತು ರೇವತೀಪತಿ-
ರ್ದಿಕ್ಷು ಪ್ರಲಂಬಾರಿರಥೋ ಯದೂದ್ವಹಃ ।
ಊರ್ಧ್ವಂ ಸದಾ ಮಾಂ ಬಲಭದ್ರ ಆರಾ-
ತ್ತಥಾ ಸಮಂತಾದ್ಬಲದೇವ ಏವ ಹಿ ॥ ೧೦ ॥

ಅಂತಃ ಸದಾವ್ಯಾತ್ಪುರುಷೋತ್ತಮೋ ಬಹಿ-
ರ್ನಾಗೇಂದ್ರಲೀಲೋಽವತು ಮಾಂ ಮಹಾಬಲಃ ।
ಸದಾಂತರಾತ್ಮಾ ಚ ವಸನ್ಹರಿಃ ಸ್ವಯಂ
ಪ್ರಪಾತು ಪೂರ್ಣಃ ಪರಮೇಶ್ವರೋ ಮಹಾನ್ ॥ ೧೧ ॥

---

೯. ಸಂಜೆಯವೇಳೆ ಫಣಿರಾಜನು ನನ್ನನ್ನು ಎಂದೆಂದಿಗೂ ಸಲಹಲಿ. ರಾತ್ರಿಯ ಆರಂಭದಲ್ಲಿ ಪರಾತ್ಪರನು ರಕ್ಷಿಸಲಿ. ನಟ್ಟಿರುಳಿನಲ್ಲಿ ದುರಂತವಾದ ವೀರ್ಯವುಳ್ಳ ಆ ಪುರುಷನು ಕಾಪಾಡಲಿ. ಬೆಳಗಿನ ಜಾವದಲ್ಲಿಯೂ ಆ ದುರಂತ ವೀರ್ಯನೇ ನನ್ನನ್ನು ಸರ್ವದಾ ಕಾಪಾಡಲಿ.

೧೦. ವಿದಿಕ್ಕುಗಳಲ್ಲಿ ರೇವತೀರಮಣನು ನನ್ನನ್ನು ಸಲಹಲಿ. ದಿಕ್ಕುಗಳಲ್ಲಿ (ಪೂರ್ವ ಪಶ್ಚಿಮಾದಿ) ಪ್ರಲಂಬಸಂಹಾರಿಯು ಸಂರಕ್ಷಿಸಲಿ. ಕೆಳಗಡೆ ಯದೂದ್ವಹನು ಕಾಪಾಡಲಿ ಮೇಲುಗಡೆ ಬಲಭದ್ರನು ಕಾಪಾಡಲಿ. ದೂರದಲ್ಲಿಯೂ, ಸಮೀಪ ದಲ್ಲಿಯೂ, ಸುತ್ತುಮುತ್ತಲೂ ಬಲದೇವನೇ ನನ್ನನ್ನು ಸಂರಕ್ಷಣೆಮಾಡಲಿ.

೧೧. ಒಳಗೆ ಪುರುಷೋತ್ತಮನು ಸರ್ವದಾ ನನ್ನನ್ನು ಸಂರಕ್ಷಿಸಲಿ. ಹೊರಗೆ ನಾಗೇಂದ್ರಲೀಲ (ಗಜರಾಜನಂತೆ ತುಂಬಿದ ನಡಿಗೆಯುಳ್ಳವನು) ನಾದ ಮಹಾಬಲನು ನನ್ನನ್ನು ಸಲಹಲಿ. ಸರ್ವಕಾಲದಲ್ಲಿಯೂ ನಮ್ಮ ಅಂತರಂಗದಲ್ಲಿಯೇ ಸಾಕ್ಷಿಭೂತ ನಾಗಿ ನೆಲಸಿರುವ ಪರಿಪೂರ್ಣನೂ, ಪರಮಪುರುಷನೂ ಆದ ಶ್ರೀಹರಿಯೇ ಸ್ವಯಂ ನನ್ನನ್ನು ಸಂರಕ್ಷಿಸಲಿ.

ದೇವಾಸುರಾಣಾಂ ಭಯನಾಶನಂ ಚ
ಹುತಾಶನಂ ಪಾಪಚಯೇಂಧನಾನಾಂ ।
ವಿನಾಶನಂ ವಿಘ್ನಘಟಸ್ಯ ವಿದ್ಧಿ
ಸಿದ್ಧಾಸನಂ ವರ್ಮ ವರಂ ಬಲಸ್ಯ ॥ ೧೨ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಶ್ರೀಬಲಭದ್ರಖಂಡೇ
ಸ್ತೋತ್ರಕವಚವರ್ಣನಂ ನಾಮ
ದ್ವಾದಶೋಽಧ್ಯಾಯಃ

---

೧೨. "ಓ ಕುರುರಾಜ! ಈ ಬಲಭದ್ರಕವಚವು ಶ್ರೇಷ್ಠತಮವಾದುದು. ಈ ಕವಚದ ಬಲದಿಂದಲೇ ದೇವತೆಗಳೂ, ಅಸುರರೂ ತಮ್ಮ ತಮ್ಮ ಹೆದರಿಕೆಯನ್ನು ತೊರೆದಿರುವರು. ಈ ಕವಚವು ಪಾಪರಾಶಿಯೆಂಬ ಕಾಷ್ಠಸಮೂಹಕ್ಕೆ ಅಗ್ನಿಯಂತಿರುವುದು. ಇದರಿಂದ ಸಕಲ ವಿಘ್ನಗಳೂ ನಿವಾರಣೆಯಾಗುವವೆಂದು ತಿಳಿ" ಎಂದನು.

ಇಲ್ಲಿಗೆ ಗರ್ಗಸಂಹಿತಾಂತರ್ಗತವಾದ ಬಲಭದ್ರಖಂಡದಲ್ಲಿ ಸ್ತೋತ್ರಕವಚವರ್ಣನವೆಂಬ ಹನ್ನೆರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ಬಲಭದ್ರಖಂಡೇ

ತ್ರಯೋದಶೋಽಧ್ಯಾಯಃ

॥ ದುರ್ಯೋಧನ ಉವಾಚ ॥

ಬಲಭದ್ರಸ್ಯ ದೇವಸ್ಯ ಪ್ರಾಡ್ವಿಪಾಕ ಮಹಾಮುನೇ ।
ನಾಮ್ನಾಂ ಸಹಸ್ರಂ ಮೇ ಬ್ರೂಹಿ ಗುಹ್ಯಂ ದೇವಗಣೈರಪಿ ॥ ೧ ॥

॥ ಪ್ರಾಡ್ವಿಪಾಕ ಉವಾಚ ॥

ಸಾಧು ಸಾಧು ಮಹಾರಾಜ ಸಾಧು ತೇ ವಿಮಲಂ ಯಶಃ ।
ಯತ್ಪೃಚ್ಛಸೇ ಪರಮಿದಂ ಗರ್ಗೋಕ್ತಂ ದೇವದುರ್ಲಭಂ ॥ ೨ ॥

ಹದಿಮೂರನೆಯ ಅಧ್ಯಾಯವು

೧. ಆಗ ದುರ್ಯೋಧನನು " ಓ ಪ್ರಾಡ್ವಿಪಾಕಮುನೀಂದ್ರ ! ದೇವತೆಗಳಿಗೂ ಸಹ ರಹಸ್ಯವೆನಿಸಿರುವ ಆ ಬಲಭದ್ರದೇವನ ಸಹಸ್ರನಾಮಗಳನ್ನು ದಯವಿಟ್ಟು ನನಗೆ ತಿಳಿಸಬೇಕು " ಎಂದು ಪ್ರಾರ್ಥಿಸಲು ಆ ಪ್ರಾಡ್ವಿಪಾಕಮುನಿಯು ಇಂತೆಂದನು.

೨. " ಮಹಾರಾಜ ದುರ್ಯೋಧನ ಭಲೆ ! ಭಲೆ ! ದೇವತೆಗಳಿಗೂ ದುರ್ಲಭವೆನಿಸಿದ ಶ್ರೀ ಗರ್ಗಾಚಾರ್ಯಪ್ರೋಕ್ತವಾದ ಸಹಸ್ರನಾಮಗಳನ್ನು ಕೇಳಬೇಕೆಂದಿರುವೆಯಲ್ಲವೇ ? ಭಲೆ ! ಭಲೆ ! ಇದರಿಂದ ನಿನ್ನ ಯಶಸ್ಸು ಮತ್ತಷ್ಟು ಶುಭ್ರವಾಯಿತು.

ನಾಮ್ನಾಂ ಸಹಸ್ರಂ ದಿವ್ಯಾನಾಂ ವಕ್ಷ್ಯಾಮಿ ತವ ಚಾಗ್ರತಃ।
ಗರ್ಗಾಚಾರ್ಯೇಣ ಗೋಪೀಭ್ಯೋ ದತ್ತಂ ಕೃಷ್ಣಾತಟೇ ಶುಭೇ ॥

ಓಂ ಅಸ್ಯ ಶ್ರೀಬಲಭದ್ರಸಹಸ್ರನಾಮಸ್ತೋತ್ರಮಂತ್ರಸ್ಯ ಗರ್ಗಾಚಾರ್ಯ ಋಷಿಃ। ಅನುಷ್ಟುಪ್ ಛಂದಃ। ಸಂಕರ್ಷಣಃ ಪರಮಾತ್ಮಾ ದೇವತಾ। ಬಲಭದ್ರ ಇತಿ ಬೀಜಂ। ರೇವತೀತಿ ಶಕ್ತಿಃ। ಅನಂತ ಇತಿ ಕೀಲಕಂ। ಬಲಭದ್ರಪ್ರೀತ್ಯರ್ಥೇ ಜಪೇ ವಿನಿಯೋಗಃ ॥ ೩ ॥

॥ ಅಥ ಧ್ಯಾನಂ ॥

ಸ್ಫುರದಮಲಕಿರೀಟಂ ಕಿಂಕಿಣೀಕಂಕಣಾರ್ಹಂ
ಚಲದಲಕಕಪೋಲಂ ಕುಂಡಲಶ್ರೀಮುಖಾಬ್ಜಂ।
ತುಹಿನಗಿರಿಮನೋಜ್ಞಂ ನೀಲಮೇಘಾಂಬರಾಢ್ಯಂ
ಹಲಮುಸಲವಿಶಾಲಂ ಕಾಮಪಾಲಂ ಸಮೀಡೇ ॥ ೪ ॥

---

೩. ಇದೋ ನಿನ್ನಿಷ್ಟದಂತೆ ದಿವ್ಯವಾದ ಆ ಸಹಸ್ರನಾಮಗಳನ್ನು ನಿನಗೆ ತಿಳಿಸುವೆನು. ಹಿಂದೆ ಗರ್ಗಾಚಾರ್ಯನು ಮಂಗಲಕರವಾದ ಯಮುನಾನದಿ ತೀರದಲ್ಲಿ ಇದನ್ನೇ ಗೋಪಾಂಗನೆಯರಿಗೆ ಉಪದೇಶಿಸಿದ್ದನು. ಮಂಗಲಕರವಾದೀ ಬಲಭದ್ರಸಹಸ್ರನಾಮಸ್ತೋತ್ರಮಂಡಲಕ್ಕೆ ಶ್ರೀ ಗರ್ಗಾಚಾರ್ಯನು ಋಷಿಯು, ಅನುಷ್ಟುಪ್ ಛಂದಸ್ಸು, ಪರಮಪುರುಷನಾದ ಸಂಕರ್ಷಣನೇ ದೇವತೆ, ಬಲಭದ್ರನೇ ಬೀಜವು. ರೇವತಿಯು ಶಕ್ತಿ, ಅನಂತನು ಕೀಲಕವು. ಬಲಭದ್ರನ ಪ್ರೀತಿಯೇ ಫಲವಾಗಿ ಉಳ್ಳ ಜಪದಲ್ಲಿ ಈ ಮಂತ್ರದ ವಿನಿಯೋಗವು. ಈ ಮಂತ್ರವನ್ನು ಜಪಿಸುವ ಮೊದಲು ಪೂರ್ವಭಾವಿಯಾಗಿ ಈ ರೀತಿಯಾಗಿ ಬಲಭದ್ರಮೂರ್ತಿಯನ್ನು ಧ್ಯಾನಿಸಬೇಕು.

೪. "ಬೆಳಗುತ್ತಿರುವಂತಹ ಶುಭ್ರವಾದ ಕಿರೀಟ! ಕಿರುಗೆಜ್ಜೆಗಳಿಂದ ಕಂಗೊಳಿಸುತ್ತಿರುವ ಕೈಕಡಗಗಳು! ಅಲುಗುತ್ತಿರುವ ಮುಂಗುರುಳುಗಳಿಂದ ಅಲಂಕೃತವಾಗಿರುವ ಕಪೋಲಗಳು! ಕಮಲವನ್ನು ಹೋಲುತ್ತಿರುವ ದುಂಡನೆಯ ಮುದ್ದಾದ ಮುಖ! ಹಿಮಾಚಲದಂತೆ ಶುಭ್ರವಾದ ಕಾಂತಿಯಿಂದ ಮೆರೆಯುತ್ತಿರುವ ಮೈ! ಉಟ್ಟಿರುವ ಮೇಘವರ್ಣದ ನೀಲಾಂಬರ! ಧರಿಸಿರುವ ಹಲ ಮತ್ತು ಮುಸಲಗಳು! ಇವುಗಳಿಂದ ರಮಣೀಯವಾಗಿ ಕಂಗೊಳಿಸುತ್ತಿರುವ ಕಾಮಪಾಲನನ್ನು ನಾನು ಸ್ತುತಿಸುವೆನು.

ಓಂ ಬಲಭದ್ರೋ ರಾಮಭದ್ರೋ ರಾಮಃ ಸಂಕರ್ಷಣೋಽಚ್ಯುತಃ ।
ರೇವತೀರಮಣೋ ದೇವಃ ಕಾಮಪಾಲೋ ಹಲಾಯುಧಃ ॥ ೫ ॥

ನೀಲಾಂಬರಃ ಶ್ವೇತವರ್ಣೋ ಬಲದೇವೋಽಚ್ಯುತಾಗ್ರಜಃ ।
ಪ್ರಲಂಬಘ್ನೋ ಮಹಾವೀರೋ ರೌಹಿಣೇಯಃ ಪ್ರತಾಪವಾನ್ ॥ ೬ ॥

ತಾಲಾಂಕೋ ಮುಸಲೀ ಹಾಲೀ ಹರಿರ್ಯದುವರೋ ಬಲೀ ।
ಸೀರಪಾಣಿಃ ಪದ್ಮಪಾಣಿರ್ಲಗುಡೀ ವೇಣುವಾದನಃ ॥ ೭ ॥

---

೫. **ಬಲಭದ್ರಃ**–ಮಂಗಲಕರನಾದ ಬಲನು. **ರಾಮಭದ್ರಃ**–ಶುಭ್ರವಾದ ವರ್ಣದಿಂದ ರಾಮನೆಂದು ಪ್ರಸಿದ್ಧನಾದವನು. **ರಾಮಃ**–ರಾಮನು, ಎಲ್ಲರನ್ನೂ ಸಂತೋಷಗೊಳಿಸುವವನು. **ಸಂಕರ್ಷಣಃ**–ಎಲ್ಲರನ್ನೂ ಆಕರ್ಷಿಸತಕ್ಕವನು, ಅಥವಾ ಭಗವದಾಜ್ಞೆಯಂತೆ ಯೋಗಮಾಯೆಯಿಂದ ದೇವಕಿಯ ಗರ್ಭದಿಂದ ಸೆಳೆಯಲ್ಪಟ್ಟವನು. **ಅಚ್ಯುತಃ**–ನಾಶರಹಿತನು. **ರೇವತೀರಮಣಃ**–ರೈವತರಾಜಕುಮಾರಿಯ ಪ್ರಾಣಕಾಂತನು. **ದೇವಃ**–ಕಾಂತಿಯಿಂದ ಮೆರೆಯುವವನು. **ಕಾಮಪಾಲಃ**–ಮನ್ಮಥನನ್ನು ರಕ್ಷಿಸಿದವನು. **ಹಲಾಯುಧಃ**–ನೇಗಿಲೇ ಆಯುಧವಾಗಿ ಉಳ್ಳವನು.

೬–೭. **ನೀಲಾಂಬರಃ**–ನೀಲವಾದ ವಸನವುಳ್ಳವನು. **ಶ್ವೇತವರ್ಣಃ**–ಬಿಳಿದಾದ ಮೈಬಣ್ಣವಿರುವವನು. **ಬಲದೇವಃ**–ಬಲದೇವನೆಂದು ಪ್ರಸಿದ್ಧನಾದವನು. **ಅಚ್ಯುತಾಗ್ರಜಃ**–ಕೃಷ್ಣನಿಗೆ ಅಣ್ಣನಾದವನು. **ಪ್ರಲಂಬಘ್ನಃ**–ಪ್ರಲಂಬನೆಂಬ ದೈತ್ಯನನ್ನು ವಧಿಸಿದವನು. **ಮಹಾವೀರಃ**–ಅತಿಶಯವಾದ ವೀರ್ಯವುಳ್ಳವನು. **ರೌಹಿಣೇಯಃ**–ರೋಹಿಣೀ ಪುತ್ರನು. **ಪ್ರತಾಪವಾನ್**–ಪ್ರತಾಪಶಾಲಿಯು. **ತಾಲಾಂಕಃ**–ತಾಲವೃಕ್ಷವೇ ಧ್ವಜವಾಗಿ ಉಳ್ಳವನು. **ಮುಸಲೀ**–ಒನಕೆಯೇ ಆಯುಧವಾಗಿರತಕ್ಕವನು. **ಹಾಲೀ**–ಹಾಲಾ ಎಂದರೆ ವರುಣನಿಂದ ಕಳುಹಿಸಲ್ಪಟ್ಟ ವಾರುಣಿಯೆಂಬ ಮಧ್ಯವನ್ನು ಪಾನಮಾಡುವುದರಲ್ಲಿ ಆಸಕ್ತನು. **ಹರಿಃ**–ಶ್ರೀಹರಿ ಸ್ವರೂಪನು. **ಯದುವರಃ**–ಯಾದವಶ್ರೇಷ್ಠನು. **ಬಲೀ**–ಮಹಾಬಲಾಢ್ಯನು. **ಸೀರಪಾಣಿಃ**–ಸೀರವೆಂದರೆ ನೇಗಿಲನ್ನೇ ಆಯುಧವನ್ನಾಗಿ ಹಿಡಿದಿರುವವನು. **ಪದ್ಮಪಾಣಿಃ**–ಕಮಲವನ್ನು ಕೈಲಿ ಹಿಡಿದಿರುವವನು. **ಲಗುಡೀ, ವೇಣುನಾದನಃ**–ದಂಡವನ್ನು ಧರಿಸಿದವನು. ಕೊಳಲನ್ನು ನುಡಿಸುವುದರಲ್ಲಿ ಆಸಕ್ತಿಯುಳ್ಳವನು.

ಕಾಲಿಂದೀಭೇದನೋ ವೀರೋ ಬಲಪ್ರಬಲ ಊರ್ಧ್ವಗಃ।
ವಾಸುದೇವಕಲಾನಂತಃ ಸಹಸ್ರವದನಃ ಸ್ವರಾಟ್ ॥ ೮ ॥

ವಸುರ್ವಸುಮತೀಭರ್ತಾ ವಾಸುದೇವೋ ವಸೂತ್ತಮಃ।
ಯದೂತ್ತಮೋ ಯಾದವೇಂದ್ರೋ ಮಾಧವೋ ವೃಷ್ಣಿವಲ್ಲಭಃ ॥ ೯ ॥

ದ್ವಾರಕೇಶೋ ಮಾಥುರೇಶೋ ದಾನೀ ಮಾನೀ ಮಹಾಮನಾಃ।
ಪೂರ್ಣಃ ಪುರಾಣಃ ಪುರುಷಃ ಪರೇಶಃ ಪರಮೇಶ್ವರಃ ॥ ೧೦ ॥

೮-೯. **ಕಾಲಿಂದೀಭೇದನಃ**–ತನ್ನ ಮಾತಿನಂತೆ ಬರದಿದ್ದ ಯಮುನೆಯನ್ನು ಸೀಳಿಬಿಟ್ಟವನು. **ವೀರಃ**–ಮಹಾಶೂರನು. **ಬಲಪ್ರಬಲಃ**–ಬಲಾತಿಶಯದಿಂದ ಯಾರಿಗೂ ಸಗ್ಗದಂತಹವನು. **ಊರ್ಧ್ವಗಃ**–ಮೇಲಿನ ಲೋಕಗಳಲ್ಲಿಯೂ ಹೋಗಿ ಬರಬಲ್ಲವನು. **ವಾಸುದೇವಕಲಾ**–ವಾಸುದೇವನೆಂಬ ಪರಸ್ವರೂಪದ ಕಲಾ ಎಂಬ ಅವತಾರ ಪ್ರಭೇದನೆನಿಸಿದವನು. **ಅನಂತಃ**–ಅಂತ್ಯರಹಿತನು **ಸಹಸ್ರವದನಃ**–ಸಾವಿರ ಮುಖಗಳುಳ್ಳವನು–ಆದಿಶೇಷನು. **ಸ್ವರಾಟ್**–ಸ್ವರ್ಗಾಧಿಪತಿಯು. ಅಥವಾ ಸ್ವಯಂಪ್ರಕಾಶನು. **ವಸುಃ**–ಅಷ್ಟವಸು ಸ್ವರೂಪನು. **ವಸುಮತೀಭರ್ತಾ**–ಭೂಮಂಡಲಾಧಿಪತಿಯು. **ವಾಸುದೇವಃ**–ವಸುದೇವನ ಪುತ್ರನು. **ವಸೂತ್ತಮಃ**–ವಸುಗಳಲ್ಲಿ ಶ್ರೇಷ್ಠನೆನಿಸಿದವನು. **ಯದೂತ್ತಮಃ**–ಯಾದವರಲ್ಲೆಲ್ಲಾ ಮೇಲಾದವನು. **ಯಾದವೇಂದ್ರಃ**–ಯಾದವಾಧಿಪತಿಯು. **ಮಾಧವಃ**–ಲಕ್ಷ್ಮೀಕಾಂತನು. **ವೃಷ್ಣಿವಲ್ಲಭಃ**–ಯಾದವರಲ್ಲಿ ಒಂದು ಪಂಗಡದವರಾದ ವೃಷ್ಣಿಗಳಿಗೆ ಬಹಳ ಬೇಕಾದವನೂ,

೧೦. **ದ್ವಾರಕೇಶಃ**–ದ್ವಾರಕಾಧೀಶನು. **ಮಾಥುರೇಶಃ**–ಮಧುರಾನಗರಾಧಿಪತಿಯು. **ದಾನೀ**–ದಾನಶೀಲನು. **ಮಾನೀ**–ಅಭಿಮಾನಶಾಲಿಯು. **ಮಹಾಮನಾಃ**–ಉದಾರಮನಸ್ಕನು. **ಪೂರ್ಣಃ**–ಪೂರ್ಣಸ್ವರೂಪನು. **ಪುರಾಣಃ, ಪುರುಷಃ**–ಎಲ್ಲರಿಗಿಂತಲೂ ಹಿರಿಯನೆನಿಸಿದವನು. ಪುರುಷಶಬ್ದವಾಚ್ಯನು. **ಪರೇಶಃ**-ಪರಮಪುರುಷನು. **ಪರಮೇಶ್ವರಃ**–ಎಲ್ಲ ಪ್ರಭುಗಳಿಗೂ ಪ್ರಭುವೆನಿಸಿದವನು.

ಪರಿಪೂರ್ಣತಮಃ ಸಾಕ್ಷಾತ್ಪರಮಃ ಪುರುಷೋತ್ತಮಃ।
ಅನಂತಃ ಶಾಶ್ವತಃ ಶೇಷೋ ಭಗವಾನ್ಪ್ರಕೃತೇಃ ಪರಃ ॥ ೧೧ ॥

ಜೀವಾತ್ಮಾ ಪರಮಾತ್ಮಾ ಚ ಹ್ಯಂತರಾತ್ಮಾ ಧ್ರುವೋಽವ್ಯಯಃ।
ಚತುರ್ವ್ಯೂಹಶ್ಚತುರ್ವೇದಶ್ಚತುರ್ಮೂರ್ತಿಶ್ಚತುಷ್ಪದಃ ॥ ೧೨ ॥

ಪ್ರಧಾನಂ ಪ್ರಕೃತಿಃ ಸಾಕ್ಷೀ ಸಂಘಾತಃ ಸಂಘವಾನ್ಸಖೀ।
ಮಹಾಮನಾ ಬುದ್ಧಿಸಖಶ್ಚೇತೋಽಹಂಕಾರ ಆವೃತಃ ॥ ೧೩ ॥

---

೧೧. **ಸಾಕ್ಷಾತ್ಪರಿಪೂರ್ಣತಮಃ**–ಪ್ರತ್ಯಕ್ಷನಾದ ಪರಿಪೂರ್ಣಸ್ವರೂಪನು. **ಪರಮಃ**–ಅತ್ಯುತ್ತಮನಾದವನು. **ಪುರುಷೋತ್ತಮಃ**–ಪುರುಷರಲ್ಲೆಲ್ಲಾ ಶ್ರೇಷ್ಠನಾದವನು. **ಅನಂತಃ**–ಕೊನೆಯಿಲ್ಲದವನು. **ಶಾಶ್ವತಃ**–ತ್ರಿಕಾಲಾಬಾಧಿತನು. **ಶೇಷಃ**–ಆದಿಶೇಷನು **ಭಗವಾನ್**–ಷಡ್ಗುಣೈಶ್ವರ್ಯಸಂಪನ್ನನು. **ಪ್ರಕೃತೇಃ ಪರಃ**–ಪ್ರಕೃತಿಗಿಂತಲೂ ಮೇಲೆನಿಸಿದವನು.

೧೨–೧೩. **ಜೀವಾತ್ಮಾ**–ಸರ್ವಪ್ರಾಣಿಗಳಲ್ಲಿಯೂ ಜೀವರೂಪದಿಂದ ನೆಲಸಿರುವವನು. **ಪರಮಾತ್ಮಾ**–ಜೀವರಲ್ಲೆಲ್ಲಾ ಶ್ರೇಷ್ಠನಾದವನು. **ಅಂತರಾತ್ಮಾ**–ಶರೀರದ ಒಳಗೆ ಆತ್ಮಸ್ವರೂಪದಿಂದ ಇರತಕ್ಕವನು. **ಧ್ರುವಃ**–ಸ್ಥಿರನಾದವನು. **ಅವ್ಯಯಃ**–ನಾಶವಿಲ್ಲದವನು. **ಚತುರ್ವ್ಯೂಹಃ**–ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣರೆಂಬ ನಾಲ್ಕು ವ್ಯೂಹಮೂರ್ತಿಗಳ ಸ್ವರೂಪನಾದವನು. **ಚತುರ್ವೇದಃ**–ನಾಲ್ಕು ವೇದಗಳ ಸ್ವರೂಪನು. **ಚತುರ್ಮೂರ್ತಿಃ**–ನಾಲ್ಕು ಆಕಾರಗಳುಳ್ಳವನು. **ಚತುಷ್ಪದಃ**–ನಾಲ್ಕು ಕಾಲುಗಳುಳ್ಳವನು. **ಪ್ರಧಾನಂ**–ಪ್ರಧಾನ ಪದವಾಚ್ಯನು. **ಪ್ರಕೃತಿಃ**–ಪ್ರಕೃತಿಸ್ವರೂಪನು. **ಸಾಕ್ಷೀ**–ಎಲ್ಲರಲ್ಲಿಯೂ ಸಾಕ್ಷೀಭೂತನಾಗಿ ನೆಲಸಿರುವನು. **ಸಂಘಾತಃ**–ಸಂಘಸ್ವರೂಪನು. **ಸಂಘವಾನ್**–ಗುಂಪುಗಳುಳ್ಳವನು. **ಸಖೀ**–ಸ್ನೇಹಿತರಿರತಕ್ಕವನು. **ಮಹಾಮನಾಃ**–ಮಹತ್ತತ್ತ್ವವೆಂಬ ತನ್ಮಾತ್ರಸ್ವರೂಪವಾದ ಮನಸ್ಸುಳ್ಳವನು. **ಬುದ್ಧಿಸಖಃ**–ಬುದ್ಧಿಯೇ ಸಖಿಯಾಗಿರತಕ್ಕವನು. **ಚೇತಃ**–ಚಿತ್ತಸ್ವರೂಪನು. **ಅಹಂಕಾರಃ**–ಅಹಂಕಾರಸ್ವರೂಪನು. **ಆವೃತಃ**–ಸುತ್ತಲೂ ಆವರಿಸಿರುವವನು.

ಇಂದ್ರಿಯೇಶೋ ದೇವತಾತ್ಮಾ ಜ್ಞಾನಂ ಕರ್ಮ ಚ ಶರ್ಮ ಚ ।
ಅದ್ವಿತೀಯೋ ದ್ವಿತೀಯಶ್ಚ ನಿರಾಕಾರೋ ನಿರಂಜನಃ ॥ ೧೪ ॥

ವಿರಾಟ್ಸಮ್ರಾಟ್ ಮಹೌಘಶ್ಚಾಧಾರಃ ಸ್ಥಾಸ್ನುಶ್ಚರಿಷ್ಣುಮಾನ್ ।
ಫಣೀಂದ್ರಃ ಫಣಿರಾಜಶ್ಚ ಸಹಸ್ರಫಣಮಂಡಿತಃ ॥ ೧೫ ॥

ಫಣೀಶ್ವರಃ ಫಣೀಸ್ಫೂರ್ತಿಃ ಫೂತ್ಕಾರೀ ಚೀತ್ಕರಃ ಪ್ರಭುಃ ।
ಮಣಿಹಾರೋ ಮಣಿಧರೋ ವಿತಲೀ ಸುತಲೀ ತಲೀ ॥ ೧೬ ॥

---

೧೪. **ಇಂದ್ರಿಯೇಶಃ**–ಇಂದ್ರಿಯಗಳಿಗೆಲ್ಲಾ ಅಧಿಪತಿಯು. **ದೇವತಾತ್ಮಾ**–ದೇವತಾಸ್ವರೂಪನು **ಜ್ಞಾನಂ, ಕರ್ಮ—ಶರ್ಮ,** ಜ್ಞಾನ, ಕರ್ಮ ಸುಖಗಳೇ ಸ್ವರೂಪನಾಗಿರುವನು. **ಅದ್ವಿತೀಯಃ**–ತನಗೆರಡನೆಯೆಣೆಯಿಲ್ಲದವನು. **ದ್ವಿತೀಯಃ**-ಮತ್ತೊಬ್ಬನಿಗೆ ಸಹಾಯಕನಾದವನು. **ನಿರಾಕಾರಃ**–ಆಕೃತಿಯೇ ಇಲ್ಲದಿರುವನು. **ನಿರಂಜನಃ**–ಕರ್ಮಲೇಪವಿಲ್ಲದವನು.

೧೫. **ವಿರಾಟ್**–ಬೃಹತ್ಸ್ವರೂಪನು. **ಸಮ್ರಾಟ್**–ಚಕ್ರೇಶ್ವರನು. **ಮಹೌಘಃ**–ಮಹಾವೇಗವುಳ್ಳವನು. **ಆಧಾರಃ**–ಎಲ್ಲರಿಗೂ ಆಸರೆಯೆನಿಸಿದವನು. **ಸ್ಥಾಸ್ನುಃ**–ಸ್ಥಾವರ ಸ್ವರೂಪನು. **ಚರಿಷ್ಣುಮಾನ್**–ಜಂಗಮಾತ್ಮಕನು. **ಫಣೀಂದ್ರಃ**-ಸರ್ಪರಾಜನು. **ಫಣಿರಾಜಃ**–ನಾಗೇಶ್ವರನು. **ಸಹಸ್ರಫಣಿಮಂಡಿತಃ**–ಸಾವಿರ ಹೆಡೆಗಳುಳ್ಳವನು.

೧೬. **ಫಣೀಶ್ವರಃ**–ಸರ್ಪಗಳಿಗೆಲ್ಲಾ ಪ್ರಭುವು. **ಫಣೀ**–ಹೆಡೆಯುಳ್ಳವನು. **ಸ್ಫೂರ್ತಿಃ**–ಪ್ರತಿಭಾಸ್ವರೂಪನು. **ಫೂತ್ಕರೀ**–ಬುಸುಗುಟ್ಟತಕ್ಕವನು. **ಚೀತ್ಕರಃ**–ಚೀತ್ಕಾರವನ್ನು ಮಾಡತಕ್ಕವನು. **ಪ್ರಭುಃ**–ಎಲ್ಲರಿಗೂ ಒಡೆಯನು. **ಮಣಿಹಾರಃ**–ರತ್ನಮಯವಾದ ಹಾರವನ್ನು ಧರಿಸಿದವನು. **ಮಣಿಧರಃ**–ರತ್ನವನ್ನು ತಲೆಯಲ್ಲಿ ತಳೆದಿರುವವನು. **ವಿತಲೀ, ಸುತಲೀ, ತಲೀ**–ವಿತಲ, ಸುತಲ ಮತ್ತು ತಲಾತಲ ಲೋಕಗಳಲ್ಲಿರುವನು.

ಅತಲೀ ಸುತಲೇಶಶ್ಚ ಪಾತಾಲಶ್ಚ ತಲಾತಲಃ ।
ರಸಾತಲೋ ಭೋಗಿತಲಃ ಸ್ಫುರದ್ದಂತೋ ಮಹಾತಲಃ ॥ ೧೭ ॥

ವಾಸುಕಿಃ ಶಂಖಚೂಡಾಭೋ ದೇವದತ್ತೋ ಧನಂಜಯಃ ।
ಕಂಬಲಾಶ್ವೋ ವೇಗತರೋ ಧೃತರಾಷ್ಟ್ರೋ ಮಹಾಭುಜಃ ॥ ೧೮ ॥

ವಾರುಣೀಮದಮತ್ತಾಂಗೋ ಮದಘೂರ್ಣಿತಲೋಚನಃ ।
ಪದ್ಮಾಕ್ಷಃ ಪದ್ಮಮಾಲೀ ಚ ವನಮಾಲೀ ಮಧುಶ್ರವಾಃ ॥ ೧೯ ॥

---

೧೭. **ಅತಲೀ**–ಅತಲ ಲೋಕಾಧಿಪತಿಯು. **ಸುತಲೇಶಃ**–ಸುತಲಲೋಕದ ಪ್ರಭುವು. **ಪಾತಾಲಃ, ತಲಾತಲಃ, ರಸಾತಲಃ, ಭೋಗಿತಲಃ**–ಪಾತಾಲ, ತಲಾತಲ, ರಸಾತಲ ಮತ್ತು ಭೋಗಿ ಅಂದರೆ ಸರ್ಪಗಳ ನಿವಾಸವಾದ ಲೋಕದ ಸ್ವರೂಪನಾದವನು. **ಸ್ಫುರದ್ದಂತಃ**–ಹೊಳೆಯುತ್ತಿರುವ ಹಲ್ಲುಗಳುಳ್ಳವನು. **ಮಹಾತಲಃ**-ಮಹಾತಲ ಲೋಕಸ್ವರೂಪನು.

೧೮. **ವಾಸುಕಿಃ**-ಶಂಖ**ಚೂಡಾಭಃ, ದೇವದತ್ತಃ, ಧನಂಜಯಃ, ಕಂಬಲಾಶ್ವಃ, ವೇಗತರಃ, ಧೃತರಾಷ್ಟ್ರಃ**-ವಾಸುಕಿ, ಶಂಖಚೂಡ, ದೇವದತ್ತ, ಧನಂಜಯ, ಕಂಬಲಾಶ್ವ, ವೇಗತರ, ಧೃತರಾಷ್ಟ್ರ ಎಂಬ ಸರ್ಪಶ್ರೇಷ್ಠಗಳ ಸ್ವರೂಪವೆನಿಸಿದವನು. **ಮಹಾಭುಜಃ**–ಉದ್ದವಾದ ತೋಳುಗಳುಳ್ಳವನು.

೧೯. **ವಾರುಣೀಮದಮತ್ತಾಂಗಃ**-ವರುಣಪ್ರೇಷಿತವಾದ ಸುರೆಯ ಪಾನದಿಂದ ಮತ್ತೇರಿದ ಶರೀರವುಳ್ಳವನು. **ಮದಘೂರ್ಣಿತಲೋಚನಃ**-ಮತ್ತೇರಿದುದರಿಂದ ತೊಳಲುತ್ತಿರುವ ಕಣ್ಣುಗಳುಳ್ಳವನು. **ಪದ್ಮಾಕ್ಷಃ**-ಕಮಲವನ್ನು ಹೋಲುವ ಕಣ್ಣುಗಳುಳ್ಳವನು. **ಪದ್ಮಮಾಲೀ**-ಕಮಲ ಮಾಲೆಯನ್ನು ಧರಿಸಿರುವವನು. **ವನಮಾಲೀ** - ವನಮಾಲಾಭೂಷಿತನು. **ಮಧುಶ್ರವಾಃ**-ಇಂಪಾದ ಶ್ರವಣಗಳುಳ್ಳವನು.

ಕೋಟಿಕಂದರ್ಪಲಾವಣ್ಯೋ ನಾಗಕನ್ಯಾಸಮರ್ಚಿತಃ ।
ನೂಪುರೀ ಕಟಿಸೂತ್ರೀ ಚ ಕಟಕೀ ಕನಕಾಂಗದೀ ॥ ೨೦ ॥

ಮುಕುಟೀ ಕುಂಡಲೀ ದಂಡೀ ಶಿಖಂಡೀ ಖಂಡಮಂಡಲೀ ।
ಕಲಿಃ ಕಲಿಪ್ರಿಯಃ ಕಾಲೋ ನಿವಾತಕವಚೇಶ್ವರಃ ॥ ೨೧ ॥

ಸಂಹಾರಕೃದ್ರುದ್ರವಪುಃ ಕಾಲಾಗ್ನಿಃ ಪ್ರಲಯೋ ಲಯಃ ।
ಮಹಾಹಿಃ ಪಾಣಿನಿಃ ಶಾಸ್ತ್ರಭಾಷ್ಯಕಾರಃ ಪತಂಜಲಿಃ ॥ ೨೨ ॥

ಕಾತ್ಯಾಯನೀ ಪಕ್ವಿಮಾಭೂ ಸ್ಫೋಟಾಯನ ಉರಂಗಮಃ ॥ ೨೩ ॥

---

೨೦. **ಕೋಟಿಕಂದರ್ಪಲಾವಣ್ಯಃ**-ಕೋಟಿ ಮನ್ಮಥರಿಗೆಣೆಯಾದ ಸೌಂದರ್ಯವುಳ್ಳವನು. **ನಾಗಕನ್ಯಾಸಮರ್ಚಿತಃ**-ನಾಗಕನ್ಯೆಯರಿಂದ ಪೂಜಿಸಲ್ಪಟ್ಟವನು. **ನೂಪುರೀ**-ಕಾಲ್ಗಡಗಗಳುಳ್ಳವನು. **ಕಟಿಸೂತ್ರೀ**-ಉಡಿದಾರದಿಂದ ಕೂಡಿರುವವನು.

೨೧. **ಕಟಕೀ**–ಕಡಗಗಳಿರುವವನು. **ಕನಕಾಂಗದೀ**–ಚಿನ್ನದ ತೋಳುಬಳೆಗಳಿರುವವನು. **ಮುಕಟೀ, ಕುಂಡಲೀ, ದಂಡೀ, ಶಿಖಂಡೀ**—ಕಿರೀಟ ಕುಂಡಲಗಳಿಂದಲೂ, ದಂಡದಿಂದಲೂ, ನವಿಲುಗರಿಯಿಂದಲೂ ಮನೋಹರವಾಗಿರತಕ್ಕವನು. **ಖಂಡಮಂಡಲೀ**–ಖಂಡಮಂಡಲವೆಂಬ ಅಲಂಕಾರವುಳ್ಳವನು. **ಕಲಿಃ**–ಕಲಿಯುಗಸ್ವರೂಪನು. **ಕಲಿಪ್ರಿಯಃ**–ಕಲಿಗೆ ಬೇಕಾದವನು. **ಕಾಲಃ**–ಕಾಲಾತ್ಮನು. **ನಿವಾತಕವಚೇಶ್ವರಃ**–ನಿವಾತಕವಚರಿಗೆ ಅಧಿಪತಿಯು

೨೨. **ಸಂಹಾರಕೃತ್**–ಸಂಹರಿಸತಕ್ಕವನು. **ರುದ್ರವಪುಃ**—ರುದ್ರಸ್ವರೂಪನು. **ಕಾಲಾಗ್ನಿಃ**–ಕಾಲಾಗ್ನಿ ಸ್ವರೂಪನು. **ಪ್ರಳಯಃ, ಲಯಃ**–ಪ್ರಳಯಸ್ವರೂಪನು. **ಮಹಾಹಿಃ**–ಭಾರಿ ಸರ್ಪವು. **ಪಾಣಿನಿ**–ಪಾಣಿನಿ ಸ್ವರೂಪನು. **ಶಾಸ್ತ್ರಂ**–ಶಾಸ್ತ್ರರೂಪನು. **ಭಾಷ್ಯಕಾರಃ**–ವ್ಯಾಕರಣ ಭಾಷ್ಯವನ್ನು ರಚಿಸಿದವನು. **ಪತಂಜಲಿಃ**–ಪತಂಜಲಿಯ ಅವತಾರನು.

೨೩. **ಕಾತ್ಯಾಯನಃ, ಪಕ್ವಿಮಾಭೂಃ**–ಕಾತ್ಯಾಯನನ ಸ್ವರೂಪನು, ಪರಿಪಾಕಕ್ಕೆ ಕಾರಣನಾದವನು. **ಸ್ಫೋಟಾಯನಃ, ಉರಂಗಮಃ**--ಸ್ಫೋಟಾಯನ ಮತ್ತು ಉರಂಗಮನೆಂಬ ವ್ಯಾಕರಣ ಕಾರಕ ಸ್ವರೂಪನು.

ವೈಕುಂಠೋ ಯಾಜ್ಞಿಕೋ ಯಜ್ಞೋ ವಾಮನೋ ಹರಿಣೋ ಹರಿಃ ॥ ೨೪ ॥

ಕೃಷ್ಣೋ ವಿಷ್ಣುರ್ಮಹಾವಿಷ್ಣುಃ ಪ್ರಭವಿಷ್ಣುರ್ವಿಶೇಷವಿತ್ ।
ಹಂಸೋ ಯೋಗೇಶ್ವರಃ ಕೂರ್ಮೋ ವಾರಾಹೋ ನಾರದೋ ಮುನಿಃ ॥

ಸನಕಃ ಕಪಿಲೋ ಮತ್ಸ್ಯಃ ಕಮಠೋ ದೇವಮಂಗಲಃ ।
ದತ್ತಾತ್ರೇಯಃ ಪೃಥುರ್ವೃದ್ಧ ಋಷಭೋ ಭಾರ್ಗವೋತ್ತಮಃ ॥ ೨೬ ॥

ಧನ್ವಂತರಿರ್ನೃಸಿಂಹಶ್ಚ ಕಲ್ಕಿರ್ನಾರಾಯಣೋ ನರಃ ।
ರಾಮಚಂದ್ರೋ ರಾಘವೇಂದ್ರಃ ಕೋಸಲೇಂದ್ರೋ ರಘೂದ್ವಹಃ ॥ ೨೭ ॥

---

೨೪. **ವೈಕುಂಠಃ**-ಶ್ರೀಹರಿಯು. **ಯಾಜ್ಞಿಕಃ**–ಯಜ್ಞಕರ್ತೃವು. **ಯಜ್ಞಃ**-ಯಜ್ಞರೂಪನು. **ವಾಮನಃ**-ವಾಮನಾವತಾರನು. **ಹರಿಣಃ**-ಶ್ಯಾಮಲವಾದ ಕಾಂತಿಯುಳ್ಳವನು. **ಹರಿಃ**-ವಿಷ್ಣುಸ್ವರೂಪನು.

೨೫. **ಕೃಷ್ಣಃ, ವಿಷ್ಣುಃ, ಮಹಾವಿಷ್ಣುಃ**--ಏತದ್ರೂಪವಾಚ್ಯನು. **ಪ್ರಭವಿಷ್ಣುಃ**-ಸಮರ್ಥನಾದವನು. **ವಿಶೇಷವಿತ್**-ಹೆಚ್ಚು ತಿಳಿದವನು. **ಹಂಸಃ**-ಹಂಸಾವತಾರನು. **ಯೋಗೇಶ್ವರಃ**–ಯೋಗಕ್ಕೆ ಅಧೀಶ್ವರನು. **ಕೂರ್ಮ, ವರಾಹಃ, ನಾರದಃ, ಮುನಿಃ**-ಕೂರ್ಮ ವರಾಹಾವತಾರನೂ, ನಾರದ ಮತ್ತು ಮಹರ್ಷಿಗಳ ಸ್ವರೂಪನೂ ಆದವನು.

೨೬. **ಸನಕಃ, ಕಪಿಲಃ, ಮತ್ಸ್ಯಃ, ಕಮಠಃ**–ಸನಕಾದಿ ಸ್ವರೂಪನು. **ದೇವಮಂಗಲಃ**-ದೇವತೆಗಳಿಗೆ ಮಂಗಳವನ್ನುಂಟುಮಾಡುವವನು. **ದತ್ತಾತ್ರೇಯಃ, ಪೃಥುಃ, ವೃದ್ಧವೃಷಭಃ**-ಇವರುಗಳ ಸ್ವರೂಪನು. **ಭಾರ್ಗವೋತ್ತಮ**-ಶ್ರೇಷ್ಠನಾದ ಭೃಗುಪುತ್ರನು.

೨೭. **ಧನ್ವಂತರಿಃ, ನೃಸಿಂಹಃ, ಕಲ್ಕಿಃ, ನಾರಾಯಣಃ, ನರಃ**–ಇವರುಗಳ ಅವತಾರವೆನಿಸಿದವನು. **ರಾಮಚಂದ್ರಃ, ರಾಘವೇಂದ್ರಃ, ಕೋಸಲೇಂದ್ರಃ, ರಘೂದ್ವಹಃ, ಕಾಕುತ್ಸ್ಥಃ**–ಶ್ರೀರಾಮಾವತಾರನು.

ಕಾಕುತ್ಸ್ಥಃ ಕರುಣಾಸಿಂಧೂ ರಾಜೇಂದ್ರಃ ಸರ್ವಲಕ್ಷಣಃ ।
ಶೂರೋ ದಾಶರಥಿಸ್ತ್ರಾತಾ ಕೌಸಲ್ಯಾನಂದವರ್ಧನಃ ॥ ೨೮ ॥

ಸೌಮಿತ್ರಿರ್ಭರತೋ ಧನ್ವೀ ಶತ್ರುಘ್ನಃ ಶತ್ರುತಾಪನಃ ।
ನಿಷಂಗೀ ಕವಚೀ ಖಡ್ಗೀ ಶರೀ ಜ್ಯಾಹತಕೋಷ್ಠಕಃ ॥ ೨೯ ॥

ಬದ್ಧಗೋಧಾಂಗುಲಿತ್ರಾಣಃ ಶಂಭುಕೋದಂಡಭಂಜನಃ ।
ಯಜ್ಞತ್ರಾತಾ ಯಜ್ಞಭರ್ತಾ ಮಾರೀಚವಧಕಾರಕಃ ॥ ೩೦ ॥

ಅಸುರಾರಿಸ್ತಾಟಕಾರಿರ್ವಿಭೀಷಣಸಹಾಯಕೃತ್ ।
ಪಿತೃವಾಕ್ಯಕರೋ ಹರ್ಷೀ ವಿರಾಧಾರಿರ್ವನೇಚರಃ ॥ ೩೧ ॥

---

೨೮. **ಕರುಣಾಸಿಂಧುಃ**–ದಯಾಸಾಗರನು. **ರಾಜೇಂದ್ರಃ**–ರಾಜರಿಗೆಲ್ಲಾ ರಾಜನೆನಿಸಿದವನು. **ಸರ್ವಲಕ್ಷಣಃ**–ಸಕಲಶುಭಲಕ್ಷಣಗಳಿಂದ ಕೂಡಿದವನು. **ಶೂರಃ**–ಶೌರ್ಯಶಾಲಿಯೂ. **ದಾಶರಥಿಃ**–ದಶರಥಪುತ್ರನು. **ತ್ರಾತಾ**–ಸಂರಕ್ಷಕನು. **ಕೌಸಲ್ಯಾನಂದವರ್ಧನಃ**–ಕೌಸಲ್ಯೆಯ ಆನಂದವನ್ನು ಹೆಚ್ಚಿಸಿದವನು. (೨೦೦)

೨೯. **ಸೌಮಿತ್ರಿಃ, ಭರತಃ**–ಲಕ್ಷ್ಮಣ ಭರತ ಸ್ವರೂಪನು. **ಧನ್ವೀ**–ಒಳ್ಳೆಯ ಬಿಲ್ಗಾರನು. **ಶತ್ರುಘ್ನಃ**–ಶತ್ರುಘ್ನರೂಪನು. **ಶತ್ರುತಾಪನಃ**–ಶತ್ರುಗಳನ್ನು ತಾಪಕ್ಕೆ ಒಳಗುಮಾಡುವವನು. **ನಿಷಂಗೀ, ಕವಚೀ, ಖಡ್ಗೀ, ಶರೀ**–ಬತ್ತಳಿಕೆ, ಕವಚ, ಕತ್ತಿ, ಬಾಣಗಳುಳ್ಳವನು. **ಜ್ಯಾಹತಕೋಷ್ಠಕಃ**–ಹೆದೆಯು ತಗುಲಿದ ಮಣಿಕಟ್ಟುಳ್ಳವನು.

೩೦. **ಬದ್ಧಗೋಧಾಂಗುಲಿತ್ರಾಣಃ**–ಕೈಗೆ ಕಟ್ಟಿಕೊಂಡಿರುವ ಉಡುವಿನ ಆವರಣವುಳ್ಳವನು. **ಶಂಭುಕೋದಂಡಭಂಜನಃ**–ಶಿವಧನುಸ್ಸನ್ನು ಮುರಿದವನು. **ಯಜ್ಞತ್ರಾತಾ**–ವಿಶ್ವಾಮಿತ್ರನ ಯಜ್ಞವನ್ನು ಸಂರಕ್ಷಿಸಿದವನು. **ಯಜ್ಞಭರ್ತಾ**–ಯಜ್ಞಗಳಿಗೆಲ್ಲಾ ಸ್ವಾಮಿಯು. **ಮಾರೀಚವಧಕಾರಕಃ**–ಮಾರೀಚನನ್ನು ಸಂಹರಿಸಿದವನು.

೩೧. **ಅಸುರಾರಿಃ**–ರಾಕ್ಷಸಶತ್ರುವು. **ತಾಟಕಾರಿಃ**–ತಾಟಕಾಸಂಹಾರಿಯು. **ವಿಭೀಷಣಸಹಾಯಕೃತ್**–ವಿಭೀಷಣನಿಗೆ ಸಹಾಯ ಮಾಡಿದವನು. **ಪಿತೃವಾಕ್ಯಕರಃ**–ತಂದೆಯ ಮಾತಿನಂತೆ ನಡೆದವನು. **ಹರ್ಷೀ**–ಸಂತೋಷಪರನು. **ವಿರಾಧಾರಿಃ**–ವಿರಾಧನನ್ನು ಕೊಂದವನು. **ವನೇಚರಃ**–ಕಾಡಿನಲ್ಲಿ ಸಂಚರಿಸಿದವನು.

ಮುನಿರ್ಮುನಿಪ್ರಿಯಶ್ಚಿತ್ರಕೂಟಾರಣ್ಯನಿವಾಸಕೃತ್ ।
ಕಬಂಧಹಾ ದಂಡಕೇಶೋ ರಾಮೋ ರಾಜೀವಲೋಚನಃ ॥ ೩೨ ॥

ಮತಂಗವನಸಂಚಾರೀ ನೇತಾ ಪಂಚವಟೀಪತಿಃ ।
ಸುಗ್ರೀವಃ ಸುಗ್ರೀವಸಖೋ ಹನುಮತ್ಪ್ರೀತಿಮಾನಸಃ ॥ ೩೩ ॥

ಸೇತುಬಂಧೋ ರಾವಣಾರಿರ್ಲಂಕಾದಹನತತ್ಪರಃ ।
ರಾವಣ್ಯರಿಃ ಪುಷ್ಪಕಸ್ಥೋ ಜಾನಕೀವಿರಹಾತುರಃ ॥ ೩೪ ॥

ಅಯೋಧ್ಯಾಧಿಪತಿಃ ಶ್ರೀಮಾನ್ ಲವಣಾರಿಃ ಸುರಾರ್ಚಿತಃ ।
ಸೂರ್ಯವಂಶೀ ಚಂದ್ರವಂಶೀ ವಂಶೀವಾದ್ಯವಿಶಾರದಃ ॥ ೩೫ ॥

---

೩೨. **ಮುನಿಃ**—ಮುನಿವೇಷಧರನು. **ಮುನಿಪ್ರಿಯಃ**—ಮಹರ್ಷಿಗಳಿಗೆ ಬೇಕಾದವನು. **ಚಿತ್ರಕೂಟಾರಣ್ಯನಿವಾಸಕೃತ್**–ಚಿತ್ರಕೂಟದಲ್ಲಿ ವಾಸಿಸಿದವನು. **ಕಬಂಧಹಾ**–ಕಬಂಧನನ್ನು ಕೊಂದವನು. **ದಂಡಕೇಶಃ**–ದಂಡಕಾವನಾಧಿಪತಿಯು. **ರಾಮಃ**–ರಮಣೀಯವಾದ ಆಕೃತಿಯುಳ್ಳದನು. **ರಾಜೀವಲೋಚನಃ**–ಕಮಲದಂತೆ ಮುದ್ದಾದ ಕಣ್ಣುಗಳುಳ್ಳವನು.

೩೩. **ಮತಂಗವನಸಂಚಾರೀ**—ಮತಂಗಾಶ್ರಮದಲ್ಲಿ ಸಂಚರಿಸಿದವನು. **ನೇತಾ**—ಮುಂದಾಳೆನಿಸಿದವನು. **ಪಂಚವಟೀಪತಿಃ**—ಪಂಚವಟಿಗೆ ಅಧೀಶ್ವರನು. **ಸುಗ್ರೀವಃ**–ಸುಂದರವಾದ ಕುತ್ತಿಗೆಯುಳ್ಳವನು. **ಸುಗ್ರೀವಸಖಃ**–ಸುಗ್ರೀವನಿಗೆ ಸಖನು. **ಹನುಮತ್ಪ್ರೀತಮಾನಸಃ**—ಹನುಮಂತನಿಂದ ಸಂತೋಷವನ್ನು ಪಡೆದವನು.

೩೪–೩೫. **ಸೇತುಬಂಧಃ**—ಸಮುದ್ರಕ್ಕೆ ಸೇತುವನ್ನು ನಿರ್ಮಿಸಿದವನು. **ರಾವಣಾರಿಃ**–ರಾವಣನ ಸಂಹಾರಿಯು. **ಲಂಕಾದಹನತತ್ಪರಃ**–ಲಂಕೆಯನ್ನು ಸುಟ್ಟವನು. **ರಾವಣ್ಯರಿಃ**–ರಾವಣ ಪುತ್ರರನ್ನು ನಿಗ್ರಹಿಸಿದವನು. **ಪುಷ್ಪಕಸ್ಥಃ**–ಪುಷ್ಪಕ ವಿಮಾನದಲ್ಲಿ ಕುಳಿತವನು. **ಜಾನಕೀವಿರಹಾತುರಃ**–ಸೀತೆಯ ವಿರಹದಿಂದ ಪರಿತಪಿಸಿದವನು. **ಅಯೋಧ್ಯಾಧಿಪತಿಃ**—ಅಯೋಧ್ಯಾ ನಗರಿಯ ಅಧಿಪತಿಯು. **ಶ್ರೀಮಾನ್**–ವೈಭವದಿಂದ ಮೆರೆದವನು. **ಲವಣಾರಿಃ**–ಮಧುಪುತ್ರನಾದ ಲವಣನನ್ನು ಸಂಹರಿಸಿದವನು. **ಸುರಾರ್ಚಿತಃ**–ದೇವತೆಗಳಿಂದ ಪೂಜಿಸಲ್ಪಟ್ಟವನು. **ಸೂರ್ಯವಂಶೀ, ಚಂದ್ರವಂಶೀ**–ಸೂರ್ಯ, ಚಂದ್ರರ ವಂಶಕ್ಕೆ ಸೇರಿದವನು. **ವಂಶೀವಾದ್ಯವಿಶಾರದಃ**–ಕೊಳಲು ನುಡಿಸುವುದರಲ್ಲಿ ಬಹು ಜಾಣನು.

ಗೋಪತಿರ್ಗೋಪವೃಂದೇಶೋ ಗೋಪೋ ಗೋಪೀಶತಾವೃತಃ ।
ಗೋಕುಲೇಶೋ ಗೋಪಪುತ್ರೋ ಗೋಪಾಲೋ ಗೋಗಣಾಶ್ರಯಃ ॥

ಪೂತನಾರಿರ್ಬಕಾರಿಶ್ಚ ತೃಣಾವರ್ತನಿಪಾತಕಃ ।
ಅಘಾರಿರ್ಧೇನುಕಾರಿಶ್ಚ ಪ್ರಲಂಬಾರಿರ್ವ್ರಜೇಶ್ವರಃ ॥ ೩೭ ॥

ಅರಿಷ್ಟಹಾ ಕೇಶಿಶತ್ರುರ್ವ್ಯೋಮಾಸುರವಿನಾಶಕೃತ್ ।
ಅಗ್ನಿಪಾನೋ ದುಗ್ಧಪಾನೋ ವೃಂದಾವನಲತಾಶ್ರಿತಃ ॥ ೩೮ ॥

ಯಶೋಮತೀಸುತೋ ಭವ್ಯೋ ರೋಹಿಣೀಲಾಲಿತಃ ಶಿಶುಃ ।
ರಾಸಮಂಡಲಮಧ್ಯಸ್ಥೋ ರಾಸಮಂಡಲಮಂಡನಃ ॥ ೩೯ ॥

---

೩೬ **ಗೋಪತಿಃ**–ಗೋವುಗಳಿಗೆ ಒಡೆಯನು. **ಗೋಪವೃಂದೇಶಃ**–ಗೊಲ್ಲರ ಗುಂಪಿಗೆ ಯಜಮಾನನು. **ಗೋಪಃ**–ಗೊಲ್ಲರ ವೇಷವನ್ನು ತಳೆದಿದ್ದವನು. **ಗೋಪೀಶತಾವೃತಃ**–ನೂರಾರು ಗೋಪಿಯರಿಂದ ಬಳಸಲ್ಪಟ್ಟಿರುವವನು. **ಗೋಕುಲೇಶಃ**–ಗೋಕುಲಾಧಿಪತಿಯು. **ಗೋಪಪುತ್ರಃ**–ನಂದಗೋಪನ ಮಗನು. **ಗೋಪಾಲಃ**–ಹಸುಗಳನ್ನು ಕಾಯ್ದವನು. **ಗೋಗಣಾಶ್ರಯಃ**–ಗೋವುಗಳಿಗೆ ಆಸರೆಯೆನಿಸಿದವನು.

೩೭. **ಪೂತನಾರಿಃ, ಬಕಾರಿಃ, ತೃಣಾವರ್ತನಿಪಾತಕಃ, ಅಘಾರಿಃ, ಧೇನುಕಾರಿಃ, ಪ್ರಲಂಬಾರಿಃ**-ಪೂತನಾ, ಬಕ, ತೃಣಾವರ್ತ, ಅಘ, ಧೇನುಕ ಪ್ರಲಂಬ ಎಂಬ ರಾಕ್ಷಸರನ್ನು ಸಂಹರಿಸಿದವನು. **ವ್ರಜೇಶ್ವರಃ**-ಗೋಕುಲಾಧಿಪತಿಯು.

೩೮. **ಅರಿಷ್ಟಹಾ, ಕೇಶಿಶತ್ರುಃ, ವ್ಯೋಮಾಸುರವಿನಾಶಕೃತ್**-ಅರಿಷ್ಟಾದಿ ದಾನವರನ್ನು ಕೊಂದವನು. **ಅಗ್ನಿಪಾನಃ**-ಕಾಳ್ಗಿಚ್ಚನ್ನು ನುಂಗಿದವನು. **ದುಗ್ಧಪಾನಃ**–ಹಾಲನ್ನು ಕುಡಿದವನು.

೩೯. **ಯಶೋಮತೀಸುತಃ**–ಯಶೋದೆಯ ಸಾಕುಮಗನು. **ಭವ್ಯಃ**–ಮುದ್ದಾದ ಆಕಾರವುಳ್ಳವನು. **ರೋಹಿಣೀಲಾಲಿತಃ, ಶಿಶುಃ**–ರೋಹಿಣಿಯಿಂದ ಆಡಿಸಲ್ಪಟ್ಟವನು. ಶಿಶುಸ್ವರೂಪನು. **ರಾಸಮಂಡಲಮಧ್ಯಸ್ಥಃ**–ರಾಸಮಂಡಲದ ನಡುವೆ ನಿಂತಿರುವವನು. **ರಾಸಮಂಡಲಮಂಡನಃ**–ರಾಸಮಂಡಲಕ್ಕೇ ಭೂಷಣಪ್ರಾಯದಾದವನು.

ಗೋಪಿಕಾಶತಯೂಥಾರ್ಥೀ ಶಂಖಚೂಡವಧೋದ್ಯತಃ ।
ಗೋವರ್ಧನಸಮುದ್ಧರ್ತಾ ಶಕ್ರಜಿದ್ವ್ರಜರಕ್ಷಕಃ ॥ ೪೦ ॥

ವೃಷಭಾನುವರೋ ನಂದ ಆನಂದೋ ನಂದವರ್ಧನಃ ।
ನಂದರಾಜಸುತಃ ಶ್ರೀಶಃ ಕಂಸಾರಿಃ ಕಾಲಿಯಾಂತಕಃ ॥ ೪೧ ॥

ರಜಕಾರಿರ್ಮುಷ್ಟಿಕಾರಿಃ ಕಂಸಕೋದಂಡಭಂಜನಃ ।
ಚಾಣೂರಾರಿಃ ಕೂಟಹಂತಾ ಶಲಾರಿಸ್ತೋಶಲಾಂತಕಃ ॥ ೪೨ ॥

---

೪೦. **ಗೋಪಿಕಾಶತಯೂಥಾರ್ದೀ**–ನೂರಾರು ಗೋಪಾಂಗನೆಯರ ಗುಂಪಿನಲ್ಲಿ ವಿಹರಿಸಿದವನು. **ಶಂಖಚೂಡವಧೋದ್ಯತಃ**-ಶಂಖಚೂಡನನ್ನು ಕೊಲ್ಲುವುದರಲ್ಲಿ ಉದ್ಯುಕ್ತನಾದವನು. **ಗೋವರ್ಧನಸಮುದ್ಧರ್ತಾ**-ಗೋವರ್ಧನ ಪರ್ವತವನ್ನು ಎತ್ತಿದವನು. **ಶಕ್ರಜಿತ್**–ಇಂದ್ರನನ್ನು ಜಯಿಸಿದವನು. **ವಜ್ರರಕ್ಷಕಃ**–ವಜ್ರಾಯುಧದಿಂದ ಕಾಪಾಡಿದವನು.

೪೧. **ವೃಷಭಾನುವರಃ**-ವೃಷಭಾನುವೆಂಬ ಗೋಪನ ಸ್ವರೂಪನಾದವನು. **ನಂದಃ, ಆನಂದಃ**-ನಂದನ ಸ್ವರೂಪನು. ಆನಂದವನ್ನು ಉಂಟುಮಾಡುವನು. **ನಂದವರ್ಧನಃ**-ಭಾಗ್ಯವನ್ನು ಹೆಚ್ಚಿಸಿದವನು. **ನಂದರಾಜಸುತಃ**-ನಂದನ ಪ್ರಿಯ ಪುತ್ರನು. **ಶ್ರೀಶಃ**-ಶ್ರೀರೂಪಿಣಿಯಾದ ರಾಧೆಯ ವಲ್ಲಭನು. **ಕಂಸಾರಿಃ**-ಕಂಸನನ್ನು ಕೊಂದವನು. **ಕಾಲಿಯಾನಿತಃ**-ಕಾಲಿಯನಿಗೆ ಸಮನೆನಿಸಿದವನು.

೪೨. **ರಜಕಾದಿಃ-ಮುಷ್ಟಿಕಾರಿಃ**-ಅಗಸನನ್ನು ಮುಷ್ಟಿಕನನ್ನು ನಿಗ್ರಹಿಸಿದವನು. **ಕಂಸಕೋದಂಡಭಂಜನಃ**-ಕಂಸನ ಧನುಸ್ಸನ್ನು ಮುರಿದವನು. **ಚಾಣೂರಾರಿಃ, ಕೂಟಹಂತಾ ಶಲಾರಿಃ, ತೋಶಲಾಂತಕಃ**-ಚಾಣೂರ, ಕೂಟ, ಶಲ, ತೋಶಲರನ್ನು ಕೊಂದವನು.

ಕಂಸಭ್ರಾತೃನಿಹಂತಾ ಚ ಮಲ್ಲಯುದ್ಧಪ್ರವರ್ತಕಃ ।
ಗಜಹಂತಾ ಕಂಸಹಂತಾ ಕಾಲಹಂತಾ ಕಲಂಕಹಾ ॥ ೪೩ ॥

ಮಾಗಧಾರಿರ್ಯವನಹಾ ಪಾಂಡುಪುತ್ರಸಹಾಯಕೃತ್ ।
ಚತುರ್ಭುಜಃ ಶ್ಯಾಮಲಾಂಗಃ ಸೌಮ್ಯಶ್ಚೌಪಗವಪ್ರಿಯಃ ॥ ೪೪ ॥

ಯುದ್ಧಭೃದುದ್ಧವಸಖಾ ಮಂತ್ರೀ ಮಂತ್ರವಿಶಾರದಃ ।
ವೀರಹಾ ವೀರಮಥನಃ ಶಂಖಚಕ್ರಗದಾಧರಃ ॥ ೪೫ ॥

---

೪೩. **ಕಂಸಭ್ರಾತೃನಿಹಂತಾ**–ಕಂಸನ ಅನುಜರನ್ನು ಕೊಂದವನು. **ಮಲ್ಲಯುದ್ಧಪ್ರವರ್ತಕಃ**–ಮಲ್ಲಯುದ್ಧವನ್ನು ನಡೆಸಿದವನು. **ಗಜಹಂತಾ**–ಕುವಲಯಾಪೀಡವೆಂಬ ಮದ್ದಾನೆಯನ್ನು ಕೊಂದವನು. **ಕಂಸಹಂತಾ**–ಕಂಸಸಂಹಾರಿಯು. **ಕಾಲಹಂತಾ**–ಯಮನನ್ನು ಸಂಹರಿಸಿದವನು. **ಕಲಂಕಹಾ**–ಕಲಂಕ (ಪಾಪ) ನಿವಾರಕನು.

೪೪. **ಮಾಗಧಾರಿಃ**–ಜರಾಸಂಧವೈರಿಯು. **ಯವನಹಾ**–ಕಾಲಯವನ ಸಂಹಾರಿಯು. **ಪಾಂಡುಪುತ್ರಸಹಾಯಕೃತ್**–ಪಾಂಡವರಿಗೆ ಸಹಾಯವನ್ನೆಸಗಿದವನು. **ಚತುರ್ಭುಜಃ**–ನಾಲ್ಕು ಬಾಹುಗಳುಳ್ಳವನು. **ಶ್ಯಾಮಲಾಂಗಃ**–ಶ್ಯಾಮಲವಾದ ಶರೀರವುಳ್ಳವನು. **ಸೌಮ್ಯಃ**–ಶಾಂತಮೂರ್ತಿಯು. **ಔಪಗವಪ್ರಿಯಃ**–ಔಪಗವನಿಗೆ ಬೇಕಾದವನು.

೪೫. **ಯುದ್ಧಭೃತ್**–ಯುದ್ಧವನ್ನು ನಡೆಸಿದವನು. **ಉದ್ಧವಸಖಾ**–ಉದ್ಧವನ ಸ್ನೇಹಿತನು. **ಮಂತ್ರೀ**–ರಾಜನಿಗೆ ಸಲಹೆಯನ್ನು ಕೊಡತಕ್ಕವನು. **ಮನ್ತ್ರವಿಶಾರದಃ**–ಮಂತ್ರಾಲೋಚನೆಯಲ್ಲಿ ಕುಶಲನೆನಿಸಿದವನು. **ವೀರಹಾ**–ಶತ್ರುವೀರರನ್ನು ನಿಗ್ರಹಿಸಿದವನು. **ವೀರಮಥನಃ**–ವೀರರನ್ನು ಸದೆಬಡಿದವನು. **ಶಂಖಚಕ್ರಗದಾಧರಃ**–ಶಂಖಚಕ್ರಗದೆಗಳನ್ನು ಕೈಲಿ ಹಿಡಿದಿರುವವನು.

ರೇವತೀಚಿತ್ತಹರ್ತಾ ಚ ರೇವತೀಹರ್ಷವರ್ಧನಃ ।
ರೇವತೀಪ್ರಾಣನಾಥಶ್ಚ ರೇವತೀಪ್ರಿಯಕಾರಕಃ ॥ ೪೬ ॥

ಜ್ಯೋತಿರ್ಜ್ಯೋತಿಷ್ಮತೀಭರ್ತಾ ರೈವತಾದ್ರಿವಿಹಾರಕೃತ್ ।
ಧೃತಿನಾಥೋ ಧನಾಧ್ಯಕ್ಷೋ ದಾನಾಧ್ಯಕ್ಷೋ ಧನೇಶ್ವರಃ ॥ ೪೭ ॥

ಮೈಥಿಲಾರ್ಚಿತಪಾದಾಬ್ಜೋ ಮಾನದೋ ಭಕ್ತವತ್ಸಲಃ ।
ದುರ್ಯೋಧನಗುರುರ್ಗರ್ವೀ ಗದಾಶಿಕ್ಷಾಕರಃ ಕ್ಷಮೀ ॥ ೪೮ ॥

---

೪೬. **ರೇವತೀಚಿತ್ತಹರ್ತಾ**–ರೇವತಿಯ ಮನಸ್ಸನ್ನು ಅಪಹರಿಸಿದವನು. **ರೇವತೀಹರ್ಷವರ್ಧನಃ**–ರೇವತಿಯ ಆನಂದವನ್ನು ಹೆಚ್ಚಿಸುವವನು. **ರೇವತೀಪ್ರಾಣನಾಥಃ**–ರೇವತಿಗೆ ಪ್ರಾಣಕ್ಕಿಂತಲೂ ಪ್ರಿಯನೆನಿಸಿದ ಪತಿಯು. **ರೇವತೀಪ್ರಿಯಕಾರಕಃ**–ರೇವತಿಗಿಷ್ಟವಾದುದನ್ನೇ ಮಾಡುವವನು.

೪೭. **ಜ್ಯೋತಿಃ**-ತೇಜಸ್ವರೂಪನು. **ಜ್ಯೋತಿಷ್ಮತೀಭರ್ತಾ**–ಜ್ಯೋತಿಷ್ಮತಿಯ ಕಾಂತನು. **ರೈವತಾದ್ರಿವಿಹಾರಕೃತ್**–ರೈವತಕ ಪರ್ವತದಲ್ಲಿ ವಿಹರಿಸುವವನು. **ಧೃತಿನಾಥಃ**–ಧೈರ್ಯಶಾಲಿಯು. **ಧನಾಧ್ಯಕ್ಷಃ**–ಧನಾಧಿಪತಿಯು. **ದಾನಾಧ್ಯಕ್ಷಃ**-ದಾನಗಳಿಗೆಲ್ಲಾ ಪ್ರಭುವು. **ಧನೇಶ್ವರಃ**–ಕುಬೇರಸ್ವರೂಪನು.

೪೮. **ಮೈಥಿಲಾರ್ಚಿತಪಾದಾಬ್ಜಃ**–ಮಿಥಿಲಾದೇಶಾಧಿಪತಿಯಿಂದ ಪೂಜಿಸಲ್ಪಟ್ಟ ಚರಣಕಮಲಗಳುಳ್ಳವನು. **ಮಾನದಃ**–ಮಾನವನ್ನು ಉಂಟುಮಾಡತಕ್ಕವನು. ಅಥವಾ ಸೊಕ್ಕನ್ನು ಮುರಿಯುವವನು. **ಭಕ್ತವತ್ಸಲಃ**-ಭಕ್ತರಲ್ಲಿ ವಾತ್ಸಲ್ಯವುಳ್ಳವನು. **ದುರ್ಯೋಧನಗುರುಃ**-ದುರ್ಯೋಧನನಿಗೆ ಗುರುವಾದವನು. **ಗರ್ವೀ**-ಅಭಿಮಾನಶಾಲಿಯು **ಗದಾಶಿಕ್ಷಾಕರಃ**–ಗದಾಶಿಕ್ಷಣವನ್ನಿತ್ತವನು. **ಕ್ಷಮೀ**–ಕ್ಷಮಾಶೀಲನು.

ಮುರಾರಿರ್ಮದನೋಽಮಂದೋಽನಿರುದ್ಧೋ ಧನ್ವಿನಾಂ ವರಃ ।
ಕಲ್ಪವೃಕ್ಷಃ ಕಲ್ಪವೃಕ್ಷೀ ಕಲ್ಪವೃಕ್ಷವನಪ್ರಭುಃ　　　　॥ ೪೯ ॥

ಸ್ಯಮಂತಕಮಣಿರ್ಮಾನ್ಯೋ ಗಾಂಡೀವೀ ಕೌರವೇಶ್ವರಃ ।
ಕುಭಾಂಡಖಂಡನಕರಃ ಕೂಪಕರ್ಣಪ್ರಹಾರಕೃತ್　　　　॥ ೫೦ ॥

ಸೇವ್ಯೋ ರೈವತಜಾಮಾತಾ ಮಧುಮಾಧವಸೇವಿತಃ ।
ಬಲಿಷ್ಠಃ ಪುಷ್ಟಸರ್ವಾಂಗೋ ಹೃಷ್ಟಃ ಪುಷ್ಟಃ ಪ್ರಹರ್ಷಿತಃ　　　　॥ ೫೧ ॥

---

೪೯. **ಮುರಾರಿಃ**–ಮುರದೈತ್ಯಸಂಹಾರಿಯು. **ಮದನಃ**–ಮನ್ಮಥರೂಪನು. **ಅಮಂದಃ**–ಮಾಂದ್ಯವರ್ಜಿತನು. **ಅನಿರುದ್ಧಃ**–ಅನಿರುದ್ಧಸ್ವರೂಪನು. ಅಥವಾ ಯಾರಿಂದಲೂ ತಡೆಯಲ್ಪಡಲು ಸಾಧ್ಯವಿಲ್ಲದವನು. **ಧನ್ವಿನಾಂವರಃ**–ಧನುರ್ಧರಾಗ್ರೇಸರನು. **ಕಲ್ಪವೃಕ್ಷಃ**–ಕಲ್ಪವೃಕ್ಷಸ್ವರೂಪನು. **ಕಲ್ಪವೃಕ್ಷೀ**–ಕಲ್ಪವೃಕ್ಷವನ್ನು ಪಡೆದವನು. **ಕಲ್ಪವೃಕ್ಷವನಪ್ರಭುಃ**–ಕಲ್ಪವೃಕ್ಷೋದ್ಯಾನದ ಅಧಿಪತಿಯು.

೫೦. **ಸ್ಯಮಂತಕಮಣಿಃ**–ಸ್ಯಮಂತಕವೆಂಬ ರತ್ನಸ್ವರೂಪನು. **ಮಾನ್ಯಃ**-ಮಾನಾರ್ಹನು. **ಗಾಂಡೀವೀ**–ಅರ್ಜುನಸ್ವರೂಪನು. **ಕೌರವೇಶ್ವರಃ**–ಕುರುರಾಜಸ್ವರೂಪನು. **ಕುಭಾಂಡಖಂಡನಕರಃ**–ಕುಭಾಂಡನೆಂಬ ದೈತ್ಯನನ್ನು ಕತ್ತರಿಸಿದವನು. **ಕೂಪಕರ್ಣಪ್ರಹಾರಕೃತ್**–ಕೂಪಕರ್ಣನನ್ನು ಪ್ರಹರಿಸಿದವನು.

೫೧. **ಸೇವ್ಯಃ**–ಸೇವಿಸಲ್ಪಡಬೇಕಾದವನು. **ರೈವತಜಾಮಾತಾ**–ರೈವತಚಕ್ರವರ್ತಿಯ ಅಳಿಯನು. **ಮಧುಮಾಧವಸೇವಿತಃ**–ಮಧು ಮತ್ತು ಮಾಧವರಿಂದ ಸೇವಿಸಲ್ಪಟ್ಟವನು. **ಬಲಿಷ್ಠಃ**–ಬಲಾಢ್ಯನು. **ಪುಷ್ಟಸರ್ವಾಂಗಃ**–ಚೆನ್ನಾಗಿ ತುಂಬಿದ ಅಂಗಾಂಗವುಳ್ಳವನು. **ಹೃಷ್ಟಃ**–ಹರ್ಷಶಾಲಿಯು. **ಪುಷ್ಟಃ**–ಚೆನ್ನಾಗಿ ಬೆಳೆದವನು. **ಪ್ರಹರ್ಷಿತಃ**–ಸದಾ ಸಂತೋಷವುಳ್ಳವನು.

ವಾರಾಣಸೀಗತಃ ಕ್ರುದ್ಧಃ ಸವಃ ಪೌಂಡ್ರಕಘಾತಕಃ ।
ಸುನಂದೀ ಶಿಖರೀ ಶಿಲ್ಪೀ ದ್ವಿವಿದಾಂಗನಿಷೂದನಃ ॥ ೫೨ ॥

ಹಸ್ತಿನಾಪುರಸಂಕರ್ಷೀ ರಥೀ ಕೌರವಪೂಜಿತಃ ।
ವಿಶ್ವಕರ್ಮಾ ವಿಶ್ವಧರ್ಮಾ ದೇವಶರ್ಮಾ ದಯಾನಿಧಿಃ ॥ ೫೩ ॥

ಮಹಾರಾಜಚ್ಛತ್ರಧರೋ ಮಹಾರಾಜೋಪಲಕ್ಷಣಃ ।
ಸಿದ್ಧಗೀತಃ ಸಿದ್ಧಕಥಃ ಶುಕ್ಲಚಾಮರವೀಜಿತಃ ॥ ೫೪ ॥

---

೫೨. **ವಾರಾಣಸೀಗತಃ**–ಕಾಶಿಗೆ ಹೋದವನು. **ಕ್ರುದ್ಧಃ**–ಕೋಪಗೊಂಡವನು. **ಸವಃ**–ಯಜ್ಞರೂಪನು. **ಪೌಂಡ್ರಕಘಾತಕಃ**–ಪೌಂಡ್ರಕನನ್ನು ವಧಿಸಿದವನು. **ಸುನಂದೀ**–ಸಾತ್ತ್ವಿಕಾನಂದವುಳ್ಳವನು. **ಶಿಖರೀ**–ಪರ್ವತಸ್ವರೂಪನು. **ಶಿಲ್ಪೀ**–ಶಿಲ್ಪಕುಶಲನು. **ದ್ವಿವಿದಾಂಗನಿಷೂದನಃ**–ದ್ವಿವಿದನ ಮೈಯನ್ನು ಮುರಿದುಬಿಟ್ಟವನು.

೫೩. **ಹಸ್ತಿನಾಪುರಸಂಕರ್ಷೀ**–ಹಸ್ತಿನಾಪುರವನ್ನು ಸೆಳೆದುಬಿಟ್ಟವನು. **ರಥೀ**–ರಥದಲ್ಲಿ ಕುಳಿತು ಹೋರಾಡುವವನು. **ಕೌರವಪೂಜಿತಃ**–ಕೌರವರಿಂದ ಪೂಜಿಸಲ್ಪಟ್ಟವನು. **ವಿಶ್ವಕರ್ಮಾ**–ದೇವಶಿಲ್ಪಿಯ ಸ್ವರೂಪನು. **ವಿಶ್ವಧರ್ಮಾ**–ಸಕಲ ಧರ್ಮಗಳೂ ಉಳ್ಳವನು. **ದೇವಶರ್ಮಾ**–ದೇವಶರ್ಮನೆಂಬವನ ಸ್ವರೂಪನು. ಅಥವಾ ದೇವತೆಗಳಿಗೆ ಸುಖವನ್ನುಂಟುಮಾಡತಕ್ಕವನು. **ದಯಾನಿಧಿಃ**–ಕೃಪಾಸಾಗರನು.

೫೪. **ಮಹಾರಾಜಚ್ಛತ್ರಧರಃ**–ಮಹಾರಾಜ ಚಿಹ್ನೆವಾದ ಛತ್ರವನ್ನು ಧರಿಸಿದವನು. **ಮಹಾರಾಜೋಪಲಕ್ಷಣಃ**–ಮಹಾರಾಜನ ಲಕ್ಷಣಗಳುಳ್ಳವನು. **ಸಿದ್ಧಗೀತಃ**–ಸಿದ್ಧರಿಂದ ಸ್ತುತಿಸಲ್ಪಟ್ಟವನು. **ಸಿದ್ಧಕಥಃ**–ಪ್ರಸಿದ್ಧ ಚರಿತ್ರವುಳ್ಳವನು. **ಶುಕ್ಲಚಾಮರವೀಜತಃ**–ಬಿಳಿಯ ಚಾಮರಗಳಿಂದ ಬೀಸಲ್ಪಟ್ಟವನು.

ತಾರಾಕ್ಷಃ ಕೀರನಾಸಶ್ಚ ಬಿಂಬೋಷ್ಠಃ ಸುಸ್ಮಿತಚ್ಛವಿಃ |
ಕರೀಂದ್ರಕರದೋರ್ದಂಡಃ ಪ್ರಚಂಡೋ ಮೇಘಮಂಡಲಃ ॥ ೫೫ ॥

ಕವಾಟವಕ್ಷಾಃ ಪೀನಾಂಸಃ ಪದ್ಮಪಾದಸ್ಫುರದ್ದ್ಯುತಿಃ |
ಮಹಾವಿಭೂತಿರ್ಭೂತೇಶೋ ಬಂಧಮೋಕ್ಷೀ ಸಮೀಕ್ಷಣಃ ॥ ೫೬ ॥

ಚೈದ್ಯಶತ್ರುಃ ಶತ್ರುಸಂಧೋ ದಂತವಕ್ತ್ರನಿಷೂದಕಃ |
ಅಜಾತಶತ್ರುಃ ಪಾಪಘ್ನೋ ಹರಿದಾಸಸಹಾಯಕೃತ್ ॥ ೫೭ ॥

ಶಾಲಬಾಹುಃ ಶಾಲ್ವಹಂತಾ ತೀರ್ಥಯಾಯೀ ಜನೇಶ್ವರಃ |
ನೈಮಿಷಾರಣ್ಯಯಾತ್ರಾರ್ಥೀ ಗೋಮತೀತೀರವಾಸಕೃತ್ ॥ ೫೮ ॥

---

೫೫. **ತಾರಾಕ್ಷಃ**–ವಿಶಾಲವಾದ ನೇತ್ರಗಳುಳ್ಳವನು. **ಕೀರನಾಸಃ**–ಗಿಣಿಯಂತೆ ಮೂಗುಳ್ಳವನು. **ಬಿಂಬೋಷ್ಠಃ**-ತೊಂಡೆಹಣ್ಣಿಗೆಣೆಯಾದ ತುಟಿಗಳಿರುವವನು. **ಸುಸ್ಮಿತಚ್ಛವಿಃ**–ಯಾವಾಗಲೂ ನಸುನಗುತ್ತಿರುವವನು. **ಕರೀಂದ್ರಕರದೋರ್ದಂಡಃ**-ಆನೆಯ ಸೊಂಡಿಲನ್ನು ಹೋಲುವ ತುಂಬಿದ ತೋಳುಳ್ಳವನು. **ಪ್ರಚಂಡಃ**–ಯಾರಿಗೂ ಸಗ್ಗದವನು. ಅಥವಾ ಅತ್ಯುಗ್ರನು. **ಮೇಘಮಂಡಲಃ**-ಮೇಘಮಂಡಲಸ್ವರೂಪನು.

೫೬. **ಕವಾಟವಕ್ಷಾಃ**–ಬಾಗಿಲಿನಂತೆ ಅಗಲವಾದ ಎದೆಯುಳ್ಳವನು. **ಪೀನಾಂಸಃ**–ಉಬ್ಬಿದ ಹೆಗಲುಳ್ಳವನು. **ಪದ್ಮಪಾದಸ್ಫುರದ್ದ್ಯುತಿಃ**–ತಾವರೆಯನ್ನು ಹೋಲುವ ಪಾದಗಳಿಂದ ಕಂಗೊಳಿಸುವವನು. **ಮಹಾವಿಭೂತಿಃ**–ಅತಿಶಯ ಮಹಾತ್ಮ ಶಾಲಿಯು. **ಭೂತೇಶಃ**-ಪ್ರಾಣಿಗಳಿಗೆಲ್ಲಾ ಅಧಿಪತಿಯು. **ಬಂಧಮೋಕ್ಷೀ**-ಸೆರೆಯಿಂದ ಬಿಡಿಸುವವನು. **ಸಮೀಕ್ಷಣಃ**–ಎಲ್ಲವನ್ನೂ ನೋಡುವವನು.

೫೭. **ಚೈದ್ಯಶತ್ರುಃ**–ಶಿಶುಪಾಲವೈರಿಯು. **ಶತ್ರುಸಂಧಃ**–ಶತ್ರುಗಳೊಡನೆ ಪಣತೊಟ್ಟವನು. **ದಂತವಕ್ತ್ರನಿಷೂದನಃ**–ದಂತವಕ್ರನನ್ನು ಒಕ್ಕಲಿಕ್ಕಿದವನು. **ಅಜಾತಶತ್ರುಃ**–ಶತ್ರುಗಳೇ ಇಲ್ಲದವನು. **ಪಾಪಘ್ನಃ**–ಪಾಪನಿವಾರಕನು. **ಹರಿದಾಸಸಹಾಯಕೃತ್**–ವಿಷ್ಣುಭಕ್ತರಿಗೆ ಸಹಾಯವೆನಿಸುವವನು.

೫೮. **ಶಾಲಬಾಹುಃ**–ಮರದಂತೆ ಉದ್ದವಾದ ತೋಳುಗಳುಳ್ಳವನು. **ಶಾಲ್ವಹಂತಾ**–ಶಾಲ್ವನನ್ನು ವಧಿಸಿದವನು. **ತೀರ್ಥಯಾಯೀ**–ತೀರ್ಥಯಾತ್ರೆಯನ್ನು ಮಾಡಿದವನು. **ಜನೇಶ್ವರಃ**–ಜನರಿಗೆಲ್ಲಾ ಪ್ರಭುವಾದವನು. **ನೈಮಿಶಾರಣ್ಯಯಾತ್ರಾರ್ಥೀ**–ನೈಮಿಶಾರಣ್ಯ ಯಾತ್ರೆಯನ್ನು ಕೈಗೊಂಡವನು. **ಗೋಮತೀತೀರವಾಸಕೃತ್**–ಗೋಮತಿಯತೀರದಲ್ಲಿ ವಾಸಮಾಡಿದವನು.

ಗಂಡಕೀಸ್ನಾನವಾನ್ಸ್ರಗ್ವೀ ವೈಜಯಂತೀವಿರಾಜಿತಃ ।
ಅಮ್ಲಾನಪಂಕಜಧರೋ ವಿಪಾಶೀಶೋಣಸಂಪ್ಲುತಃ ॥ ೫೯ ॥

ಪ್ರಯಾಗತೀರ್ಥರಾಜಶ್ಚ ಸಪ್ತಪೂಃ ಸೇತುಬಂಧನಃ ।
ಗಯಾಶಿರಶ್ಚ ಧನದಃ ಪೌಲಸ್ತ್ಯಃ ಪುಲಹಾಶ್ರಮಃ ॥ ೬೦ ॥

ಗಂಗಾಸಾಗರಸಂಗಾರ್ಥೀ ಸಪ್ತಗೋದಾವರೀಪತಿಃ ।
ವೇಣೀ ಭೀಮರಥೀ ಗೋದಾ ತಾಮ್ರಪರ್ಣೀ ವಟೋದಕಾ ॥ ೬೧ ॥

ಕೃತಮಾಲಾ ಮಹಾಪುಣ್ಯಾ ಕಾವೇರೀ ಚ ಪಯಸ್ವಿನೀ ।
ಪ್ರತೀಚೀ ಸುಪ್ರಭಾ ವೇಣೀ ತ್ರಿವೇಣೀ ಸರಯೂಪಮಾ ॥ ೬೨ ॥

---

೫೯. **ಗಂಡಕೀಸ್ನಾನವಾನ್**–ಗಂಡಕೀನದಿಯಲ್ಲಿ ಸ್ನಾನಮಾಡಿದವನು. **ಸ್ರಗ್ವೀ**–ಹೂವಿನ ಮಾಲೆಯನ್ನು ಧರಿಸಿದವನು. **ವೈಜಯಂತೀ ವಿರಾಜಿತಃ**–ವೈಜಯಂತೀ ಮಾಲೆಯಿಂದ ಕಂಗೊಳಿಸುತ್ತಿರುವವನು. **ಅಮ್ಲಾನಪಂಕಜಧರಃ**-ಎಂದೊಂದಿಗೂ ಬಾಡದಿರುವ ಕಮಲಗಳ ಮಾಲಿಕೆಯನ್ನು ಧರಿಸಿದವನು. **ವಿಪಾಶೀ ಶೋಣಸಂಪ್ಲುತಃ**-ವಿಪಾಶಾ ಮತ್ತು ಶೋಣಾನದಿಗಳಲ್ಲಿ ಸ್ನಾನಮಾಡಿದವನು.

೬೦. **ಪ್ರಯಾಗತೀರ್ಥರಾಜಃ**-ಪ್ರಯಾಗವೆಂಬ ತೀರ್ಥರಾಜಸ್ವರೂಪನು. **ಸಪ್ತಪೂಃ**-ಸಪ್ತಪೌರುಷದಿಂದಲೂ ಮಾನವನನ್ನು ಪಾವನಗೊಳಿಸುವವನು. **ಸೇತುಬಂಧನಃ**-ಸಮುದ್ರಸೇತುಸ್ವರೂಪನು. **ಗಯಾಶಿರಃ**-ಗಯಾಶೀರ್ಷಸ್ವರೂಪನು. **ಧನದಃ**-ದ್ರವ್ಯವನ್ನು ಇತ್ತವನು. ಅಥವಾ ಕುಬೇರಸ್ವರೂಪನು. **ಪೌಲಸ್ತ್ಯಃ**-ಪುಲಸ್ತ್ಯಪುತ್ರಸ್ವರೂಪನು. **ಪುಲಹಾಶ್ರಮಃ** ಪುಲಹಾಶ್ರಮವನ್ನು ಸಂದರ್ಶಿಸಿದವನು.

೬೧. **ಗಂಗಾಸಾಗರಸಂಗಾರ್ಥೀ**–ಗಂಗಾಸಾಗರ ಸಂಗಮಕ್ಕೆ ಯಾತ್ರೆ ಬೆಳಸಿದವನು. **ಸಪ್ತಗೋದಾವರೀ ಪತಿಃ**–ಏಳು ಮುಖವಾಗಿ ಸಾಗರಕ್ಕೆ ಬೀಳುವ ಗೋದಾವರಿಗೆ ಅಧಿಪತಿಯು. **ವೇಣೀ, ಭೀಮರಥೀ, ಗೋದಾ, ತಾಮ್ರಪರ್ಣೀ, ವಟೋದಕಾ,**

೬೨–೬೩. **ಕೃತಮಾಲಾ, ಮಹಾಪುಣ್ಯಾ, ಕಾವೇರೀ, ಪಯಸ್ವಿನೀ, ಪ್ರತೀಚೀ, ಸುಪ್ರಭಾ, ವೇಣೀ, ತ್ರಿವೇಣೀ, ಸರಯೂ, ಉಪಮಾ, ಕೃಷ್ಣಾ,**

ಕೃಷ್ಣಾ ಪಂಪಾ ನರ್ಮದಾ ಚ ಗಂಗಾ ಭಾಗೀರಥೀ ನದೀ।
ಸಿದ್ಧಾಶ್ರಮಃ ಪ್ರಭಾಸಶ್ಚ ಬಿಂದುರ್ಬಿಂದುಸರೋವರಃ ॥ ೬೩ ॥

ಪುಷ್ಕರಃ ಸೈಂಧವೋ ಜಂಬೂ ನರನಾರಾಯಣಾಶ್ರಮಃ।
ಕುರುಕ್ಷೇತ್ರಪತೀ ರಾಮೋ ಜಾಮದಗ್ನ್ಯೋ ಮಹಾಮುನಿಃ ॥ ೬೪ ॥

ಇಲ್ವಲಾತ್ಮಜಹಂತಾ ಚ ಸುದಾಮಾ ಸೌಖ್ಯದಾಯಕಃ।
ವಿಶ್ವಜಿದ್ವಿಶ್ವನಾಥಶ್ಚ ತ್ರಿಲೋಕವಿಜಯೀ ಜಯೀ ॥ ೬೫ ॥

ವಸಂತಮಾಲತೀಕರ್ಷೀ ಗದೋ ಗದ್ಯೋ ಗದಾಗ್ರಜಃ।
ಗುಣಾರ್ಣವೋ ಗುಣನಿಧಿರ್ಗುಣಪಾತ್ರೀ ಗುಣಾಕರಃ ॥ ೬೬ ॥

ಪಂಪಾ, ನರ್ಮದಾ, ಗಂಗಾ, ಭಾಗೀರಥೀನದೀ, ಮೇಲಿನ ನದಿಗಳ ಸ್ವರೂಪನು. (ಈ ನದಿಗಳಲ್ಲಿ ತೀರ್ಥಯಾತ್ರಾಸಂದರ್ಭದಲ್ಲಿ ಸ್ನಾನಮಾಡಿದವನು ಎಂದಭಿಪ್ರಾಯ) **ಸಿದ್ಧಾಶ್ರಮಃ, ಪ್ರಭಾಸಃ, ಬಿಂದು, ಬಿಂದುಃಸರೋವರಃ,**

೬೪. **ಪುಷ್ಕರಃ, ಸೈಂಧವಃ, ಜಂಬೂ, ನರನಾರಾಯಣಾಶ್ರಮಃ**-ಈ ತೀರ್ಥಕ್ಷೇತ್ರಸ್ವರೂಪನು. **ಕುರುಕ್ಷೇತ್ರಪತಿಃ**–ಕುರುಕ್ಷೇತ್ರಕ್ಕೆ ಅಧಿಪತಿಯು. **ರಾಮಃ, ಜಾಮದಗ್ನ್ಯಃ, ಮಹಾಮುನಿಃ**-ಪರಶುರಾಮನಾವತಾರನು.

೬೫. **ಇಲ್ವಲಾತ್ಮಜಹಂತಾ**–ಇಲ್ವಲಸಂಹಾರಿಯು. **ಸುದಾಮಾ**-ಸುದಾಮ ಸ್ವರೂಪನು. **ಸೌಖ್ಯದಾಯಕಃ**–ಸೌಖ್ಯಪ್ರದನು. **ವಿಶ್ವಜಿತ್**-ಪ್ರಪಂಚವನ್ನೇ ಜಯಿಸಿದವನು. **ವಿಶ್ವನಾಥಃ**-ಪ್ರಪಂಚಕ್ಕೇ ಒಡೆಯನು. **ತ್ರಿಲೋಕವಿಜಯೀ**-ಮೂರು ಲೋಕಗಳನ್ನೂ ಗೆದ್ದವನು. **ಜಯೀ**-ಜಯಶೀಲನು.

೬೬. **ವಸಂತಮಾಲತೀಕರ್ಷೀ**-ವಸಂತಮಾಲತೀನಗರವನ್ನು ಸೆಳೆದವನು. **ಗದಃ**-ಗದಸ್ವರೂಪನು. **ಗದ್ಯಃ**-ಗದಾಯುದ್ಧಪ್ರಿಯನು. **ಗದಾಗ್ರಜಃ**-ಗದನಅಣ್ಣನು. **ಗುಣಾರ್ಣವಃ**–ಸದ್ಗುಣಗಳಿಗೆ ನೆಲೆಯಾದವನು. **ಗುಣನಿಧಿಃ**–ಗುಣಗಳಿಗೆ ಆಶ್ರಯನು. **ಗುಣಪಾತ್ರೀ, ಗುಣಾಕರಃ**–ಗುಣಗಳಿಗೆ ಆವಾಸನು.

ರಂಗವಲ್ಲೀಜನಾಕಾರೋ ನಿರ್ಗುಣಃ ಸಗುಣೋ ಬೃಹತ್ ।
ದೃಷ್ಟಃಶ್ರುತೋ ಭವದ್ಭೂತೋ ಭವಿಷ್ಯಚ್ಚಾಲ್ಪವಿಗ್ರಹಃ ॥ ೬೭ ॥

ಅನಾದಿರಾದಿರಾನಂದಃ ಪ್ರತ್ಯಗ್ಧಾಮಾ ನಿರಂತರಃ ।
ಗುಣಾತೀತಃ ಸಮಃ ಸಾಮ್ಯಃ ಸಮದೃಕ್ ನಿರ್ವಿಕಲ್ಪಕಃ ॥ ೬೮ ॥

ಗೂಢೋ ವ್ಯೂಢೋ ಗುಣೋ ಗೌಣೋ ಗುಣಾಭಾಸೋ ಗುಣಾವೃತಃ।
ನಿತ್ಯೋಽಕ್ಷರೋ ನಿರ್ವಿಕಾರೋ ಕ್ಷರೋಽಜಸ್ರಸುಖೋಽಮೃತಃ ॥ ೬೯ ॥

---

೬೭. **ರಂಗವಲ್ಲೀಜನಾಕಾರಃ**–ರಂಗವಲ್ಲೀಪುರನಿವಾಸಿಗಳಾದ ಜನರ ರೂಪದಿಂದ ಇರುವವನು. **ನಿರ್ಗುಣಃ**–ಗುಣರಹಿತನು. **ಸುಗುಣಃ**–ಗುಣಾಶ್ರಯನು. **ಬೃಹತ್**–ಬೃಹದಾಕಾರನು. **ದೃಷ್ಟಃ**–ಕಣ್ಣಿಗೆ ತೋರುವವನು. **ಶ್ರುತಃ**–ಕಿವಿಗೆ ಗೋಚರನಾದವನು. **ಭವತ್**–ಈಗಿರುವವನು **ಭೂತಃ**–ಹಿಂದೆ ಇದ್ದವನು. **ಭವಿಷ್ಯತ್**–ಮುಂದೂ ಇರುವವನು. **ಅಲ್ಪವಿಗ್ರಹಃ**-ಸೂಕ್ಷ್ಮಶರೀರನು.

೬೮. **ಅನಾದಿಃ**-ಮೊದಲಿಲ್ಲದವನು. **ಆದಿಃ**-ಎಲ್ಲರಿಗೂ ಮೊದಲಾದವನು. **ಆನಂದಃ**–ಆನಂದಸ್ವರೂಪನು. **ಪ್ರತ್ಯಗ್ಧಾಮಾ**-ಬೆಳಗುವ ಜ್ಯೋತಿಸ್ಸ್ವರೂಪನು. **ನಿರಂತರಃ**-ಎಲ್ಲೆಲ್ಲೂ ಎಡೆಬಿಡದೆ ಇರುವವನು. **ಗುಣಾತೀತಃ**–ಸತ್ತ್ವಾದಿ ಗುಣಗಳಿಂದ ಬೇರ್ಪಟ್ಟವನು. **ಸಮಃ**–ಸರ್ವಸಮನು. **ಸಾಮ್ಯಂ**-ಸಾಮ್ಯಸ್ವರೂಪನು. **ಸಮದೃಕ್**-ಸಮದರ್ಶಿಯು. **ನಿರ್ವಿಕಲ್ಪಃ**-ಸಂಶಯವರ್ಜಿತನು.

೬೯. **ಗೂಢಃ**–ಯಾರಿಗೂ ತಿಳಿಯದಂತಿರುವವನು. **ವ್ಯೂಢಃ**-ಎಲ್ಲೆಡೆಯಲ್ಲಿಯೂ ಇರುವವನು. **ಗುಣಃ**-ಗುಣಸ್ವರೂಪನು. **ಗೌಣಃ**-ಗುಣಗಳಿಗೆ ಸಿಲುಕಿದವನು. **ಗುಣಾಭಾಸಃ**-ಗುಣದಂತೆ ತೋರುವವನು **ಗುಣಾವೃತಃ**-ಗುಣಗಳಿಂದ ತುಂಬಿದವನು. **ನಿತ್ಯಃ**-ಎಂದೆಂದಿಗೂ ಇರುವವನು. **ಅಕ್ಷರಃ**-ನಾಶವಿಲ್ಲದವನು. **ನಿರ್ವಿಕಾರಃ**-ವಿಕಾರಗಳಿಗೆ ವಶನಾಗದವನು. **ಕ್ಷರಃ**-ಕ್ಷರಸ್ವರೂಪನು. **ಅಜಸ್ರಸುಖಃ**-ನಿತ್ಯಸುಖಸ್ವರೂಪನು. **ಅಮೃತಃ**–ಸಾವಿಲ್ಲದವನು.

ಸರ್ವಗಃ ಸರ್ವವಿತ್ಸಾರ್ಥಃ ಸಮಬುದ್ಧಿಃ ಸಮಪ್ರಭಃ |
ಅಕ್ಲೇದ್ಯೋಽಚ್ಛೇದ್ಯ ಆಪೂರ್ಣೋಽಶೋಷ್ಯೋಽದಾಹ್ಯೋ ನಿವರ್ತಕಃ ||೨೦||

ಬ್ರಹ್ಮ ಬ್ರಹ್ಮಧರೋ ಬ್ರಹ್ಮಾ ಜ್ಞಾಪಕೋ ವ್ಯಾಪಕಃ ಕವಿಃ |
ಅಧ್ಯಾತ್ಮಕೋಽಧಿಭೂತಶ್ಚಾಧಿದೈವಃ ಸ್ವಾಶ್ರಯಾಶ್ರಯಃ || ೨೧ ||

ಮಹಾವಾಯುರ್ಮಹಾಹರಿಶ್ಚೇಷ್ಟಾರೂಪತನುಸ್ಥಿತಃ |
ಪ್ರೇರಕೋ ಬೋಧಕೋ ಬೋಧೀ ತ್ರಯೋವಿಂಶತಿಕೋ ಗುಣಃ || ೨೨ ||

ಅಂಶಾಂಶಶ್ಚ ನರಾವೇಶೋಽವತಾರೋ ಭೂಪರಿಸ್ಥಿತಃ |
ಮಹರ್ಜನಸ್ತಪಃ ಸತ್ಯಂ ಭೂರ್ಭುವಃ ಸ್ವರಿತಿ ತ್ರಿಧಾ || ೨೩ ||

---

೨೦. **ಸರ್ವಗಃ**–ಎಲ್ಲೆಲ್ಲೂ ಹೋಗಿ ಬರಬಲ್ಲವನು. **ಸರ್ವವಿತ್**–ಎಲ್ಲವನ್ನೂ ಬಲ್ಲವನು. **ಸಾರ್ಥಃ**–ಅರ್ಥಪೂರ್ಣನು. **ಸಮಬುದ್ಧಿಃ**–ಪಕ್ಷಪಾತರಹಿತನು. **ಸಮಪ್ರಭಃ**–ಏರಿಳಿತಗಳಿಲ್ಲದ ಕಾಂತಿಯುಳ್ಳವನು. **ಅಕ್ಲೇದ್ಯಃ**–ನೆನೆಯಲ್ಪಡದವನು. **ಅಚ್ಛೇದ್ಯಃ**–ಕತ್ತರಿಸಲು ಅಸಾಧ್ಯನು. **ಆಪೂರ್ಣಃ**–ಪರಿಪೂರ್ಣನು. **ಅಶೋಷ್ಯ**–ಒಣಗಿಸಲಾಗದವನು. **ಅದಾಹ್ಯಃ**–ಸುಡಲು ಸಾಧ್ಯವಿಲ್ಲದವನು. **ಅನಿವರ್ತಕಃ**–ತಿರುಗಿಸಲಾಗದವನು.

೨೧. **ಬ್ರಹ್ಮ**–ಪರಬ್ರಹ್ಮವು. **ಬ್ರಹ್ಮಧರಃ**–ವೇದವನ್ನು ಧರಿಸಿದವನು. **ಬ್ರಹ್ಮಾ**–ಚತುರ್ಮುಖಸ್ವರೂಪನು. **ಜ್ಞಾಪಕಃ**–ತಿಳಿವಳಿಕೆಯನ್ನು ಕೊಡುವವನು. **ವ್ಯಾಪಕ**-.ಎಲ್ಲೆಡೆಯಲ್ಲೂ ವ್ಯಾಪಿಸಿರುವವನು. **ಕವಿಃ**-ಸೃಷ್ಟಿ ಸಾಮರ್ಥ್ಯವುಳ್ಳವನು. **ಅಧ್ಯಾಪಕಃ**–ಉಪಾಧ್ಯಾಯಸ್ವರೂಪನು. **ಅಧಿಭೂತಃ**–ಪಂಚಭೂತಗಳಲ್ಲಿ ನೆಲಸಿದವನು. **ಅಧಿದೈವಃ**–ದೇವತೆಗಳಲ್ಲಿ ನೆಲಸಿದವನು. **ಸ್ವಾಶ್ರಯಾಶ್ರಯಃ**–ತನ್ನನ್ನು ನಂಬಿದವರಿಗೆ ಆಸರೆಯಾದವನು.

೨೨. **ಮಹಾವಾಯುಃ**–ಮಹಾವಾಯುಸ್ವರೂಪನು. **ಮಹಾಹರಿಃ**–ಮಹಾವಿಷ್ಣುಸ್ವರೂಪನು. **ಇಷ್ಟಾರೂಪತನುಸ್ಥಿತಃ**-ತನಗೆ ಬೇಕಾದ ರೂಪವನ್ನು ಧರಿಸಲು ಸಮರ್ಥನು. **ಪ್ರೇರಕಃ**–ಪ್ರೇರಣೆಮಾಡತಕ್ಕವನು. **ಬೋಧಕಃ**–ಬೋಧಿಸತಕ್ಕವನು. **ಬೋಧೀ**–ಜ್ಞಾನಿಯು. **ತ್ರಯೋವಿಂಶತಿಕಃ ಗುಣಃ**–ಇಪ್ಪತ್ತಮೂರನೆಯ ತತ್ತ್ವವೆನಿಸಿದವನು.

೨೩. **ಅಂಶಾಂಶಃ**–ಅಂಶಾಂಶಾವತಾರನು. **ನರಾವೇಶಃ**–ಮನುಷ್ಯರೂಪದಿಂದ ಆವಿಷ್ಟನಾಗುವವನು. **ಅವತಾರಃ**–ಅವತಾರಸ್ವರೂಪನು. **ಭೂಪರಿಸ್ಥಃ**-ಭೂಮಿಯಲ್ಲಿ ನೆಲಸಿದವನು. **ಮಹಃ, ಜನಃ, ತಪಃ, ಸತ್ಯಂ, ಭೂಃ, ಭುವಃ, ಸ್ವಃ**–ಮೇಲಿನ ಸಪ್ತಲೋಕಗಳ ಸ್ವರೂಪವೆನಿಸಿದವನು.

ನೈಮಿತ್ತಿಕಃ ಪ್ರಾಕೃತಿಕ ಆತ್ಯಂತಿಕಮಯೋ ಲಯಃ ।
ಸರ್ಗೋ ವಿಸರ್ಗಃ ಸರ್ಗಾದಿರ್ನಿರೋಧೋಽರೋಧ ಊತಿಮಾನ್ ॥ ೭೪ ॥

ಮನ್ವಂತರಾವತಾರಶ್ಚ ಮನುರ್ಮನುಸುತೋಽನಘಃ ।
ಸ್ವಯಂಭೂಃ ಶಾಂಭವಃ ಶಂಕುಃ ಸ್ವಾಯಂಭುವಸಹಾಯಕೃತ್ ॥ ೭೫ ॥

ಸುರಾಲಯೋ ದೇವಗಿರಿರ್ಮೇರುರ್ಹೇಮಾರ್ಚಿತೋ ಗಿರಿಃ ।
ಗಿರೀಶೋ ಗಣನಾಥಶ್ಚ ಗೌರೀಶೋ ಗಿರಿಗಹ್ವರಃ ॥ ೭೬ ॥

ವಿಂಧ್ಯಸ್ತ್ರಿಕೂಟೋ ಮೈನಾಕಃ ಸುವೇಲಃ ಪಾರಿಭದ್ರಕಃ ।
ಪತಂಗಃ ಶಿಶಿರಃ ಕಂಕೋ ಜಾರುಧಿಃ ಶೈಲಸತ್ತಮಃ ॥ ೭೭ ॥

---

೭೪. **ನೈಮಿತ್ತಿಕಃ, ಪ್ರಾಕೃತಿಕಃ, ಆತ್ಯಂತಿಕಮಯಃ, ಲಯಃ**–ನೈಮಿತ್ತಿಕಾದಿ ಪ್ರಳಯತ್ರಯ ಸ್ವರೂಪನು. **ಸರ್ಗಃ**–ಸೃಷ್ಟಿಯು. **ವಿಸರ್ಗಃ**–ವಿಸೃಷ್ಟಿಸ್ವರೂಪನು. **ಸರ್ಗಾದಿಃ**–ಸೃಷ್ಟ್ಯಾದಿಭೂತನು. **ನಿರೋಧಃ**–ತಡೆಯುವವನು. **ಅರೋಧಃ**–ತಡೆಯಿಲ್ಲದವನು. **ಊತಿಮಾನ್**-ಲೀಲಾಮಯನು.

೭೫. **ಮನ್ವಂತರಾವತಾರಃ**-ಮನ್ವಂತರಸ್ವರೂಪನು. **ಮನುಃ, ಮನುಸುತಃ**-ಮನು ಮತ್ತು ಮನುಪುತ್ರಸ್ವರೂಪನು. **ಅನಘಃ**-ಪಾಪರಹಿತನು. **ಸ್ವಯಂಭೂಃ**-ತಾನಾಗಿ ಉದ್ಭವಿಸಿದವನು. **ಶಾಂಭವಃ**-ಶಿವಸ್ವರೂಪನು. **ಶಂಕುಃ**-ಸ್ಥಾಣುಸ್ವರೂಪನು. **ಸ್ವಾಯಂಭುವಸಹಾಯಕೃತ್**-ಸ್ವಾಯಂಭುವಮನುವಿಗೆ ಸಹಾಯ ಮಾಡಿದವನು.

೭೬. **ಸುರಾಲಯಃ, ದೇವಗಿರಿಃ, ಮೇರುಃ, ಹೇಮಾರ್ಚಿತಃ**-ಮೇರುಸ್ವರೂಪನು ಮತ್ತು ಚಿನ್ನದಿಂದ ಪೂಜಿಸಲ್ಪಟ್ಟವನು. **ಗಿರಿಃ**-ಪರ್ವತರೂಪನು. **ಗಿರೀಶಃ**-ಶಿವಸ್ವರೂಪನು. **ಗಣನಾಥಃ**-ಗಣಪತಿಯು. **ಗೌರೀಶಃ**-ಗೌರೀವಲ್ಲಭನು. **ಗಿರಿಗಹ್ವರಃ**-ಗಿರಿಗುಹಾಸ್ವರೂಪನು.

೭೭. **ವಿಂಧ್ಯಃ, ತ್ರಿಕೂಟಃ, ಮೈನಾಕಃ, ಸುವೇಲಃ, ಪಾರಿಭದ್ರಕಃ, ಪತಂಗಃ, ಶಿಶಿರಃ, ಕಂಕಃ, ಜಾರುಧಿಃ ಶೈಲಸತ್ತಮಃ,**

ಕಾಲಂಜರೋ ಬೃಹತ್ಸಾನುರ್ದರೀಭೃನ್ನಂದಿಕೇಶ್ವರಃ ।
ಸಂತಾನಸ್ತರುರಾಜಶ್ಚ ಮಂದಾರಃ ಪಾರಿಜಾತಕಃ ॥ ೭೮ ॥

ಜಯಂತಕೃಜ್ಜಯಂತಾಂಗೋ ಜಯಂತೀ ದಿಗ್ಜಯಾಕುಲಃ ।
ವೃತ್ರಹಾ ದೇವಲೋಕಶ್ಚ ಶಶೀಕುಮುದಬಾಂಧವಃ ॥ ೭೯ ॥

ನಕ್ಷತ್ರೇಶಃ ಸುಧಾಸಿಂಧುರ್ಮೃಗಃ ಪುಷ್ಯಃ ಪುನರ್ವಸುಃ ।
ಹಸ್ತೋಽಭಿಜಿಚ್ಚ ಶ್ರವಣೋ ವೈಧೂತಿರ್ಭಾಸ್ಕರೋದಯಃ ॥ ೮೦ ॥

ಯತ್ರ ಯತ್ರ ವ್ರಜಂತಸ್ತೇ ತ್ವಾದೃಶಾಃ ಸಾಧವಃ ಪ್ರಭೋ ।
ತತ್ರ ತತ್ರ ಭವೇತ್ಸಿದ್ಧಿಃ ಲೌಕಿಕೀ ಪಾರಲೌಕಿಕೀ ॥ ೨೨ ॥

---

೧೯. ಆ ಮಹರ್ಷಿಯು ಬಂದುದನ್ನು ಕಂಡೊಡನೆಯೇ ಯಾದವೇಶ್ವರನಾದ ಉಗ್ರಸೇನನು ಝಗ್ಗನೆ ತನ್ನ ಸಿಂಹಾಸನದಿಂದೆದ್ದು ಆತನಿಗೆ ಅಭಿವಂದಿಸಿ ಆಸನವನ್ನಿತ್ತು ಉಪಚರಿಸಿ ಕೈಮುಗಿದುಕೊಂಡು ಆತನೆದುರಿಗೆ ನಿಂತು,

೨೦. ಓ ಬ್ರಾಹ್ಮಣೋತ್ತಮ, ಇಂದು ನೀನು ನನ್ನ ಮನೆಗೆ ದಯಮಾಡಿಸಿರುವುದರಿಂದ ಇಂದಿಗೆ ನನ್ನ ಜನ್ಮವು ಸಫಲವಾಯಿತು. ಈದಿನ ನನ್ನ ಧರ್ಮಕಾರ್ಯಗಳೆಲ್ಲವೂ ಕೃತಕೃತ್ಯತೆಯನ್ನು ಪಡೆದವು.

೨೧. ಓ ದೇವ, ಸದಾ ಸಂತೋಷಶೀಲರಾದ ನಿಮ್ಮಂತಹವರಲ್ಲಿ ಶ್ರೀಕೃಷ್ಣನ ಕೃಪೆಯಿಂದ ಕುಶಲವು ಶಾಶ್ವತವಾಗಿ ನೆಲೆಸಿರುವುದಾದರೂ ನನ್ನ ಮನಸ್ಸಿನ ಶಾಂತತೆಗಾಗಿ ನಿನ್ನ ಕ್ಷೇಮಲಾಭವನ್ನು ತಿಳಿಸಬೇಕೆಂಬುದಾಗಿ ಪ್ರಾರ್ಥಿಸುವೆನು.

೨೨. ಹೇ ಪ್ರಭು, ನಿನ್ನಂತಹ ಮಹನೀಯರು ಎಲ್ಲೆಲ್ಲಿ ಸಂಚರಿಸುವರೋ ಅಲ್ಲೆಲ್ಲಾ ವಿಹಿತವೂ ಮತ್ತು ಪಾರಲೌಕಿಕವೂ ಆದ ಶ್ರೇಯಸ್ಸು (ಅಲ್ಲಿಯವರೆಗೆ) ಕೂಡಲೆ ಉಂಟಾಗುವುದು.

ಯತ್ರ ಕ್ಷಣಂ ಸ್ಥಿತಾಃ ಸಂತಸ್ತತ್ರ ಸಾಕ್ಷಾತ್ಸ್ವಯಂ ಹರಿಃ ।
ಕಿಮು ಲೋಕಗುಣಾ ಬ್ರಹ್ಮನ್ಪಾರಾಶರ್ಯಮಹಾಮುನೇ ॥ ೨೩ ॥

ಮಯಾ ತು ಪುಣ್ಯಂ ಯಜ್ಞೋ ವಾ ಕಿಂ ಕೃತಂ ಪೂರ್ವಜನ್ಮನಿ ।
ಯೇನ ವೈ ದ್ವಾರಕಾರಾಜ್ಯಂ ಪ್ರಾಪ್ತೋಽಹಂ ಮುನಿಪುಂಗವ ॥ ೨೪ ॥

ಭವಾದೃಶಾ ವಿಪ್ರಮುಖ್ಯಾ ಗೃಹಮಾಯಾಂತಿ ನಿತ್ಯಶಃ ।
ತಸ್ಮಾತ್ಪರಂ ಹಿ ಸುಕೃತಂ ಜಾನೇ ಸ್ವಸ್ಯ ನ ಸಂಶಯಃ ॥ ೨೫ ॥

॥ ವ್ಯಾಸ ಉವಾಚ ॥

ಧನ್ಯೋಽಸಿ ರಾಜಶಾರ್ದೂಲ ಧನ್ಯಾ ತೇ ವಿಮಲಾ ಮತಿಃ ।
ಪರಂ ಕೃತಂ ತ್ವಯಾ ರಾಜನ್ ಸುಕೃತಂ ಪೂರ್ವಜನ್ಮನಿ ॥ ೨೬ ॥

---

೨೩. ಓ ಬ್ರಹ್ಮಜ್ಞ, ಮಹರ್ಷಿಯೆನಿಸಿದ ಪರಾಶರಪುತ್ರ, ಸತ್ಪುರುಷರು ಒಂದು ಕ್ಷಣವೇ ಆಗಲಿ ಎಲ್ಲಿ ನೆಲೆಸುವರೋ ಆ ಪ್ರದೇಶದಲ್ಲಿ ಸಾಕ್ಷಾತ್ ಶ್ರೀಹರಿಯೇ ನೆಲೆಗೊಳ್ಳುವನೆಂದಮೇಲೆ ಪ್ರಾಪಂಚಿಕವಾದ ಇತರ ಸುಖಸಂತೋಷಗಳೆಲ್ಲವೂ ಅಲ್ಲಿ ನೆಲೆಗೊಳ್ಳುವುವೆಂಬುದರಲ್ಲೇನಾಶ್ಚರ್ಯ ?

೨೪. ಓ ಮುನಿಶ್ರೇಷ್ಠ, ನನಗೀಗ ಈ ದ್ವಾರಕಾರಾಜ್ಯಾಧಿಪತ್ಯವು ಕೈಗೂಡಿದೆಯಲ್ಲವೇ ? ಈ ಫಲವುಂಟಾಗಲು ಹಿಂದಿನ ಜನ್ಮದಲ್ಲಿ ನಾನಾವ ಯಜ್ಞವನ್ನು ಮಾಡಿದ್ದೆನು ? ಅಥವಾ ಪುಣ್ಯಕಾರ್ಯವನ್ನಾಚರಿಸಿದ್ದೆನು ?

೨೫. ಓ ವ್ಯಾಸಮುನೀಂದ್ರ, ನಿನ್ನಂತಹ ಬ್ರಾಹ್ಮಣೋತ್ತಮರು ಪ್ರತಿನಿತ್ಯವೂ ನನ್ನ ಮನೆಗೆ ದಯಮಾಡಿಸುತ್ತಿರುವುದನ್ನು ಪರಿಭಾವಿಸಿದಲ್ಲಿ ನಾನು ಹಿಂದೆ ಬಹುವಾಗಿ ಪುಣ್ಯವನ್ನು ಗಳಿಸಿಯೇ ಇರಬೇಕು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ ಎಂದನು.

೨೬. ಆಗ ವ್ಯಾಸಮಹರ್ಷಿಯು ಆ ಯಾದವೇಶ್ವರನನ್ನು ಕುರಿತು ಓ ರಾಜಶ್ರೇಷ್ಠ, ನೀನೇ ಧನ್ಯನು. ನಿನ್ನೀ ಪರಿಶುದ್ಧವಾದ ಬುದ್ಧಿಯೂ ಬಹುಧನ್ಯವಾದುದು. ನೀನು ಹಿಂದಿನ ಜನ್ಮದಲ್ಲಿ ಬೇಕಾದಷ್ಟು ಪುಣ್ಯವನ್ನು ಗಳಿಸಿರುವೆ; ಇದು ನಿಜ.

ಪುರಾ ತ್ವಂ ಮರುತೋ ರಾಜ ಕೃತ್ವಾ ಯಜ್ಞಂ ಜಗಜ್ಜಿತಂ।
ನಿಷ್ಕಾರಣೋಽಭೂರ್ಮನಸಾ ಪ್ರಸನ್ನೋಽಭೂದ್ಧರಿಸ್ತದಾ ॥ ೨೭ ॥

ಅನಿಮಿತ್ತೇನ ಭಾವೇನ ಸ್ವಾಪ್ತಂ ಚೇದಂ ಪರಂ ತವ।
ಪರಿಪೂರ್ಣತಮಃ ಸಾಕ್ಷಾಚ್ಛ್ರೀಕೃಷ್ಣೋ ಭಗವಾನ್ಹರಿಃ ॥ ೨೮ ॥

ಅಸಂಖ್ಯಬ್ರಹ್ಮಾಂಡಪತಿರ್ಗೋಲೋಕೇಶಃ ಪರಾತ್ಪರಃ।
ಸೋಽಯಂ ಭಕ್ತ್ಯಾ ವಶೀಭೂತಃ ಸ್ವವಶತ್ತವಮಂದಿರೇ ॥ ೨೯ ॥

ಅಹೋ ಭೋಜಪತೇ ಮುಕ್ತಿಂ ದದಾತಿ ಭಜತಾಂ ಹರಿಃ।
ನ ಕರ್ಹಿಚಿದ್ಭಕ್ತಿಯೋಗಂ ದುರ್ಲಭಂ ವಿದ್ಧಿ ತಂ ನೃಪ ॥ ೩೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಜ್ಞಾನಖಂಡೇ ನಾರದ–
ಬಹುಲಾಶ್ವಸಂವಾದೇ ವ್ಯಾಸಾಗಮನಂ ನಾಮ
ಪ್ರಥಮೋಽಧ್ಯಾಯಃ

---

೨೭. ನೀನು ಈ ಹಿಂದಿನ ಜನ್ಮದಲ್ಲಿ ಮರುತನೆಂಬ ರಾಜನಾಗಿದ್ದೆ. ಆಗ ನೀನು ಮನಸ್ಸಿನಲ್ಲಿ ಯಾವ ಕಾಮನೆಯನ್ನೂ ಇಟ್ಟುಕೊಳ್ಳದೆ ವಿಶ್ವಜಿದ್ಯಾಗವನ್ನು ಮಾಡಿದೆ ನಿನ್ನೀ ನಿಸ್ಸ್ವಾರ್ಥಕೃತಿಯಿಂದ ಶ್ರೀಹರಿಯು ಸುಪ್ರೀತನಾದನು.

೨೮. ಆ ರೀತಿ ಫಲಾಪೇಕ್ಷೆಯಿಲ್ಲದೆ ನಿರ್ಮಲಾಂತಃಕರಣದಿಂದ ಇದ್ದುದರಿಂದಲೇ ಉತ್ತಮವಾದೀ ಪದವಿಯು ನಿನಗೀಗ ಲಭಿಸಿರುವುದು. ಭಗವಂತನಾದ ಶ್ರೀಹರಿಯು ಪರಿಪೂರ್ಣತಮಸ್ವರೂಪನೂ,

೨೯. ಎಣಿಕೆಗೆ ಸಿಲುಕದಿರುವಂತಹ ಬ್ರಹ್ಮಾಂಡಗಳಿಗೆಲ್ಲಾ ಅಧೀಶ್ವರನೆನಿಸಿದವನೂ, ಗೋಲೋಕಾಧಿಪತಿಯೂ, ಪರಾತ್ಪರನೂ ಆದ ಸಾಕ್ಷಾತ್ ಶ್ರೀಕೃಷ್ಣಚಂದ್ರನೇ ನಿನ್ನ ಭಕ್ತಿಗೆ ವಶೀಭೂತನಾಗಿ ನಿನ್ನ ಅಧೀನನಾದವನಂತೆ ನಿನ್ನ ಮನೆಯಲ್ಲಿಯೇ ಇರುವನು.

೩೦. ಓ ಭೋಜನರೇಂದ್ರ, ಆ ಶ್ರೀಹರಿಯು ತನ್ನ ಭಕ್ತರಿಗೆ ಮುಕ್ತಿಯನ್ನಾದರೂ ಕೊಡುವನೇ ವಿನಾ ಭಕ್ತಿಯೋಗವನ್ನೆಂದಿಗೂ ಕರುಣಿಸಲಾರನು. ಅಬ್ಬಾ! ಆ ಭಕ್ತಿಯೋಗವು ಅತಿ ದುರ್ಲಭವಾದುದು. ಇದನ್ನು ನೀನು ತಿಳಿದುಕೊಳ್ಳಬೇಕು ಎಂದನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತಾಂತರ್ಗತವಾದ ವಿಜ್ಞಾನಖಂಡದಲ್ಲಿ
ನಾರದಬಹುಲಾಶ್ವಸಂವಾದದೊಳಗಿನ ವ್ಯಾಸಾಗಮನವೆಂಬ
ಮೊದಲನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಜ್ಞಾನ ಖಂಡೇ

ದ್ವಿತೀಯೋಽಧ್ಯಾಯಃ

॥ ಉಗ್ರಸೇನ ಉವಾಚ ॥

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ತವ ವರ್ಣನನಿರ್ವೃತಃ ।
ಹೃದುದ್ಭೂತಂ ಚ ಸಂದೇಹಂ ದೂರೀಕರ್ತುಂ ಭವಾನ್ ಕ್ಷಮಃ ॥ ೧ ॥

ಕರ್ಮಣಾಂ ಸನಿಮಿತ್ತಾನಾಂ ಕಾ ಗತಿಃ ಕಿಂ ಚ ಲಕ್ಷಣಂ ।
ಕತಿ ಭೇದಾ ಹಿ ತೇಷಾಂ ವೈ ವದ ಬ್ರಹ್ಮನ್ ಯಥಾ ತಥಾ ॥ ೨ ॥

ಎರಡನೆಯ ಅಧ್ಯಾಯವು

೧. ಉಗ್ರಸೇನ ಮಹಾರಾಜನು ವೇದವ್ಯಾಸ ಮಹರ್ಷಿಯನ್ನು ಕುರಿತು ಇಂತೆಂದನು—ಓ ಮುನೀಂದ್ರ, ನಿನ್ನ ಈ ವರ್ಣನೆಯನ್ನು ಕೇಳಿ ಇಂದು ನಾನು ಧನ್ಯನಾದೆನು, ಅನುಗ್ರಹಕ್ಕೆ ಪಾತ್ರನಾದೆನು, ನಿಜವಾಗಿಯೂ ಸುಖಿಯಾದೆನು. ನೀನೊಬ್ಬನೇ ನನ್ನ ಮನಸ್ಸಿನಲ್ಲಿ ಉಂಟಾಗಿರುವ ಸಂಶಯವನ್ನು ದೂರಮಾಡಲು ಶಕ್ತನಾಗಿರುವೆ.

೨. ಫಲಾಪೇಕ್ಷೆಯಿಂದ ಮಾಡುವ ಕರ್ಮಗಳಿಗೆ ದೊರೆಯುವ ಫಲವೇನು? ಮತ್ತು ಅವುಗಳ ಸ್ವರೂಪವೇನು? ಅವುಗಳಲ್ಲಿರುವ ಭೇದಗಳೆಷ್ಟು? ಓ ಬ್ರಹ್ಮಜ್ಞ, ಇವೆಲ್ಲವನ್ನೂ ನನಗೆ ಯಥಾವತ್ತಾಗಿ ತಿಳಿಸಬೇಕು ಎಂದು ನುಡಿಯಲು,

॥ ವ್ಯಾಸ ಉವಾಚ ॥

ಗುಣೈಃ ಕರ್ಮಾಣಿ ಸರ್ವಾಣಿ ಸನಿಮಿತ್ತಾನಿ ಸಂತಿ ಹಿ ।
ತಾನ್ಯೇವ ಚಾನಿಮಿತ್ತಾನಿ ರಾಜನ್ ತ್ಯಕ್ತಫಲಾನಿ ಹಿ ॥ ೩ ॥

ಸನಿಮಿತ್ತಂ ಚ ಯತ್ಕರ್ಮ ಬಂಧನಂ ವಿದ್ಧಿ ಯಾದವ ।
ಅನಿಮಿತ್ತಂ ಚ ಯತ್ಕರ್ಮ ಮೋಕ್ಷದಂ ಪರಮಂ ಶುಭಂ ॥ ೪ ॥

ಸತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ತೈರ್ವ್ಯಾಪ್ತಂ ಹಿ ಜಗತ್ಸರ್ವಂ ಸರ್ವಾರ್ಥಮಿವ ವಿಷ್ಣುನಾ ॥ ೫ ॥

ಸತ್ವೇ ಪ್ರಲೀನಾಃ ಸ್ವರ್ಯಾಂತಿ ನರಲೋಕಂ ರಜೋಲಯಾಃ ।
ತಮೋಲಯಾಸ್ತು ನರಕಂ ಯಾಂತಿ ಕೃಷ್ಣಂ ಹಿ ನಿರ್ಗುಣಾಃ ॥ ೬ ॥

---

೩. ಆ ಮುನಿಯು ಹೇಳತೊಡಗಿದನು—ಓ ರಾಜೇಂದ್ರ, ಆಲಿಸು. ಯಾವ ಕರ್ಮವನ್ನೇ ಆಗಲಿ ಫಲಾಪೇಕ್ಷೆಯಿಂದ ನಡೆಸಿದಲ್ಲಿ ಅದು ಸನಿಮಿತ್ತವೆನಿಸುವುದು. ಆ ರೀತಿ ಫಲಾಪೇಕ್ಷೆಯಿಲ್ಲದೆ ಮಾಡಲ್ಪಡುವ ಕರ್ಮವು ಅನಿಮಿತ್ತವೆನಿಸುವುದು.

೪. ಓ ಯಾದವೇಂದ್ರ, ಯಾವ ಕರ್ಮವು ಸನಿಮಿತ್ತವೆನಿಸುವುದೋ ಅದೆಲ್ಲವೂ ಬಂಧಹೇತುವೆಂದೇ ಭಾವಿಸು. ಅನಿಮಿತ್ತವಾದ ಕರ್ಮವಾವುದುಂಟೋ ಅದು ಅತ್ಯುತ್ಕೃಷ್ಟವೂ, ಮಂಗಲಮಯವೂ, ಮೋಕ್ಷದಾಯಕವೂ ಆದುದೆಂಬದಾಗಿ ತಿಳಿ.

೫. ಸತ್ತ್ವ, ರಜಸ್ಸು, ತಮಸ್ಸುಗಳೆಂಬವು ಪ್ರಕೃತಿಜನ್ಯಗಳಾದ ಗುಣಗಳು. ವಿಷ್ಣುವಿನಿಂದ ಸಕಲ ಪದಾರ್ಥಗಳೂ ವ್ಯಾಪಿಸಲ್ಪಟ್ಟಿರುವಂತೆ ಜಗತ್ತೆಲ್ಲವೂ ಈ ಗುಣಗಳಿಂದ ಆವರಿಸಲ್ಪಟ್ಟಿರುವವು.

೬. ಸತ್ತ್ವಗುಣದಿಂದ ಲಯವನ್ನು ಹೊಂದಿದವರು ಸ್ವರ್ಗಲೋಕವನ್ನು ಸೇರುವರು. ರಜೋಗುಣದಿಂದ ಲಯಕ್ಕೆ ಗುರಿಯಾದವರು ಮನುಷ್ಯಲೋಕದಲ್ಲಿ ಜನ್ಮವೆತ್ತುವರು. ತಮೋಗುಣದಿಂದ ಲಯವನ್ನು ಪಡೆದವರು ನರಕದುಃಖವನ್ನನುಭವಿಸುವರು. ಗುಣವರ್ಜಿತರಾಗಿ ಲಯವನ್ನು ಹೊಂದಿದವರು ಶ್ರೀಕೃಷ್ಣನನ್ನೇ ಹೊಂದುವರು.

ಪಂಚಾಗ್ನಿತಪ್ತಾಃ ಪ್ರತಪನ್ ಯೇ ರಾಜನ್ ವ್ರಜವಾಸಿನಃ ।
ಲೋಕಂ ಸಪ್ತಋಷೀಣಾಂ ತು ತೇ ಯಾಂತಿ ಗತಕಲ್ಮಷಾಃ ॥ ೭ ॥

ಸಂನ್ಯಾಸಾಶ್ರಮಕರ್ತಾರಃ ತ್ರಿದಂಡಧೃತಪಾಣಯಃ ।
ಜಿತೇಂದ್ರಿಯಮನೋಧರ್ಮಾಃ ಸತ್ಯಲೋಕಂ ವ್ರಜಂತಿ ಹಿ ॥ ೮ ॥

ಅಷ್ಟಾಂಗಯೋಗಯೋಗೀಂದ್ರಾ ನಿರ್ಮಲಾ ಊರ್ಧ್ವರೇತಸಃ ।
ಜನಲೋಕಂ ಮಹರ್ಲೋಕಂ ಯಾಂತಿ ತೇ ನಾತ್ರ ಸಂಶಯಃ ॥ ೯ ॥

ಯಜ್ಞಕರ್ತಾ ಶಕ್ರಲೋಕೇ ವಸತೇ ಶಾಶ್ವತೀಃಸಮಾಃ ।
ದಾನೀ ಚಾಂದ್ರಮಸಂ ಲೋಕಂ ವ್ರತೀ ಸೌರಂ ವ್ರಜತ್ಯಲಂ ॥ ೧೦ ॥

---

೭. ಯಾರು ಗೋವುಗಳ ಬೀಡಿರುವ ಕಡೆ, ಪಂಚಾಗ್ನಿಗಳ ನಡುವೆ ಕುಳಿತು ಆ ಕಾವನ್ನನುಭವಿಸುತ್ತಾ ತಪಸ್ಸನ್ನಾಡುವರೋ, ಅವರೆಲ್ಲರೂ ತಮ್ಮ ಪಾಪಗಳನ್ನು ನೀಗಿ ಸಪ್ತರ್ಷಿಗಳ ಲೋಕವನ್ನು ಹೋಗಿ ಸೇರುವರು.

೮. ಯಾರು ಸಂನ್ಯಾಸಾಶ್ರಮವನ್ನವಲಂಬಿಸಿ ಆ ಆಶ್ರಮಕ್ಕೆ ಉಚಿತವಾದ ರೀತಿಯಲ್ಲಿ ತ್ರಿದಂಡವನ್ನು ಕೈಲಿ ಧರಿಸಿ ಇಂದ್ರಿಯಗಳನ್ನೂ ಮನೋವೃತ್ತಿಗಳನ್ನೂ ನಿಗ್ರಹಿಸಿ ತಮ್ಮ ವಶಪಡಿಸಿಕೊಂಡಿರುವರೋ ಅವರು ಈ ಶರೀರತ್ಯಾಗಾನಂತರ ಸತ್ಯಲೋಕವನ್ನು ಸೇರುವರು.

೯. ಓ ರಾಜೇಂದ್ರ, ಯಾರು ಎಂಟು ವಿಧವಾದ ಯೋಗಗಳಲ್ಲಿಯೂ ನಿಷ್ಣಾತರಾದ ಯೋಗಿರಾಜರಾಗಿರುವರೋ, ಮತ್ತು ಯಾರು ಕಲ್ಮಷದೂರರಾಗಿ ಊರ್ಧ್ವರೇತಸ್ಕರೆನಿಸಿರುವರೋ ಅವರೀರ್ವರೂ ಕ್ರಮವಾಗಿ ಜನಲೋಕವನ್ನೂ ಮಹರ್ಲೋಕವನ್ನೂ ಸೇರುವರು. ಈ ಅಂಶದಲ್ಲಿ ಸ್ವಲ್ಪವೂ ಸಂಶಯವಿಲ್ಲ.

೧೦. ಯಜ್ಞಯಾಗಾದಿಗಳನ್ನು ಮಾಡಿದವನು ಇಂದ್ರಲೋಕದಲ್ಲಿಯೂ, ದಾನಶೀಲನು ಚಂದ್ರಲೋಕದಲ್ಲಿಯೂ, ವ್ರತೋಪವಾಸಾದಿನಿರತನು ಸೂರ್ಯಲೋಕದಲ್ಲಿಯೂ, ಬಹಳ ವರ್ಷಗಳವರೆಗೂ ವಾಸಿಸುವನು.

ತೀರ್ಥಯಾಯಿನಾ ಚಾಗ್ನಿಲೋಕಂ ಸತ್ಯಸಂಧಶ್ಚ ವಾರುಣಂ ।
ವೈಷ್ಣವಾಶ್ಚಾಪಿ ವೈಕುಂಠಂ ಶೈವಾಃ ಶೈವಂ ವ್ರಜಂತಿ ಹಿ || ೧೧ ||

ಪಿತೄನ್ಯಜಂತಿ ಯೇ ನಿತ್ಯಂ ಸುಖೈಶ್ವರ್ಯಪ್ರಜೇಪ್ಸವಃ ।
ದಕ್ಷಿಣೇನ ಪಥಾಽರ್ಯಮ್ಣಾ ಪಿತೃಲೋಕಂ ವ್ರಜಂತಿ ತೇ || ೧೨ ||

ಸ್ವರ್ಲೋಕಂ ವೈ ತಥಾ ಸ್ಮಾರ್ತಾಃ ಪಂಚಪೂಜನಸಂಯುತಾಃ ।
ಪ್ರಜಾಪತಿಯುಜೋ ಯಾಂತಿ ದಕ್ಷಾದೀಂಶ್ಚ ಪ್ರಜಾಪತೀನ್ || ೧೩ ||

ಭೂತಾನಿ ಯಾಂತಿ ಭೂತೇಜ್ಯಾ ಯಕ್ಷಾನ್ಯಕ್ಷಯಜಸ್ತಥಾ ।
ಯೋ ಯಸ್ಯ ಭಕ್ತಾಸ್ತಲ್ಲೋಕಾನ್ಯಾಂತಿ ರಾಜನ್ನಸಂಶಯಃ || ೧೪ ||

---

೧೧. ಅವರಂತೆ ತೀರ್ಥಯಾತ್ರೆಗಳನ್ನು ಮಾಡಿದವನು ಅಗ್ನಿಲೋಕವನ್ನೂ, ಸತ್ಯಸಂಧನಾದವನು ವರುಣಲೋಕವನ್ನೂ, ವಿಷ್ಣುಭಕ್ತರು ವಿಷ್ಣುಲೋಕವನ್ನೂ, ಶಿವಭಕ್ತಿಯುಳ್ಳವರು ಶಿವಲೋಕವನ್ನೂ ಸೇರುವರು.

೧೨. ಯಾರು ಪ್ರತಿನಿತ್ಯವೂ ಪಿತೃಗಳನ್ನುದ್ದೇಶಿಸಿ ತಮಗೆ ಸುಖಸಂಪದವೂ ಪ್ರಜಾವೃದ್ಧಿಯೂ ಉಂಟಾಗಲಿ ಎಂಬಾಸೆಯಿಂದ ಶ್ರಾದ್ಧತರ್ಪಣಾದಿಗಳನ್ನೆಸಗುವರೋ, ಅವರೆಲ್ಲರೂ ತಮ್ಮ ದೇಹಾಂತ್ಯದಲ್ಲಿ ಅರ್ಯಮವೆಂಬ ದಕ್ಷಿಣ ಮಾರ್ಗದಿಂದ ಪಿತೃಲೋಕವನ್ನು ಹೋಗಿ ಸೇರುವರು.

೧೩. ಮತ್ತು ಯಾರು ಸ್ಮೃತ್ಯುಕ್ತವಾದ ಕರ್ಮಗಳನ್ನು ಆಚರಿಸುತ್ತಾ, ದೇವತೆಗಳನ್ನೂ, ಋಷಿಗಳನ್ನೂ, ಪಿತೃಗಳನ್ನೂ, ಅತಿಥಿಗಳನ್ನೂ, ಭೂತ (ಪ್ರಾಣವರ್ಗ) ಗಳನ್ನೂ ಅರ್ಚಿಸುತ್ತಾ ತನ್ಮುಖವಾಗಿ ಪ್ರಜಾಪತಿಯನ್ನು ಆರಾಧಿಸುವರೋ ಅವರೆಲ್ಲರೂ ದಕ್ಷಾದಿ ಪ್ರಜಾಪತಿಗಳ ಲೋಕವನ್ನು ಹೊಂದಿ ಸುಖಿಸುವರು.

೧೪. ಭೂತಗಳ ಆರಾಧನೆಯಲ್ಲಿ ತೊಡಗಿರುವವರು ಭೂತಗಳನ್ನೂ, ಯಕ್ಷಪೂಜೆಯಲ್ಲಿ ಆಸಕ್ತರಾದವರು ಯಕ್ಷರನ್ನೂ (ಅವರ ಲೋಕಗಳನ್ನೂ) ಹೊಂದಿ ಸುಖಿಸುವರು. ಓ ರಾಜೇಂದ್ರ, ಒಟ್ಟಿನಲ್ಲಿ ಹೇಳುವುದೇನೆಂದರೆ—ಯಾರು ಯಾರಲ್ಲಿ ಭಕ್ತಿಯನ್ನು ಇಟ್ಟು ಸೇವಿಸುವರೋ ಅವರೆಲ್ಲರೂ ಕೊನೆಗೆ ಆಯಾ ದೈವದ ಲೋಕಗಳನ್ನು ಹೋಗಿ ಸೇರುವರು.

ತಥಾ ಪಾಪರತಾ ರಾಜನ್ ದುಸ್ಸಂಗವಶವರ್ತಿನಃ ।
ಯಮಲೋಕಂ ಚ ತೇ ಯಾಂತಿ ನಿರಯೈರ್ದಾರುಣೈರ್ವೃತಮ್ ॥ ೧೫ ॥

ಪುನರಾವರ್ತಿನೋ ಲೋಕಾಃ ಸರ್ವೇ ಚಾಬ್ರಹ್ಮಲೋಕತಃ ।
ಪುನರಾವರ್ತಿನೋ ಲೋಕಾನ್ ವಿದ್ಧಿ ರಾಜನ್ಮಹಾಮತೇ ॥ ೧೬ ॥

ಕರ್ಮಣಾಂ ಸನಿಮಿತ್ತಾನಾಂ ಮಾರ್ಗ ಏಷ ಗತಾಗತಃ ।
ತಾವತ್ಪ್ರಮೋದತೇ ಸ್ವರ್ಗೇ ಯಾವತ್ಪುಣ್ಯಂ ಸಮಾಪ್ಯತೇ ॥ ೧೭ ॥

ಕ್ಷೀಣಪುಣ್ಯಃ ಪತತ್ಯರ್ವಾಗನಿಚ್ಛನ್ಕಾಲಚಾಲಿತಃ ।
ಯಾದವೇಂದ್ರ ಮಹಾಬಾಹೋ ತಸ್ಮಾತ್ಕರ್ಮಫಲಂ ತ್ಯಜೇತ್ ॥ ೧೮ ॥

---

೧೫. ಅದರಂತೆ ಪಾಪಾಚರಣೆಯಲ್ಲಿ ನಿರತರಾದವರು ದುಸ್ಸಹವಾಸದಲ್ಲಿಯೇ ತೊಳಲುತ್ತಾ ಭಯಂಕರವಾದ ನರಕದುಃಖಗಳಿಂದ ನಿಬಿಡವಾಗಿರುವ ಯಮಲೋಕವನ್ನು ಹೋಗಿ ಸೇರುವರು.

೧೬. ಓ ರಾಜೇಂದ್ರ, ಬ್ರಹ್ಮಲೋಕ ಮೊದಲುಗೊಂಡು ಈ ಮೇಲೆ ಹೇಳಿದ ಲೋಕಗಳೆಲ್ಲವೂ ಮರಳಿ ಹಿಂದಿರುಗಿ ಬರತಕ್ಕಂತಹವುಗಳು ಆದುದರಿಂದಲೇ ಇವುಗಳನ್ನು ಪುನರಾವರ್ತಿ ಲೋಕಗಳೆನ್ನುವರು.

೧೭. ಓ ಪ್ರಾಜ್ಞ, ಸನಿಮಿತ್ತವೆಂಬ ಈ ಕರ್ಮಗಳ ಮಾರ್ಗವು ಈ ರೀತಿ ಗತಾಗತಿಯನ್ನೇ ಎಂದರೆ ಹೋಗುವ ಮತ್ತೆ ಹಿಂತಿರುಗುವ ಕ್ರಮವನ್ನೇ ಅವಲಂಬಿಸಿರುವುದು. ಮಾನವನು ಸ್ವರ್ಗದಲ್ಲಿ ಸುಖಿಸುವುದೆಲ್ಲಿಯವರೆಗೆಂದರೆ, ಅವನು ಗಳಿಸಿರುವ ಪುಣ್ಯದ ಫಲವು ತೀರುವವರೆಗೆ ಮಾತ್ರವೇ.

೧೮. ಆ ಪುಣ್ಯಫಲವು ಮುಗಿದೊಡನೆಯೇ ಅವನಿಷ್ಟವಿಲ್ಲದಿದ್ದರೂ ಕಾಲಬಲದಿಂದ ಆ ಮಾನವನು ಮತ್ತೆ ಮೊದಲಿದ್ದ ಲೋಕಕ್ಕೇ ಬಂದು ಬೀಳುವನು. ಓ ಯಾದವೇಂದ್ರ, ಆದುದರಿಂದಲೇ ಫಲಾಪೇಕ್ಷೆಯನ್ನು ತೊರೆದು ಕರ್ಮಗಳನ್ನು ಆಚರಿಸಬೇಕು.

ಭಕ್ತೋ ನಿಷ್ಕಾರಣೋ ಭೂತ್ವಾ ಜ್ಞಾನವೈರಾಗ್ಯಸಂಯುತಃ ।
ಪ್ರೇಮಲಕ್ಷಣಯಾ ವಾಚಾ ಹರಿಭಕ್ತಜನಪ್ರಿಯಃ ॥ ೧೯ ॥

ಭಜೇಚ್ಛ್ರೀಕೃಷ್ಣಪಾದಾಬ್ಜಮಭಯಂ ಹಂಸಸೇವಿತಂ ॥ ೨೦ ॥
ಯೋ ಮೃತ್ಯುಃ ಸರ್ವಲೋಕಾನಾಂ ಬಲಾತ್ಸಂಹಾರಕಾರಕಃ ।
ಸ ಯತ್ರ ಭಗವದ್ಧಾಮ್ನಿ ಗತಃ ಸನ್ಮೃತ್ಯುಮಾಪ್ನುಯಾತ್ ॥ ೨೧ ॥

॥ ಉಗ್ರಸೇನ ಉವಾಚ ॥

ಸರ್ವಲೋಕಾ ಹಿ ಭಗವನ್ಪುನರಾವರ್ತಿನಃ ಸ್ಮೃತಾಃ ।
ತೇಭ್ಯೋ ಜಾತಂ ಚ ವೈರಾಗ್ಯಂ ಮನಸೋ ಮೇ ನ ಸಂಶಯಃ ॥ ೨೨ ॥

೧೯–೨೦. ಆದುದರಿಂದ ಭಕ್ತಿಮಾರ್ಗವನ್ನವಲಂಬಿಸಿದವನು ಜ್ಞಾನವನ್ನೂ ವೈರಾಗ್ಯವನ್ನೂ ಮನಸ್ಸಿನಲ್ಲಿ ತಳೆದು ಹರಿಭಕ್ತರಾದ ಸಜ್ಜನರನ್ನು ಪ್ರೀತಿಯಿಂದ ಕಾಣುತ್ತಾ ಸರ್ವದಾ ಪ್ರೀತಿಪೂರ್ವಕವಾದ ಮಾತುಗಳನ್ನೇ ಆಡುತ್ತಾ ಅಭಯ ದಾಯಕವೂ ಪರಮಹಂಸಸೇವಿತವೂ ಆದ ಶ್ರೀ ಹರಿಯ ಪಾದಾರವಿಂದವನ್ನೇ ಅನವರತವೂ ಆರಾಧಿಸುತ್ತಿರಬೇಕು.

೨೧. ಓ ರಾಜೇಂದ್ರ, ಯಾವನು ಈ ಜಗತ್ತಿನಲ್ಲಿರುವ ಜೀವರಾಶಿಗಳೆಲ್ಲ ವನ್ನೂ ಬಲವಂತದಿಂದ ಸಂಹರಿಸಿಕೊಂಡೊಯ್ಯಬಲ್ಲನೋ ಅಂತಹ ಮೃತ್ಯುವೂ ಸಹ ಆ ಭಗವಂತನಾದ ಶ್ರೀ ಹರಿಯ ಲೋಕವನ್ನು ಪ್ರವೇಶಿಸಹೋದರೆ ತಾನೇ ಮೃತ್ಯುವಿಗೆ ತುತ್ತಾಗುವನು.

೨೨. ಎಂಬುದಾಗಿ ವ್ಯಾಸಮಹರ್ಷಿಯು ನುಡಿಯಲು ಯಾದವೇಂದ್ರನಾದ ಉಗ್ರಸೇನನು ಮರಳಿ ಆತನನ್ನು ಕುರಿತು-ಎಲೈ ಪೂಜ್ಯನೇ, ನೀನು ಹೇಳಿದಂತೆ ಬ್ರಹ್ಮಾದಿಲೋಕಗಳೆಲ್ಲವೂ ಪುನರಾವರ್ತಿಗಳೆಂಬದಾಗಿ ಸ್ಥಿರಪಟ್ಟಿರುವುದರಿಂದ ನನಗೆ ಅವುಗಳಲ್ಲಿ ಬಹುವಾಗಿ ಬೇಸರವುಂಟಾಗಿರುವುದು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ಶ್ರೀಕೃಷ್ಣಧಾಮಪರಮಂ ಯತೋ ನಾವರ್ತತೇ ಗತಃ ।
ತಲ್ಲೋಕಂ ವದ ಮೇ ಬ್ರಹ್ಮನ್ ಕ್ವ ಚಾಸ್ತೇ ಸರ್ವತಃ ಪರಂ ॥ ೨೩ ॥

॥ ಶ್ರೀ ವ್ಯಾಸ ಉವಾಚ ॥

ಬ್ರಹ್ಮಾಂಡೇಭ್ಯೋ ಬಹಿರ್ಧಾಮ ಶ್ರೀಕೃಷ್ಣಸ್ಯ ಮಹಾತ್ಮನಃ ।
ಯದ್ಗತಾನತಿವರ್ತಂತೇ ತದ್ಗೋಲೋಕಂ ವಿದುಃ ಪರಂ ॥ ೨೪ ॥

ಬ್ರಹ್ಮಾಣ್ಡೋಯಂ ಜೀವಸಂಘಃ ಪಂಚಾಶತ್ಕೋಟಿಯೋಜನೈಃ ।
ವಿಸ್ತೃತಃ ಪರತೋ ದ್ವಾಭ್ಯಾಂ ಶತಕೋಟಿಪಿಲಂಘಿತಃ ॥ ೨೫ ॥

ಯದಂತರಗತೋ ರಾಜನ್ ಲಕ್ಷ್ಯತೇ ಪರಮಾಣುವತ್ ।
ತದಂತರಗತಾಶ್ಚಾನ್ಯೇ ಕೋಟಿಶೋ ಹ್ಯಂಡರಾಶಯಃ ॥ ೨೬ ॥

---

೨೩. ಓ ಬ್ರಹ್ಮಜ್ಞ, ಶ್ರೀಕೃಷ್ಣನು ನಿವಾಸವಾಡುವಂತಹ ಲೋಕವೇ ಪರಮಶ್ರೇಷ್ಠವಾದುದು. ಏಕೆಂದರೆ, ಆ ಲೋಕವನ್ನು ಒಂದು ಬಾರಿ ಸೇರಿದ ಬಳಿಕ ಅಲ್ಲಿಂದ ಮತ್ತೆ ಯಾವನೂ ಹಿಂದಿರುಗಲಾರನು. ಅಂತಹ ಸರ್ವಲೋಕೋತ್ತಮವಾದ ಆ ಶ್ರೀಹರಿಯ ನಿವಾಸವು ಎಲ್ಲಿರುವುದು ? ಎಂತಿರುವುದು ? ಎಂಬುದನ್ನು ದಯವಿಟ್ಟು ನನಗೆ ತಿಳಿಸಬೇಕು ಎಂದು ಪ್ರಾರ್ಥಿಸಿದನು.

೨೪. ಆಗ ವ್ಯಾಸಮಹರ್ಷಿಯು ಈ ರೀತಿ ಹೇಳತೊಡಗಿದನು—ಮಹಾತ್ಮನಾದ ಆ ಶ್ರೀಕೃಷ್ಣನ ನಿತ್ಯನಿವಾಸವೆನಿಸಿದ ಆ ಲೋಕವು ಅನಂತವಾದ ಬ್ರಹ್ಮಾಂಡಗಳಿಗಿಂತಲೂ ಆಚೆ ಇರುವುದು. ಆ ಲೋಕವನ್ನು ಒಂದು ಬಾರಿ ಸೇರಿದವರು ಮತ್ತೆ ಎಂದಿಗೂ ಹಿಂದಿರುಗಲಾರರು. ಆ ಉತ್ತಮೋತ್ತಮವಾದ ಲೋಕವನ್ನೇ ಗೋಲೋಕವೆನ್ನುವರು.

೨೫. ಸಕಲಜೀವರಾಶಿಗಳಿಗೂ ನಿವಾಸವೆನಿಸಿದ ಈ ಬ್ರಹ್ಮಾಂಡವು ಐವತ್ತು ಕೋಟಿ ಯೋಜನಗಳಷ್ಟು ವಿಸ್ತಾರವಾಗಿರುವುದು. ಆ ಬ್ರಹ್ಮಾಂಡದ ಎಲ್ಲೆಯಿಂದ ಇನ್ನೂರು ಕೋಟಿ ಯೋಜನಗಳಾಚೆ ಆ ಗೋಲೋಕವಿರುವುದು.

೨೬. ಓ ರಾಜೇಂದ್ರ, ಆ ಗೋಲೋಕದಿಂದ ನೋಡಿದಲ್ಲಿ ಈ ಬ್ರಹ್ಮಾಂಡವು ಒಂದು ಪರಮಾಣುವಿನಂತೆ (ಅತಿ ಸೂಕ್ಷ್ಮಪ್ರಮಾಣದಲ್ಲಿ) ತೋರುವುದು. ಹಾಗೆಯೇ ಆ ಗೋಲೋಕಕ್ಕೂ ಬ್ರಹ್ಮಾಂಡಕ್ಕೂ ನಡುವೆ ಇರುವ ಆ ಅವಕಾಶವಲ್ಲಿ ಕೋಟಿಗಟ್ಟಲೆ ಇನ್ನೂ ಅನೇಕ ಬ್ರಹ್ಮಾಂಡಗಳ ಸಮುದಾಯಗಳಿರುವವು.

ನ ತದ್ಭಾಸಯತೇ ಸೂರ್ಯಃ ನ ಶಶಾಂಕೋ ನ ಪಾವಕಃ |
ಕಾಮಃ ಕ್ರೋಧಶ್ಚ ಲೋಭಶ್ಚ ನ ಮೋಹೋ ಯತ್ರ ಯಾತಿ ಚ || ೨೭ ||

ನ ಯತ್ರ ಶೋಕೋ ನ ಜರಾ ನ ಮೃತ್ಯುರ್ನಾರ್ತಿರೇವ ಚ |
ನ ಪ್ರಧಾನಂ ನ ಕಾಲಶ್ಚ ವಿಶಂತೇ ಚ ಗುಣಾಃ ಕುತಃ || ೨೮ ||

ಶಬ್ದಬ್ರಹ್ಮಾಪ್ಯನಿರ್ವಾಚ್ಯಂ ತದ್ವರ್ಣಯಿತುಮಕ್ಷಮಃ |
ಶ್ರೀಕೃಷ್ಣತೇಜಃಸಂಭೂತಾಃ ತತ್ರ ಸಂತಿ ಚ ಪಾರ್ಷದಾಃ || ೨೯ ||

ಅಕಿಂಚನಾಶ್ಚ ಯೇ ದಾಂತಾಃ ಶಾಂತಾ ವೈ ಸಮಚೇತಸಃ |
ಶ್ರೀಕೃಷ್ಣಚಂದ್ರಪಾದಾಬ್ಜಮಕರಂದರಸಾಲಯಾಃ || ೩೦ ||

---

೨೭. ಆ ಗೋಲೋಕವು ಸ್ವತಃ ತೇಜೋಮಯವಾದುದರಿಂದ ಅದನ್ನು ಸೂರ್ಯನಾಗಲಿ, ಚಂದ್ರನಾಗಲಿ, ಅಗ್ನಿಯಾಗಲಿ ಬೆಳಗಿಸಲಾರರು. ಅದರಂತೆ ಕಾಮಕ್ರೋಧಗಳಾಗಲಿ, ಲೋಭಮೋಹಗಳಾಗಲಿ, ಆ ಲೋಕದೊಳಗೇ ಕಾಲಿಡಲಾರವು.

೨೮. ಆ ಗೋಲೋಕವನ್ನು ದುಃಖವಾಗಲಿ, ವೇದನೆಯಾಗಲಿ, ಮುಪ್ಪು ಸಾವುಗಳಾಗಲಿ, ಪ್ರಕೃತಿಯಾಗಲಿ, ಕಾಲವಾಗಲಿ ಪ್ರವೇಶಿಸಲಾರವು. ಎಂದರೆ ಅಲ್ಲಿ ದುಃಖವಿಲ್ಲ; ಮುಪ್ಪುಸಾವುಗಳ ಕೋಟಲೆಯಿಲ್ಲ; ಪ್ರಕೃತಿಜನ್ಯವಾದ ವಿಕಾರಗಳಿಲ್ಲ; ಕಾಲದ ಪರಿಮಿತಿಯಿಲ್ಲ. ಹೀಗಿರುವಾಗ ಗುಣತ್ರಯಗಳೂ ಅವುಗಳಿಂದುಂಟಾಗುವ ಇತರ ವಿಕಾರಗಳೂ ಆ ಲೋಕವನ್ನು ಪ್ರವೇಶಿಸುವುವೆಂದರೇನು ?

೨೯. ಆ ಗೋಲೋಕವು ಅನಿರ್ವಚನೀಯವಾದುದು. ಅದನ್ನು ವರ್ಣಿಸಲು ಸಾಕ್ಷಾತ್ ಶಬ್ದಬ್ರಹ್ಮವೂ ಅಸಮರ್ಥವಾಗಿರುವುದು. ಆ ಗೋಲೋಕದಲ್ಲಿ ಶ್ರೀಕೃಷ್ಣನ ದಿವ್ಯತೇಜಸ್ಸಿನಿಂದ ಜನಿಸಿರುವ ಅನೇಕ ಮಂದಿ ಪಾರ್ಷದ (ಅನುಚರ) ರಿರುವರು.

೩೦–೩೧. ಓ ರಾಜೇಂದ್ರ ಯಾರು ಈ ಲೋಕದಲ್ಲಿ ಧನಾಶಾವರ್ಜಿತರಾಗಿಯೂ, ದಾನಶೀಲರಾಗಿಯೂ, ಸರ್ವಸಮಬುದ್ಧಿಯುಳ್ಳವರಾಗಿಯೂ, ಶಾಂತಮನಸ್ಕರಾಗಿಯೂ ಇರುತ್ತಾ ಸರ್ವದಾ ಶ್ರೀಕೃಷ್ಣಚಂದ್ರನ ಪಾದಾರವಿಂದಗಳಲ್ಲಿರುವ

ಪ್ರೇಮಲಕ್ಷಣಯಾ ಭಕ್ತ್ಯಾ ಸದಾ ನಿಷ್ಕಾರಣಾಃ ಪರಾಃ ।
ಲೋಕಾನುಲ್ಲಂಘ್ಯ ತದ್ಧಾಮ ಯಾಂತಿ ರಾಜನ್ನಸಂಶಯಃ ॥ ೩೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಶ್ರೀವಿಜ್ಞಾನಖಂಡೇ
ಶ್ರೀವ್ಯಾಸೋಗ್ರಸೇನಸಂವಾದೇ ಲೋಕಗತಿನಿರೂಪಣಂ
ನಾಮ ದ್ವಿತೀಯೋಽಧ್ಯಾಯಃ

ಮಕರಂದವನ್ನು ಸವಿಯುತ್ತಾ ಪ್ರೇಮಸ್ವರೂಪವೆನಿಸಿದ ಭಕ್ತಿಯನ್ನು ಮನಸ್ಸಿನಲ್ಲಿ ನೆಲೆಗೊಳಿಸಿ ಫಲಾಪೇಕ್ಷೆಯಿಲ್ಲದೆ ಆ ಪರಮಪುರುಷನನ್ನು ಆರಾಧಿಸುತ್ತಿರುವರೋ ಆ ಮಹಾಪುರುಷರು ತಮ್ಮ ದೇಹಾಂತ್ಯದಲ್ಲಿ ಮೇಲೆ ಹೇಳಿದ ಲೋಕಗಳೆಲ್ಲವನ್ನೂ ದಾಟಿ ಕೊನೆಗೆ ಆ ಗೋಲೋಕವನ್ನು ಹೋಗಿ ಸೇರುವರು. ಇದು ಖಂಡಿತ ಎಂದನು.

ಇಲ್ಲಿಗೆ ಗಾರ್ಗ್ಯಸಂಹಿತೆಯ ವಿಜ್ಞಾನಖಂಡದಲ್ಲಿ ಲೋಕಗತಿನಿರೂಪಣವೆಂಬ
ಎರಡನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಜ್ಞಾನಖಂಡೇ

ತೃತೀಯೋಽಧ್ಯಾಯಃ

॥ ಉಗ್ರಸೇನ ಉವಾಚ ॥

ಶ್ರುತಂ ತವ ಮುಖಾದ್ಬ್ರಹ್ಮನ್ ಗುಣಕರ್ಮಗತಿರ್ಮಯಾ ।
ಪುನರಾವರ್ತಿನೋ ಲೋಕಾಃ ತಥಾ ಸಂತಿ ವಿನಿಶ್ಚಿತಾಃ ॥ ೧ ॥

ನಿಷ್ಕಾರಣಾದ್ಧರೇಃ ಸಾಕ್ಷಾತ್ಸೇವನಾದ್ಧಾಮುಮುತ್ತಮಂ ।
ಲಭತೇ ದುರ್ಲಭಂ ದಿವ್ಯಂ ಭಕ್ತಾನಾಂ ತಚ್ಛ್ರುತಂ ಮಯಾ ॥ ೨ ॥

ಮೂರನೆಯ ಅಧ್ಯಾಯವು

೧. ಅನಂತರ ಉಗ್ರಸೇನನು ಆ ವ್ಯಾಸಮಹರ್ಷಿಯನ್ನು ಕುರಿತು— ಓ ಬ್ರಹ್ಮಜ್ಞ, ನಿನ್ನ ಮುಖದಿಂದ ನಾನು ಗುಣ ಮತ್ತು ತದನುಸಾರಿಗಳಾದ ಕರ್ಮಗಳ ಗತಿಯನ್ನು ಅರಿತೆನು. ಅದರಂತೆಯೇ, ಯಾವ ಲೋಕಗಳನ್ನು ಹೊಂದಿದ ನಂತರ ಮತ್ತೆ ಹಿಂದಿರುಗಲೇಬೇಕಾಗುವುದೋ ಅಂತಹ ಪುನರಾವರ್ತಿಲೋಕಗಳ ವಿಷಯಗಳನ್ನೂ ತಿಳಿದುಕೊಂಡೆನು.

೨. ಮತ್ತು ಆ ಶ್ರೀಹರಿಯನ್ನು ಫಲಾಪೇಕ್ಷೆಯಿಲ್ಲದೆ ಆರಾಧಿಸುವುದರಿಂದ ಭಕ್ತರಾದವರು ಪರಮಶ್ರೇಷ್ಠವೂ, ಅತಿದುರ್ಲಭವೂ ಆದ ಶ್ರೀಹರಿಯ ದಿವ್ಯವಾದ ನಿವಾಸವನ್ನೇ ಹೊಂದುವರು ಎಂಬುದನ್ನು ಕೇಳಿ ತಿಳಿದೆನು.

ಭಕ್ತಿಯೋಗಃ ಕತಿ ವಿಧೋ ವದ ನೋ ವದತಾಂವರ ।
ಯೇನ ಪ್ರಸನ್ನೋ ಭವತಿ ಭಗವಾನ್ ಭಕ್ತವತ್ಸಲಃ ॥ ೩ ॥

॥ ಶ್ರೀ ವ್ಯಾಸ ಉವಾಚ ॥

ದ್ವಾರಾವತೀಶ ಧನ್ಯೋಽಸಿ ಶ್ರೀಕೃಷ್ಣೇಷ್ಟೋ ಹರಿಪ್ರಿಯಃ ।
ಪೃಚ್ಛಸೇ ಭಕ್ತಿಯೋಗಂ ತ್ವಂ ಧನ್ಯಾ ತೇ ವಿಮಲಾ ಮತಿಃ ॥ ೪ ॥

ಯಂ ಶ್ರುತ್ವಾ ನಿರ್ಮಲೋ ಭೂಯಾದ್ವಿಶ್ವಘಾತ್ಯಪಿ ಪಾತಕೀ ।
ತಂ ಭಕ್ತಿಯೋಗಂ ವಿಶದಂ ತುಭ್ಯಂ ವಕ್ಷ್ಯಾಮಿ ಯಾದವ ॥ ೫ ॥

ಭಕ್ತಿಯೋಗೋ ದ್ವಿಧಾ ರಾಜನ್ ಸುಗುಣಶ್ಚೈವ ನಿರ್ಗುಣಃ ।
ಸಗುಣಃ ಸ್ಯಾದ್ಬಹುವಿಧೋ ನಿರ್ಗುಣಶ್ಚೈಕಲಕ್ಷಣಃ ॥ ೬ ॥

---

೩. ಓ ವಾಗ್ಮಿಶ್ರೇಷ್ಠ, ಭಕ್ತರಲ್ಲಿ ವಿಶೇಷವಾದ ಮಮತೆಯುಳ್ಳ ಆ ಭಗವಂತನು ಯಾವುದರಿಂದ ವಿಶೇಷವಾಗಿ ಸುಪ್ರೀತನಾಗುವನೋ ಅಂತಹ ಆ ಭಕ್ತಿಮಾರ್ಗವನ್ನು ನನಗೆ ತಿಳಿಯಪಡಿಸು. ಅದು ಎಷ್ಟು ಬಗೆಯಾಗಿರುವುದು ?

೪. ಎಂದು ಪ್ರಶ್ನಿಸಲು, ಆ ವ್ಯಾಸಮಹರ್ಷಿಯು ಆತನನ್ನು ಕುರಿತು ಇಂತೆಂದನು–ಓ ದ್ವಾರಾವತೀಶ, ನೀನೇ ಧನ್ಯನು. ಏಕೆಂದರೆ ನೀನು ಶ್ರೀಕೃಷ್ಣನಿಗೆ ಪ್ರೀತಿಪಾತ್ರನಾಗಿರುವೆ. ಅದರಂತೆಯೇ ಭಕ್ತಿಯೋಗವನ್ನು ಅರಿಯಬೇಕೆಂಬುದಾಗಿ ಪ್ರಶ್ನಿಸುತ್ತಿರುವ ನಿನ್ನ ಬುದ್ಧಿಯು ಬಹಳ ಧನ್ಯವಾದುದು.

೫. ಓ ಯಾದವೇಂದ್ರ, ಯಾವುದನ್ನು ಕಿವಿಯಿಂದ ಆಲಿಸಿದ ಮಾತ್ರಕ್ಕೆ ಹತ್ಯೆಮಾಡಿದಂತಹ ಮಹಾಪಾತಕಿಯೂ ಸಹ ತನ್ನ ಪಾಪಗಳನ್ನು ಕಳೆದುಕೊಂಡು ಪರಿಶುದ್ಧನಾಗುವನೋ ಅಂತಹ ಆ ನಿರ್ಮಲವಾದ ಭಕ್ತಿಯೋಗವನ್ನು ನಿನಗೋಸ್ಕರ ವಿವರವಾಗಿ ತಿಳಿಸುವೆನು.

೬. ಆ ಭಕ್ತಿಯೋಗವು ಸಗುಣವೆಂದೂ ನಿರ್ಗುಣವೆಂದೂ ಎರಡುಬಗೆಯಾಗಿರುವುದು. ಅದರಲ್ಲಿ ಸಗುಣವೆಂಬ ಭಕ್ತಿಯೋಗವು ಅನೇಕ ಬಗೆಗಳುಳ್ಳದಾಗಿಯೂ, ನಿರ್ಗುಣವೆಂಬುದು ಒಂದೇ ಬಗೆಯಾಗಿಯೂ ಇರುವುದು.

ಸಗುಣಃ ಸ್ಯಾದ್ಬಹುವಿಧೋ ಗುಣಮಾರ್ಗೇಣ ದೇಹಿನಾಂ ।
ತ್ರೈಗುರ್ಣ್ಯೈಃ ತ್ರಿವಿಧಾ ಭಕ್ತಾ ಭವನ್ತಿ ಶೃಣು ತಾನ್ಪೃಥಕ್ ॥ ೭ ॥

ಹಿಂಸಾಂ ದಂಭಂ ಚ ಮಾತ್ಸರ್ಯಂ ಚಾಭಿಸಂಧಾಯ ಭಿನ್ನದೃಕ್ ।
ಕುರ್ಯಾದ್ಭಾವಂ ಹರೌ ಕ್ರೋಧೀ ತಾಮಸಃ ಪರಿಕೀರ್ತಿತಃ ॥ ೮ ॥

ಯಶ ಐಶ್ವರ್ಯವಿಷಯಾನ್ ಅಭಿಸಂಧಾಯ ಯತ್ನತಃ ।
ಅರ್ಚಯೇದ್ಯೋ ಹರಿಂ ರಾಜನ್ ರಾಜಸಃ ಪರಿಕೀರ್ತಿತಃ ॥ ೯ ॥

ಉದ್ದಿಶ್ಯ ಕರ್ಮ ನಿರ್ಹಾರಮಪೃಥಗ್ಭಾವ ಏವ ಹಿ ।
ಮೋಕ್ಷಾರ್ಥಂ ಭಜತೇ ವಿಷ್ಣುಂ ಸಭಕ್ತಃ ಸಾತ್ವಿಕಃ ಸ್ಮೃತಃ ॥ ೧೦ ॥

---

೭. ಆ ಸಗುಣವೆಂಬ ಭಕ್ತಿಮಾರ್ಗವು ಜೀವಿಗಳ ಗುಣಗಳನ್ನವಲಂಬಿಸಿ ಬೇರೆಬೇರೆಯಾಗಿ ಬಹುವಿಧವೆನಿಸಿರುವುದು. ಆಯಾ ಗುಣಗಳ ವ್ಯತ್ಯಾಸದಿಂದಲೇ ಭಕ್ತರೂ ಸಹ ಮೂರುಬಗೆಯಾಗಿ ವಿಂಗಡಿಸಲ್ಪಡುವರು. ಅದನ್ನೀಗ ನಿನಗೆ ಪ್ರತ್ಯೇಕ ಪ್ರತ್ಯೇಕವಾಗಿ ತಿಳಿಯಪಡಿಸುವೆನು.

೮. ಯಾವ ಮಾನವನು ಹಿಂಸೆಯನ್ನೂ ಡಾಂಭಿಕತನವನ್ನೂ ಮಾತ್ಸರ್ಯವನ್ನೂ ಮನಸ್ಸಿನಲ್ಲಿ ತಳೆದು, ಆ ಶ್ರೀಹರಿಯನ್ನು ಆಯಾ ದೃಷ್ಟಿಯಿಂದ ಕಾಣುವನೋ, ಅಂತಹ ಮಾನವನು ಕೇವಲ ಕ್ರೋಧಶೀಲನಾದ ತಾಮಸಭಕ್ತನೆಂಬುದಾಗಿ ಪರಿಗಣಿಸಲ್ಪಡುವನು.

೯. ಯಾವ ಮಾನವನು ಕೀರ್ತಿಯನ್ನೂ ಐಹಿಕವಾದ ಇತರ ಐಶ್ವರ್ಯಗಳನ್ನೂ ಸುಖಗಳನ್ನೂ ಬಯಸಿ, ಆ ಉದ್ದೇಶದಿಂದಲೇ ಶ್ರೀಹರಿಯನ್ನು ಪ್ರಯತ್ನಪೂರ್ವಕವಾಗಿ ಆರಾಧಿಸುವನೋ, ಆ ಮಾನವನು ರಾಜಸನಾದ ಭಕ್ತನೆಂಬುದಾಗಿ ಎಣಿಸಲ್ಪಡುವನು.

೧೦. ಮತ್ತು ಯಾವ ಮಾನವನು ತನ್ನ ಕರ್ಮಗಳೆಲ್ಲವೂ ಕ್ಷಯಿಸಿಹೋಗಲೆಂದೂ, ಆ ಶ್ರೀಹರಿಯ ಅಭೇದರೂಪವಾದ ಮೋಕ್ಷವು ತನಗೆ ದೊರೆಯಬೇಕೆಂದೂ ಮನಸ್ಸಿನಲ್ಲಿ ಉದ್ದೇಶಿಸಿ, ಆ ಶ್ರೀಹರಿಯನ್ನು ಸತತವಾಗಿ ಸೇವಿಸುವನೋ ಆತನೇ ಸಾತ್ತ್ವಿಕನಾದ ಭಕ್ತನೆಂದು ಭಾವಿಸಲ್ಪಡುವನು.

ಜಿಜ್ಞಾಸುರಾರ್ತೋ ಜ್ಞಾನೀ ಚ ತಥಾರ್ಥಾರ್ಥೀ ಮಹಾಮತೇ ।
ಚತುರ್ವಿಧಾ ಜನಾ ವಿಷ್ಣುಂ ಭಜಂತೇ ಕೃತಮಂಗಲಾಃ ॥ ೧೧ ॥

ಏವಂ ಬಹುವಿಧೇನಾಪಿ ಭಕ್ತಿಯೋಗೇನ ಮಾಧವಂ ।
ಭಜಂತಿ ಸನಿಮಿತ್ತಾಸ್ತೇ ಜನಾಃ ಸುಕೃತಿನಃ ಪರೇ ॥ ೧೨ ॥

ಲಕ್ಷಣಂ ಭಕ್ತಿಯೋಗಸ್ಯ ನಿರ್ಗುಣಸ್ಯ ತಥಾ ಶೃಣು ।
ತದ್ಗುಣಶ್ರುತಿಮಾತ್ರೇಣ ಶ್ರೀಕೃಷ್ಣೇ ಪುರುಷೋತ್ತಮೇ ॥ ೧೩ ॥

ಪರಿಪೂರ್ಣತಮೇ ಸಾಕ್ಷಾತ್ಸರ್ವಕಾರಣಕಾರಣೇ ।
ಮನೋಗತಿರವಿಚ್ಛಿನ್ನಾ ಖಂಡಿತಾ ಹೈತುಕೀ ಚ ಯಾ ॥ ೧೪ ॥

ಯಥಾಬ್ಧಾವಂಭಸಾ ಗಂಗಾ ಸಾ ಭಕ್ತಿರ್ನಿರ್ಗುಣಾ ಸ್ಮೃತಾ ।
ನಿರ್ಗುಣಾನಾಂ ಚ ಭಕ್ತಾನಾಂ ಲಕ್ಷಣಂ ಶೃಣು ಮಾನದ ॥ ೧೫ ॥

---

೧೧. ಓ ರಾಜೇಂದ್ರ, ಯಾವ ಮಾನವರು ಶ್ರೇಯೋಭಾಗಿಗಳಾಗಿರುವರೋ ಅವರು ಆರ್ತ, ಜಿಜ್ಞಾಸು, ಅರ್ಥಾರ್ಥಿ, ಜ್ಞಾನಿ ಎಂಬ ನಾಲ್ಕುಪ್ರಭೇದಗಳುಳ್ಳ ಶ್ರೀಹರಿಭಕ್ತರಲ್ಲಿ ಒಬ್ಬನೆನಿಸಿ ಆ ಸ್ವಾಮಿಯನ್ನು ಆರಾಧಿಸುವರು.

೧೨. ಈ ರೀತಿಯಾಗಿ ನಾನಾವಿಧವಾದ ಮಾರ್ಗಗಳುಳ್ಳ ಭಕ್ತಿಯೋಗವನ್ನು ಅವಲಂಬಿಸಿ, ಯಾವ ಮಾನವರು ಫಲಾಪೇಕ್ಷೆಯಿಂದಲಾದರೂ ಆ ಶ್ರೀಹರಿಯನ್ನು ಆರಾಧಿಸುವರೋ ಅವರೇ ಮಹಾಪುಣ್ಯಶಾಲಿಗಳು; ಅವರೇ ಅತಿ ಶ್ರೇಷ್ಠರಾದವರು.

೧೩. ಇನ್ನು ನಿರ್ಗುಣವೆಂಬ ಭಕ್ತಿಮಾರ್ಗವನ್ನು ವಿವರಿಸುವೆನು, ಕೇಳು. ಆ ಭಕ್ತಿಮಾರ್ಗವನ್ನು ಒಂದುಬಾರಿ ಆಲಿಸಿದ ಮಾತ್ರದಿಂದಲೇ ಪುರುಷಶ್ರೇಷ್ಠನೂ,

೧೪. ಪರಿಪೂರ್ಣತಮಸ್ವರೂಪನೂ, ಸಕಲ ಕಾರಣಗಳಿಗೂ ಕಾರಣನೆನಿಸಿದವನೂ ಆದ ಆ ಸಾಕ್ಷಾತ್ ಶ್ರೀಹರಿಯಲ್ಲಿಯೇ ಮನಸ್ಸು ಎಂದೆಂದಿಗೂ ಚಲಿಸಿ ಹೋಗದಂತೆ ಸ್ಥಿರವಾಗಿ ನೆಲೆಗೊಳ್ಳುವುದು.

೧೫. ಈ ರೀತಿಯಾಗಿ ಯಾವೊಂದು ಫಲಾಪೇಕ್ಷೆಯೂ ಇಲ್ಲದೆ ನಿರ್ಹೇತುಕವೆನಿಸಿದ ಆ ಶ್ರೀಹರಿಯಲ್ಲಿ ಸ್ಥಿರವಾಗಿ ನೆಲೆಗೊಳಿಸಲ್ಪಟ್ಟಿರುವ ಭಕ್ತಿಯೇ ನಿರ್ಗುಣವೆನಿಸುವುದು. ಇಂತಹ ನಿರ್ಗುಣಭಕ್ತಿಯನ್ನು ಅವಲಂಬಿಸಿರುವವರ ಸ್ವರೂಪವನ್ನು ವಿವರಿಸುವೆನು, ಕೇಳು.

ಸಾರ್ವಭೌಮಂ ಪಾರಮೇಷ್ಠ್ಯಂ ಶಕ್ರಧಿಷ್ಣ್ಯಂ ತಥೈವ ಚ ।
ರಸಾಧಿಪತ್ಯಂ ಯೋಗರ್ದ್ಧಿಂ ನ ವಾಂಛಂತಿ ಹರೇರ್ಜನಾಃ ॥ ೧೬ ॥

ಹರಿಣಾ ದೀಯಮಾನಂ ವಾ ಸಾಲೋಕ್ಯಂ ಯಾದವೇಶ್ವರ ।
ನ ಗೃಹ್ಣಂತಿ ಕದಾಚಿತ್ತೇ ಸತ್ಸಂಗಾನಂದನಿರ್ವೃತಾಃ ॥ ೧೭ ॥

ಸಾಮೀಪ್ಯಂ ತೇ ನ ವಾಂಛಂತಿ ಭಗವದ್ವಿರಹಾತುರಾಃ ।
ಸನ್ನಿಕೃಷ್ಟೇನ ತತ್ಪ್ರೇಮ ಯಥಾ ದೂರತರೇ ಭವೇತ್ ॥ ೧೮ ॥

ಸಾರೂಪ್ಯಂ ದೀಯಮಾನಂ ವಾ ಸಮಾನತ್ವಾಭಿಮಾನಿನಃ ।
ನೈರಪೇಕ್ಷ್ಯಾನ್ನ ವಾಂಛಂತಿ ಭಕ್ತಾಸ್ತತ್ಸೇವನೋತ್ಸುಕಾಃ ॥ ೧೯ ॥

---

೧೬. ಆ ವೈಷ್ಣವಶ್ರೇಷ್ಠರು ಸಾರ್ವಭೌಮಪದವಿಯನ್ನಾಗಲಿ, ಬ್ರಹ್ಮಪಟ್ಟವನ್ನಾಗಲಿ, ಇಂದ್ರಲೋಕವನ್ನಾಗಲಿ, ಯೋಗಸಿದ್ಧಿಗಳನ್ನಾಗಲಿ ಅಪೇಕ್ಷಿಸಲಾರರು.

೧೭. ಓ ಯಾದವೇಂದ್ರ, ಆ ಭಕ್ತೋತ್ತಮರು ಶ್ರೀಹರಿಯ ಭಕ್ತರಾದ ಭಾಗವತೋತ್ತಮರ ಸಹವಾಸವು ತಮಗೆ ನಿರಂತರವಾಗಿ ದೊರೆಯಲೆಂಬ ಅಭಿಲಾಷೆಯುಳ್ಳವರಾದುದರಿಂದ ಸಾಕ್ಷಾತ್ ಶ್ರೀಹರಿಯೇ ಅವರಿಗೆ ತನ್ನ ಸಾಲೋಕ್ಯವನ್ನು ಕರುಣಿಸಿದರೂ ಅದನ್ನು ಎಂದೆಂದಿಗೂ ಅಂಗೀಕರಿಸಲಾರರು.

೧೮. ಅದರಂತೆಯೇ ಆ ಭಕ್ತಶ್ರೇಷ್ಠರು ಭಗವಂತನ ವಿರಹದುಃಖದಲ್ಲಿರುವ ಸವಿಯನ್ನು ಬಲ್ಲವರಾದುದರಿಂದಲೇ ಆ ಶ್ರೀಹರಿಯ ಸಾಮೀಪ್ಯರೂಪವಾದ ಮೋಕ್ಷವನ್ನು ಬಯಸಲಾರರು. ಏಕೆಂದರೆ ಒಬ್ಬರಿಗೊಬ್ಬರು ಬಹು ದೂರ ಅಗಲಿರುವಾಗ ಅವರಿಗೆ ಇರುವಷ್ಟು ಪ್ರೇಮವು ಅವರು ಬಳಿಯಲ್ಲಿರುವಾಗ ಎಂದಿಗೂ ಇಲ್ಲದಂತಿರುವುದು ಪ್ರತಿಯೊಬ್ಬರ ಅನುಭವಕ್ಕೂ ಬಂದ ವಿಷಯವೇ ಅಲ್ಲವೇ ?

೧೯. ಮತ್ತು ಆ ಭಕ್ತಾಗ್ರಣಿಗಳು ಸ್ವಭಾವತಃ ನಿರಪೇಕ್ಷರಾದುದರಿಂದ ತಮಗೆ ಸಾರೂಪ್ಯರೂಪವಾದ ಮೋಕ್ಷವು ದೊರೆತರೂ ಆ ಶ್ರೀಹರಿಯ ಸಮಾನತೆಯು ತಮಗೆ ಉಂಟಾಯಿತೆಂಬ ಅಹಂಕಾರವು ಎಲ್ಲಿ ಬಂದೊದಗುವುದೋ ಎಂಬ ಹೆದರಿಕೆಯಿಂದ ಆ ಸಾರೂಪ್ಯವನ್ನೂ ಅಪೇಕ್ಷಿಸದೆ ಆತನ ಸೇವೆಯಲ್ಲಿಯೇ ವಿಶೇಷವಾಗಿ ತಮ್ಮ ಉತ್ಸಾಹವನ್ನು ವ್ಯಕ್ತಪಡಿಸುವರು.

ಏಕತ್ವಂ ಚಾಪಿ ಕೈವಲ್ಯಂ ನ ವಾಂಛಂತಿ ಕದಾಚನ ।
ಏವಂ ಚೇತ್ತರ್ಹಿ ದಾಸತ್ವಂ ಕ್ವ ಸ್ವಾಮಿತ್ವಂ ಪರಸ್ಯ ಚ　　　॥ ೨೦ ॥

ನಿರಪೇಕ್ಷಾ ಶ್ಚ ಯೇ ಶಾಂತಾ ನಿರ್ವೈರಾಃ ಸಮದರ್ಶಿನಃ ।
ಆಕೈವಲ್ಯಾಲ್ಲೋಕಪದಗ್ರಹಣಂ ಕರಣಂ ವಿದುಃ　　　॥ ೨೧ ॥

ನೈರಪೇಕ್ಷ್ಯಂ ಮಹಾನಂದಂ ನಿರಪೇಕ್ಷಾ ಜನಾ ಹರೇಃ ।
ಜಾನಂತಿ ಹಿ ಯಥಾ ನಾಸಾ ಪುಷ್ಪಾಮೋದಂ ನ ಚಕ್ಷುಷೀ　　　॥ ೨೨ ॥

---

೨೦. ಇದೇ ರೀತಿಯಾಗಿ ಆ ಭಾಗವತೋತ್ತಮರು ತಮಗೆ ದೊರೆಯಬಹುದಾದ ಆ ಶ್ರೀಹರಿಯ ಅಭೇದರೂಪವಾದ ಮೋಕ್ಷಸುಖವನ್ನೂ ಅಪೇಕ್ಷಿಸಲಾರರು. ಏಕೆಂದರೆ, ಸಾಯುಜ್ಯವೆಂಬುದಾಗಿ ಕರೆಯಲ್ಪಡುವ ಆ ಬಗೆಯ ಮೋಕ್ಷದಲ್ಲಿ ತಾನು ಸೇವಕನಾಗಿದ್ದು ಶ್ರೀಹರಿಯು ಸ್ವಾಮಿಯಾಗಿರುವಂತಹ ಆ ದಿವ್ಯವಾದ ಸ್ವಾಮಿಭೃತ್ಯಭಾವದ ಸುಖವು ಹೇಗೆ ತಾನೇ ಲಭಿಸುವುದು ?

೨೧. ಓ ಯಾದವೇಂದ್ರ, ಯಾರು ಮನಸ್ಸಿನಲ್ಲಿ ಯಾವೊಂದು ಅಪೇಕ್ಷೆಯನ್ನೂ ಇಟ್ಟುಕೊಳ್ಳದೆ ಸರ್ವದಾ ಶಾಂತಚಿತ್ತರಾಗುತ್ತಾ ಯಾರನ್ನೂ ದ್ವೇಷಿಸದೆ ಸರ್ವರನ್ನೂ ಸಮದೃಷ್ಟಿಯಿಂದ ಕಾಣುತ್ತಿರುವರೋ ಅವರು ತಮಗೆ ಮೋಕ್ಷವು ದೊರೆಯುವವರೆಗೂ ಮಹಾಜನರ ಪಾದಸೇವೆಯೇ ಪರಮಸಾಧನವೆಂಬುದಾಗಿ ಅರಿಯುವರು.

೨೨. ಆ ಶ್ರೀಹರಿಯ ನಿರಪೇಕ್ಷರೂಪವಾದ ಭಕ್ತಿಯಲ್ಲಿರುವ ಆನಂದಾತಿಶಯವನ್ನು ನಿರಪೇಕ್ಷರಾದ ಹರಿಭಕ್ತರೊಬ್ಬರು ಮಾತ್ರ ತಿಳಿದಿರುವರೇ ವಿನಾ ಮತ್ತೊಬ್ಬರಾರೂ ತಿಳಿಯಲಾರರು. ಹೂವಿನಲ್ಲಿರುವ ಸುವಾಸನೆಯನ್ನು ನಾಸಿಕೆಯು ಗ್ರಹಿಸಬಲ್ಲುದೇ ಹೊರತು ನಯನಗಳು ಗ್ರಹಿಸಬಲ್ಲವೆ ?

ಸಕಾಮಾಶ್ಚ ತದಾನಂದಂ ಜಾನಂತಿ ಹಿ ಕಥಂಚನ।
ರಸಕರ್ತಾ ತಥಾ ಹಸ್ತೋ ರಸಾಸ್ವಾದಂ ನ ವೇತ್ತಿ ಹಿ ॥ ೨೩ ॥

ತಸ್ಮಾದ್ರಾಜನ್ ಭಕ್ತಿಯೋಗಂ ವಿದ್ಧಿ ಚಾತ್ಯಂತಿಕಂ ಪದಂ।
ಭಕ್ತಾನಾಂ ನಿರಪೇಕ್ಷಾಣಾಂ ಪದ್ಧತಿಂ ಕಥಯಾಮಿ ತೇ ॥ ೨೪ ॥

ಸ್ಮರಣಂ ಕೀರ್ತನಂ ವಿಷ್ಣೋಃ ಶ್ರವಣಂ ಪಾದಸೇವನಂ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ॥ ೨೫ ॥

ಕುರ್ವಂತಿ ಸತತಂ ರಾಜನ್ ಭಕ್ತಿಂ ಯೇ ಪ್ರೇಮಲಕ್ಷಣಾಂ।
ತೇ ಭಕ್ತಾ ದುರ್ಲಭಾ ಭೂಮೌ ಭಗವದ್ಭಾವಭಾವನಾಃ ॥ ೨೬ ॥

---

೨೩. ಇಂತಹ ಆನಂದವನ್ನು ಫಲಾಪೇಕ್ಷೆಯಿಂದ ಶ್ರೀಹರಿಯನ್ನು ಆರಾಧಿಸುವವರು ಯಾವ ರೀತಿಯಿಂದಲೂ ಪಡೆಯಲಾರರು. ನಾನಾವಿಧವಾದ ರಸಗಳನ್ನು ಸಿದ್ಧಗೊಳಿಸುವುದಾದರೂ ಹಸ್ತವು ಎಂದಿಗಾದರೂ ಆ ರಸಗಳ ರುಚಿಯನ್ನೂ ಅರಿಯಬಲ್ಲುದೇ ?

೨೪. ಓ ರಾಜೇಂದ್ರ, ಆದುದರಿಂದ ಭಕ್ತಿಯೋಗವೊಂದೇ ಕಟ್ಟಕಡೆಯದಾದ ಸಾಧನಮಾರ್ಗವೆಂಬುದಾಗಿ ತಿಳಿ. ಇನ್ನು ನಿನಗೆ ನಿರಪೇಕ್ಷರಾದ ಆ ಶ್ರೀಹರಿಭಕ್ತರ ಮಾರ್ಗವನ್ನೂ, ರೀತಿನೀತಿಗಳನ್ನೂ ತಿಳಿಸುವೆನು.

೨೫. ಆ ಶ್ರೀಹರಿಯನ್ನು ಸರ್ವದಾ ಧ್ಯಾನಮಾಡುವುದು, ಆತನ ನಾಮಗಳನ್ನು ಕೀರ್ತನಮಾಡುವುದು, ಅದನ್ನು ಆಲಿಸುವುದು, ಆತನ ಪಾದಕಮಲಗಳನ್ನು ಸೇವಿಸುವುದು, ಆತನನ್ನು ಆರಾಧಿಸುವುದು, ನಮಸ್ಕರಿಸುವುದು, ಆತನೇ ಸ್ವಾಮಿಯೆಂದು ಬಗೆದು ತಾನು ದಾಸನಂತೆ ವರ್ತಿಸುವುದು, ಆತನಲ್ಲಿ ಸ್ನೇಹದಿಂದ ವರ್ತಿಸುವುದು, ಕೊನೆಗೆ ತನ್ನನ್ನೇ ಪೂರ್ಣವಾಗಿ ಆತನಿಗೆ ಒಪ್ಪಿಸಿಕೊಳ್ಳುವುದು ಇವು ಆ ಭಕ್ತಿಮಾರ್ಗದ ಬಗೆಗಳು.

೨೬. ಓ ರಾಜೇಂದ್ರ! ಪ್ರೇಮದ ಕಟ್ಟಕಡೆಯ ಮೆಟ್ಟಲೆನಿಸಿದ ಈ ಭಕ್ತಿಯನ್ನು ಯಾವ ಮಾನವರು ಭಗವಂತನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿ ಸರ್ವದಾ ಅವಲಂಬನೆಮಾಡಿಕೊಂಡಿರುವರೋ ಅಂತಹ ಭಕ್ತರು ಈ ಭೂಮಿಯಲ್ಲಿ ದೊರೆಯುವುದು ಕಷ್ಟ.

ಕುರ್ವಂತೋ ಮಹತೋಪೇಕ್ಷಾಂ ದಯಾಂ ಹೀನೇಷು ಸರ್ವತಃ ।
ಸಮಾನೇಷು ತಥಾ ಮೈತ್ರೀಂ ಸರ್ವಭೂತದಯಾಪರಾಃ ॥ ೨೭ ॥

ಕೃಷ್ಣಪಾದಾಬ್ಜಮಧುಪಾಃ ಕೃಷ್ಣದರ್ಶನಲಾಲಸಾಃ ।
ಕೃಷ್ಣಂ ಸ್ಮರಂತಿ ಪ್ರಾಣೇಶಂ ಯಥಾ ಪ್ರೋಷಿತಭರ್ತೃಕಾಃ ॥ ೨೮ ॥

ಶ್ರೀಕೃಷ್ಣಸ್ಮರಣಾದ್ಯೇಷಾಂ ರೋಮಹರ್ಷಃ ಪ್ರಜಾಯತೇ ।
ಆನಂದಾಶ್ರುಕಲಾಶ್ಚೈವ ವೈವರ್ಣ್ಯಂ ತು ಕ್ವಚಿದ್ಭವೇತ್ ॥ ೨೯ ॥

---

೨೭. ಅಂತಹ ಭಕ್ತಶ್ರೇಷ್ಠರು ಅತ್ಯುತ್ತಮವಾದುದನ್ನೇ ಬಯಸುವರು. ದೀನದರಿದ್ರರಲ್ಲಿ ಕರುಣೆಯನ್ನು ತೋರುವರು. ತಮಗೆ ಸರಿಸಮರಾದವರಲ್ಲಿ ಸ್ನೇಹವನ್ನು ಬೆಳೆಸುವರು. ಸಕಲಪ್ರಾಣಿಗಳಲ್ಲಿಯೂ ದಯೆಯಿಂದ ವರ್ತಿಸುವರು.

೨೮. ಆ ಭಕ್ತರು ಶ್ರೀಹರಿಯ ಪಾದಕಮಲಗಳಲ್ಲಿ ಭ್ರಮರಗಳಂತೆ ಸರ್ವದಾ ವಿಹರಿಸುತ್ತಿರುವರು. ಆತನ ಸಂದರ್ಶನವೊಂದರಲ್ಲೇ ವಿಶೇಷವಾಗಿ ಆಸಕ್ತಿಯನ್ನು ತಳೆಯುತ್ತಿರುವರು. ಅವರು ಕಾರ್ಯವಶದಿಂದ ದೇಶಾಂತರಕ್ಕೆ ತೆರಳಿದ ತಮ್ಮ ಪ್ರಿಯ ಜನರ ಅಗಲಿಕೆಯಿಂದ ದುಃಖಿಸುತ್ತಿರುವ ವಿರಹಿಣಿಯರಂತೆ ಆ ಶ್ರೀಕೃಷ್ಣನನ್ನೇ ತಮ್ಮ ಪ್ರಾಣಪ್ರಿಯನೆಂದು ಭಾವಿಸಿ ಸರ್ವದಾ ಆತನನ್ನು ಮನಸ್ಸಿನಲ್ಲಿ ನೆನೆಯುತ್ತಿರುವರು.

೨೯. ಆ ಭಕ್ತಜನರಿಗೆ ಶ್ರೀಕೃಷ್ಣನ ಸ್ಮರಣೆಯಾದೊಡನೆಯೇ ಮೈಯಲ್ಲೆಲ್ಲಾ ರೋಮಾಂಚವುಂಟಾಗುವುದು. ಕಣ್ಣುಗಳಲ್ಲಿ ಆನಂದಾತಿಶಯದಿಂದ ಬಾಷ್ಪವು ಉಕ್ಕಿಬರುವುದು. ಮುಖವು ಒಂದುವಿಧವಾದ ವರ್ಣಾಂತರವನ್ನು (ಕಳೆಯನ್ನು) ಹೊಂದುವುದು.

ಶ್ರೀಕೃಷ್ಣ ಗೋವಿಂದ ಹರೇ ಬ್ರುವಂತಃ ಶ್ಲಕ್ಷ್ಣಯಾ ಗಿರಾ।
ಅಹರ್ನಿಶಂ ಹರೌ ಲಗ್ನಾಃ ತೇ ಹಿ ಭಾಗವತೋತ್ತಮಾಃ ॥ ೩೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಶ್ರೀ ವಿಜ್ಞಾನಖಂಡೇ ಶ್ರೀವೇದವ್ಯಾಸೋಗ್ರಸೇನಸಂವಾದೇ ನಿರ್ಗುಣಭಕ್ತಿಯೋಗವರ್ಣನಂ ನಾಮ ತೃತೀಯೋಽಧ್ಯಾಯಃ

---

೩೦. ಅವರ ಬಾಯಲ್ಲಿ ಹಗಲಿರುಳೂ— "ಕೃಷ್ಣ, ಗೋವಿಂದ, ಹರೇ" ಎಂಬುದಾಗಿ ಭಗವಂತನ ದಿವ್ಯನಾಮಗಳು ಹೊರಹೊರಡುತ್ತಿರುವವು. ಅವರ ಮನಸ್ಸು ಎಂದೆಂದಿಗೂ ಶ್ರೀಹರಿಯಲ್ಲೇ ನೆಲಸಿಹೋಗುವುದು. ಇಂಥವರೇ ನಿಜವಾಗಿಯೂ ಭಕ್ತರಲ್ಲೆಲ್ಲಾ ಅತಿಶ್ರೇಷ್ಠರೆನಿಸುವರು.

ಇಲ್ಲಿಗೆ ಶ್ರೀಗಾರ್ಗ್ಯಸಂಹಿತೆಯ ವಿಜ್ಞಾನಖಂಡದಲ್ಲಿ ನಿರ್ಗುಣಭಕ್ತಿಯೋಗವರ್ಣನವೆಂಬ ಮೂರನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಜ್ಞಾನಖಂಡೇ

ಚತುರ್ಥೋಽಧ್ಯಾಯಃ

॥ ಶ್ರೀ ವ್ಯಾಸ ಉವಾಚ ॥

ಖೇ ವಾಯೌ ಸಲಿಲೇ ವಸ್ಥೌ ಮಹ್ಯಾಂ ಜ್ಯೋತಿರ್ಗಣೇಷು ಚ ।
ಶ್ರೀಕೃಷ್ಣದೇವಂ ಪಶ್ಯಂತೋ ಹರ್ಷಿತಾಶ್ಚ ಪುನಃ ಪುನಃ ॥ ೧ ॥

ಶ್ರೀಕೃಷ್ಣೋ ರಾಧಿಕಾನಾಥಃ ಕೋಟಿಕಂದರ್ಪಮೋಹನಃ ।
ತನ್ನೇತ್ರಗೋಚರೋ ಯಾತಿ ಬ್ರುವಂಶ್ಚ್ರೀನಂದನಂದನಃ ॥ ೨ ॥

ನಾಲ್ಕನೆಯ ಅಧ್ಯಾಯವು

೧. ವ್ಯಾಸಮಹರ್ಷಿಯು ಪುನಃ ಹೇಳತೊಡಗಿದನು—ಓ ರಾಜೇಂದ್ರ, ಆ ಭಕ್ತಾಗ್ರೇಸರರು ಆಕಾಶ, ವಾಯು, ಜಲ, ತೇಜಸ್ಸು, ಪೃಥಿವೀ ಎಂಬ ಪಂಚಭೂತಗಳಲ್ಲಿಯೂ, ಕಣ್ಣಿಗೆ ಕಾಣುವ ಸಕಲ ತೇಜೋವಸ್ತುಗಳಲ್ಲಿಯೂ ಆ ಶ್ರೀಕೃಷ್ಣನನ್ನೇ ಕಾಣುತ್ತಾ ಮತ್ತೆ ಮತ್ತೆ ಆನಂದಪರವಶರಾಗುವರು.

೨. ಅವರ ಕಣ್ಣಿಗೆ, ಕೋಟಿಮನ್ಮಥರಿಗೆ ಎಣೆಯಾದ ಸೌಂದರ್ಯವುಳ್ಳ ನಂದಕುಮಾರನಾದ ಆ ಶ್ರೀಕೃಷ್ಣನು ತನ್ನ ಪ್ರಿಯೆಯಾದ ರಾಧೆಯೊಡಗೂಡಿ ಮಾತನಾಡುತ್ತಾ ಬರುತ್ತಿರುವಂತೆ ತೋರುವನು.

ಸದಾನಂದಂ ಚ ತೇ ದೃಷ್ಟ್ವಾ ಪ್ರಹಸಂತಿ ಪ್ರಹರ್ಷಿತಾಃ ।
ಕ್ವಚಿದ್ವದಂತಿ ಧಾವಂತಿ ನಂದಂತಿ ಚ ಕ್ವಚಿತ್ತಥಾ ॥ ३ ॥

ಕ್ವಚಿದ್ಗಾಯಂತಿ ನೃತ್ಯಂತಿ ಕ್ವಚಿತ್ತೂಷ್ಣೀಭವಂತಿ ಚ ।
ಕೃಷ್ಣಚಂದ್ರಸ್ವರೂಪಾಸ್ತೇ ಕೃತಾರ್ಥಾ ವೈಷ್ಣವೋತ್ತಮಾಃ ॥ ೪ ॥

ತೇಷಾಂ ದರ್ಶನಮಾತ್ರೇಣ ನರೋ ಯಾತಿ ಕೃತಾರ್ಥತಾಂ ।
ನ ಕಾಲೋ ನ ಯಮಸ್ತೇಷಾಂ ದಂಡಂ ದಾತುಂ ನ ಚ ಕ್ಷಮಃ ॥ ೫ ॥

ಗದಾ ಕೌಮೋದಕೀ ವಾಮೇ ದಕ್ಷಿಣೇ ಚ ಸುದರ್ಶನಂ ।
ಅಗ್ರೇ ಶಾರ್ಙ್ಗಂ ಧನುಃ ಪಶ್ಚಾತ್ಪಾಂಚಜನ್ಯೋ ಘನಸ್ವನಃ ॥ ೬ ॥

---

೩. ಈ ರೀತಿ ನಿತ್ಯಾನಂದಸ್ವರೂಪನಾದ ಆ ಶ್ರೀಹರಿಯನ್ನು ನೋಡಿದ ಕೂಡಲೆ ಆ ಭಕ್ತರು ಮಹಾಸಂತೋಷದಿಂದ ಒಂದೊಂದುಬಾರಿ ಗಟ್ಟಿಯಾಗಿ ನಗುವರು. ಒಂದೊಂದುಕಡೆ ಮಾತನಾಡುತ್ತಾ ನಿಲ್ಲುವರು. ಒಂದೊಂದುಕಡೆ ಓಡೋಡಿ ಹೋಗುವರು. ಒಂದೊಂದುಕಡೆ ಬಹುವಾಗಿ ಸಂತೋಷಿಸುವರು.

೪. ಒಂದೊಂದುಕಡೆ ಗಾನಮಾಡ ತೊಡಗುವರು. ಒಂದೊಂದುಕಡೆ ನೃತ್ಯವನ್ನು ಮಾಡತೊಡಗುವರು. ಒಂದೊಂದುಕಡೆ ಇದ್ದಕ್ಕಿದ್ದಂತೆ ಸುಮ್ಮನೆ ನಿಂತು ಬಿಡುವರು. ಓ ರಾಜೇಂದ್ರ, ಶ್ರೀಕೃಷ್ಣನ ರೂಪವೆನಿಸಿದ ಇಂತಹ ವೈಷ್ಣವಶ್ರೇಷ್ಠರೇ ನಿಜವಾಗಿಯೂ ಧನ್ಯರೆಂದು ತಿಳಿ.

೫. ಅಂತಹ ಭಾಗವತೋತ್ತಮರನ್ನು ಒಂದುಬಾರಿ ಸಂದರ್ಶಿಸಿದರೂ ಸಾಕು, ಮಾನವನು ತನ್ನ ಜನ್ಮದ ಸಾರ್ಥಕ್ಯವನ್ನು ಪಡೆಯುವನು. ಅಂತಹ ಮಾನವನಿಗೆ ಶಿಕ್ಷೆಯನ್ನು ವಿಧಿಸಲು ಕಾಲನಿಗಾಗಲಿ ಯಮನಿಗಾಗಲಿ ಸಾಧ್ಯವಿಲ್ಲ.

೬-೭. ಆತನನ್ನು ಎಡಭಾಗದಲ್ಲಿ ಶ್ರೀಹರಿಯ ಕೌಮೋದಕಿಯೆಂಬ ಗದೆಯೂ, ಬಲಭಾಗದಲ್ಲಿ ಸುದರ್ಶನವೆಂಬ ಚಕ್ರವೂ, ಮುಂಭಾಗದಲ್ಲಿ ಶಾರ್ಙ್ಗವೆಂಬ ಧನುಸ್ಸೂ, ಹಿಂಭಾಗದಲ್ಲಿ ಮೇಘದಂತೆ ಗಂಭೀರಧ್ವನಿಯಿಂದ ಮೊಳಗುವ ಪಾಂಚಜನ್ಯವೆಂಬ

ನಂದಕಶ್ಚ ಮಹಾಖಡ್ಗಃ ಶತಚಂದ್ರೇಷವಃ ಶಿತಾಃ ।
ಏತಾನ್ಯಾಯುಧಮುಖ್ಯಾನಿ ತಾಂಶ್ಚ ರಕ್ಷಂತ್ಯಹರ್ನಿಶಂ ॥ ೭ ॥

ತಥೋಪರಿ ಮಹಾಪದ್ಮಂ ಛಾಯಾಂ ಕರ್ತುಂ ಪುನಃ ಪುನಃ ।
ಗರುಡಃ ಪಕ್ಷವಾತೇನ ಶಮಹರ್ತಾ ಸತಾಮಪಿ ॥ ೮ ॥

ಯತ್ರ ಯತ್ರ ಗತಾಸ್ಸಂತಃ ತತ್ರ ತತ್ರ ಸ್ವಯಂ ಹರಿಃ ।
ತೀರ್ಥೀಕುರ್ವನ್ ಭೂಮಿಭಾಗಂ ಶ್ರೀಮತ್ಪಾದಾಬ್ಜ ರೇಣುಭಿಃ ॥ ೯ ॥

ಕ್ಷಣಂ ಯತ್ರ ಸ್ಥಿತಾಸ್ಸಂತಃ ತತ್ರ ತೀರ್ಥಾನಿ ಸಂತಿ ಹಿ ।
ತತ್ರ ಕೋಪಿ ಮೃತಃ ಪಾಪೀ ಯಾತಿ ವಿಷ್ಣೋಃ ಪರಂ ಪದಂ ॥ ೧೦ ॥

ದೂರಾತ್ಸಂಪ್ರೇಕ್ಷ್ಯ ಕೃಷ್ಣೇಷ್ವಾನಾಧಯೋ ವ್ಯಾಧಯಸ್ತಥಾ ।
ಭೂತಪ್ರೇತಪಿಶಾಚಾಶ್ಚ ಪಲಾಯಂತೇ ದಿಶೋ ದಶ ॥ ೧೧ ॥

ಶಂಖವೂ ಮತ್ತು ನಂದಕವೆಂಬ ಕತ್ತಿಯೂ, ಶತಚಂದ್ರವೆಂಬ ಮೊನಚಾದ ಅಲಗುಳ್ಳ ಬಾಣಗಳೂ ಹಗಲಿರುಳೂ ನಿಂತು ರಕ್ಷಿಸುತ್ತಿರುವವು.

೮. ಅದರಂತೆ ಆ ಭಕ್ತರಿಗೆ ಮಳೆಬಿಸಲುಗಳ ಬಾಧೆ ತಟ್ಟದಂತೆ ಆ ಹರಿಯ ಮಹಾಪದ್ಮವು ಮರೆಯಾಗಿ ನಿಂತು ನೆಳಲನ್ನು ಬೀರುತ್ತಿರುವುದು. ಅವರ ಬಳಲಿಕೆಯನ್ನು ಪರಿಹರಿಸಲು ಗರುಡನು ತನ್ನ ರೆಕ್ಕೆಗಳನ್ನು ಅಲುಗಿಸುತ್ತಾ ಗಾಳಿಯನ್ನು ಹಾಕುವನು.

೯. ಆ ಭಾಗವತೋತ್ತಮರು ಎಲ್ಲೆಲ್ಲಿ ಹೋಗುವರೋ ಅಲ್ಲೆಲ್ಲಾ ಸಾಕ್ಷಾತ್ ಶ್ರೀಕೃಷ್ಣನೇ ಸ್ವಯಂ ಬಂದು ತನ್ನ ದಿವ್ಯವಾದ ಚರಣಕಮಲಗಳ ಧೂಳಿಯಿಂದ ಆ ಆ ಭೂಭಾಗವನ್ನು ಪಾವನಗೊಳಿಸುವನು.

೧೦. ಆ ಸಜ್ಜನರು ಒಂದು ಗಳಿಗೆಯಾದರೂ ಎಲ್ಲಿ ನಿಲ್ಲುವರೊ ಆ ಪ್ರದೇಶದಲ್ಲಿ ಸಕಲ ತೀರ್ಥಗಳೂ ಬಂದು ನೆಲಸುವವು. ಅಂತಹ ಸ್ಥಳದಲ್ಲಿ ಎಂತಹ ಪಾಪಿಯೇ ಆಗಲಿ ತನ್ನ ದೇಹಾಂತವನ್ನು ಹೊಂದಿದಲ್ಲಿ ಅವನು ಅತ್ಯುತ್ತಮವಾದ ಶ್ರೀವಿಷ್ಣುಲೋಕವನ್ನೇ ಹೋಗಿ ಸೇರುವನು.

೧೧. ಆ ಶ್ರೀಹರಿಯ ಪ್ರೀತಿಗೆ ಪಾತ್ರರಾದ ಭಕ್ತಾಗ್ರಣಿಗಳನ್ನು ದೂರದಲ್ಲಿ ನೋಡಿದರೂ ಸಾಕು, ಕೂಡಲೇ ಸಕಲವ್ಯಾಧಿಗಳೂ, ಮಾನಸಿಕವಾದ ವ್ಯಥೆಗಳೂ, ಭೂತಪ್ರೇತಪಿಶಾಚಗಳೂ ಭಯದಿಂದ ದಿಕ್ಕುದಿಕ್ಕಿಗೆ ಓಡಿಹೋಗುವವು.

ನದ್ಯೋ ನದಾಃ ಪರ್ವತಾಶ್ಚ ಸಮುದ್ರಾಶ್ಚ ತಥಾಪರೇ ।
ಮಾರ್ಗಂ ದದುಶ್ಚ ಸಾಧುಭ್ಯೋಽನಪೇಕ್ಷೇಭ್ಯಃ ಸಮಂತತಃ ॥ ೧೨ ॥

ಸಾಧೂನಾಂ ಜ್ಞಾತಿನಿಷ್ಠಾನಾಂ ವಿರಕ್ತಾನಾಂ ಮಹಾತ್ಮನಾಂ ।
ಅಜಾತಶತ್ರೂಣಾಂ ತೇಷಾಂ ದುರ್ಲಭಂ ಪುಣ್ಯವರ್ಜಿತೈಃ ॥ ೧೩ ॥

ಯಸ್ಮಿನ್ಕುಲೇ ಕೃಷ್ಣಭಕ್ತೋ ಜಾಯತೇ ಬ್ರಹ್ಮಲಕ್ಷಣಂ ।
ತತ್ಕುಲಂ ವಿಮಲಂ ವಿದ್ಧಿ ಮಲೀಮಸಮಪಿ ಸ್ವತಃ ॥ ೧೪ ॥

ರಾಜನ್ ಶ್ರೀಕೃಷ್ಣಭಕ್ತಸ್ತು ಪಿತೄನ್ ದಶಕುಲೋದ್ಭವಾನ್ ।
ಪ್ರಿಯಾಪಕ್ಷೇಪಿ ದಶ ಚ ಮಾತೃಪಕ್ಷೇ ತಥಾ ದಶ ॥ ೧೫ ॥

ಪುರುಷಾನುದ್ಧರೇದ್ರಾಜನ್ ನಿರಯಾತ್ಪಾಪಬಂಧನಾತ್ ।
ಸಾಧುಸಂಬಂಧಿನಶ್ಚಾನ್ಯೇ ಭೃತ್ಯಾ ದಾಸಾಃ ಸುಹೃಜ್ಜನಾಃ ॥ ೧೬ ॥

---

೧೨. ಅಂತಹ ನಿರಪೇಕ್ಷರಾದ ಸಾಧುಸಜ್ಜನರು ಬರುತ್ತಿದ್ದರೆ ಅಡ್ಡಲಾಗಿರುವ ನದೀನದಗಳೂ, ಸಾಗರಗಳೂ, ಪರ್ವತಗಳೂ ದಾರಿಯನ್ನು ಬಿಟ್ಟು ಬಿಡುವವು.

೧೩. ಓ ರಾಜೇಂದ್ರ, ಇಂತಹ ಜ್ಞಾನಿಗಳೂ. ವೈರಾಗ್ಯಶಾಲಿಗಳೂ, ಅಜಾತ ಶತ್ರುಗಳೂ, ಮಹಾನುಭಾವರೂ ಆದ ಆ ಸಾಧುಗಳ ಸಂದರ್ಶನವು ಪುಣ್ಯಹೀನರಿಗೆ ಎಂದಿಗೂ ದೊರೆಯಲಾರದು.

೧೪. ಯಾವನ ಸಂತತಿಯಲ್ಲಿ ಪರಬ್ರಹ್ಮಸ್ವರೂಪನಾದ ಶ್ರೀಕೃಷ್ಣಭಕ್ತನು ಜನ್ಮತಾಳುವನೋ ಆ ವಂಶವು ಎಷ್ಟೇ ಪಾಪಭೂಯಿಷ್ಠವಾಗಿದ್ದರೂ ಅದು ಪಾವನ ವಾದುದೆಂಬುದಾಗಿಯೇ ತಿಳಿ.

೧೫–೧೬. ಓ ಯಾದವೇಶ್ವರ, ಆ ಶ್ರೀಹರಿಯ ಭಕ್ತನೆನಿಸಿದವನು ಹತ್ತು ತಲೆಯವರೆಗೆ ತನ್ನ ತಂದೆಯ ವಂಶದಲ್ಲಿಯೂ, ತಾಯಿಯ ವಂಶದಲ್ಲಿಯೂ, ಹೆಂಡತಿಯ ಸಂತತಿಯಲ್ಲಿಯೂ ತಾವು ತಾವು ಮಾಡಿದ ಪಾಪಕರ್ಮಗಳ ಫಲವಾಗಿ ನರಕದುಃಖವನ್ನನುಭವಿಸುತ್ತಿರುವ ತನ್ನ ಪಿತೃಗಳನ್ನು ಆ ದುಃಖದಿಂದ ಬಿಡುಗಡೆ ಮಾಡುವನು.

ಶತ್ರವೋ ಭಾರವಾಹಾಶ್ಚ ತದ್ಗೃಹೇ ಪಕ್ಷಿಣಸ್ತಥಾ ।
ಪಿಪೀಲಿಕಾಶ್ಚ ಮಶಕಾಸ್ತಥಾ ಕೀಟಪತಂಗಕಾಃ ॥ ೧೭ ॥

ಅಬ್ರಹ್ಮಣ್ಯೇ ಕೃಷ್ಣಸಾರೇ ಸೌವೀರೇ ಕೀಟಕೇ ತಥಾ ।
ಮ್ಲೇಚ್ಛದೇಶೇಪಿ ದೇವೇಶೇ ಭಕ್ತೋ ಲೋಕಾನ್ಪುನಾತಿ ಹಿ ॥ ೧೮ ॥

ಸಾಂಖ್ಯಯೋಗಂ ವಿನಾ ರಾಜಂಸ್ತೀರ್ಥಂ ಧರ್ಮಮುಖ್ಯೈರ್ವಿನಾ ।
ಸಾಧುಸಂಸರ್ಗಿನಸ್ತೇಪಿ ಪ್ರಯಾಂತಿ ಹರಿಮಂದಿರೇ ॥ ೧೯ ॥

ಇತ್ಥಂ ಶ್ರೀಕೃಷ್ಣಭಕ್ತಾನಾಂ ಮಾಹಾತ್ಮ್ಯಂ ಕಥಿತಂ ಮಯಾ ।
ಚತುಃಪದಾರ್ಥದಂ ನೄಣಾಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೨೦ ॥

---

೧೭. ಹೆಚ್ಚೇಕೆ ? ಅಂತಹ ಭಕ್ತಾಗ್ರಣಿಯ ಬಂಧುಬಾಂಧವರೂ, ಪೋಷಣೆಗೊಳಪಟ್ಟವರೂ, ದಾಸದಾಸಿಯರೂ, ಸ್ನೇಹಿತರೂ, ಶತ್ರುಗಳೂ, ಹೊರೆ ಮೊದಲಾದವುಗಳನ್ನು ತಂದುಕೊಟ್ಟ ಆಳುಕಾಳುಗಳೂ, ಮನೆಯಲ್ಲಿರುವ ಪಶುಪಕ್ಷಿಗಳೂ, ಇರುವೆ, ಸೊಳ್ಳೆ, ಕ್ರಿಮಿ, ಕೀಟ, ಪತಂಗಾದಿಗಳೂ ತಮ್ಮ ತಮ್ಮ ಪಾಪಗಳಿಂದ ಬಿಡುಗಡೆ ಹೊಂದುವರು.

೧೮. ಮತ್ತು ಆ ಭಕ್ತನು ತನ್ನ ಪಾದವಿಕ್ಷೇಪಮಾತ್ರದಿಂದಲೇ ನಿಷಿದ್ಧದೇಶಗಳೆಂದು ಪರಿಗಣಿಸಲ್ಪಟ್ಟಿರುವ ಬ್ರಹ್ಮಣ್ಯ, ಕೃಷ್ಣಸಾರ, ಸೌವೀರ, ಕೀಟಕ, ಮ್ಲೇಚ್ಛದೇಶ ಮುಂತಾದವುಗಳಲ್ಲಿ ಇರುವ ಜನರನ್ನು ಅವರ ಪಾಪಗಳಿಂದ ಮುಕ್ತರನ್ನಾಗಿ ಮಾಡುವನು.

೧೯. ಆ ಸಾಧುಸಜ್ಜನರ ಸಹವಾಸವನ್ನು ಬೆಳೆಸಿದವರು, ಸಾಂಖ್ಯಪ್ರಕ್ರಿಯೆಯನ್ನೂ, ಯೋಗಮಾರ್ಗವನ್ನೂ ತಿಳಿಯದಿದ್ದರೂ, ತೀರ್ಥಯಾತ್ರೆಗಳನ್ನು ಮಾಡದಿದ್ದರೂ, ಧರ್ಮಕಾರ್ಯಗಳನ್ನೂ, ಯಜ್ಞಯಾಗಾದಿಗಳನ್ನೂ ಆಚರಿಸದಿದ್ದರೂ, ಆ ಸಜ್ಜನರ ಸಹವಾಸಪ್ರಭಾವದಿಂದ ವಿಷ್ಣುಲೋಕವನ್ನು ಹೋಗಿ ಸೇರುವರು.

೨೦. ಓ ರಾಜೇಂದ್ರ, ಈ ರೀತಿಯಾಗಿ ನಾನು ಶ್ರವಣಮಾಡಿದ ಮಾನವರಿದ ಮಾನವರಿಗೆ ಪುರುಷಾರ್ಥ ಚತುಷ್ಟಯಗಳನ್ನೂ ಕರುಣಿಸುವಂತಹ ಶ್ರೀಕೃಷ್ಣಭಕ್ತರ ಮಾಹಾತ್ಮ್ಯವನ್ನು ನಿನಗೆ ತಿಳಿಸಿದೆನು. ಇದರ ಮೇಲೆ ಮತ್ತೇನನ್ನು ಕೇಳಬಯಸುವೆ ಎಂದು ವ್ಯಾಸಮಹರ್ಷಿಯು ಪ್ರಶ್ನಿಸಲು,

॥ ಉಗ್ರಸೇನ ಉವಾಚ ॥

ಪರಿಪೂರ್ಣತಮೇ ಸಾಕ್ಷಾಚ್ಛ್ರೀಕೃಷ್ಣೇ ಪರಮಾತ್ಮನಿ ।
ದಂತವಕ್ತ್ರಸ್ಯ ದುಷ್ಟಸ್ಯ ಜ್ಯೋತಿರ್ಲೀನಂ ಬಭೂವ ಹ ॥ ೨೧ ॥

ಅಹೋ ಮಹದಿದಂ ಚಿತ್ರಂ ಸಾಯುಜ್ಯಂ ಮಹತಾಮಪಿ ।
ಯೋಗ್ಯಂ ಸ್ಯಾದ್ವಿಪ್ರಮುಖ್ಯೇಂದ್ರ ಕಥಂ ಚಾನ್ಯೇನ ಶತ್ರುಣಾ ॥ ೨೨ ॥

॥ ಶ್ರೀ ವ್ಯಾಸ ಉವಾಚ ॥

ಮಮಾಹಮಿತಿ ವೈಷಮ್ಯಂ ಭೂತಾನಾಂ ತ್ರಿಗುಣಾತ್ಮನಾಂ ।
ಕ್ರೋಧಾದ್ಯೈರ್ವರ್ತತೇ ರಾಜನ್ ನ ಹರೌ ಪರಮಾತ್ಮನಿ ॥ ೨೩ ॥

ಹರೌ ತೇನಾಪಿ ಭಾವೇನ ಮನೋಲಗ್ನಂ ಕರೋತಿ ಯಃ ।
ಯಾತಿ ತದ್ರೂಪತಾಂ ಯಾತಿ ಭೃಂಗಿಣಃ ಕೀಟಕೋ ಯಥಾ ॥ ೨೪ ॥

---

೨೧. ಯದುರಾಜನಾದ ಉಗ್ರಸೇನನು ಇಂತೆಂದನು—ಓ ಬ್ರಹ್ಮಜ್ಞ, ಪರಿಪೂರ್ಣತಮನೆನಿಸಿದ ಪರಮಪುರುಷನಾದ ಸಾಕ್ಷಾತ್ ಶ್ರೀಕೃಷ್ಣನಲ್ಲಿ ದುಷ್ಟನಾದ ದಂತವಕ್ತ್ರನ ತೇಜಸ್ಸು ಐಕ್ಯವನ್ನು ಹೊಂದಿತಲ್ಲವೇ ?

೨೨. ಈ ಅಂಶವು ನನಗೆ ಬಹುವಾಗಿ ಅಚ್ಚರಿಯನ್ನುಂಟುಮಾಡುತ್ತಿರುವುದು. ಏಕೆಂದರೆ, ಈ ರೀತಿಯಾಗಿ ಶ್ರೀಕೃಷ್ಣನಲ್ಲಿ ತೇಜಸ್ಸು ಲಯವನ್ನು ಹೊಂದುವಂತಹ ಸಾಯುಜ್ಯವು ಮಹಾತ್ಮರಾದವರಿಗೆ ಮಾತ್ರ ಸಲ್ಲಬಹುದು. ಆದರೆ ಅತಿ ತುಚ್ಛವೆನಿಸಿದ ಶತ್ರುವಿಗೆ ಸಲ್ಲುವುದು ಹೇಗೆ ?

೨೩. ಎಂದು ಪ್ರಶ್ನಿಸಲು ವ್ಯಾಸಮಹರ್ಷಿಯು ಇಂತು ನುಡಿದನು—ಪ್ರಕೃತಿಜನ್ಯಗಳಾದ ಸತ್ತ್ವಾದಿಗುಣಗಳ ಪರಿಣಾಮದಿಂದ ಜನಿಸಿದ ಪ್ರಾಣಿಗಳಿಗೆ ಕಾಮಕ್ರೋಧಾದಿಗಳ ವಶದಿಂದ ನಾನು, ನನ್ನವನು ಎಂಬೀ ಭೇದಭಾವವು ಉಂಟಾಗುವುದೇ ಹೊರತು ಪರಮಾತ್ಮನಾದ ಶ್ರೀಹರಿಗೆ ಅಲ್ಲ.

೨೪. ಆ ಶ್ರೀಹರಿಯಲ್ಲಿ ಯಾವ ಭಾವನೆಯಿಂದಲಾದರೂ ಸರಿಯೆ ತನ್ನ ಮನಸ್ಸನ್ನು ನೆಲೆಗೊಳಿಸಿದವನು ಭ್ರಮರಕೀಟನ್ಯಾಯದಂತೆ ಕೊನೆಗೆ ಆ ಹರಿಯ ಸ್ವರೂಪವನ್ನೇ ಹೊಂದುವನು. ಭ್ರಮರಕೀಟನ್ಯಾಯವೆಂದರೆ—ದುಂಬಿಯು ತನ್ನ

ಸ್ನೇಹಂ ಕಾಮಂ ಭಯಂ ಕ್ರೋಧಮೈಕ್ಯಂ ಸೌಹೃದಮೇವ ಚ ।
ಕೃತ್ವಾ ತನ್ಮಯತಾಂ ಯಾಂತಿ ಸಾಂಖ್ಯಯೋಗಂ ವಿನಾ ಜನಾಃ ॥ ೨೫ ॥

ಸ್ನೇಹಾತ್ ನಂದಯಶೋದಾದ್ಯಾ ವಸುದೇವಾದಯೋಽಪರೇ ।
ಕಾಮಾದ್ಗೋಪ್ಯೋ ಹರಿಂ ಪ್ರಾಪ್ತಾ ನ ತು ಬ್ರಹ್ಮತಯಾ ನೃಪ ॥ ೨೬ ॥

ತದ್ರೂಪಗುಣಮಾಧುರ್ಯಭಾವಸಂಲಗ್ನಮಾನಸಾಃ ।
ಭಯಾತ್ಕಂಸಸ್ತ್ವಸುತಃ ತತ್ಸಾಯುಜ್ಯಂ ಜಗಾಮ ಹ ॥ ೨೭ ॥

ಆಹಾರಕ್ಕೆಂದು ಒಂದು ಬಗೆಯ ಕೀಟವನ್ನು ಗೂಡಿನಲ್ಲಿ ತಂದಿಟ್ಟುಕೊಳ್ಳುವುದು. ಆ ಕೀಟವು, ದುಂಬಿಯು ಬಂದು ತನ್ನನ್ನೆಲ್ಲಿ ಪೀಡಿಸುವುದೋ ಎಂಬ ಹೆದರಿಕೆಯಿಂದ ಸರ್ವದಾ ಅದನ್ನೇ ಚಿಂತಿಸುತ್ತಾ ಕೊನೆಗೆ ದುಂಬಿಯ ರೂಪವನ್ನೇ ತಾಳುವುದೆಂದು ಪ್ರತೀತಿ.

೨೫. ಯಾರು ಆ ಶ್ರೀಹರಿಯಲ್ಲಿ ಸ್ನೇಹವನ್ನಾಗಲಿ, ಕಾಮವನ್ನಾಗಲಿ, ಭಯವನ್ನಾಗಲಿ, ಕ್ರೋಧವನ್ನಾಗಲಿ, ಏಕೀಭಾವವನ್ನಾಗಲಿ, ಸಖ್ಯವನ್ನಾಗಲಿ ಮಾಡುವರೋ ಅಂಥವರು ಸಾಂಖ್ಯಯೋಗಗಳ ಪರಿಜ್ಞಾನವಿಲ್ಲದಿದ್ದರೂ ಕೊನೆಗೆ ಆ ಶ್ರೀಹರಿಯಲ್ಲೇ ಐಕ್ಯವನ್ನು ಹೊಂದುವರು.

೨೬. ಓ ರಾಜೇಂದ್ರ, ನಂದನೂ, ಯಶೋದೆಯೂ, ವಸುದೇವದೇವಕಿಯರೂ ಆ ಶ್ರೀಹರಿಯಲ್ಲಿ ಮಗನೆಂಬ ಮಮತೆಯನ್ನು ತೋರಿದುದರಿಂದಲೂ, ಗೋಪಾಂಗನೆಯರು ತಮ್ಮ ಪ್ರಿಯನೆಂಬುದಾಗಿ ಪ್ರೇಮಭಾವವನ್ನು ವಹಿಸಿದುದರಿಂದಲೂ ಆ ಶ್ರೀಕೃಷ್ಣನನ್ನು ಹೊಂದಿದರೇ ವಿನಾ ಆತನೇ ಪರಬ್ರಹ್ಮನೆಂಬ ಶುದ್ಧ ಜ್ಞಾನವನ್ನು ಹೊಂದಿದುದರಿಂದಲ್ಲ.

೨೭. ಮೇಲೆ ಹೇಳಿದವರೆಲ್ಲೂ ಆ ಶ್ರೀಹರಿಯ ಗುಣಗಳನ್ನೂ, ರೂಪವನ್ನೂ, ಮಾಧುರ್ಯವನ್ನೂ ಸವಿಸವಿದು, ಆತನಲ್ಲಿಯೇ ತಮ್ಮ ಮನಸ್ಸನ್ನು ನೆಲೆಗೊಳಿಸಿಬಿಟ್ಟಿದ್ದರು. ಇದರಂತೆ ನಿನ್ನ ಮಗನಾದ ಕಂಸನು ತನ್ನನ್ನು ಶ್ರೀಕೃಷ್ಣನು ಯಾವಾಗ ವಧಿಸಿಬಿಡುವನೋ ಎಂಬುದಾಗಿ ಸರ್ವಕಾಲದಲ್ಲಿಯೂ ಹೆದರುತ್ತಾ, ಆತನನ್ನು ಧ್ಯಾನಿಸುತ್ತಿದ್ದುದರಿಂದಲೇ ಆತನ ಸಾಯುಜ್ಯವನ್ನು ಹೊಂದಿದನು.

ಕ್ರೋಧಾದಯಂ ದಂತವಕ್ರಃ ಶಿಶುಪಾಲಾದಯೋಽಪರೇ ।
ಐಕ್ಯಾಚ್ಚ ಯಾದವಾ ಯೂಯಂ ಸೌಹೃದಾಚ್ಚ ವಯಂ ತಥಾ ॥ ೨೮ ॥

ತಸ್ಮಾತ್ಕೇನಾಪ್ಯುಪಾಯೇನ ಮನಃ ಕೃಷ್ಣೇ ನಿವೇಶಯೇತ್ ।
ಅಹರ್ನಿಶಂ ಹಿ ಸ್ಮರಣಂ ಭವೇಚ್ಛತ್ರೋರ್ನ ಕರ್ಹಿಚಿತ್ ॥
ಶತ್ರುಭಾವಂ ಹರೌ ತಸ್ಮಾತ್ಕುರ್ವಂತಿ ದನುಜಾದಯಃ ॥ ೨೯ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಜ್ಞಾನಖಂಡೇ ಶ್ರೀವ್ಯಾಸೋಗ್ರಸೇನ ಸಂವಾದೇ ಭಕ್ತಮಾಹಾತ್ಮ್ಯಂ ನಾಮ ಚತುರ್ಥೋಽಧ್ಯಾಯಃ

---

೨೮. ಹಾಗೆಯೇ ಈ ದಂತವಕ್ರನೂ, ಇನ್ನೂ ಇತರ ಶಿಶುಪಾಲಾದಿಗಳೂ ಕ್ರೋಧದಿಂದ ಆತನನ್ನು ಹೊಂದಿದರು. ಅದೇ ರೀತಿ ಯಾದವರಾದ ನೀವೆಲ್ಲರೂ ಸಹವರ್ತನೆಯಿಂದಲೂ, ನಮ್ಮಂತವರೆಲ್ಲರೂ ಸಖ್ಯದಿಂದಲೂ ಆ ಶ್ರೀಕೃಷ್ಣನ ಸಾಯುಜ್ಯವನ್ನು ಪಡೆಯುವೆವು.

೨೯. ಆದುದರಿಂದ ಯಾವ ರೀತಿಯಿಂದಲಾದರೂ ಸರಿಯೆ, ಶ್ರೀಕೃಷ್ಣನಲ್ಲಿ ಮನಸ್ಸನ್ನು ನೆಲೆಗೊಳಿಸಬೇಕು. ಈ ರೀತಿ ಆ ಶ್ರೀಹರಿಯಲ್ಲಿ ಹಗಲಿರುಳೂ ಎಡಬಿಡದೆ ಮನಸ್ಸನ್ನು ನೆಲೆಗೊಳಿಸಬೇಕಾದರೆ ಶತ್ರುವಿನೊಬ್ಬನಿಗೆ ಸಾಧ್ಯವೇ ವಿನಾ ಮತ್ತಾರಿಗೂ ಸಾಧ್ಯವಿಲ್ಲ. ಆದುದರಿಂದಲೇ ದೈತ್ಯದಾನವರು ಆ ಶ್ರೀಹರಿಯಲ್ಲಿ ಮತ್ತಾವ ಭಾವನೆಯನ್ನೂ ತೋರದೆ ಕೇವಲ ಶತ್ರುಭಾವವನ್ನೇ ವಹಿಸುವರು ಎಂದನು.

ಇಲ್ಲಿಗೆ ಶ್ರೀಗಾರ್ಗ್ಯಸಂಹಿತೆಯ ವಿಜ್ಞಾನಖಂಡದಲ್ಲಿ ಭಕ್ತಿಮಾಹಾತ್ಮ್ಯವೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಜ್ಞಾನ ಖಂಡೇ

ಪಂಚಮೋಽಧ್ಯಾಯಃ

॥ ಶ್ರೀ ವೇದವ್ಯಾಸ ಉವಾಚ ॥

ವತ್ಸಾಘಧೇನುಕಬಕೀಬಕಕೇಶಿಕಾಲಾ-
ರಿಷ್ಟಪ್ರಲಂಬಕಪಿಬಲ್ವಲಶಂಖಶಾಲಾಃ ।
ವೈರೇಣ ಯಂ ಕಿಮುತ ಭಕ್ತಿಯುತಾ ನರೇಂದ್ರ
ಪ್ರಾಪುಃ ಪರಂ ಪ್ರಕೃತಿಪೂರುಷಯೋಃ ಪುಮಾಂಸಂ ॥ ೧ ॥

ಪೂರ್ವಾಸುರಾವತಿಬಲೌ ಮಧುಕೈಟಭಾಖ್ಯೌ
ಸ್ವರ್ಣಾಕ್ಷಹೇಮಕಶಿಪೂ ಚ ತಥಾಪರೌ ಚ ।
ವೈರಂ ವಿಧಾಯ ನೃಪ ರಾವಣಕುಂಭಕರ್ಣೌ
ವಿಷ್ಣೋಃ ಕಿಲಾಪತುರಲಂ ಪರಮಂ ಪದಂ ಹಿ ॥ ೨ ॥

ಐದನೆಯ ಅಧ್ಯಾಯವು

೧. ವ್ಯಾಸಮಹರ್ಷಿಯು ಮತ್ತಿಂತೆಂದನು :—ಓ ರಾಜೇಂದ್ರ, ವತ್ಸಾಸುರ, ಅಘಾಸುರ, ಧೇನುಕ, ಬಕ, ಕೇಶಿ, ಅರಿಷ್ಟ, ಪ್ರಲಂಬ, ದ್ವಿವಿದವಾನರ, ವಲ್ವಲ, ಶಂಖಾಸುರ, ಶಾಲ್ವ ಮುಂತಾದವರೆಲ್ಲರೂ ಕೇವಲ ವೈರಭಾವನೆಯಿಂದಲೇ ಪ್ರಕೃತಿ ಪುರುಷರಿಗಿಂತಲೂ ಮೇಲೆನಿಸಿದ ಆ ಪರಮಪುರುಷನನ್ನು ಪಡೆದರೆಂದಮೇಲೆ ಕೇವಲ ಭಕ್ತಿಭಾವದಿಂದ ಆತನನ್ನು ಆರಾಧಿಸುವವರ ವಿಷಯವನ್ನೇನು ಹೇಳೋಣ ?

೨. ಜಗತ್ಸೃಷ್ಟಿಯ ಆರಂಭಸಮಯದಲ್ಲಿ ಮೊತ್ತಮೊದಲನೆಯವರಾಗಿ ಬಂದ ಮಹಾಬಲಾಢ್ಯರಾದ ಮಧುಕೈಟಭರೆಂಬ ಅಸುರರೂ, ದೈತ್ಯರಾದ ಹಿರಣ್ಯಾಕ್ಷ ಹಿರಣ್ಯ ಕಶಿಪುಗಳೂ, ರಾಕ್ಷಸೇಶ್ವರರಾದ ರಾವಣಕುಂಭಕರ್ಣರೂ ಶ್ರೀಹರಿಯ ಮೇಲಿನ ಬರಿಯ ವೈರವೊಂದರಿಂದಲೇ ಪರಮೋತ್ತಮವಾದ ಆತನ ದಿವ್ಯಸಾನ್ನಿಧ್ಯವನ್ನು ಹೊಂದಿದರು.

ಕೇ ಕೇನ ವಿಷ್ಣುಪದಮಾಗತವಂತ ಆದೌ
ಪ್ರಹ್ಲಾದಬಾಣಬಲಿಯಕ್ಷವಿಭೀಷಣಾದ್ಯಾಃ ।
ಸತ್ಸಂಗಸಂಗನಿರತಾ ಬಹುಮಾನಪಾತ್ರ-
ಶ್ರೀಮತ್ಪದಾಬ್ಜಮಕರಂದರಜೋ ವಿಲುಬ್ಧಾಃ ॥ ೩ ॥

ದೇವರ್ಷಿಗೀಷ್ಪತಿವಸಿಷ್ಠಪರಾಶರಾದ್ಯಾಃ
ಸಾಂಖ್ಯಾಯನಾಸಿತಶುಕಾಃ ಸನಕಾದಯಶ್ಚ ।
ನಿಷ್ಕಾರಣಾ ಭುವಿ ಚರಂತ್ಯರವಿಂದನೇತ್ರ-
ಪಾದಾರವಿಂದಮಕರಂದಮಿಲಿಂದಮುಖ್ಯಾಃ ॥ ೪ ॥

ಯತ್ಯುತ್ಕಲಾಂಗಭರತಾರ್ಜುನಮೈಥಿಲಾಶ್ಚ
ಗಾಧಿಪ್ರಿಯವ್ರತಯದುಪ್ರಮುಖಾಂಬರೀಷಾಃ ।
ನಿಷ್ಕಾರಣಾಃ ಪರಮಹಂಸವರಾಶ್ಚ ರಂತಿ
ಶ್ರೀಕೃಷ್ಣಚಂದ್ರಚರಿತಾಮೃತಪಾನಮತ್ತಾಃ ॥ ೫ ॥

---

೩. ಓ ಯಾದವೇಂದ್ರ, ನಾವಿರುವ ಈ ಕಾಲಕ್ಕಿಂತಲೂ ಪೂರ್ವದಲ್ಲಿ ಯಾರು ಯಾರು ಯಾವ ಮಾರ್ಗದಿಂದ ಆ ಶ್ರೀಹರಿಯನ್ನು ಪಡೆಯಲಿಲ್ಲವೆಂದು ಹೇಳಲಿ ? ಪ್ರಹ್ಲಾದ, ಬಾಣ, ಬಲಿ, ಯಕ್ಷ, ವಿಭೀಷಣ ಮೊದಲಾದವರು ಸರ್ವ ಕಾಲದಲ್ಲಿಯೂ ಸತ್ಸಹವಾಸದಲ್ಲಿಯೇ ಆಸಕ್ತರಾಗಿ ಆ ಪರಮಾತ್ಮನ ಮಂಗಲಕರವಾದ ಪಾದಕಮಲಗಳಲ್ಲಿನ ಮಕರಂದವನ್ನೇ ಪಾನಮಾಡುತ್ತಾ ಕೊನೆಗೆ ಆತನ ಸಾನ್ನಿಧ್ಯವನ್ನೇ ಹೊಂದಿದರಲ್ಲವೇ ?

೪. ಇದರಂತೆಯೇ ಆ ಭಗವಂತನ ಚರಣಾರವಿಂದಗಳಲ್ಲಿರುವ ಮಕರಂದವನ್ನು ಪಾನಮಾಡುವ ದುಂಬಿಗಳೆನಿಸಿರುವ ನಾರದ, ಬೃಹಸ್ಪತಿ, ವಸಿಷ್ಠ, ಪರಾಶರ, ಸಾಂಖ್ಯಾಯನ, ಅಸಿತ, ಶುಕ, ಸನಕ ಮೊದಲಾದವರು ಯಾವೊಂದು ಫಲವನ್ನೂ ಅಪೇಕ್ಷಿಸದೆ ನಿರ್ಹೇತುಕವಾದ ಭಕ್ತಿಯುಳ್ಳವರಾಗಿ ಈ ಭೂಮಿಯಲ್ಲಿ ಸಂಚರಿಸುತ್ತಿರುವರು.

೫. ಮೇಲಿನವರಂತೆ ಇನ್ನೂ ಅನೇಕ ಮಂದಿ ಯತಿಗಳೂ, ಉತ್ಕಲ, ಅಂಗರಾಜ, ಭರತ, ಅರ್ಜುನ, ಮಿಥಿಲಾಧಿಪತಿ, ಜನಕ, ಗಾಧಿ, ಪ್ರಿಯವ್ರತ, ಯದು, ಅಂಬರೀಷ ಮೊದಲಾದ ರಾಜರ್ಷಿಗಳೂ, ಪರಮಹಂಸಶ್ರೇಷ್ಠರೂ ಆ ಶ್ರೀಕೃಷ್ಣನಲ್ಲಿ ಅವ್ಯಾಜವಾದ ಭಕ್ತಿಯನ್ನಿಟ್ಟು ಆತನ ಚರಣಾಮೃತವನ್ನು ಸವಿಸವಿದು ಮೈಮರೆಯುತ್ತಾ ಈ ಜಗತ್ತಿನಲ್ಲಿ ಸಂಚರಿಸುತ್ತಿರುವರು

ಮಂದೋದರೀ ಚ ಶಬರೀ ಚ ಪತಂಗಶಿಷ್ಯಾ-
ಸ್ತಾರಾ ತಥಾತ್ರಿವನಿತಾ ನಿಪುಣಾ ತ್ವಹಲ್ಯಾ ।
ಕುಂತೀ ತಥಾ ದ್ರುಪದರಾಜಸುತಾ ಸುಭಕ್ತಾ
ಏತಾಃ ಪರಂ ಪರಮಹಂಸಸಮಾಃ ಪ್ರಸಿದ್ಧಾಃ ॥ ೬ ॥

ಸುಗ್ರೀವವಾಲಿಸುತವಾತಸುತರ್ಕ್ಷರಾಜ-
ನಾಗಾರಿಗೃಧ್ರವರಕಾಕಭುಶುಂಡಿಮುಖ್ಯಾಃ ।
ಕುಬ್ಜಾದಿವಾಯಕಸುದಾಮಗುಹಾದಯೋಽನ್ಯೇ
ತತ್ಸಂಗಮೇತ್ಯ ಹರಿಭಕ್ತವರಾ ಬಭೂವುಃ ॥ ೭ ॥

ಕೃಷ್ಣಂ ನ ರೋಧಯತಿ ಧರ್ಮತಪೋ ನ ಯೋಗಃ
ಸಾಂಖ್ಯಂ ನ ಯಜ್ಞ ಉತ ತೀರ್ಥಯಮವ್ರತಾನಿ ।
ಛಂದಾಂಸಿ ಪೂರ್ತನಿಯಮಾವಥ ದಕ್ಷಿಣಾ ಚ
ನೇಷ್ಟಂ ನ ದಾನಮಥ ಭಕ್ತಿಮೃತೇ ನ ಕಶ್ಚಿತ್ ॥ ೮ ॥

---

೬. ಈ ಪುರುಷರಲ್ಲದೆ ಮಂಡೋದರಿ. ಮತಂಗಮಹರ್ಷಿಗಳ ಶಿಷ್ಯಳಾದ ಶಬರಿ, ತಾರೆ, ಅತ್ರಿಮಹರ್ಷಿಗಳ ಪತ್ನಿಯಾದ ಅನಸೂಯೆ, ಅಹಲ್ಯೆ. ಕುಂತಿ, ದ್ರೌಪದಿ ಮೊದಲಾದ ಸ್ತ್ರೀಯರೂ ಸಹ ತಮ್ಮ ಭಕ್ತ್ಯತಿಶಯದಿಂದ ಪರಮಹಂಸರೆಂಬ ಯತಿಶ್ರೇಷ್ಠರಿಗೆ ಸರಿಸಮರೆಂದು ಪ್ರಸಿದ್ಧಿ ಹೊಂದಿರುವರು.

೭. ಅಂತೆಯೇ ಸುಗ್ರೀವ, ಅಂಗದ. ಆಂಜನೇಯ. ಜಾಂಬವಂತ, ಗರುಡ, ಜಟಾಯು. ಕಾಕ (ಇಂದ್ರಪುತ್ರ) ಭುಸುಂಡಿ. ಕುಬ್ಜೆ. ನೇಯಿಗೆಯವನು, ಸುದಾಮ, ಗುಹ ಮೊದಲಾದವರೂ, ಇನ್ನೂ ಇತರರೂ ಆ ಸ್ವಾಮಿಯೊಡನೆ ಸಹವಾಸವನ್ನು ಹೊಂದಿ ಭಕ್ತವರೇಣ್ಯರೆನಿಸಿರುವರು.

೮. ಓ ರಾಜೇಂದ್ರ, ಭಕ್ತಿಯೊಂದನ್ನು ಬಿಟ್ಟರೆ ಮತ್ತೆ ಯಾವ ಧರ್ಮಕಾರ್ಯವಾಗಲಿ. ತಪಸ್ಸು, ಯೋಗ, ಸಾಂಖ್ಯ. ಯಜ್ಞಯಾಗಗಳಾಗಲಿ, ತೀರ್ಥಯಾತ್ರೆ, ಇಂದ್ರಿಯನಿಗ್ರಹ, ವ್ರತನಿಯಮಗಳಾಗಲಿ, ವೇದಾಧ್ಯಯನಗಳಾಗಲಿ, ತಟಾಕಾದಿ ನಿರ್ಮಾಣ, ದಕ್ಷಿಣೆ, ಹವನಹೋಮಾದಿಗಳು, ದಾನಮಾನಗಳಾಗಲಿ ಆ ಕೃಷ್ಣನನ್ನು ಹಿಡಿದು ನಿಲ್ಲಿಸಲಾರವು.

ಯಜ್ಞವ್ರತಾಧ್ಯಯನತೀರ್ಥತಪೋನಿಯೋಗೈ-
ರಿಷ್ಟಸ್ವಧರ್ಮನಿಯಮಾದಿಕಸಾಂಖ್ಯಯೋಗೈಃ ।
ಯತ್ಪ್ರಾಪ್ಯತೇ ತದಖಿಲಂ ಭವತೀಹ ಭಕ್ತ್ಯಾ
ಭಕ್ತೇಃ ಪದಂ ಹಿ ಕರ್ಹಿಚಿನ್ನ ಭವೇತ್ಕಿಲೈಭಿಃ ॥ ೯ ॥

ಉದ್ಧಾರಿಣೀ ಯಮಪುರಸ್ಯ ಚ ವಿಶ್ವರೂಪಾ-
ದುತ್ತಾರಿಣೀ ಭವಮಹಾರ್ಣವವಾರಿವೇಗಾತ್ ।
ಸಂಹಾರಿಣೀ ವಿಷಯಸಂಚಿತಕರ್ಮಣಾಂ ಚ
ಸತ್ಕಾರಿಣೀ ಹರಿಪದಸ್ಯ ಪರಾತ್ಪರಸ್ಯ ॥ ೧೦ ॥

ಶ್ರೀಕೃಷ್ಣದರ್ಶನರಸೋತ್ಸುಕಭಾವರಾಜ-
ದುದ್ಯದ್ವಸಂತಪರಮೋತ್ಸವಪಂಚಮೀಯಂ ।
ದಿವ್ಯಾಲತಾತಿಫಲಪಲ್ಲವಭಾರನಮ್ರಾ
ಸಂರಾಜತೇ ಹಿ ಸತತಂ ಕುಸುಮಾಕರಸ್ಯ ॥ ೧೧ ॥

---

೯. ಯಜ್ಞಯಾಗಗಳು, ವ್ರತೋಪವಾಸಗಳು, ವೇದಾಧ್ಯಯನ, ತೀರ್ಥಯಾತ್ರೆ, ತಪಶ್ಚರ್ಯೆ, ಇತರಯೋಗವಿಧಗಳು, ಇಷ್ಟವಾದ ದಾನಧರ್ಮಗಳು, ಸಾಂಖ್ಯಯೋಗಪರಿಜ್ಞಾನ, ಇವೆಲ್ಲವುಗಳಿಂದಲೂ ಏನನ್ನು ಸಾಧಿಸಬಹುದೋ ಅದೆಲ್ಲವನ್ನೂ ಭಕ್ತಿಯೊಂದೇ ಗಳಿಸಿಕೊಡುವುದು. ಇಷ್ಟಾದರೂ ಆ ಭಕ್ತಿಯ ಸ್ಥಾನವನ್ನು ಮಾತ್ರ ಮೇಲೆ ಹೇಳಿದವುಗಳಾವವೂ ಪಡೆಯಲಾರವು.

೧೦. ಈ ಭಕ್ತಿಯು ಯಮಪುರದಲ್ಲಿರುವ ನಾನಾ ನರಕಗಳಿಂದ ಉದ್ಧಾರ ಮಾಡುವಂತಹುದು. ಈ ಸಂಸಾರವೆಂಬ ಸಾಗರದ ಅಪಾರವಾದ ನೀರಿನ ಸೆಳತದಿಂದ ಪಾರುಗಾಣಿಸುವಂತಹುದು ಆರ್ಜಿಸಿದ ವಿಷಮವಾದ ಕರ್ಮರಾಶಿಗಳನ್ನು ನಾಶಪಡಿಸುವಂತಹುದು. ಮತ್ತು ಶ್ರೀಹರಿಯ ದಿವ್ಯವಾದ ಪರಮಪದವಿಯನ್ನು ದೊರಕಿಸಿಕೊಡುವಂತಹುದು.

೧೧. ಈ ಭಕ್ತಿಯು ಶ್ರೀಕೃಷ್ಣನ ಸಂದರ್ಶನ ಸುಖವನ್ನು ಪಡೆಯಬೇಕೆಂಬ ಹಿರಿಯಾಸೆಯಿಂದ ಮಿತಿಮೀರಿ ಸಂಭ್ರಮಪಡುತ್ತಿರುವವರಿಗೆ ಅಕಸ್ಮಾತ್ತಾಗಿ ದೊರೆತ ಬಹುಸಡಗರದ ಉತ್ಸವವೆನಿಸಿದ ವಸಂತಪಂಚಮಿಯು ಮತ್ತು ವಸಂತೋದ್ಯಾನದಲ್ಲಿ ಸರ್ವಕಾಲದಲ್ಲಿಯೂ ಫಲಪುಷ್ಪಗಳಿಂದ ನಿಬಿಡವಾಗಿರುವ ದಿವ್ಯವಾದ ಲತೆಯು.

ಸಂಮೋಹಕಾಲಘನಮಧ್ಯತಡಿತ್ಸ್ಫುರಂತೀ
　ಶಾಸ್ತ್ರಾರ್ಥದರ್ಶವಚಸಾಂ ಪದದೀಪಿಕೇಯಂ ।
ದೀಪಾವಲಿರ್ವಿಜಯತೇ ಜಯಕಾರ್ತಿಕಸ್ಯ
　ಜೇತುಂ ಗುಣಾನ್ವಿಜಯಿನೋ ದಶಮೀ ಜಯಸ್ಯ　　॥ ೧೨ ॥

ಸಾಂಖ್ಯಂ ಚ ಯೋಗ ಇತಿ ಪಾರ್ಶ್ವಗತೇ ಹಿ ದಂಡೇ
　ಕೀಲಾನಿ ಚಾತ್ರ ಶತಶೋ ಗುಣಭಾವಭೇದಾಃ ।
ಅಸ್ಯಾಃ ಕ್ರಮಾ ನವಕಥಾಶ್ರವಣಾದಯಶ್ಚ
　ಶ್ರೇಣೀಯಮಸ್ತಿ ಸರಲಾ ಭಗವತ್ಪದಸ್ಯ　　॥ ೧೩ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಜ್ಞಾನಖಂಡೇ ವ್ಯಾಸೋಗ್ರಸೇನ-
ಸಂವಾದೇ ಭಕ್ತ್ಯುತ್ಕರ್ಷವರ್ಣನಂ ನಾಮ
ಪಂಚಮೋಽಧ್ಯಾಯಃ

---

೧೨. ಮತ್ತು ಈ ಭಕ್ತಿಯು ಅಜ್ಞಾನವೆಂಬ ಕಾರ್ಮುಗಿಲಿನ ನಡುವೆ ಥಳ ಥಳಿಸುವ ಮಿಂಚಿನ ಬಳ್ಳಿಯೆನಿಸಿರುವುದು. ಶಾಸ್ತ್ರಾರ್ಥಗಳಲ್ಲಿ ಅರ್ಥವಾಗದಂತೆ ಬಹುಗಹನವಾಗಿರುವ ವಚನಗಳಿಗೆ ಮಾರ್ಗದರ್ಶನಮಾಡುವ ದೀವಟಿಗೆಯಾಗಿರುವುದು. ಮತ್ತು ಜಯಶಾಲಿಯಾದ ಕಾರ್ತಿಕಮಾಸದ ಗೆಲುವಿನ ದೀಪಮಾಲೆಯೊಂದು ಖ್ಯಾತಿವೆತ್ತಿರುವುದು. ಮತ್ತು ಎಲ್ಲಾ ಸದ್ಗುಣಗಳನ್ನೂ ಗೆದ್ದು ಸ್ವಾಧೀನಪಡಿಸಿ ಕೊಳ್ಳಲು ತೊಡಗುವ ವಿಜಯಯಾತ್ರೆಗೆ ಪ್ರಧಾನವೆನಿಸಿದ ಜಯಪ್ರದವಾದ ವಿಜಯ ದಶಮಿಯೆಂದು ಹೊಗಳಲ್ಪಟ್ಟಿರುವುದು.

೧೩. ಈ ಭಕ್ತಿಯು ಭಗವಂತನ ಸನ್ನಿಧಿಯನ್ನು ನೆಲಸುವಂತಹ ಒಂದು ಉತ್ತಮವಾದ ನಿಚ್ಚಣಿಗೆಯೆಂದು ತಿಳಿ. ಈ ನಿಚ್ಚಣಿಗೆಗೆ ಸಾಂಖ್ಯ ಮತ್ತು ಯೋಗ ಗಳೇ ಅಕ್ಕಪಕ್ಕದ ಬೊಂಬುಗಳು. ನಾನಾವಿಧವಾದ ಗುಣಪ್ರಭೇದಗಳೂ ಭಾವನಾ ಪ್ರಕಾರಗಳೂ ಇದರ ನೂರಾರು ಕೀಲುಗಳು. ಹರಿಕಥಾಶ್ರವಣಾದಿಗಳೇ ಇದರ ಮೆಟ್ಟಿಲುಗಳು. ಇಂತಹ ನಿಚ್ಚಣಿಗೆಯೇ ನೇರವಾಗಿ ಭಗವತ್ಸಾನ್ನಿಧ್ಯಕ್ಕೆ ಜನರನ್ನು ಕೊಂಡೊಯ್ಯುವುದು.

ಇಲ್ಲಿಗೆ ಶ್ರೀಗಾರ್ಗ್ಯಸಂಹಿತೆಯ ವಿಜ್ಞಾನಖಂಡದಲ್ಲಿ ಭಕ್ತ್ಯುತ್ಕರ್ಷವರ್ಣನವೆಂಬ
ಐದನೆಯ ಅಧ್ಯಾಯವು ಮುಗಿದುದು.

—|| ಶ್ರೀಃ ||—

—|| ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ||—

ಅಥ ಗಾರ್ಗಸಂಹಿತಾಯಾಂ

ವಿಜ್ಞಾನಖಂಡೇ

ಷಷ್ಠೋಽಧ್ಯಾಯಃ

|| ಉಗ್ರಸೇನ ಉವಾಚ ||

ಕರ್ಮಗೃಹೋ ಗೃಹಸ್ಥೋಽಯಂ ಶ್ರೀಕೃಷ್ಣಸ್ಯ ಮಹಾತ್ಮನಃ |
ಸೇವಾಂ ವೈ ಕೇನ ವಿಧಿನಾ ಕುರ್ಯಾತ್ತದ್ಬ್ರೂಹಿ ಮೇ ಮುನೇ || ೧ ||

ಭಕ್ತ್ಯಂಕುರೋ ಯಸ್ಯ ನಾಸ್ತಿ ವಾಸ್ತಿ ತಸ್ಯ ನ ವರ್ಧತೇ |
ತಸ್ಯ ಕೇನ ಪ್ರಕಾರೇಣ ಪ್ರಸನ್ನಃ ಸ್ಯಾದ್ಧರಿಃ ಸ್ವಯಂ || ೨ ||

ಆರನೆಯ ಅಧ್ಯಾಯವು

೧. ಅನಂತರ ಉಗ್ರಸೇನನು ವ್ಯಾಸಮಹರ್ಷಿಯನ್ನು ಕುರಿತು ಓ—ಮುನೀಂದ್ರ ಗೃಹಸ್ಥಾಶ್ರಮದಲ್ಲಿದ್ದುಕೊಂಡೇ ಸಕಲವಿಧವಾದ ಕರ್ಮಗಳನ್ನೂ ಆಚರಿಸಬಲ್ಲವನಾದ ಗೃಹಸ್ಥನು ಮಹಾತ್ಮನಾದ ಶ್ರೀಕೃಷ್ಣನ ಸೇವೆಯನ್ನು ಯಾವ ಪ್ರಕಾರದಿಂದ ಆಚರಿಸಬೇಕು ? ಅದನ್ನು ನನಗೆ ತಿಳಿಸು.

೨. ಯಾವನ ಹೃದಯದಲ್ಲಿ ಭಕ್ತಿಯು ಲೇಶಮಾತ್ರವಾದರೂ ಇಲ್ಲವೋ, ಅಥವಾ ಇದ್ದರೂ ತಾನಿದ್ದುದಕ್ಕಿಂತಲೂ ಹೆಚ್ಚಾಗಿ ಬೆಳೆಯದೋ ಅಂತಹ ಮನುಜನ ವಿಷಯದಲ್ಲಿ ಭಗವಂತನಾದ ಶ್ರೀಹರಿಯು ಪ್ರಸನ್ನನಾಗುವುದಾದರೂ ಹೇಗೆ ? ಇದನ್ನು ತಿಳಿಸಬೇಕೆನಲು,

॥ ಶ್ರೀವ್ಯಾಸ ಉವಾಚ ॥

ಯದಿ ಭಕ್ತ್ಯಂಕುರೋ ನ ಸ್ಯಾತ್ಸತ್ಸಂಗೇನ ಚ ಜಾಯತೇ ।
ಬಲಾದ್ವಿವರ್ಧತೇ ತಸ್ಮಾತ್ಸತಾಂ ಸಂಗಂ ಸಮಾಚರೇತ್ ॥ ೩ ॥

ಕೃಷ್ಣಸೇವಾವಿಧಿಂ ತುಭ್ಯಂ ವಕ್ಷ್ಯಾಮಿ ಸುಲಭಂ ಪರಂ ।
ಯಯಾ ಗೃಹಸ್ಥೋಽಯಂ ಶೀಘ್ರಂ ಶ್ರೀಕೃಷ್ಣಂ ಪ್ರಾಪ್ನುಯಾನ್ನೃಪ ॥ ೪ ॥

ಆಚಾರ್ಯಂ ಕುಲಸಂಭೂತಂ ಶ್ರೀಕೃಷ್ಣಧ್ಯಾನತತ್ಪರಂ ।
ಏತಾದೃಶಂ ಗುರುಂ ಕೃತ್ವಾ ಸಿದ್ಧೋ ಭವತಿ ಮಾನವಃ ॥ ೫ ॥

ಗುರೋಃ ಸೇವಾವಿಧಿಂ ಶಿಕ್ಷೇಚ್ಛ್ರೀಕೃಷ್ಣಸ್ಯ ಮಹಾತ್ಮನಃ ॥ ೬ ॥

---

೩. ವ್ಯಾಸಮಹರ್ಷಿಯಿಂತೆಂದನು :–ಓ ರಾಜೇಂದ್ರ, ಒಂದು ವೇಳೆ ಯಾವನಾದರೂ ಮನುಜನಿಗೆ ಭಗವದ್ಭಕ್ತಿಯು ಅಂಕುರಮಾತ್ರವಾದರೂ ಇಲ್ಲದಿದ್ದಲ್ಲಿ ಅದು ಸಜ್ಜನರ ಸಹವಾಸದಿಂದ ಅವನಲ್ಲಿ ಮೊಳೆಯುವುದು. ಅಷ್ಟೇ ಅಲ್ಲ, ಬಹುಬೇಗನೆ ಆ ಸತ್ಸಹವಾಸದ ಮಹಿಮೆಯಿಂದ ಆ ಭಕ್ತಿಯು ರೂಢಮೂಲವಾಗಿ ಶಾಖೋಪಶಾಖೆಯಾಗಿ ಬೆಳೆಯುವುದು. ಆದುದರಿಂದಲೇ ಸಜ್ಜನರ ಸಹವಾಸವನ್ನು ಅವಶ್ಯವಾಗಿ ಮಾಡಬೇಕು.

೪. ಓ ರಾಜೇಂದ್ರ, ಯಾವುದನ್ನು ಅವಲಂಬಿಸಿದ ಮಾತ್ರದಿಂದಲೇ ಗೃಹಸ್ಥನಾದವನು ಶ್ರೀಕೃಷ್ಣನನ್ನು ಪಡೆಯಬಹುದೋ ಅಂತಹ ಪರಮೋತ್ತಮವೂ, ಅತಿ ಸುಲಭೋಪಾಯವೂ ಎನಿಸಿದ ಆ ಶ್ರೀಕೃಷ್ಣಸೇವಾಪ್ರಕಾರವನ್ನು ನಿನಗೀಗ ತಿಳಿಸುವೆನು.

೫. ಶ್ರೀಕೃಷ್ಣನನ್ನು ಆರಾಧಿಸಬೇಕೆನ್ನುವ ಮಾನವನು ಮೊತ್ತಮೊದಲು ಸತ್ಕುಲಪ್ರಸೂತನೂ, ಸರ್ವದಾ ಶ್ರೀಕೃಷ್ಣಧ್ಯಾನತತ್ಪರನೂ ಆದ ಆಚಾರ್ಯನೊಬ್ಬನನ್ನು ತನ್ನ ಗುರುವಾಗಿ ಆರಿಸಿಕೊಳ್ಳಬೇಕು.

೬. ಆ ಆಚಾರ್ಯಪುರುಷನಿಂದ ಶ್ರೀಕೃಷ್ಣಸೇವಾಪ್ರಕಾರವನ್ನು ಸರಿಯಾಗಿ ಕೇಳಿ ತಿಳಿದುಕೊಳ್ಳಬೇಕು.

ವಿಷ್ಣುದೀಕ್ಷಾವಿಹೀನಸ್ಯ ಸರ್ವಂ ಭವತಿ ನಿಷ್ಫಲಂ ।
ನಿರ್ಗುರೋರ್ದರ್ಶನಂ ಕೃತ್ವಾ ಹತಪುಣ್ಯೋ ಭವೇನ್ನರಃ ॥ ೭ ॥

ಉತ್ತರಾಭಿಮುಖಂ ಶಶ್ವತ್ಕಾರಯೇದ್ಧರಿಮಂದಿರಂ ।
ತತ್ರ ಸಿಂಹಾಸನಂ ಪ್ರೋಚ್ಚಂ ಸಪೀಠಂ ಕುಂಭಮಂಡಿತಂ ॥ ೮ ॥

ಸಚ್ಚಿದಾನಂದನಾಮ ಸ್ಯಾತ್ಸೋಪಾನತ್ರಯಭೂಷಿತಂ ।
ಮಹಾರ್ಹವಸ್ತ್ರೈರಾಚ್ಛನ್ನಂ ತತ್ರ ತೂಲ್ಯಾಸನಂ ಮೃದು ॥ ೯ ॥

ಪಾರ್ಶ್ವೋಪಬರ್ಹಣಯುತಂ ಸ್ಫುರದ್ಧೇಮಾಂಬರಾವೃತಂ ।
ನಾನಾಚಿತ್ರಯುತೈಃ ಕುಡ್ಯೈರಂತಃಪಟಸಮನ್ವಿತೈಃ ॥ ೧೦ ॥

---

೭. ಆ ರೀತಿ ಆಚಾರ್ಯಮುಖದಿಂದ ವಿಷ್ಣುಸೇವಾದೀಕ್ಷೆಯನ್ನು ಪಡೆಯದಿದ್ದಲ್ಲಿ ಮಾನವನು ಮಾಡಿದ ಭಗವದಾರಾಧನೆಯೆಲ್ಲವೂ ನಿಷ್ಪ್ರಯೋಜನವೆನಿಸುವುದು. ಮತ್ತು ಅಂತಹ ಆಚಾರ್ಯಹೀನನನ್ನು ಸಂದರ್ಶಿಸಿದ ಮಾನವನು ತಾನು ಮಾಡಿದ್ದ ಪುಣ್ಯಫಲವನ್ನು ಕಳೆದುಕೊಳ್ಳುವನು.

೮. ಶ್ರೀಕೃಷ್ಣನ ಮಂದಿರವನ್ನು ಯಾವಾಗಲೂ ಉತ್ತರದಿಕ್ಕಿಗಭಿಮುಖವಾಗಿ ರಚಿಸಬೇಕು. ಅಲ್ಲಿ ದಿವ್ಯವಾದ ಕಲಶಗಳಿಂದ ಅಲಂಕೃತವಾದ ಅತ್ಯುನ್ನತವಾದ ಸಿಂಹಪೀಠವನ್ನು ಸಿದ್ಧಗೊಳಿಸಬೇಕು.

೯. ಆ ಸಿಂಹಾಸನಕ್ಕೆ ಸಚ್ಚಿದಾನಂದವೆಂಬ ದಿವ್ಯನಾಮವು ಅಂಕಿತವಾಗಿರುವುದು. ಮತ್ತು ಅದಕ್ಕೆ ಮೂರು ಮೆಟ್ಟಲುಗಳಿರಬೇಕು. ಆ ಸಿಂಹಾಸನವನ್ನು ಹೆಚ್ಚು ಬೆಲೆ ಬಾಳುವಂತಹ ಉತ್ತಮವಾದ ವಸ್ತ್ರಗಳಿಂದ ಅಲಂಕರಿಸಬೇಕಲ್ಲದೆ ಅದರ ಮೇಲೆ ಮೃದುವಾದ ಮೆತ್ತೆಯನ್ನು ಹಾಸಬೇಕು.

೧೦. ಆ ಮೆತ್ತೆಯ ಅಕ್ಕಪಕ್ಕಗಳಲ್ಲಿ ಒಂದೊಂದು ಒರಗುದಿಂಬುಗಳಿರಬೇಕು. ಅದರ ಮೇಲೆ ಚಿನ್ನದ ಸರಿಗೆಗಳಿಂದ ರಚಿಸಿದ ದಿವ್ಯವಾದ ವಸ್ತ್ರವನ್ನು ಹಾಸಬೇಕು. ಆ ದೇವಾಲಯದ ಒಳಗಡೆ ಗೋಡೆಗಳ ಮೇಲೆ ತೆಳುವಾದ ಬಟ್ಟೆಗಳನ್ನು ಇಳಿಯಬಿಡಬೇಕಲ್ಲದೆ ವಿಧವಿಧವಾದ ಚಿತ್ರಗಳನ್ನು ಬರೆದು ಅವನ್ನು ಅಲಂಕರಿಸಬೇಕು.

ಸರ್ವತೋ ಮಂಡಲೈಸ್ತದ್ವತ್ತೋರಣೈಃ ಸಮಲಂಕೃತಂ ।
ಗವಾಕ್ಷವಾರಿಯಂತ್ರಾಢ್ಯಂ ಚತುಃಶಾಲಸುಜಾಲಕೈಃ ॥ ೧೧ ॥

ರಾಜತಪ್ರಾಂಗಣೋ ದೇಶಃ ಸಭಾಮಂಟಪಮಂಡಿತಃ ।
ತತ್ರ ಪ್ರಾಂಗಣಮಧ್ಯೇ ತು ತುಲಸೀಮಂದಿರಂ ಶುಭಂ ॥ ೧೨ ॥

ಮಂದಿರಸ್ಯ ಬಹಿರ್ದ್ವಾರಿ ಕಾರಯೇದ್ದೀಪಿಕಾದ್ವಯಂ ।
ತಥಾ ವೈ ಕೃತ್ರಿಮಂ ರಾಜನ್ಸಿಂಹದ್ವಯಮಧಿಷ್ಠಿತಂ ॥ ೧೩ ॥

ಸುವರ್ಣಶಿಖರಸ್ಯಾಧಶ್ಚಕ್ರಂ ಚ ಶಿಖರೋಪರಿ ।
ದ್ವಾರೇಪಿ ಹರಿನಾಮಾನಿ ಪ್ರಾಲೇಖ್ಯಾನಿ ಶುಭಾನಿ ಚ ॥ ೧೪ ॥

---

೧೧. ಇದರಂತೆ ಆ ದೇವಾಲಯವನ್ನು ಸರ್ವತೋಭದ್ರವೆಂಬ ಮಂಡಲಗಳಿಂದಲೂ, ತೋರಣಗಳಿಂದಲೂ ಚೆನ್ನಾಗಿ ಸಜ್ಜುಗೊಳಿಸಬೇಕಲ್ಲದೆ ಗಾಳಿಬೆಳಕುಗಳು ಬರುವಂತೆ ರಚಿಸಿದ ದೊಡ್ಡ ದೊಡ್ಡ ಕಿಟಿಕಿಗಳಿಂದಲೂ, ನೀರಿನ ಚಿಲುಮೆಗಳಿಂದಲೂ ಅದರ ಸೊಬಗನ್ನು ಹೆಚ್ಚಿಸಬೇಕು. ಇದರಂತೆ ಗರ್ಭಾಂಗಣಕ್ಕೆ ಹೊಂದಿದಂತೆ ವಿಶಾಲವಾದ ಸಭಾಂಗಣವಿರಬೇಕು.

೧೨. ಆ ಸಭಾಂಗಣದ ಮುಂದೆ ವಿಸ್ತಾರವಾದ ರಜತನಿರ್ಮಿತವಾದ ಅಂಗಳವೊಂದನ್ನು ಏರ್ಪಡಿಸಿ, ಅದರ ನಡುವೆ ಶುಭಕರವಾದ ತುಲಸಿಯ ಬೃಂದಾವನವೊಂದನ್ನು ರಚಿಸಬೇಕು.

೧೩. ಆ ದೇವಾಲಯದ ಹೊರಬಾಗಿಲಬಳಿ ಎರಡು ದೀಪಸ್ತಂಭಗಳನ್ನೂ, ಆ ದೀಪಸ್ತಂಭಗಳನ್ನು ಹೊತ್ತು ನಿಂತಿರುವಂತೆ ಎರಡು ಸಿಂಹಗಳನ್ನೂ ನಿರ್ಮಿಸಬೇಕು.

೧೪. ಮತ್ತು ಮಹಾದ್ವಾರದ ಗೋಪುರದ ಮೇಲೆ ಚಿನ್ನದ ಶಿಖರವನ್ನೂ, ಅದರ ಕೆಳಗೆ ಚಕ್ರವನ್ನೂ ರಚಿಸಬೇಕು. ಇಷ್ಟೇ ಅಲ್ಲದೆ ಶಿಖರದ ಮೇಲೂ ಬಾಗಿಲಿನ ಮೇಲೂ ಮಂಗಲಕರವಾದ ಶ್ರೀಹರಿಯ ದಿವ್ಯನಾಮಗಳನ್ನು ಚೆನ್ನಾಗಿ ಕಾಣುವಂತೆ ಸ್ಫುಟವಾಗಿ ಬರೆಯಬೇಕು.

ಶಂಖಂ ಪದ್ಮಂ ಗದಾಶಾರ್ಙ್ಗಮಾಲೇಖ್ಯಂ ಭಿತ್ತಿಪಾರ್ಶ್ವಯೋಃ ।
ಇಷುಧೀ ಚ ತಥಾ ಬಾಣಾಃ ಸವ್ಯೇ ದಕ್ಷಿಣ ಏವ ಚ ॥ ೧೫ ॥

ತಥಾ ಮಂದಿರಪೃಷ್ಠೇ ವೈ ಶತಚಂದ್ರಂ ಚ ನಂದಕಂ ।
ಹಲಂ ಚ ಮುಸಲಂ ಚೈವ ಲೇಖನೀಯಂ ಪ್ರಯತ್ನತಃ ॥ ೧೬ ॥

ಸಿಂಹಾಸನಸ್ಯ ಪೃಷ್ಠೇ ತು ಗೋಪ್ಯೋ ಗಾವಸ್ತಥೈವ ಚ ।
ಗೋಪಾಲಾಸ್ತತ್ರ ಸೋಪಾನೇ ಕಪಾಟೇ ವಿಜಯೋ ಜಯಃ ॥ ೧೭ ॥

ದೇಹಲ್ಯಾಂ ಕಲ್ಪವೃಕ್ಷಶ್ಚ ಸ್ತಂಭೇಷು ಚ ಲತಾಂ ಶುಭಾಂ ।
ಯತ್ರ ತತ್ರ ಚ ಕುಡ್ಯೇಷು ಶ್ರೀಗಂಗಾ ಪಾಪಹಾರಿಣೀ ॥ ೧೮ ॥

---

೧೫. ಇದರಂತೆ ದೇವಾಲಯದ ಒಳಗಡೆಯಿರುವ ಎಡಬಲದ ಗೋಡೆಗಳ ನಡುವೆ ಎಡಗಡೆಯ ಗೋಡೆಯ ಮೇಲೆ ಶಂಖ, ಚಕ್ರ, ಪದ್ಮ, ಗದೆ, ಶಾರ್ಙ್ಗ ಧನುಸ್ಸು ಇವುಗಳನ್ನು ಸೊಗಸಾಗಿ ಚಿತ್ರಿಸಬೇಕು. ಮತ್ತು ಬಲಗಡೆಯ ಗೋಡೆಯ ಮೇಲೆ ಬತ್ತಳಿಕೆಗಳನ್ನೂ ಬಾಣಗಳನ್ನೂ ಚಿತ್ರಿಸಬೇಕು.

೧೬. ಬಳಿಕ ದೇವಾಲಯದ ಹಿಂಬದಿಯ ಗೋಡೆಯ ಮೇಲೆ ಶತಚಂದ್ರ ವೆಂಬ ಆಯುಧವನ್ನೂ, ನಂದಕವೆಂಬ ಕತ್ತಿಯನ್ನೂ, ಹಲ ಮುಸಲಾಯುಧಗಳನ್ನೂ ಚೆನ್ನಾಗಿ ಬರೆಯಬೇಕು.

೧೭. ಅದರಂತೆ ಸಿಂಹಾಸನದ ಹಿಂಬದಿಯ ಒರಗಿಕೊಳ್ಳುವ ಹಲಗೆಯ ಮೇಲೆ ಗೋಪಿಯರನ್ನೂ ಗೋವುಗಳನ್ನೂ ಚಿತ್ರಿಸುವುದಲ್ಲದೆ, ಆ ಸಿಂಹಪೀಠದ ಸೋಪಾನದ ಮೇಲೆ ಗೋಪಾಲಕರನ್ನೂ, ಅಕ್ಕಪಕ್ಕದ ಬಾಗಿಲುಗಳ ಮೇಲೆ ಜಯ ವಿಜಯರನ್ನೂ,

೧೮. ಹೊಸ್ತಲಿನ ಮೇಲೆ ಕಲ್ಪವೃಕ್ಷವನ್ನೂ, ಕಂಭಗಳ ಮೇಲೆ ಕಲ್ಪಲತೆ ಗಳನ್ನೂ ಚಿತ್ರಿಸಬೇಕು. ಮತ್ತು ಗೋಡೆಗಳ ಮೇಲೆ ಅಲ್ಲಲ್ಲಿ ಪಾಪಹಾರಿಣಿಯಾದ ಗಂಗೆಯನ್ನೂ,

ವೃಂದಾವನಂ ಗೋವರ್ಧನಂ ಯಮುನಾ ಪುಲಿನಾನಿ ಚ ।
ತಥಾ ವೈ ಚೀರಹರಣಮಾಲೇಖ್ಯಂ ರಾಸಮಂಡಲಂ　　॥ ೧೯ ॥

ಚಿತ್ರಕೂಟಃ ಪಂಚವಟೀ ಲೇಖನೀಯಂ ಪ್ರಯತ್ನತಃ ।
ರಾಮರಾವಣಯೋರ್ಯುದ್ಧಂ ಜಾನಕೀಹರಣಂ ವಿನಾ　　॥ ೨೦ ॥

ದಶಾವತಾರಚಿತ್ರಾಣಿ ನರನಾರಾಯಣಾಶ್ರಮಃ ।
ಸಪ್ತಪುರ್ಯಸ್ತ್ರಯೋ ಗ್ರಾಮಾ ನವಾರಣ್ಯಂ ನವೋಷರಾಃ　　॥ ೨೧ ॥

ಏವಂ ಲಿಖಿತ್ವಾ ಚಿತ್ರಾಣಿ ಮಂದಿರಂ ಕಾರಯೇದ್ಬುಧಃ ।
ವಂಶೀಭಾವೋದ್ಯತಕರಂ ವಕ್ರೀಭೂತಾಂಘ್ರಿದಕ್ಷಿಣಂ　　॥ ೨೨ ॥

---

೧೯. ವೃಂದಾವನ, ಗೋವರ್ಧನಶೈಲ, ಯಮುನಾನದಿಯ ಸೈಕತಪ್ರದೇಶ, ಗೋಪೀವಸ್ತ್ರಾಪಹರಣ, ರಾಸಲೀಲೆ ಮೊದಲಾದವುಗಳನ್ನೂ ರಮಣೀಯವಾಗಿ ಚಿತ್ರಿಸಬೇಕು.

೨೦. ಇವಲ್ಲದೆ ಸೀತಾಪಹರಣದ ದೃಶ್ಯವೊಂದನ್ನು ಬಿಟ್ಟು, ಉಳಿದ ರಾಮಾಯಣದಲ್ಲಿನ ಚಿತ್ರಕೂಟ, ಪಂಚವಟೀ, ರಾಮರಾವಣಯುದ್ಧ ಮೊದಲಾದ ದೃಶ್ಯಗಳನ್ನು ಬರೆಸಬೇಕು.

೨೧. ಮತ್ತು ದಶಾವತಾರದ ಚಿತ್ರಗಳನ್ನೂ, ನರನಾರಾಯಣರ ಆಶ್ರಮವನ್ನೂ, ಪ್ರಖ್ಯಾತಗಳಾದ ಕಾಶೀ, ಕಾಂಚೀ, ಅಯೋಧ್ಯಾ, ದ್ವಾರಾವತೀ ಮೊದಲಾದ ಸಪ್ತಮಹಾನಗರಿಗಳನ್ನೂ, ಗ್ರಾಮತ್ರಯಗಳನ್ನೂ, ದಂಡಕಾದಿ ನವಾರಣ್ಯಗಳನ್ನೂ, ನವಊಷರಕ್ಷೇತ್ರಗಳನ್ನೂ ಸೊಗಸಾಗಿ ಚಿತ್ರಿಸಬೇಕು.

೨೨. ಈ ರೀತಿಯಾಗಿ ಪ್ರಾಜ್ಞನಾದವನು ಶ್ರೀಹರಿಯ ಮಂದಿರವನ್ನೂ ರಚಿಸಬೇಕು. ಇಂತಹ ಮಂದಿರದಲ್ಲಿ ಆರಾಧನೆಗೆ ಯೋಗ್ಯವಾದ ಶ್ರೀಕೃಷ್ಣನ ದಿವ್ಯ ವಿಗ್ರಹವನ್ನು ಪ್ರತಿಷ್ಠೆಮಾಡಬೇಕು. ಅಂತಹ ಆರಾಧನೆಗೆ ಅತ್ಯುತ್ಕೃಷ್ಟವಾದ ಪೂಜಾವಿಗ್ರಹವಾವುದೆಂದರೆ— ಕೊಳಲನ್ನು ಧರಿಸಲು ಅನುವಾದ ರೀತಿಯಲ್ಲಿ ಕೈಯನ್ನು ಹಿಡಿದು, ಬಲಗಾಲನ್ನು ಸ್ವಲ್ಪ ಬಾಗಿಸಿ ಮಡಿಸಿಕೊಂಡು ನಿಂತಿರುವ ಹತ್ತು ಹನ್ನೆರಡು ವಯಸ್ಸಿನೊಳಗೆ ಇರುವ ಶ್ರೀಕೃಷ್ಣನ ಮುದ್ದಾದ ವಿಗ್ರಹ.

ಕಿಶೋರಾಕೃತಿಕೃಷ್ಣಸ್ಯ ರೂಪಂ ಸೇವ್ಯತಮಂ ಸ್ಮೃತಂ ।
ತತ್ಪ್ರತಿಷ್ಠಾಂ ವಿಧಾಯಾಶು ಗುರುಹಸ್ತೇನ ಮಂದಿರೇ ॥ ೨೩ ॥

ಭಕ್ತಃ ಪರಮಯಾ ಭಕ್ತ್ಯಾ ಸ್ಥಾಪಯೇತ್ತತ್ಪರೋ ಭವೇತ್ ।
ತತ್ಪ್ರಸಾದೇ ಚ ರಸನಾಂ ಘ್ರಾಣಂ ಚ ತುಲಸೀದಲೇ ॥
ನ್ಯಸೇತ್ಕರ್ಣೌ ತತ್ಕಥಾಯಾಮೇವಂ ಸೇವಾಪರೋ ಭವೇತ್ ॥ ೨೪ ॥

ಅಹರ್ನಿಶಂ ಕೃಷ್ಣಸೇವಾಂ ಯಃ ಕರೋತಿ ಚ ಭಾವವಿತ್ ।
ತಂ ಪ್ರೇಮಲಕ್ಷಣಂ ಭಕ್ತಂ ವಿದುರ್ಭಾಗವತೋತ್ತಮಾಃ ॥ ೨೫ ॥

ಅಶ್ವಮೇಧಸಹಸ್ರಾಣಿ ರಾಜಸೂಯಶತಾನಿ ಚ ।
ರಾಜರ್ಷೇ ಶ್ರೀಕೃಷ್ಣಸೇವಾಯಾಃ ಕಲಾಂ ನಾರ್ಹಂತಿ ಷೋಡಶೀಂ ॥ ೨೬ ॥

---

೨೩. ಇಂತಹ ವಿಗ್ರಹವನ್ನು ಮೇಲೆ ಹೇಳಿದ ರೀತಿಯಲ್ಲಿ ರಚಿಸಲ್ಪಟ್ಟ ದೇವಮಂದಿರದಲ್ಲಿ ಭಕ್ತನಾದವನು ಅತಿಶಯವಾದ ಭಕ್ತಿಯಿಂದ ಗುರುಗಳ ಕೈಯಲ್ಲಿ ಪ್ರತಿಷ್ಠೆ ಮಾಡಿಸಬೇಕು.

೨೪. ಆ ಪ್ರತಿಷ್ಠೆಯನ್ನು ಮಾಡಿಸಿದನಂತರ ಭಕ್ತನು ಸರ್ವರೀತಿಯಲ್ಲಿಯೂ ಸ್ವಾಮಿಯ ಸೇವೆಯಲ್ಲಿ ತೊಡಗಬೇಕು. ಆ ಸ್ವಾಮಿಯ ನೈವೇದ್ಯವನ್ನು ಪ್ರಾಶನ ಮಾಡುವುದರಲ್ಲಿ ತನ್ನ ಜಿಹ್ವೆಯನ್ನೂ, ಆತನಿಗೆ ಅರ್ಪಿಸಿದ ತುಲಸೀದಲದ ಪರಿಮಲಾಸ್ವಾದನೆಯಲ್ಲಿ ತನ್ನ ನಾಸಿಕೆಯನ್ನೂ, ಆತನ ದಿವ್ಯಕಥಾಶ್ರವಣದಲ್ಲಿ ತನ್ನ ಶ್ರೋತ್ರಯುಗಲವನ್ನೂ ಸಂಪೂರ್ಣವಾಗಿ ನೆಲೆಗೊಳಿಸಿ ಆ ಭಗವತ್ಸೇವೆಯಲ್ಲಿ ತೊಡಗಬೇಕು.

೨೫. ಈ ರೀತಿ ನಿಜವಾದ ಹೃದಯದಿಂದ ಹಗಲಿರುಳೂ ಆ ಶ್ರೀಹರಿಯನ್ನು ಆರಾಧಿಸಿದಲ್ಲಿ ಅಂತಹ ಆರಾಧಕನನ್ನು ಭಗವದ್ಭಕ್ತಾಗ್ರಣಿಗಳಾದ ಸಜ್ಜನರು, ಪ್ರೇಮಸ್ವರೂಪವಾದ ಭಕ್ತಿಯನ್ನು ನಿಜವಾಗಿಯೂ ಅವಲಂಬಿಸಿದ ಭಕ್ತಶ್ರೇಷ್ಠನೆಂಬುದಾಗಿ ತಿಳಿಯುವರು.

೨೬. ಓ ಯಾದವೇಂದ್ರ, ಸಹಸ್ರ ಅಶ್ವಮೇಧಯಾಗಗಳಾಗಲಿ, ನೂರು ರಾಜಸೂಯಯಾಗಗಳಾಗಲಿ ಆ ಶ್ರೀಕೃಷ್ಣನ ಭಕ್ತಿಯುತವಾದ ಸೇವೆಯ ಹದಿನಾರನೇ ಒಂದು ಪಾಲಿನಷ್ಟು ಅರ್ಹತೆಯನ್ನೂ ಹೊಂದಲಾರವು.

ಶ್ರೀಕೃಷ್ಣದೇಶಿಕಸ್ಯಾಪಿ ಯಃ ಕುರ್ಯಾದ್ದರ್ಶನಂ ನರಃ ।
ಕೋಟಿಜನ್ಮಕೃತೈಃ ಪಾಪೈರ್ಮುಚ್ಯತೇ ನಾತ್ರ ಸಂಶಯಃ ॥ ೨೭ ॥

ದೇಹಾಂತೇ ತಂ ಸಮಾನೇತುಂ ಶ್ಯಾಮಸುಂದರವಿಗ್ರಹಾಃ ।
ರಥಂ ನೀತ್ವಾ ಪ್ರಧಾವಂತಿ ಗೋಲೋಕಾತ್ಕೃಷ್ಣಪಾರ್ಷದಾಃ ॥ ೨೮ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಜ್ಞಾನಖಂಡೇ ವ್ಯಾಸೋಗ್ರಸೇನ-
ಸಂವಾದೇ ಹರಿಮಂದಿರಪ್ರತಿಷ್ಠಾವರ್ಣನಂ ನಾಮ
ಷಷ್ಠೋಽಧ್ಯಾಯಃ

---

೨೭. ಅಷ್ಟೇ ಅಲ್ಲ. ಆ ಶ್ರೀಕೃಷ್ಣಸೇವೆಯನ್ನು ಉಪದೇಶಿಸಿದ ಆಚಾರ್ಯನ ಸಂದರ್ಶವನ್ನು ಮಾಡಿದರೂ ಸಾಕು, ಕೋಟಿಜನ್ಮಗಳಿಂದ ಗಳಿಸಿದ್ದ ಪಾಪರಾಶಿಯಿಂದಲೂ ಮಾನವನು ಬಿಡುಗಡೆಹೊಂದುವನು.

೨೮. ಅಂತಹ ಭಕ್ತನು ತನ್ನ ಜಡದೇಹವನ್ನು ತ್ಯಜಿಸುವಾಗ ಶ್ಯಾಮಲವಾದ ದೇಹಕಾಂತಿಯಿಂದ ರಮಣೀಯವಾಗಿ ಒಪ್ಪುತ್ತಿರುವ ಆ ಶ್ರೀಕೃಷ್ಣನ ಅನುಚರರು ಗೋಲೋಕದಿಂದ ದಿವ್ಯವಾದ ರಥವನ್ನು ತೆಗೆದುಕೊಂಡು ಬಂದು ಆ ಭಕ್ತನನ್ನು ಕೊಂಡೊಯ್ಯಲು ಓಡೋಡಿ ಬರುವರು.

ಇಲ್ಲಿಗೆ ಶ್ರೀ ಗಾರ್ಗ್ಯಸಂಹಿತೆಯ ವಿಜ್ಞಾನಖಂಡದಲ್ಲಿ ಹರಿಮಂದಿರ-
ಪ್ರತಿಷ್ಠಾವರ್ಣನವೆಂಬ ಆರನೆಯ ಅಧ್ಯಾಯವು ಮುಗಿದುದು.

— ॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಜ್ಞಾನಖಂಡೇ

ಸಪ್ತಮೋಽಧ್ಯಾಯಃ

॥ ಶ್ರೀ ವೇದವ್ಯಾಸ ಉವಾಚ ॥

ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ಕಶಿಪೋಶ್ಚ ಮುದಾ ನೃಪ ।
ಗುರೋರ್ನಾಮ ಚ ಗೋವಿಂದನಾಮಾನಿ ಪ್ರವದನ್ಮುಹುಃ ॥ ೧ ॥

ಭೂಮಿಂ ನತ್ವಾ ನ್ಯಸೇತ್ಪಾದಂ ಜಲಂ ಸ್ಪೃಷ್ಟ್ವಾ ಹರೇಜ್ಜನಃ ।
ಉಪವಿಶ್ಯಾಸನೇ ಶೀಘ್ರಂ ಸಕಾಮಂ ಯೋ ಯಥಾಸುಖಂ ॥ ೨ ॥

ಏಳನೆಯ ಅಧ್ಯಾಯವು

೧. ವ್ಯಾಸಮಹರ್ಷಿಯು ಮತ್ತೆ ಇಂತೆಂದು ನುಡಿದನು—ಎಲೈ ರಾಜಶ್ರೇಷ್ಠನೆ, ಕೇಳು. ಭಕ್ತನಾದವನು ಬೆಳಗಿನ ಜಾವ ಬ್ರಾಹ್ಮಮುಹೂರ್ತದಲ್ಲಿ ಹಾಸಿಗೆಯಿಂದೆದ್ದು ಸಂತೋಷದಿಂದ ತನ್ನ ಗುರುವಿನ ನಾಮಗಳನ್ನೂ ಶ್ರೀಕೃಷ್ಣನ ನಾಮಾವಳಿಯನ್ನೂ ಪುನಃ ಪುನಃ ಬಾಯಲ್ಲಿ ಉಚ್ಚರಿಸುತ್ತಾ,

೨. ಭೂಮಿಯನ್ನು ನಮಸ್ಕರಿಸಿದನಂತರ ಅದರ ಮೇಲೆ ಕಾಲನ್ನಿಟ್ಟು ಎದ್ದು ಬಂದು ಕೈಕಾಲುಗಳನ್ನು ತೊಳೆದುಕೊಂಡು ಒಂದುಕಡೆ ತನ್ನಿಷ್ಟಬಂದಂತೆ ಸುಖವಾದ ಆಸನದಲ್ಲಿ ಕುಳಿತು,

ಹಸ್ತಾವುತ್ಸಂಗ ಆದಾಯ ಶ್ವಾಸಜಿತ್ಪ್ರಾಣಮಾಸ್ಥಿತಃ ।
ಜ್ಞಾನಮುದ್ರಾಧರಂ ಶಾಂತಂ ಶ್ರೀಗುರುಂ ಸ್ವಸ್ತಿಕಾಸನಂ ॥ ೩ ॥

ಧ್ಯಾತ್ವಾ ಕೃಷ್ಣಂ ಪರಂ ಧ್ಯಾಯೇದ್ಭಕ್ತ ಏಕಾಗ್ರಮಾನಸಃ ।
ಕಿಶೋರಂ ಶ್ಯಾಮಲಂ ಹೃದ್ಯಂ ವಂಶೀವೇತ್ರವಿಭೂಷಿತಂ ॥ ೪ ॥

ಏವಂ ಕೃತ್ವಾ ಹರೇರ್ಧ್ಯಾನಂ ಪುನರ್ಗಚ್ಛೇದ್ಬಹಿಃಸ್ಥಲಂ ।
ತಚ್ಛೌಚಂ ಶೃಣು ರಾಜೇಂದ್ರ ಗೃಹಸ್ಥಸ್ಯ ಯಥಾತಥಂ ॥ ೫ ॥

ಅಶ್ವಕ್ರಾಂತೇತಿ ಮಂತ್ರೇಣ ಮೃತ್ಸ್ನಯಾ ಚ ಜಲೇನ ಚ ।
ಏಕಾ ಲಿಂಗೇ ಗುದೇ ತಿಸ್ರಸ್ತಥಾ ವಾಮಕರೇ ದಶ ॥ ೬ ॥

---

೩. ತನ್ನೆರಡು ತೊಡೆಗಳ ನಡುವೆ ಅಂಗೈಗಳೆರಡನ್ನೂ ಒಂದರ ಮೇಲೆ ಒಂದು ಬರುವಂತೆ ಇಟ್ಟುಕೊಂಡು ಪ್ರಾಣಾಯಾಮವನ್ನು ಮಾಡಿ ಶ್ವಾಸವನ್ನು ನಿರೋಧಿಸಬೇಕು. ಅನಂತರ ಜ್ಞಾನಮುದ್ರೆಯನ್ನು ಧರಿಸಿ ಸ್ವಸ್ತಿಕಾಸನದಲ್ಲಿ ಶಾಂತನಾಗಿ ಕುಳಿತಿರುವಂತೆ ತನ್ನ ಗುರುವನ್ನು ಭಾವಿಸಿ ಧ್ಯಾನಮಾಡಿದನಂತರ,

೪. ಏಕಾಗ್ರಚಿತ್ತದಿಂದ, ಶ್ಯಾಮಲವಾದ ದೇಹಕಾಂತಿಯಿಂದ ಒಪ್ಪುತ್ತಾ, ಒಂದು ಕೈಯಲ್ಲಿ ಕೊಳಲನ್ನೂ ಮತ್ತೊಂದು ಕೈಯಲ್ಲಿ ಬೆತ್ತವನ್ನೂ ಹಿಡಿದು, ರಮಣೀಯವಾದ ಆಕಾರದಿಂದ ಮೆರೆಯುತ್ತಿರುವ ಶ್ರೀಕೃಷ್ಣನ ಕಿಶೋರವಯಸ್ಸಿನ ಮೂರ್ತಿಯನ್ನು ಕೆಲಹೊತ್ತು ಧ್ಯಾನಿಸಬೇಕು

೫. ಈರೀತಿ ಧ್ಯಾನಮಾಡಿದನಂತರ ಶೌಚಕಾರ್ಯಗಳಿಗಾಗಿ ಮನೆಯನ್ನು ಬಿಟ್ಟು ದೂರವಾಗಿ ತೆರಳಬೇಕು. ಓ ರಾಜೇಂದ್ರ, ಗೃಹಸ್ಥನಾದವನು ಯಾವ ರೀತಿ ಶೌಚವಿಧಿಯನ್ನು ನೆರವೇರಿಸಬೇಕೆಂಬುದನ್ನು ಯಥಾವತ್ತಾಗಿ ನಿನಗೆ ವಿವರಿಸುವೆನು.

೬. ಈ ಶೌಚವನ್ನು "ಅಶ್ವಕ್ರಾಂತೇ" ಎಂಬ ಮಂತ್ರೋಚ್ಚಾರಣಪೂರ್ವಕವಾಗಿ ಮೊದಲು ಮೃತ್ತಿಕೆಯಿಂದಲೂ, ಅನಂತರ ಶುದ್ಧ ಜಲದಿಂದಲೂ ನೆರವೇರಿಸಬೇಕು. ನೈಸರ್ಗಿಕವಾದ ನಿಯಮದಂತೆ ಕರ್ಮೇಂದ್ರಿಯಗಳು ತಮ್ಮ ಮುಖಾಂತರ ದೈಹಿಕವಾದ ಮಲವನ್ನು ವಿಸರ್ಜಿಸಿದನಂತರ ಆಯಾ ಕರ್ಮೇಂದ್ರಿಯಗಳ ಪೈಕಿ ಮುಂದೆ ಹೇಳತಕ್ಕವುಗಳಿಗೆ ಈರೀತಿ ಶುದ್ಧಿಯನ್ನು ಮಾಡಬೇಕು. ಲಿಂಗದಲ್ಲಿ ಒಂದು ಬಾರಿ, ಗುದದಲ್ಲಿ ಮೂರುಸಲ, ಎಡಗೈಯಲ್ಲಿ ಹತ್ತುಸಲ, ಮೇಲೆ ಹೇಳಿದಂತೆ ಮೃತ್ತಿಕೆಯಿಂದಲೂ ಜಲದಿಂದಲೂ ಶುದ್ಧಿಯನ್ನೆಸಗಿದನಂತರ,

ಉಭಯೋರ್ಹಸ್ತಯೋಃ ಸಪ್ತ ತಿಸ್ರಸ್ತಿಸ್ರಃ ಪದೇ ಪದೇ ।
ಏತದ್ದ್ವಿಗುಣಂ ಪ್ರೋಕ್ತಂ ಬ್ರಹ್ಮಚಾರಿವನಸ್ಥಯೋಃ ॥ ೭ ॥

ಏತಚ್ಚತುರ್ಗುಣಂ ಪ್ರೋಕ್ತಂ ಯತೀನಾಂ ಹರಿಸೇವಿನಾಂ ।
ತದರ್ಧಂ ರೋಗಿಪಾಂಥಾನಾಂ ಸ್ತ್ರೀಶೂದ್ರಾಣಾಂ ತದರ್ಧಕಂ ॥ ೮ ॥

ಶೌಚಕರ್ಮವಿಹೀನಸ್ಯ ಸಕಲಾ ನಿಷ್ಫಲಾಃ ಕ್ರಿಯಾಃ ।
ಮುಖಶುದ್ಧಿವಿಹೀನಸ್ಯ ಮಂತ್ರಾ ನ ಫಲದಾಃ ಸ್ಮೃತಾಃ ॥ ೯ ॥

ಆಯುರ್ಬಲಂ ಯಶೋ ವರ್ಚಃ ಪ್ರಜಾಃ ಪಶುವಸೂನಿ ಚ ।
ಬ್ರಹ್ಮಪ್ರಜ್ಞಾಂ ಚ ಮೇಧಾಂ ಚ ತ್ವನ್ನೋ ದೇಹಿ ವನಸ್ಪತೇ ॥ ೧೦ ॥

---

೭. ಮತ್ತೆ ಎರಡು ಕೈಗಳಿಗೂ ಏಳೇಳು ಬಾರಿಯೂ, ಎರಡು ಅಂಗಾಲುಗಳಿಗೆ ಮೂರು ಮೂರು ಬಾರಿಯೂ ಮೃತ್ತಿಕೆ ಮತ್ತು ಜಲದಿಂದ ಶುದ್ಧಿ ಮಾಡಬೇಕು. ಈ ನಿಯಮವು ಗೃಹಸ್ಥನಿಗೆ ಮಾತ್ರ. ಆದರೆ ಬ್ರಹ್ಮಚರ್ಯಾಶ್ರಮದಲ್ಲಿರುವವರಿಗೂ ವಾನಪ್ರಸ್ಥಾಶ್ರಮಿಗಳಿಗೂ ಮೇಲೆ ಹೇಳಿರುವುದಕ್ಕೆ ಎರಡರಷ್ಟು ಶೌಚವಿಧಿಯು ಉಕ್ತವಾಗಿರುವುದು.

೮. ಯಾರು ಸಂನ್ಯಾಸಾಶ್ರಮದಲ್ಲಿದ್ದುಕೊಂಡು ಶ್ರೀಹರಿಯನ್ನು ಆರಾಧಿಸುತ್ತಿರುವರೋ ಅಂಥವರಿಗೆ. ಗೃಹಸ್ಥನಿಗೆ ಉಕ್ತವಾದುದಕ್ಕಿಂತಲೂ ನಾಲ್ಕರಷ್ಟು ಶುದ್ಧಿಕ್ರಮವು ವಿಹಿತವಾಗಿರುವುದು. ಮೇಲೆ ಹೇಳಿದುದರಲ್ಲಿ ಅರ್ಧದಷ್ಟು ರೋಗಪೀಡಿತರಿಗೂ, ಊರಿಂದೂರಿಗೆ ಪಯಣ ಹೊರಟವರಿಗೂ ಉಕ್ತವಾಗಿರುವುದು. ಇವರಲ್ಲೂ ಅರ್ಧಭಾಗದಷ್ಟು ಸ್ತ್ರೀಯರಿಗೂ ಶೂದ್ರರಿಗೂ ಶೌಚಕ್ರಮವು ವಿಧಿಸಲ್ಪಟ್ಟಿರುವುದು.

೯. ಮೇಲೆ ಹೇಳಿದಂತೆ ಶುದ್ಧಿಯನ್ನು ಮಾಡಿಕೊಳ್ಳದಿದ್ದ ಪಕ್ಷದಲ್ಲಿ ಅಂತಹ ಮಾನವನು ಮಾಡಿದ ಸಕಲ ಕರ್ಮಗಳೂ ನಿಷ್ಫಲವಾಗುವುವು. ಇದರಂತೆ ಮುಖಶುದ್ಧಿಯನ್ನು ಮಾಡಿಕೊಳ್ಳದ ಮಾನವನು ಉಚ್ಚರಿಸಿದ ಮಂತ್ರಗಳೆಲ್ಲವೂ ಫಲದಾಯಕಗಳಾಗಲಾರವು.

೧೦. "ಎಲೈ ವನಸ್ಪತಿಯೇ, ನನಗೆ ಆಯುಸ್ಸನ್ನೂ, ಬಲವನ್ನೂ, ಕೀರ್ತಿಯನ್ನೂ, ತೇಜಸ್ಸನ್ನೂ. ಪ್ರಜಾಸೌಭಾಗ್ಯ ಪಶುಸಂಪತ್ತು ಧನಧಾನ್ಯಸಮೃದ್ಧಿಗಳನ್ನೂ, ಬ್ರಹ್ಮಜ್ಞಾನವನ್ನೂ, ಮೇಧಾಶಕ್ತಿಯನ್ನೂ ಕರುಣಿಸು" ಎಂಬ ಅರ್ಥ ಬರುವ "ಆಯುರ್ಬಲಂ" ಎಂಬ ಮಂತ್ರವನ್ನು ಉಚ್ಚರಿಸಿ

ಇತಿ ಮಂತ್ರಂ ಸಮುಚ್ಚಾರ್ಯ ಕುರ್ಯಾದ್ವೈ ದಂತಧಾವನಂ ।
ಹರಿತಹಯಮಂತ್ರೇಣ ಸೂರ್ಯಂ ನತ್ವಾ ಕೃತಾಂಜಲಿಃ ॥ ೧೧ ॥

ಪ್ರಣಮೇದ್ಧರಿಭಕ್ತಾಂಶ್ಚ ಪ್ರಹ್ಲಾದಾದೀನ್ಸಮಾಹಿತಃ ।
ತುಲಸೀಮೃತ್ತಿಕಾಂ ನೀತ್ವಾ ತತಃ ಸ್ನಾನಂ ಸಮಾಚರೇತ್ ॥ ೧೨ ॥

ಪಠಿತವ್ಯಂ ಪ್ರಯತ್ನೇನ ಶ್ರೀಗಂಗಾಯಮುನಾಷ್ಟಕಂ ।
ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ ॥ ೧೩ ॥

ಪುರೀ ದ್ವಾರಾವತೀ ಚೈವ ಸಪ್ತೈತಾ ಮೋಕ್ಷದಾಯಿಕಾಃ ।
ಶಾಲಿಗ್ರಾಮೋ ಮಹಾಯೋಗೇ ಶಂಭಲೋ ಹರಿಮಂದಿರೇ ॥ ೧೪ ॥

ನಂದಿಗ್ರಾಮಃ ಕೌಸಲೇ ತು ತ್ರಯೋ ಗ್ರಾಮಾಃ ಪ್ರಕೀರ್ತಿತಾಃ ।
ದಂಡಕಂ ಸೈಂಧವಾರಣ್ಯಂ ಜಂಬುಮಾರ್ಗಂ ಚ ಪುಷ್ಕಲಂ ॥ ೧೫ ॥

ಉತ್ಪಲಾವರ್ತಮಾರಣ್ಯಂ ನೈಮಿಷಂ ಕುರುಜಾಂಗಲಂ ।
ಅರ್ಬುದಂ ಹೇಮವಂತಂ ಚ ನವಾರಣ್ಯಾನಿ ವೈ ವಿದುಃ ॥ ೧೬ ॥

೧೧–೧೨. ದಂತಧಾವನವನ್ನು ಮಾಡಿಕೊಳ್ಳಬೇಕು. ಅನಂತರ "ಹರಿತ ಹಯ" ಎಂಬ ಮಂತ್ರದಿಂದ ಸೂರ್ಯನನ್ನು ನಮಸ್ಕರಿಸಿ, ಬಳಿಕ ಕೈಗಳನ್ನು ಮುಗಿದುಕೊಂಡು, ಪ್ರಹ್ಲಾದ ನಾರದ ಮೊದಲಾದ ಶ್ರೀಹರಿ ಭಕ್ತಾಗ್ರಣಿಗಳನ್ನು ಒಮ್ಮನಸ್ಸಿನಿಂದ ಧ್ಯಾನಿಸಬೇಕು. ಅನಂತರ ತುಲಸಿಯ ಬುಡದಲ್ಲಿರುವ ಮೃತ್ತಿಕೆಯನ್ನು ತೆಗೆದುಕೊಂಡು ಸ್ನಾನಕ್ಕೆ ಇಳಿಯಬೇಕು.

೧೩–೧೭. ಆ ಸ್ನಾನಸಮಯದಲ್ಲಿ ಶ್ರೀಗಂಗಾಯಮುನೆಯರ ಶ್ಲೋಕಾಷ್ಟಕಗಳನ್ನೂ, ಮೋಕ್ಷದಾಯಕಗಳೆಂದು ಪ್ರಸಿದ್ಧಗಳಾದ ಅಯೋಧ್ಯಾ, ಮಧುರಾ, ಮಾಯಾ, ಕಾಶೀ, ಕಾಂಚೀ, ಅವಂತೀ, ದ್ವಾರಕಾಪುರೀ ಎಂಬ ಸಪ್ತಮಹಾನಗರಿಗಳನ್ನೂ, ಗ್ರಾಮತ್ರಯಗಳೆಂದು ಪ್ರಖ್ಯಾತಗಳಾದ ಮಹಾಯೋಗವೆಂಬಲ್ಲಿರುವ ಶಾಲಿಗ್ರಾಮ, ಹರಿಮಂದಿರದಲ್ಲಿರುವ ಶಂಭಲಗ್ರಾಮ, ಕೋಸಲದೇಶದಲ್ಲಿರುವ ನಂದಿಗ್ರಾಮ ಎಂಬ ಗ್ರಾಮತ್ರಯಗಳನ್ನೂ, ದಂಡಕಾರಣ್ಯ, ಸೈಂಧವಾರಣ್ಯ, ಜಂಬುಮಾರ್ಗಾರಣ್ಯ, ಪುಷ್ಕಲಾರಣ್ಯ, ಉತ್ಪಲಾವರ್ತಾರಣ್ಯ, ನೈಮಿಷಾರಣ್ಯ, ಕುರುಜಾಂಗಲಾರಣ್ಯ, ಅರ್ಬುದಾರಣ್ಯ, ಹೇಮವಂತಾರಣ್ಯಗಳೆಂಬ ಪ್ರಸಿದ್ಧಗಳಾದ ನವಾ

ಏತಾನಿ ತೀರ್ಥನಾಮಾನಿ ಸಮುಚ್ಚಾರ್ಯ ಪುನಃ ಪುನಃ ।
ಇತ್ಥಂ ಸ್ನಾತ್ವಾ ತತೋ ಬಿಭ್ರದಂಬರಂ ಕ್ಷೌಮಮುತ್ತಮಂ ॥ ೧೭ ॥

ದ್ವಾದಶ ತಿಲಕಾನ್ಬಿಭ್ರದಷ್ಟಮುದ್ರಾಧರಃ ಪರಃ ।
ಕೃತಸಂಧ್ಯಃ ಶುಚಿರ್ಮೌನೀ ಗತ್ವಾ ಶ್ರೀಕೃಷ್ಣಮಂದಿರಂ ॥ ೧೮ ॥

ಘಂಟಾವಾದ್ಯಂ ಜಯಾರಾವಂ ತಲಶಬ್ದಂ ವಿಧಾಯ ಚ ।
ಉತ್ತಿಷ್ಠೋತ್ತಿಷ್ಠ ಗೋವಿಂದ ಯೋಗನಿದ್ರಾಂ ವಿಹಾಯ ಚ ॥ ೧೯ ॥

ಉಕ್ತ್ವೇಮಾಂ ಸ್ಮೃತಿಂ ರಾಜನ್ಭಕ್ತ ಉತ್ಥಾಪಯೇದ್ಧರಿಂ ।
ಮಂಗಲಾರ್ತಿಂ ಸಮಾದಾಯ ಭ್ರಾಮಯಂಸ್ತನ್ಮುಖೋಪರಿ ॥ ೨೦ ॥

ರಣ್ಯಗಳನ್ನೂ ಮನಸ್ಸಿನಲ್ಲಿ ಸ್ಮರಿಸುತ್ತಾ, ಆ ತೀರ್ಥಗಳ ಪವಿತ್ರನಾಮಗಳನ್ನು ಪುನಃ ಪುನಃ ಉಚ್ಚರಿಸುತ್ತಾ ಸ್ನಾನಮಾಡಬೇಕು. ಅನಂತರ ಶುಭ್ರವಾಗಿ ಒಗೆದ ಉತ್ತಮವಾದ ಬಟ್ಟೆಗಳನ್ನುಟ್ಟು,

೧೮. ಹನ್ನೆರಡು ತಿಲಕಗಳನ್ನೂ, ಎಂಟು ಮುದ್ರೆಗಳನ್ನೂ, ಉಕ್ತವಾದ ಆಯಾ ಅಂಗಗಳ ಮೇಲೆ ಉಕ್ತ ರೀತಿಯಲ್ಲಿ ಧರಿಸಿ ಸಂಧ್ಯಾವಂದನೆಯನ್ನು ನೆರವೇರಿಸಬೇಕು. ಬಳಿಕ ಶುದ್ಧ ಹೃದಯನಾಗಿ, ಯಾರೊಡನೆಯೂ ಮಾತನಾಡದೆ ಮೌನದಿಂದ ಶ್ರೀಹರಿಮಂದಿರವನ್ನು ಪ್ರವೇಶಿಸಿ,

೧೯–೨೦. ಘಂಟಾನಾದವನ್ನು ಮಾಡಿ ಜಯಶಬ್ದಗಳನ್ನುಚ್ಚರಿಸುತ್ತಾ, ಚಪ್ಪಾಳೆ ಹೊಡೆದು "ಹೇ ಗೋವಿಂದ, ನಿನ್ನ ಯೋಗನಿದ್ರೆಯನ್ನು ಬಿಟ್ಟು ಏಳು, ಎದ್ದೇಳು" ಎಂದರ್ಥಬರುವ "ಉತ್ತಿಷ್ಠೋತ್ತಿಷ್ಠ" ಎಂಬ ಸ್ಮೃತಿವಾಕ್ಯವನ್ನುಚ್ಚರಿಸುತ್ತಾ ಆ ಸ್ವಾಮಿಯನ್ನು ಎಚ್ಚರಗೊಳಿಸಬೇಕು. ಅನಂತರ ಮಂಗಲಾರತಿಯನ್ನು ತೆಗೆದುಕೊಂಡು ಆ ಸ್ವಾಮಿಯ ಮುಖಕ್ಕೆ ಬೆಳಗುತ್ತಾ ನೀರಾಜನವನ್ನೆತ್ತಬೇಕು.

ನಿವೇದ್ಯ ಬಹು ಪಕ್ವಾನ್ನಂ ನತ್ವಾ ನತ್ವಾ ಪುನಃ ಪುನಃ ।
ತತಃ ಸ್ನಾನಂ ಕಾರಯಿತ್ವಾ ದೇಶಕಾಲಪ್ರಭಾವವಿತ್ ॥ ೨೧ ॥

ಶೃಂಗಾರಂ ಭಾವವಿತ್ಕೃತ್ವಾ ವಸ್ತ್ರಭೂಷಣಮಂಗಲೈಃ ।
ಆರ್ತಿಕ್ಯಂ ತು ತತಃ ಕೃತ್ವಾ ಭೋಗ್ಯಾನ್ನಂ ಚ ವಿಧಾಯ ಚ ॥ ೨೨ ॥

ತತೋ ಧೃತ್ವಾ ಮಹಾಭೋಗಂ ನಾನಾರಸಮಯಂ ಪರಂ ।
ಮಹಾಭೋಗಾರ್ತಿಕಂ ಕೃತ್ವಾ ಕಾರಯೇಚ್ಛಯನಂ ಹರೇಃ ॥ ೨೩ ॥

ತತಃ ಪ್ರಸಾದಂ ಪರಮಂ ತುಲಸೀಗಂಧಮಿಶ್ರಿತಂ ।
ಭುಂಜೀತ ಯೋ ಹರೇರ್ನಿತ್ಯಂ ಸ ಕೃತಾರ್ಥೋ ನ ಸಂಶಯಃ ॥ ೨೪ ॥

---

೨೧. ಬಳಿಕ ಬೇಕಾದಷ್ಟು ವಿಧವಿಧವಾದ ಪಕ್ವಾನ್ನಗಳನ್ನು ನಿವೇದನ ಮಾಡುವುದಲ್ಲದೆ ಮತ್ತೆ ಮತ್ತೆ ನಮಸ್ಕರಿಸಬೇಕು. ಅನಂತರ ಸ್ವಾಮಿಗೆ ಸ್ನಾನವಿಧಿಯನ್ನು ನೆರವೇರಿಸಿ ಆಯಾ ದೇಶಕಾಲಗಳಿಗೆ ಉಚಿತವಾದ ರೀತಿಯಲ್ಲಿ,

೨೨. ವಸ್ತ್ರಭೂಷಣಾದಿಗಳಿಂದ ಆ ಹರಿಯನ್ನು ಅಂದವಾಗಿ ಸಿಂಗರಿಸಬೇಕು. ಬಳಿಕ ಮತ್ತೆ ಮಂಗಳಾರತಿಯನ್ನು ಬೆಳಗಿ, ಭೋಜನಾರ್ಹವಾದ ಉತ್ತಮವಾದ ಭಕ್ಷ್ಯಗಳನ್ನು ಸಿದ್ಧಗೊಳಿಸಿ, ಷಡ್ರಸೋಪೇತವಾದ ಆ ಭಕ್ಷ್ಯಭೋಜ್ಯಗಳ ಉಪಚಾರವನ್ನು ಸ್ವಾಮಿಗೆ ಅರ್ಪಿಸಬೇಕು.

೨೩. ಈ ಉಪಚಾರವಾದನಂತರ ಮಹಾಭೋಗವ ಆರತಿಯನ್ನು ಬೆಳಗಿ, ಶ್ರೀಹರಿಗೆ ಶಯನೋತ್ಸವವನ್ನು ನೆರವೇರಿಸಬೇಕು.

೨೪. ಈ ರೀತಿಯಾಗಿ ಸ್ವಾಮಿಯನ್ನು ಆರಾಧಿಸಿದನಂತರ ಭಕ್ತನಾದವನು ತುಲಸೀಗಂಧದಿಂದ ಕೂಡಿರುವ ಪಾವನವಾದ ಶ್ರೀಹರಿಯ ಪ್ರಸಾದವನ್ನು ಪ್ರಾಶನ ಮಾಡಬೇಕು. ಈ ರೀತಿ ಯಾವ ಭಕ್ತನು ಪ್ರತಿನಿತ್ಯವೂ ಆಚರಿಸುವನೋ ಅವನು ಖಂಡಿತವಾಗಿಯೂ ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವನು.

ರಾಜಭೋಗಾರ್ತಿಕಂ ಕೃತ್ವಾ ಕಾರಯೇಚ್ಛಯನಂ ಹರೇಃ ।
ಶಂಖನಾದೇನ ವಿಧಿವದ್ಭೋಗಂ ಧೃತ್ವಾ ಯಥಾವಿಧಿ ॥ ೨೫ ॥

ತತಃ ಸಂಧ್ಯಾರ್ತಿಕಂ ಕೃತ್ವಾ ದುಗ್ಧಾದೀನ್ವಿನಿವೇದ್ಯ ಚ ।
ತತಃ ಪ್ರದೋಷಸಮಯೇ ಪುನರಾರ್ತಿಕಮಾಚರೇತ್ ॥ ೨೬ ॥

ಧೃತ್ವಾ ಭೋಗಂ ಪರಂ ಮಿಷ್ಟಂ ಕಾರಯೇಚ್ಛಯನಂ ಹರೇಃ ।
ರಾಜಸೀ ಚೈವ ರಾಜೇಂದ್ರ ರಾಜಸೇವೇಯಮಸ್ತಿ ವೈ ॥ ೨೭ ॥

ಸರ್ವಂ ಶ್ರೀಕೃಷ್ಣಚಂದ್ರಸ್ಯ ಸೇವಾಸಂಲಗ್ನಮಾನಸಃ ।
ತಾರಯಿತ್ವಾ ಕುಲಶತಂ ಯಾತಿ ಚಾತ್ಯಂತಿಕಂ ಪದಂ ॥ ೨೮ ॥

---

೨೫. ಬಳಿಕ ಶಂಖಗಳನ್ನು ಊದುತ್ತಾ, ವಿಧಿವತ್ತಾಗಿ ರಾಜಾರ್ಹವಾದ ರೀತಿಯಲ್ಲಿ ರಾಜಭೋಗಾರತಿಯನ್ನು ನೆರವೇರಿಸಿ, ಶ್ರೀಹರಿಗೆ ಸುಖಶಯನೋಪಚಾರವನ್ನು ಸಲ್ಲಿಸಬೇಕು.

೨೬. ಅನಂತರ ಪ್ರದೋಷಸಮಯದಲ್ಲಿ ಹಾಲುಹಣ್ಣುಗಳನ್ನು ನಿವೇದನ ಮಾಡಿ, ಸಂಧ್ಯೆಯ ಆರತಿಯನ್ನು ಬೆಳಗಿ, ಮತ್ತೊಮ್ಮೆ ಆರತಿಯನ್ನು ಬೆಳಗಬೇಕು.

೨೭. ಅನಂತರ ಮಧುರವಾಗಿಯೂ ಉತ್ಕೃಷ್ಟವಾಗಿಯೂ ಇರುವ ಭಕ್ಷ್ಯಭೋಜ್ಯಾದಿಗಳನ್ನು ನಿವೇದಿಸಿ ಶ್ರೀಹರಿಗೆ ಶಯನೋಪಚಾರವನ್ನು ನೆರವೇರಿಸಬೇಕು. ಓ ರಾಜೇಂದ್ರ, ಮೇಲೆ ಹೇಳಿದ ಸೇವಾಪ್ರಕಾರವೆಲ್ಲವೂ ರಾಜಸಗುಣೋಚಿತವಾದ ಮತ್ತು ರಾಜಯೋಗ್ಯವಾದ ಉಪಚಾರವೆಂದು ತಿಳಿ.

೨೮. ಈ ರೀತಿಯಾಗಿ ಶ್ರೀಕೃಷ್ಣಚಂದ್ರನ ಸೇವೆಯಲ್ಲಿಯೇ ತನ್ನ ಮನಸ್ಸನ್ನು ನೆಲೆಗೊಳಿಸಿರತಕ್ಕ ಭಕ್ತೋತ್ತಮನು ತನ್ನ ವಂಶದಲ್ಲಿ ನೂರುತಲೆಯವರೆಗೂ ಇರುವ ಪಿತೃಗಳನ್ನು ನರಕದುಃಖದಿಂದ ಉದ್ಧರಿಸುವುದಲ್ಲದೆ, ತಾನೂ ಸಹ ಉತ್ತಮೋತ್ತಮವಾದ ಶ್ರೀಹರಿಯ ನಿತ್ಯನಿವಾಸವನ್ನು ಹೋಗಿ ಸೇರುವನು.

ಜನ್ಮಾಷ್ಟಮೀ ಚ ಕೃಷ್ಣಸ್ಯ ಶ್ರೀರಾಮನವಮೀ ತಥಾ ।
ರಾಧಾಷ್ಟಮ್ಯನ್ನಕೂಟಂ ಚ ದ್ವಾದಶೀ ವಾಮನಸ್ಯ ಚ ॥ ೨೯ ॥

ಚತುರ್ದಶೀ ನೃಸಿಂಹಸ್ಯ ತಥಾನಂತಚತುರ್ದಶೀ ।
ಏಷು ಕಾಲೇಷು ಕೃಷ್ಣಸ್ಯ ಮಹಾಪೂಜಾಂ ಸಮಾಚರೇತ್ ॥ ೩೦ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ಶ್ರೀವಿಜ್ಞಾನಖಂಡೇ
ಶ್ರೀವ್ಯಾಸೋಗ್ರಸೇನಸಂವಾದೇ ರಾಜಸೇವಾವರ್ಣನಂ
ನಾಮ ಸಪ್ತಮೋಽಧ್ಯಾಯಃ

೨೯–೩೦. ಶ್ರೀಕೃಷ್ಣಜನ್ಮಾಷ್ಟಮಿ, ಶ್ರೀರಾಮನವಮಿ, ರಾಧಾಷ್ಟಮಿ, ವಾಮನದ್ವಾದಶಿ, ನರಸಿಂಹಚತುರ್ದಶಿ, ಅನಂತಚತುರ್ದಶಿ ಈ ಪುಣ್ಯದಿವಸಗಳಲ್ಲಿ ಶ್ರೀಕೃಷ್ಣನಿಗೆ ಮಹಾಪೂಜೆಯನ್ನು ವೈಭವದಿಂದ ಮಾಡಬೇಕು.

ಇಲ್ಲಿಗೆ ಶ್ರೀಗಾರ್ಗ್ಯಸಂಹಿತೆಯ ವಿಜ್ಞಾನಖಂಡದಲ್ಲಿ ರಾಜಸೇವಾವರ್ಣನವೆಂಬ
ಏಳನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಜ್ಞಾನಖಂಡೇ

ಅಷ್ಟಮೋಽಧ್ಯಾಯಃ

॥ ಶ್ರೀ ವ್ಯಾಸ ಉವಾಚ ॥

ಅಥ ಸ್ನಾತ್ವಾ ಚ ಕೃತ್ವಾ ಚ ನಿತ್ಯನೈಮಿತ್ತಿಕೀಂ ಕ್ರಿಯಾಂ ।
ಪಂಚವರ್ಣಸಮಾಯುಕ್ತಂ ಶುದ್ಧೇ ಸ್ಥಂಡಿಲಮಂಡಲೇ ॥ ೧ ॥

ದ್ವಾತ್ರಿಂಶದ್ದಲಸಂಯುಕ್ತಂ ಕರ್ಣಿಕಾಕೇಸರೋಜ್ಜ್ವಲಂ ।
ವಿಧಾಯ ಕಮಲಂ ದಿವ್ಯಂ ವಿಧಿವದ್ವೇದಸೂಕ್ತಿಭಿಃ ॥ ೨ ॥

ಕರ್ಣಿಕಾಯಾಂ ನ್ಯಸೇದ್ರಾಜನ್ಹರೇಃ ಸಿಂಹಾಸನಂ ಶುಭಂ ।
ತತ್ರ ರಾಧಾಂ ರಮಾಂ ಸ್ಥಾಪ್ಯ ಭೂದೇವೀಂ ವಿರಜಾಂ ತಥಾ ॥ ೩ ॥

ಎಂಟನೆಯ ಅಧ್ಯಾಯವು

೧–೨. ವ್ಯಾಸಮಹರ್ಷಿಯು ಹೇಳತೊಡಗಿದನು—ಬಳಿಕ ಭಕ್ತನಾದವನು ಸ್ನಾನಮಾಡಿ ತನ್ನ ನಿತ್ಯನೈಮಿತ್ತಿಕಾದಿಕರ್ಮಗಳನ್ನು ನೆರವೇರಿಸಿದನಂತರ ಶುದ್ಧವಾದ ಸ್ಥಂಡಿಲದ ಮೇಲೆ, ವೇದಮಂತ್ರಗಳನ್ನುಚ್ಚರಿಸುತ್ತಾ ಪಂಚವರ್ಣರಂಗೋಲಿಗಳಿಂದ ಮೂವತ್ತೆರಡು ದಳಗಳೂ, ಕರ್ಣಿಕೆ ಕೇಸರಗಳೂ, ಸೊಗಸಾಗಿ ರಚಿತವಾಗುವಂತೆ ದಿವ್ಯವಾದ ಕಮಲವೊಂದನ್ನು ವಿಧಿವತ್ತಾಗಿ ಚಿತ್ರಿಸಬೇಕು.

೩. ಆ ಕರ್ಣಿಕೆಯ ನಡುವೆ ಶ್ರೀಹರಿಯ ಮಂಗಲಕರವಾದ ಸಿಂಹಾಸನವನ್ನು ಸ್ಥಾಪಿಸಬೇಕು. ಆ ಸಿಂಹಾಸನದ ಮೇಲೆ ರಾಧಿಕೆಯನ್ನೂ ಶ್ರೀದೇವಿ ಭೂದೇವಿ ವಿರಜಾದೇವಿಯರನ್ನೂ ಪ್ರತಿಷ್ಠಿಸುವುದಲ್ಲದೆ,

ತನ್ಮಧ್ಯೇ ಸ್ಥಾಪಯೇತ್ಸಾಕ್ಷಾಚ್ಛ್ರೀಕೃಷ್ಣಂ ಪುರುಷೋತ್ತಮಂ ।
ತಥಾಷ್ಟದಲಮಧ್ಯೇ ತು ರಾಧಿಕಾಷ್ಟಸಖೀಃ ಶುಭಾಃ ॥ ೪ ॥

ತತೋಽಷ್ಟದಲಮಧ್ಯೇ ತು ಶ್ರೀಕೃಷ್ಣಸ್ಯ ತಥಾ ಸಖೀನ್ ।
ತಥಾ ಷೋಡಶಪರ್ಣೇಷು ಸಖೀನಾಂ ಚ ದ್ವಯಂ ದ್ವಯಂ ॥ ೫ ॥

ಕಮಲಸ್ಯ ಚ ಪಾರ್ಶ್ವೇಷು ಶಂಖಂ ಚಕ್ರಂ ಗದಾಂ ತಥಾ ।
ಪದ್ಮಂ ಚ ನಂದಕಂ ಶಾರ್ಙ್ಗಂ ಬಾಣಾಂಶ್ಚ ಮುಸಲಂ ಹಲಂ ॥ ೬ ॥

ಕೌಸ್ತುಭಂ ವನಮಾಲಾಂ ಚ ಶ್ರೀವತ್ಸಂ ನೀಲಮಂಬರಂ ।
ಪೀತಾಂಬರಂ ತಥಾ ವಂಶೀಂ ವೇತ್ರಂ ಚ ಸ್ಥಾಪಯೇದ್ಬುಧಃ ॥ ೭ ॥

---

೪. ಅವರ ನಡುವೆ ಪುರುಷಶ್ರೇಷ್ಠನಾದ ಆ ಶ್ರೀಹರಿಯನ್ನೂ ಸ್ಥಾಪನೆ ಮಾಡಬೇಕು. ಅನಂತರ ಆ ಕಮಲದ ಅಷ್ಟದಲಗಳಲ್ಲಿ ಎಂಟು ಮಂದಿ ರಾಧಾ ಸಖಿಯರನ್ನೂ,

೫. ಅದರಾಚೆಗಿರುವ ಅಷ್ಟದಲಗಳ ನಡುವೆ ಶ್ರೀಕೃಷ್ಣನ ಎಂಟು ಮಂದಿ ಸಖರನ್ನೂ, ಆ ಅಷ್ಟದಲದ ಸುತ್ತಲೂ ಇರುವ ಹದಿನಾರು ದಲಗಳಲ್ಲಿ ಪ್ರತಿ ಯೊಂದರಲ್ಲಿಯೂ ಒಬ್ಬೊಬ್ಬರಂತೆ ಶ್ರೀರಾಧಾಕೃಷ್ಣರ ಸಖೀಸಖರನ್ನೂ ಆವಾಹಿಸಿ ಪ್ರತಿಷ್ಠಿಸಬೇಕು.

೬-೭. ಅನಂತರ ಆ ಕಮಲದ ಅಕ್ಕಪಕ್ಕಗಳಲ್ಲಿ ಶಂಖ, ಚಕ್ರ, ಗದಾ, ಪದ್ಮ. ನಂದಕ, ಶಾರ್ಙ್ಗ, ಬಾಣ, ಹಲ, ಮುಸಲ ಎಂಬ ಕೃಷ್ಣಬಲರಾಮರ ದಿವ್ಯಾಯುಧ ಗಳನ್ನೂ, ಕೌಸ್ತುಭ, ವನಮಾಲೆ, ನೀಲಾಂಬರ, ಪೀತಾಂಬರ, ಕೊಳಲು, ಬೆತ್ತಗಳನ್ನೂ ಸ್ಥಾಪಿಸಬೇಕು.

ತತಃ ಪಾರ್ಶ್ವೇಷು ತಾಲಾಂಕಂ ಗರುಡಾಂಕಂ ರಥಂ ತಥಾ ।
ಸುಮತಿಂ ದಾರುಕಂ ಸೂತಂ ಗರುಡಂ ಕುಮುದಂ ತಥಾ ॥ ೮ ॥

ಚಂಡಂ ಚೈವ ಪ್ರಚಂಡಂ ಚ ಬಲಂ ಚೈವ ಮಹಾಬಲಂ ।
ಕುಮುದಾಕ್ಷಂ ಬಲಂ ಚೈವ ಸ್ಥಾಪಯೇದ್ಯತ್ನತಃ ಸುಧೀಃ ॥ ೯ ॥

ತಥಾ ದಿಕ್ಷು ಚ ದಿಕ್ಪಾಲಾನ್ಸಂಸ್ಥಾಪ್ಯ ಚ ಪೃಥಕ್ ಪೃಥಕ್ ।
ವಿಷ್ವಕ್ಸೇನಂ ಶಿವಂ ಮಾಂ ಚ ವಿಧಿಂ ದುರ್ಗಾಂ ವಿನಾಯಕಂ ॥ ೧೦ ॥

ನವಗ್ರಹಾಂಶ್ಚ ವರುಣಂ ತಥಾ ಷೋಡಶಮಾತೃಕಾಃ ।
ತತ್ಪದ್ಮಾಗ್ರೇ ವೀತಿಹೋತ್ರಂ ಸ್ಥಂಡಿಲೇ ಸ್ಥಾಪಯೇದ್ಬುಧಃ ॥ ೧೧ ॥

ಆವಾಹನಮಾಸನಂ ಚ ಪಾದ್ಯಮರ್ಘ್ಯಂ ವಿಶೇಷತಃ ।
ಸ್ನಾನಂ ಚ ಮಧುಪರ್ಕಂ ಚ ಧೂಪಂ ದೀಪಂ ತಥೈವ ಚ ॥ ೧೨ ॥

ಯಜ್ಞೋಪವೀತಂ ವಸ್ತ್ರಂ ಚ ಭೂಷಣಂ ಗಂಧಮೇವ ಚ ।
ಪುಷ್ಪಂ ತಥಾಕ್ಷತಾಂಶ್ಚೈವ ನೈವೇದ್ಯಂ ಚ ಮನೋಹರಂ ॥ ೧೩ ॥

೮–೯. ಅವರಂತೆಯೇ ತಾಲವೃಕ್ಷ, ಮತ್ತು ಗರುಡನ ದಿವ್ಯಚಿಹ್ನೆಗಳಿಂದ ಕಂಗೊಳಿಸುತ್ತಿರುವ ಧ್ವಜಗಳುಳ್ಳ ಆ ಕೃಷ್ಣಬಲರಾಮರ ರಥಗಳನ್ನೂ ಅವುಗಳ ಸಾರಥಿಗಳಾದ ಸುಮತಿದಾರುಕರನ್ನೂ. ಗರುಡ, ಕುಮುದ, ಚಂಡ, ಪ್ರಚಂಡ, ಬಲ, ಮಹಾಬಲ, ಕುಮುದಾಕ್ಷ ಬಲರಾಮರನ್ನೂ ಆದರದಿಂದ ಸ್ಥಾಪಿಸಬೇಕು.

೧೦–೧೧. ಅಪರಂತೆ ಆ ಕಮಲದ ಸುತ್ತಲೂ ಪೂರ್ವಾದಿದಿಕ್ಕುಗಳಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ಇಂದ್ರಾದಿದಿಕ್ಪಾಲಕರನ್ನೂ, ವಿಷ್ವಕ್ಸೇನ, ಶಿವ, ಲಕ್ಷ್ಮೀ, ಬ್ರಹ್ಮಾ, ದುರ್ಗಾ, ವಿನಾಯಕರನ್ನೂ, ನವಗ್ರಹಗಳು, ವರುಣ ಮತ್ತು ಹದಿನಾರು ಮಂದಿ ಮಾತೃಕಾದೇವತೆಗಳನ್ನೂ ಆವಾಹನೆಮಾಡಿ ಸ್ಥಾಪಿಸಬೇಕು. ಅನಂತರ ಆ ಕಮಲದ ಮುಂದುಗಡೆ ಶುದ್ಧವಾದ ಸ್ಥಂಡಿಲದ ಮೇಲೆ ಯಜ್ಞೇಶ್ವರನನ್ನು ಪ್ರತಿಷ್ಠೆಮಾಡಬೇಕು.

೧೨–೧೩. ಅನಂತರ ಅವರೆಲ್ಲರಿಗೂ ಆವಾಹನೋಪಚಾರಗಳನ್ನು ಸಲ್ಲಿಸಿ ಆಸನವಿತ್ತು, ಪಾದ್ಯವನ್ನೂ ಅರ್ಘ್ಯವನ್ನೂ ಆಚಮನವನ್ನೂ ಅರ್ಪಿಸಿ, ಮಧುಪರ್ಕ ವನ್ನು ನಿವೇದಿಸಿ ಸ್ನಾನ, ವಸ್ತ್ರ, ಯಜ್ಞೋಪವೀತ, ಭೂಷಣ, ಗಂಧ, ಅಕ್ಷತ, ಪುಷ್ಪಮಾಲೆ, ಧೂಪದೀಪ, ಮನೋಹರವಾದ ಭಕ್ಷಭೋಜ್ಯಗಳ ನಿವೇದನೆ, ದಕ್ಷಿಣೆ

ಆಚಮನಂ ಪ್ರದಾತವ್ಯಂ ತಾಂಬೂಲಂ ದಕ್ಷಿಣಾಂ ತಥಾ ।
ಪ್ರದಕ್ಷಿಣಾಂ ಪ್ರಾರ್ಥನಾಂ ಚ ತಥಾ ನೀರಾಜನಂ ಸ್ಮೃತಂ ॥ ೧೪ ॥

ನಮಸ್ಕಾರಂ ತತಃ ಕುರ್ಯಾತ್ಕರ್ಮಣಾ ಚ ಪೃಥಕ್ ಪೃಥಕ್ ।
ಆವಾಹನೇ ತು ಪುಷ್ಪಾಣಿ ಆಸನೇ ತು ಕುಶದ್ವಯಂ ॥ ೧೫ ॥

ಪಾದ್ಯೇ ಶ್ಯಾಮಾಂ ಚ ದೂರ್ವಾಂ ಚ ವಿಷ್ಣುಕ್ರಾಂತಾಂ ತಥೈವ ಚ ।
ಸೌಗಂಧಿಕಾನಿ ಪುಷ್ಪಾಣಿ ಅರ್ಘ್ಯೇ ಯೋಗ್ಯಾನಿ ಯಾದವ ॥ ೧೬ ॥

ಚಂದನೋಶೀರಕರ್ಪೂರಕುಂಕುಮಾಗರುಮಿಶ್ರಿತಂ ।
ಏತಾದೃಶಂ ಜಲಂ ಯೋಗ್ಯಂ ಸ್ನಾನೇ ರಾಜನ್ಮಹಾಮತೇ ॥ ೧೭ ॥

ಮಧುಪರ್ಕೇ ಹ್ಯಾಮಲಕಮರವಿಂದಂ ತಥಾ ಮತಂ ।
ಧೂಪೇ ಗಂಧಾಷ್ಟಕಂ ದೇಯಂ ದೀಪೇ ಕರ್ಪೂರಮೇವ ಚ ॥ ೧೮ ॥

ತಾಂಬೂಲ, ಉತ್ತರನೀರಾಜನ, ಪ್ರದಕ್ಷಿಣನಮಸ್ಕಾರಗಳನ್ನೂ, ಪ್ರಾರ್ಥನೆಯನ್ನೂ ಪ್ರತ್ಯೇಕಪ್ರತ್ಯೇಕವಾಗಿ ಸಲ್ಲಿಸಿ ಆರಾಧಿಸಬೇಕು. ಆವಾಹನೆಯನ್ನು ಮಾಡುವಾಗ ಹೂವುಗಳನ್ನೂ, ಆಸನವನ್ನು ಸಮರ್ಪಿಸುವಾಗ ಎರಡು ದರ್ಭೆಗಳನ್ನೂ ಉಪಯೋಗಿಸಬೇಕು.

೧೬-೧೮. ಓ ಯಾದವೇಶ್ವರ, ಅಪರಂತೆ ಪಾದ್ಯಾರ್ಥವಾಗಿ ಇಟ್ಟಿರುವ ಜಲದಲ್ಲಿ ಎಳೆಹಸುರಿನ ಗರಿಕೆಯನ್ನೂ ವಿಷ್ಣುಕ್ರಾಂತಿಯನ್ನೂ ಹಾಕಬೇಕು. ಅರ್ಘ್ಯೋದಕದಲ್ಲಿ ಸೌಗಂಧಿಕಪುಷ್ಪಗಳನ್ನು ಸೇರಿಸಬೇಕು. ಸ್ನಾನಯೋಗ್ಯವಾದ ನೀರಿನಲ್ಲಿ ಗಂಧ, ಲಾಮಂಚ, ಕೇಸರಿ, ಕರ್ಪೂರ, ಅಗರು ಮುಂತಾದ ಸುಗಂಧದ್ರವ್ಯಗಳನ್ನು ಬೆರೆಸಿ ಸುವಾಸಿತವನ್ನಾಗಿ ಮಾಡಬೇಕು. ಮಧುಪರ್ಕಕ್ಕೆ ನೆಲ್ಲಿಕಾಯಿಯನ್ನೂ ಕಮಲವನ್ನೂ ಉಪಯೋಗಿಸಬೇಕು. ಧೂಪಕ್ಕೆ ಅಷ್ಟಗಂಧಗಳನ್ನೂ, ದೀಪಕ್ಕೆ ಕರ್ಪೂರವನ್ನೂ ಬಳಸಬೇಕು.

ಯಜ್ಞೋಪವೀತಂ ಪೀತಂ ಚ ವಸ್ತ್ರೇ ಪೀತಾಂಬರಂ ಮತಂ ।
ಭೂಷಣೇ ಚೈವ ಸೌವರ್ಣಂ ಗಂಧೇ ಕುಂಕುಮಚಂದನೇ ॥ ೧೯ ॥

ತುಲಸೀಮಂಜರೀ ಪುಷ್ಪೇಽಕ್ಷತೇಷು ಸ್ಯಾತ್ತು ತಂಡುಲಾಃ ।
ನೈವೇದ್ಯೇ ತು ರಸಾಃ ಷಟ್ಚ ಭೋಗಾ ನಾನಾವಿಧಾ ಮತಾಃ ॥೨೦ ॥

ಜಲೇ ಗಂಗಾಜಲಂ ಯೋಗ್ಯಂ ಯಮುನಾಜಲಮೇವ ಚ ।
ಜಾತೀಫಲಂ ಚ ಕಂಕೋಲಮಂತೇ ಆಚಮನೇ ನೃಪ ॥ ೨೧ ॥

ತಾಂಬೂಲೇ ಚೋಷಣಂ ತ್ವೇಲಾ ದಕ್ಷಿಣಾಯಾಂ ತು ಹಾಟಕಂ ।
ಪ್ರದಕ್ಷಿಣಾಯಾಂ ಭ್ರಮಣಂ ಘೃತಂ ನೀರಾಜನೇ ಗವಾಂ ॥ ೨೨ ॥

---

೧೯. ವಸ್ತ್ರಗಳನ್ನೂ ಯಜ್ಞೋಪವೀತವನ್ನೂ ಅರ್ಪಿಸುವಾಗ ಪೀತವರ್ಣ (ಹಳದಿಯ ಬಣ್ಣ)ದವುಗಳನ್ನೇ ಅರ್ಪಿಸಬೇಕು. ಭೂಷಣಗಳನ್ನು ಅರ್ಪಿಸುವಾಗ ಸುವರ್ಣಮಯವಾದ ಆಭರಣಗಳನ್ನೇ ಸಲ್ಲಿಸಬೇಕು. ಗಂಧಕ್ಕೆ ಕುಂಕುಮಕೇಸರಿ ಮತ್ತು ಚಂದನವನ್ನು ಬಳಸಬೇಕು.

೨೦. ಇದರಂತೆ ಪುಷ್ಪಕ್ಕೆ ತುಲಸಿಯ ತೆನೆಯನ್ನೂ, ಅಕ್ಷತೆಗೆ ಅಕ್ಕಿಯ ಕಾಳುಗಳನ್ನೂ, ನೈವೇದ್ಯಕ್ಕೆ ಷಡ್ರಸೋಪೇತವಾದ ನಾನಾಬಗೆಯ ಭಕ್ಷ್ಯಭೋಜ್ಯಗಳನ್ನೂ ಉಪಯೋಗಿಸಬೇಕು.

೨೧. ಅನಂತರ ಭೋಜನಾನಂತರ ಆಚಮನಾರ್ಥವಾಗಿ ಜಾಜಿಕಾಯಿ, ಕಂಕೋಲಗಳ ಮಿಶ್ರಣದಿಂದ ಸುವಾಸಿತವಾದ ಗಂಗಾಜಲವನ್ನಾಗಲಿ, ಯಮುನಾ ಜಲವನ್ನಾಗಲಿ ಬಳಸಬೇಕು.

೨೨. ಬಳಿಕ ತಾಂಬೂಲದೊಡನೆ ಹಿಪ್ಪಲಿ, ಯಾಲಕ್ಕಿಗಳನ್ನೂ ದಕ್ಷಿಣಾರ್ಥವಾಗಿ ಚಿನ್ನವನ್ನೂ ಅರ್ಪಣೆಮಾಡಬೇಕು. ಅದಾದ ಮೇಲೆ ನೀರಾಜನವನ್ನು ಎತ್ತುವಾಗ ಹಸುವಿನ ತುಪ್ಪವನ್ನು ಉಪಯೋಗಿಸುವುದಲ್ಲದೆ ಮಂಗಳಾರತಿಯನ್ನು ಪ್ರದಕ್ಷಿಣಾಕಾರವಾಗಿ ಸುತ್ತಲೂ ತಿರುಗಿಸಬೇಕು.

ಪ್ರಾರ್ಥನಾಯಾಂ ಹರೇರ್ಭಕ್ತಿಃ ಪ್ರೇಮಲಕ್ಷಣಸಂಯುತಾ।
ನಮಸ್ಕಾರೇ ಮಹಾರಾಜ ಸಾಷ್ಟಾಂಗನತವಿಗ್ರಹಃ ॥ ೨೩ ॥

ದ್ವಾದಶಾಕ್ಷರಮಂತ್ರೇಣ ಶಿಖಾಂ ಬಧ್ವಾ ಶುಚಿಃ ಪುಮಾನ್।
ಉಪಚಾರಾನ್ ಪುರಸ್ಕೃತ್ಯ ಶ್ರೀಮುಖೇ ಸಂಮುಖೋ ಭವೇತ್ ॥ ೨೪ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಜ್ಞಾನಖಂಡೇ
ವ್ಯಾಸೋಗ್ರಸೇನಸಂವಾದೇ ಮಹಾಪೂಜಾವಿಧಿವರ್ಣನಂ ನಾಮ
ಅಷ್ಟಮೋಽಧ್ಯಾಯಃ

---

೨೩. ಅನಂತರ ನಮಸ್ಕಾರವನ್ನು ಮಾಡುವಾಗ, ಶ್ರದ್ಧೆಯಿಂದ ಪರಮಾತ್ಮನಲ್ಲಿಯೇ ಮನಸ್ಸನ್ನೂ, ಆತನ ಅರ್ಚಾವಿಗ್ರಹದಲ್ಲಿಯೇ ತನ್ನ ದೃಷ್ಟಿಯನ್ನೂ ನೆಲೆಗೊಳಿಸಿ, ಎದೆ, ತಲೆ, ಕಾಲು, ಕೈ, ಕಿವಿಗಳು ನೆಲಕ್ಕೆ ತಾಗುವಂತೆ ಮೈಬಾಗಿ ಸಾಷ್ಟಾಂಗನಮಸ್ಕಾರವನ್ನು ಮಾಡಬೇಕು. ಬಳಿಕ ಪ್ರಾರ್ಥನಾಸಮಯದಲ್ಲಿ ಪ್ರೇಮಸ್ವರೂಪವಾದ ಶ್ರೀಹರಿಭಕ್ತಿಯೇ ನಿರಂತರವೂ ಲಭಿಸಲೆಂದು ಪ್ರಾರ್ಥಿಸಬೇಕು.

೨೪. ಮೇಲೆ ಹೇಳಿದ ಉಪಚಾರಗಳೆಲ್ಲವನ್ನೂ ಸಲ್ಲಿಸುವಾಗ ಭಕ್ತನಾದವನು ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ಶುದ್ಧನಾಗಿ "ಓಂ ನಮೋ ಭಗವತೇ ವಾಸುದೇವಾಯ" ಎಂಬ ದ್ವಾದಶಾಕ್ಷರಮಂತ್ರದಿಂದ ತನ್ನ ಶಿಖೆಯನ್ನು ಬಂಧಿಸಿಕೊಂಡು ಮಂಗಲಮಯವಾದ ಆ ಸ್ವಾಮಿಯ ಮುಖಕ್ಕೆದುರಾಗಿ ಕುಳಿತು ಆ ಸೇವೆಯನ್ನು ಸಲ್ಲಿಸಬೇಕು.

ಇಲ್ಲಿಗೆ ಶ್ರೀಗಾರ್ಗ್ಯಸಂಹಿತೆಯ ವಿಜ್ಞಾನಖಂಡದಲ್ಲಿ ಮಹಾಪೂಜಾವಿಧಿ-
ವರ್ಣನೆಯೆಂಬ ಎಂಟನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಜ್ಞಾನ ಖಂಡೇ

ನವಮೋಽಧ್ಯಾಯಃ

॥ ಶ್ರೀ ವ್ಯಾಸ ಉವಾಚ ॥

ಉಪಚಾರಸ್ಯ ಮಂತ್ರಾಣಿ ವೇದೋಕ್ತಾನಿ ಶುಭಾನಿ ಚ ।
ತುಭ್ಯಂ ವಕ್ಷ್ಯಾಮಿ ರಾಜೇಂದ್ರ ಶೃಣುಷ್ವೈಕಾಗ್ರಮಾನಸಃ ॥ ೧ ॥

॥ ಅಥಾವಾಹನಂ ॥

ಗೋಲೋಕಧಾಮಾಧಿಪತೇ ರಮಾಪತೇ
ಗೋವಿಂದ ದಾಮೋದರ ದೀನವತ್ಸಲ ।
ರಾಧಾಪತೇ ಮಾಧವ ಸಾತ್ವತಾಂಪತೇ
ಸಿಂಹಾಸನೇಽಸ್ಮಿನ್ಮಮ ಸಂಮುಖೋ ಭವ ॥ ೨ ॥

ಒಂಭತ್ತನೆಯ ಅಧ್ಯಾಯವು

೧. ವ್ಯಾಸಮಹರ್ಷಿಯಿಂತೆಂದನು–ರಾಜೇಂದ್ರ, ನಾನೀಗ ನಿನಗೆ ತಿಳಿಸುವ ಶ್ರೀಹರಿಯ ಪೂಜಾಕ್ರಮವಲ್ಲಿ ಉಕ್ತವಾದ ಮೇಲೀ ಉಪಚಾರಗಳಿಗೆ ಉಚಿತವೂ ಶುಭಕರವೂ ಆದ ವೇದಮಂತ್ರಗಳನ್ನು ತಿಳಿಸುವೆನು. ಏಕಾಗ್ರಚಿತ್ತದಿಂದ ಆಲಿಸುವವನಾಗು.

೨. "ಗೋಲೋಕಧಾಮಕ್ಕೆ ಅಧೀಶ್ವರನೂ, ಲಕ್ಷ್ಮೀದೇವಿಯ ವಲ್ಲಭನೂ, ದೀನರಲ್ಲಿ ವಾತ್ಸಲ್ಯವುಳ್ಳವನೂ, ರಾಧಾಕಾಂತನೂ, ಸಾತ್ವತಾಧಿಪತಿಯೂ ಆದ ಹೇ ಗೋವಿಂದ, ಮಾಧವ, ದಾಮೋದರಾ, ಈ ಸಿಂಹಾಸನದಲ್ಲಿ ನನಗೆದುರಾಗಿ ಮಂಡಿಸು" ಎಂಬರ್ಥದ ಮಂತ್ರದಿಂದ ಶ್ರೀಹರಿಯನ್ನಾವಾಹಿಸಬೇಕು.

॥ ಅಥಾಸನಂ ॥

ಶ್ರೀಪದ್ಮರಾಗಸ್ಫುರದೂರ್ಧ್ವಪೃಷ್ಠಂ
ಮಹಾರ್ಹವೈಢೂರ್ಯಖಚಿತ್ಪದಾಬ್ಜಂ ।
ವೈಕುಂಠ ವೈಕುಂಠಪತೇ ಗೃಹಾಣ
ಪೀಠಂ ತಟಿದ್ಘಾಟಿಕಕುಂಭಖಂಡಂ ॥ ೩ ॥

॥ ಅಥಪಾದ್ಯಂ ॥

ಪರಂ ಸ್ಥಿತಂ ನಿರ್ಮಲರೌಕ್ಮಪಾತ್ರೇ
ಸಮಾಹೃತಂ ಬಿಂದುಸರೋವರಾದ್ಧಿ ।
ಯೋಗೇಶ ದೇವೇಶ ಜಗನ್ನಿವಾಸ
ಗೃಹಾಣ ಪಾದ್ಯಂ ಪ್ರಣಮಾಮಿ ಪಾದೌ ॥ ೪ ॥

॥ ಅಥಸ್ನಾನಂ ॥

ಕಾಶ್ಮೀರಪಾಟೀರವಿಮಿಶ್ರಿತೇನ
ಸುಮಲ್ಲಿಕೋಶೀರವತಾ ಜಲೇನ ।
ಸ್ನಾನಂ ಕುರು ತ್ವಂ ಯದುನಾಥ ದೇವ
ಗೋವಿಂದ ಗೋಪಾಲಕತೀರ್ಥಪಾದ ॥ ೫ ॥

---

೩. "ಎಲೈ ವೈಕುಂಠಲೋಕಾಧಿಪತಿಯೇ, ಮೇಲ್ಭಾಗದಲ್ಲಿ ಥಳಥಳಿಸುತ್ತಿರುವ ಪದ್ಮರಾಗಮಣಿಗಳಿಂದಲೂ ಕಾಲುಗಳಲ್ಲಿ ಬಹಳ ಬೆಲೆಬಾಳುವ ವೈಢೂರ್ಯಮಣಿಗಳಿಂದಲೂ ಕೆತ್ತಲ್ಪಟ್ಟು, ಮಿಂಚಿನಂತೆ ಥಳಥಳಿಸುತ್ತಿರುವ ಚೊಕ್ಕಬಂಗಾರದಿಂದ ನಿರ್ಮಿಸಲ್ಪಟ್ಟ ಈ ದಿವ್ಯವಾದ ಸಿಂಹಾಸನವನ್ನು ಸ್ವೀಕರಿಸು" ಎಂಬುದಾಗಿ ಆಸನವನ್ನು ಅರ್ಪಿಸಬೇಕು.

೪. ಬಳಿಕ, "ಹೇ ಯೋಗೇಶ್ವರ, ಜಗನ್ನಿವಾಸ, ದೇವದೇವ, ನಿನ್ನ ಪಾದಗಳಿಗೆ ಅರ್ಪಿಸಬೇಕೆಂದು ನಿರ್ಮಲವಾದ ಚಿನ್ನದ ಪಾತ್ರೆಯಲ್ಲಿ ಬಿಂದು ಸರೋವರದಿಂದ ತಂದು ತುಂಬಿಟ್ಟಿರುವ ಈ ನೀರನ್ನು ಪಾದ್ಯವನ್ನಾಗಿ ಸ್ವೀಕರಿಸು, ನಿನ್ನ ಪಾದಗಳಿಗೆರಗುವೆನು. " ಎಂದು ಪಾದ್ಯವನ್ನು ಸಲ್ಲಿಸಬೇಕು.

೫. ಅನಂತರ—ಎಲೈ ಯದುನಾಥ, ಹೇಗೋವಿಂದ, ಕೇಸರಿಯನ್ನೂ ಗಂಧವನ್ನೂ ಅರೆದು ಬೆರಸಿ ಮಲ್ಲಿಗೇಹೂವುಗಳನ್ನೂ ಲಾಮಂಚಗಳನ್ನೂ ತೇಲಿಬಿಟ್ಟು ಸುವಾಸಿತವಾಗಿರುವ ದಿವ್ಯೋದಕದಿಂದ ಸ್ನಾನವನ್ನು ನೆರವೇರಿಸು, ಎಂದು ಸ್ನಾನೋಪಚಾರವನ್ನು ಮಾಡಬೇಕು.

|| ಅಥ ಮಧುಪರ್ಕಸ್ನಾನಂ ||

ಮಧ್ವಾನ್ವಚಂದ್ರಾರ್ಕಭವಂ ಮಲಾಪಹಂ
ಸಿತಾಂಗಸಂಪರ್ಕಮನೋಹರಂ ಪರಂ ।
ಗೃಹಾಣ ವಿಷ್ಣೋ ಮಧುಪರ್ಕಮೇನಂ
ಸಂದೃಶ್ಯ ಪೀತಾಂಬರ ಸಾತ್ವತಾಂಪತೇ || ೬ ||

|| ಅಥ ವಸ್ತ್ರಂ ||

ವಿಭೋ ಸರ್ವತಃ ಪ್ರಸ್ಫುರತ್ಪ್ರೋಜ್ಜ್ವಲಂ ಚ
ಸ್ಫುರದ್ರಶ್ಮಿಶೂನ್ಯಂ ಪರಂ ದುರ್ಲಭಂ ಚ ।
ಸ್ವತೋ ನಿರ್ಮಿತಂ ಪದ್ಮಕಿಂಜಲ್ಕವರ್ಣಂ
ಗೃಹಾಣಾಂಬರಂ ದೇವ ಪೀತಾಂಬರಾಖ್ಯಂ || ೭ ||

|| ಅಥ ಯಜ್ಞೋಪವೀತಂ ||

ಸುವರ್ಣಾಭಮಾಪೀತವರ್ಣಂ ಸುಮಂತ್ರೈಃ
ಪರಂ ಪ್ರೋಕ್ಷಿತಂ ವೇದವಿನ್ನಿರ್ಮಿತಂ ಚ ।
ಶುಭಂ ಪಂಚಕಾರ್ಯೇಷು ನೈಮಿತ್ತಿಕೇಷು
ಪ್ರಭೋ ಯಜ್ಞ ಯಜ್ಞೋಪವೀತಂ ಗೃಹಾಣ || ೮ ||

---

೬. ಆಮೇಲೆ—ಎಲೈ ಸಾತ್ವತಪ್ರಭುವೇ, ಪೀತಾಂಬರಧಾರಿಯೇ, ಸಕಲ ವಿಧವಾದ ಮಲಗಳನ್ನೂ ಪರಿಹರಿಸುವಂತಹ ಶರ್ಕರಾಸಂಮಿಶ್ರವಾದ ಮನೋಹರವಾದೀ ಮಧುಪರ್ಕವನ್ನು ಸ್ವೀಕರಿಸು ಎಂದು ಮಧುಪರ್ಕವನ್ನು ಅರ್ಪಿಸಬೇಕು.

೭. ಇದಾದಮೇಲೆ—ಓ ದೇವ, ಎಲ್ಲೆಡೆಯಲ್ಲಿಯೂ ಥಳಥಳಿಸುತ್ತಿರುವ ದಿವ್ಯವಾದ ಸರಿಗೆಯೆಳೆಗಳಿಂದ ನಿರ್ಮಿಸಲ್ಪಟ್ಟು, ಪ್ರಭೆಯಲ್ಲಿ ಪದ್ಮಕೇಸರವನ್ನು ಹೋಲುತ್ತಾ, ಜಾಜ್ವಲ್ಯಮಾನವಾಗಿರುವೀ ಪೀತಾಂಬರವೆಂಬ ರಮಣೀಯವಾದ ವಸ್ತ್ರವನ್ನು ಸ್ವೀಕರಿಸು ಎಂದು ವಸ್ತ್ರಯುಗಲವನ್ನೊಪ್ಪಿಸಬೇಕು.

೮. ಬಳಿಕ—ಹೇ ಯಜ್ಞಸ್ವರೂಪ, ವೇದವಿದರಾದ ವಿಪ್ರರಿಂದ ಮಂತ್ರೋಚ್ಚಾರಣಪೂರ್ವಕವಾಗಿ ರಚಿಸಲ್ಪಟ್ಟು, ಚೊಕ್ಕಬಂಗಾರದಂತೆ ಹೊಂಬಣ್ಣದಿಂದ ಕಂಗೊಳಿಸುತ್ತಿರುವ ಪಂಚವಿಧವಾದ ನೈಮಿತ್ತಿಕ ಕರ್ಮಗಳಿಗೆ ಉಪಯುಕ್ತವೆನಿಸಿದ ಈ ಯಜ್ಞೋಪವೀತವನ್ನು ಧರಿಸು, ಎಂದು ಉಪವೀತವನ್ನು ಅರ್ಪಿಸಬೇಕು.

॥ ಅಥ ಭೂಷಣಂ ॥

ಕನಕರತ್ನಮಯಂ ಮಯನಿರ್ಮಿತಂ
ಮದನರುಕ್ಕದನಂ ಸದನಂ ರುಚಾಂ ।
ಉಷಸಿ ಪೂಷಸುವರ್ಣವಿಭೂಷಣಂ
ಸಕಲಲೋಕವಿಭೂಷಣ ಗೃಹ್ಯತಾಂ ॥ ೯ ॥

॥ ಅಥ ಗಂಧಂ ॥

ಸಂಧ್ಯೇಂದುಶೋಭಂ ಬಹುಮಂಗಳಂ ಶ್ರೀ-
ಕಾಶ್ಮೀರಪಾಟೀರಕಪಂಕಪೃಕ್ತಮ್ ।
ಸ್ವಮಂಡನಂ ಗಂಧಚಯಂ ಗೃಹಾಣ
ಸಮಸ್ತಭೂಮಂಡಲಭಾರಹಾರಿನ್ ॥ ೧೦ ॥

॥ ಅಥಾಕ್ಷತಾನ್ ॥

ಬ್ರಹ್ಮಾವರ್ತೇ ಬ್ರಹ್ಮಣಾ ಪೂರ್ವಮುಪ್ತಾನ್
ಬ್ರಾಹ್ಮೈಸ್ತೋಯೈಃ ಸಿಂಚಿತಾನ್ವಿಷ್ಣುನಾ ಚ ।
ರುದ್ರೇಣಾರಾದ್ರಕ್ಷಿತಾನ್ ರಾಕ್ಷಸೇಭ್ಯಃ
ಸಾಕ್ಷಾದ್ಭೂಮನ್ನಕ್ಷತಾಂಸ್ತ್ವಂ ಗೃಹಾಣ ॥ ೧೧ ॥

---

೯. ಅನಂತರ—ಸಕಲ ಲೋಕಗಳಿಗೂ ಅಲಂಕಾರಪ್ರಾಯನೆನಿಸಿರುವ ಓ ಸ್ವಾಮಿಯೇ, ಕಾಂತಿಯ ನೆಲೆವೀಡಾಗಿ ಮಯನಿಂದ ಸುವರ್ಣ, ರತ್ನ ಮೊದಲಾದ ದ್ರವ್ಯಗಳನ್ನು ಸೇರಿಸಿ ನಿರ್ಮಿಸಲ್ಪಟ್ಟು, ಉಷಃಕಾಲದ ಸೂರ್ಯನ ಹೊಂಬೆಗಳನ್ನು ತಳೆದು, ಮನ್ಮಥನ ಕಾಂತಿಯನ್ನು ಧಿಕ್ಕರಿಸುತ್ತಿರುವ ಈ ಆಭರಣಗಳನ್ನು ಧರಿಸು ಎಂದು ಭೂಷಣಗಳನ್ನು ಒಪ್ಪಿಸಬೇಕು.

೧೦. ಆಮೇಲೆ—ಸಮಸ್ತ ಭೂಮಂಡಲದ ಮಹಾಭಾರವನ್ನು ಪರಿಹರಿಸಿರುವ ಎಲೈ ಪ್ರಭುವೇ, ಸಂಧ್ಯಾಕಾಲದ ಕಾಂತಿಯಿಂದ ಮೆರೆಯುತ್ತಿರುವ ಬಹುಮಂಗಲ ದಾಯಕವೂ, ಕುಂಕುಮಕೇಸರಿ ಶ್ರೀಗಂಧಗಳನ್ನು ತೇದು ಸಿದ್ಧಗೊಳಿಸಿರುವುದೂ, ಶರೀರಕ್ಕೆ ಅಲಂಕಾರಪ್ರಾಯವೂ ಆದ ದಿವ್ಯವಾದೀ ಪರಿಮಲಗಂಧವನ್ನು ಲೇಪನ ಮಾಡಿಕೋ ಎಂದು ಗಂಧವನ್ನು ಅರ್ಪಿಸಬೇಕು.

೧೧. ಬಳಿಕ—ಎಲೈ ಮಹಾಮಹಿಮನೇ, ಹಿಂದೆ ಬ್ರಹ್ಮಾವರ್ತದಲ್ಲಿ ಬ್ರಹ್ಮನಿಂದ ಬಿತ್ತಲ್ಪಟ್ಟು, ಪವಿತ್ರವಾದ ಬ್ರಾಹ್ಮೋದಕವನ್ನು ಹಾಯಿಸಿ ವಿಷ್ಣುವಿನಿಂದ ಬೆಳೆಸಲ್ಪಟ್ಟು, ರಾಕ್ಷಸರಿಂದ ಬಾಧೆತಟ್ಟದಂತೆ ಶಿವನಿಂದ ಸಂರಕ್ಷಿಸಲ್ಪಟ್ಟ ಪಾವನವಾದೀ ಅಕ್ಷತೆಗಳನ್ನು ಒಪ್ಪಿಸಿಕೊಳ್ಳಬೇಕು ಎಂದು ಅಕ್ಷತೆಗಳನ್ನು ಒಪ್ಪಿಸಬೇಕು.

॥ ಅಥ ಪುಷ್ಪಾಣಿ ॥

ಮಂದಾರಕಂ ಜಾತಕಪಾರಿಜಾತ–
ಕಲ್ಪದ್ರುಮ ಶ್ರೀಹರಿಚಂದನಾನಾಂ ।
ಗೃಹಾಣ ಪುಷ್ಪಾಣಿ ಹರೇ ತುಲಸ್ಯಾ
ಮಿಶ್ರಾಣಿ ಸಾಕ್ಷಾನ್ನವಮಂಜರೀಭಿಃ ॥ ೧೨ ॥

॥ ಅಥ ಧೂಪಂ ॥

ಲವಂಗಪಾಟೀರಜಚೂರ್ಣಮಿಶ್ರಂ
ಮನುಷ್ಯದೇವಾಸುರಸೌಖ್ಯದಂ ಚ ।
ಸದ್ಯಃ ಸುಗಂಧೀಕೃತಹರ್ಮ್ಯದೇಶಂ
ದ್ವಾರಾವನೀಭೂಪ ಗೃಹಾಣ ಧೂಪಂ ॥ ೧೩ ॥

॥ ಅಥ ದೀಪಂ ॥

ತಮೋಹಾರಿಣಂ ಜ್ಞಾನಮೂರ್ತಿಂ ಮನೋಜ್ಞಂ
ಲಸದ್ವರ್ತಿಕರ್ಪೂರಪೂರಂ ಗವಾಜ್ಯಂ ।
ಜಗನ್ನಾಥ ದೇವಪ್ರಭೋ ವಿಶ್ವದೀಪ
ಸ್ಫುರಜ್ಜ್ಯೋತಿಷಂ ದೀಪಮುಖ್ಯಂ ಗೃಹಾಣ ॥ ೧೪ ॥

---

೧೨. ಅನಂತರ—ಎಲೈ ಶ್ರೀಹರಿಯೇ, ಮಂದಾರ, ಪಾರಿಜಾತ, ಕಲ್ಪವೃಕ್ಷ, ಹರಿಚಂದನ, ಇವುಗಳ ಪುಷ್ಪಗಳನ್ನೂ, ಕಮಲಗಳನ್ನೂ, ಹೊಸದಾದ ಎಳೆಯ ತುಳಸಿಯ ತೆನೆಗಳನ್ನೂ ನಿನಗೆ ಅರ್ಪಿಸುವೆನು. ಎಂದು ಹೂವುಗಳನ್ನು ಸಲ್ಲಿಸಬೇಕು.

೧೩. ಬಳಿಕ—ಹೇ ದ್ವಾರಕಾಪುರಾಧೀಶ, ಲವಂಗಚಕ್ಕೆ, ಗಂಧ, ಇವುಗಳ ಪುಡಿಯನ್ನು ಹಾಕಿ ರಚಿಸಲ್ಪಟ್ಟ ತನ್ನ ವಾಸನೆಯಿಂದ ದೇವತೆಗಳನ್ನೂ, ಅಸುರರನ್ನೂ, ಮನುಷ್ಯರನ್ನೂ ಸಂತೋಷಪಡಿಸುವ ಮತ್ತು ಅಗ್ನಿಯಲ್ಲಿ ಹಾಕಿದೊಡನೆಯೇ ತನ್ನ ಸುವಾಸನೆಯಿಂದ ಭವನದ ಪ್ರದೇಶವೆಲ್ಲವನ್ನೂ ಆವರಿಸುವ ದಿವ್ಯವಾದೀ ಧೂಪವನ್ನೂ ಸ್ವೀಕರಿಸು ಎಂದು ಧೂಪವನ್ನು ಹಾಕಬೇಕು.

೧೪. ಅನಂತರ—ಓ ಜಗನ್ನಾಥ, ಜಗನ್ಮಂಗಲದೀಪ, ಜ್ಞಾನಸ್ವರೂಪ, ಅಂಧಕಾರವನ್ನು ಸಂಹರಿಸುವ ಮತ್ತು ಹಸುವಿನ ತುಪ್ಪದಿಂದಲೂ ಬತ್ತಿ ಕರ್ಪೂರಗಳಿಂದಲೂ ಹೊತ್ತಿಸಲ್ಪಟ್ಟು ಮನೋಹರವಾಗಿ ಬೆಳಗುತ್ತಿರುವ ಈ ದೀಪವನ್ನು ಸ್ವೀಕರಿಸು ಎಂದು ದೀಪವನ್ನರ್ಪಿಸಬೇಕು.

॥ ಅಥ ನೈವೇದ್ಯಂ ॥

ರಸ್ಯೈಃ ಶರ್ಕೈರ್ಭೇದವಿಧಿವ್ಯವಸ್ಥಿತಂ
ರಸ್ಯೈರಸಾನ್ಯಂ ಚ ಯಶೋಮತೀಕೃತಂ ।
ಗೃಹಾಣ ನೈವೇದ್ಯಮಿದಂ ಸುರೋಚಿಕಂ
ಗವ್ಯಾಮೃತಂ ಸುಂದರನಂದನಂದನ ॥ ೧೫ ॥

॥ ಅಥ ಜಲಂ ॥

ಗಂಗೋತ್ತರೀವೇಗವಲಾತ್ಸಮ್ಯುದ್ಧೃತಂ
ಸುವರ್ಣಪಾತ್ರೇಣ ಹಿಮಾಂಶುಶೀತಲಂ ।
ಸುನಿರ್ಮಲಾಭಂ ಹ್ಯಮೃತೋಪಮಂ ಜಲಂ
ಗೃಹಾಣ ರಾಧಾವರ ಭಕ್ತವತ್ಸಲ ॥ ೧೬ ॥

॥ ಅಥಾಚಮನಂ ॥

ರಾಧಾಪತೇ ಶ್ರೀವಿರಜಾಪತೇ ಪ್ರಭೋ
ಶ್ರಿಯಃಪತೇ ಸರ್ವಪತೇ ಚ ಭೂಪತೇ ।
ಕಂಕೋಲಜಾತೀಫಲಪುಷ್ಪವಾಸಿತಂ
ಪರಂ ಗೃಹಾಣಾಚಮನಂ ದಯಾನಿಧೇ ॥ ೧೭ ॥

---

೧೫. ಆಮೇಲೆ—ಎಲೈ ಸುಂದರನೇ, ನಂದನಂದನೇ, ಷಡ್ವಿಧವಾದ, ರಸಗಳ ಪರಸ್ಪರಸಂಯೋಗವಿಶೇಷಗಳಿಂದ ನಾನಾವಿಧವಾಗಿ ಸಿದ್ಧಗೊಳಿಸಲ್ಪಟ್ಟಿರುವ, ಯಶೋದೆಯಿಂದ ರಚಿಸಲ್ಪಟ್ಟು ರುಚಿಕರವಾದೀ ಭಕ್ಷ್ಯಭೋಜ್ಯಗಳನ್ನೂ, ಹಸುವಿನ ಹಾಲುಮೊಸರುಗಳನ್ನೂ ಸ್ವೀಕರಿಸು, ಎಂದು ನೈವೇದ್ಯವನ್ನೊಪ್ಪಿಸಬೇಕು.

೧೬. ಹೇ ರಾಧಾಕಾಂತ, ಭಕ್ತವತ್ಸಲ, ಗಂಗಾ, ಉತ್ತರೀ, ವೇಗಬಲಾ ಮುಂತಾದ ನದಿಗಳಿಂದ ತರಲ್ಪಟ್ಟು ಚಿನ್ನದ ಪಾತ್ರೆಗಳಲ್ಲಿ ಸಿದ್ಧಗೊಳಿಸಲ್ಪಟ್ಟು ಚಂದ್ರನಂತೆ ಶೀತಲವಾಗಿಯೂ, ಅಮೃತದಂತೆ ಮಧುರವಾಗಿಯೂ, ನಿರ್ಮಲವಾಗಿಯೂ ಇರುವ ಈ ಪಾನೀಯವನ್ನು ಸ್ವೀಕರಿಸು ಎಂದು ಪಾನೀಯವನ್ನು ಅರ್ಪಿಸಬೇಕು.

೧೭. ರಾಧಾಕಾಂತನೂ, ಶ್ರೀಭೂವಿರಜಾದೇವೀರಮಣನೂ ಆದ ಎಲೈ ಸರ್ವೇಶ್ವರನೇ, ಜಾಯಿಕಾಯಿ, ಕಂಕೋಲ, ಪುಷ್ಪಗಳಿಂದ ಸುವಾಸಿತವಾಗಿರುವ ಅತ್ಯುತ್ತಮವಾದೀ ಜಲವನ್ನು ಆಚಮನಾರ್ಥವಾಗಿ ಸ್ವೀಕರಿಸು ಎಂದು ಭೋಜನಾನಂತರ ಆಚಮನವನ್ನು ಅರ್ಪಿಸಬೇಕು.

॥ ಅಥ ತಾಂಬೂಲಂ ॥

ಜಾತೀಫಲೈಲಾಸುಲವಂಗನಾಗ-
ವಲ್ಲೀದಲೈಃ ಪೂಗಫಲೈಶ್ಚ ಸಂಯುತಂ ।
ಮುಕ್ತಾಸುಧಾಖಾದಿರಸಾರಯುಕ್ತಂ
ಗೃಹಾಣ ತಾಂಬೂಲಮಿದಂ ರಮೇಶ ॥ ೧೮ ॥

॥ ಅಥ ದಕ್ಷಿಣಾ ॥

ನಾಕಪಾಲವಸುಪಾಲಮೌಲಿಭಿ-
ರ್ವಂದಿತಾಂಘ್ರಿಯುಗಲ ಪ್ರಭೋ ಹರೇ ।
ದಕ್ಷಿಣಾಂ ಪರಿಗೃಹಾಣ ಮಾಧವ
ಲೋಕದಕ್ಷವರದಕ್ಷಿಣಾಯುತೇ ॥ ೧೯ ॥

॥ ಅಥ ನೀರಾಜನಂ ॥

ಪ್ರಸ್ಫುರತ್ಪರಮದೀಪ್ತಿಮಂಗಲಂ
ಗೋಘೃತಾಕ್ತನವಪಂಚವರ್ತಿಕಂ ।
ಆರ್ತಿಕಂ ಪರಿಗೃಹಾಣ ಚಾರ್ತಿಹನ್
ಪುಣ್ಯಕೀರ್ತಿವಿಶದೀಕೃತಾವನೇ ॥ ೨೦ ॥

---

೧೮. ಹೇ ರಮಾಕಾಂತ, ಜಾಜಿಕಾಯಿ, ಏಲಕ್ಕಿ, ಲವಂಗ, ಮೊದಲಾದ ಸುಗಂಧದ್ರವ್ಯಗಳಿಂದ ಕೂಡಿ ವಿಳ್ಳದೆಲೆ, ಅಡಿಕೆ, ಮುತ್ತಿನಚಿಪ್ಪಿನಸುಣ್ಣ ಇವುಗಳಿಂದ ರಮಣೀಯವಾಗಿರುವ ಈ ತಾಂಬೂಲವನ್ನು ಸೇವಿಸು ಎಂದು ತಾಂಬೂಲವನ್ನು ಸಮರ್ಪಿಸಬೇಕು.

೧೯. ಹೇ ಶ್ರೀಹರೇ, ದೇವೇಂದ್ರನಿಂದಲೂ, ಧನಾಧಿಪತಿಯಾದ ಕುಬೇರನಿಂದಲೂ ತಲೆವಾಗಿ ನಮಸ್ಕರಿಸಲ್ಪಟ್ಟ ಪಾದಾರವಿಂದಗಳಿಂದ ಕಂಗೊಳಿಸುವ ಎಲೈ ಮಾಧವನೇ, ಲೋಕದಲ್ಲಿರುವ ಸಮರ್ಥರಲ್ಲೆಲ್ಲಾ ಅತಿಸಮರ್ಥನೆನಿಸಿದ ಎಲೈ ಪ್ರಭುವೇ, ಈ ದಕ್ಷಿಣೆಯನ್ನು ಪರಿಗ್ರಹಿಸು ಎಂದು ದಕ್ಷಿಣೆಯನ್ನು ಅರ್ಪಿಸಬೇಕು.

೨೦. ಪಾವನವಾದ ಕೀರ್ತಿಯಿಂದ ಜಗತ್ತನ್ನೇ ಬೆಳಗುತ್ತಿರುವವನೂ, ಸಕಲ ದುಃಖಪರಿಹಾರಕನೂ ಆದ ಎಲೈ ಮಂಗಳಮೂರ್ತಿಯೇ, ಹಸುವಿನ ತುಪ್ಪದಲ್ಲಿ ನೆನೆಸಿದ ಐದು ಬತ್ತಿಗಳನ್ನು ಹೊತ್ತಿಸಿ, ಅತ್ಯದ್ಭುತವಾದ ಕಾಂತಿಯಿಂದ ಬೆಳಗುತ್ತಿರುವ ಮಂಗಲಮಯವಾದೀ ನೀರಾಜನವನ್ನು ಸ್ವೀಕರಿಸು ಎಂದು ಮಂಗಳಾರತಿಯನ್ನೂ ಬೆಳಗಬೇಕು.

॥ ಅಥ ನಮಸ್ಕಾರಃ ॥

ನಮೋಽಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿಶಿರೋರುಬಾಹವೇ ।
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟಿಯುಗಧಾರಿಣೇ ನಮಃ ॥ ೨೧ ॥

॥ ಅಥ ಪ್ರದಕ್ಷಿಣಾ ॥

ಸಮಸ್ತತೀರ್ಥಯಜ್ಞದಾನಪೂರ್ತಕಾದಿಜಂ ಫಲಂ ।
ಲಭೇತ್ಪರಸ್ಯ ಶಾಶ್ವತಂ ಕರೋತಿ ಯಃ ಪ್ರದಕ್ಷಿಣಾಂ ॥ ೨೨ ॥

॥ ಅಥ ಪ್ರಾರ್ಥನಾ ॥

ಹರೇ ಮತ್ಸಮಃ ಪಾತಕೀ ನಾಸ್ತಿ ಭೂಮೌ
ತಥಾ ತ್ವತ್ಸಮೋ ನಾಸ್ತಿ ಪಾಪಾಪಹಾರೀ ।
ಇತಿ ತ್ವಂ ಚ ಮತ್ವಾ ಜಗನ್ನಾಥ ದೇವ
ಯಥೇಚ್ಛಾ ಭವೇತ್ತೇ ತಥಾ ಮಾಂ ಕುರು ತ್ವಂ ॥ ೨೩ ॥

---

೨೧. ಆಮೇಲೆ–ಹೇ ಅನಂತರೂಪ, ಸಹಸ್ರಪಾದಗಳಿಂದಲೂ, ಸಹಸ್ರನಯನಗಳಿಂದಲೂ, ಸಹಸ್ರಶಿರಸ್ಸುಗಳಿಂದಲೂ, ಸಹಸ್ರಊರು (ತೊಡೆ) ಗಳಿಂದಲೂ, ಸಹಸ್ರಬಾಹುಗಳಿಂದಲೂ, ಕಂಗೊಳಿಸುತ್ತಾ ಸಹಸ್ರವಿಧರೂಪಗಳಿಂದಲೂ, ಸಹಸ್ರವಿಧನಾಮಗಳಿಂದಲೂ ರಾರಾಜಿಸುತ್ತಿರುವ ಸಹಸ್ರಕೋಟಿಸಂಖ್ಯಾತವಾದ ಯುಗಗಳ ಕಾಲದಿಂದಲೂ ವ್ಯಕ್ತನಾಗಿರುವ ಸನಾತನಪುರುಷನಾದ ನಿನಗೆ ನಮಸ್ಕಾರವನ್ನು ಮಾಡುವೆನು ಎಂದು ನಮಸ್ಕರಿಸಬೇಕು.

೨೨. ಹೇ ಪರಾತ್ಪರ, ಯಾವನನ್ನು ಪ್ರದಕ್ಷಿಣಮಾಡಿದ ಮಾತ್ರದಿಂದಲೇ ಸಕಲತೀರ್ಥಯಾತ್ರೆಗಳನ್ನೂ ಮಾಡಿದ ಫಲವೂ, ಸಕಲಯಜ್ಞಗಳನ್ನು ಮಾಡಿದ ಫಲವೂ, ತಟಾಕಾರಾಮಾದಿನಿರ್ಮಾಣಫಲವೂ ಶಾಶ್ವತವಾಗಿ ಲಭಿಸುವುದೋ ಅಂತಹ ನಿನ್ನನ್ನು ಪ್ರದಕ್ಷಿಣೆಮಾಡುವೆನು ಎಂದು ಪ್ರದಕ್ಷಿಣೆಮಾಡಬೇಕು.

೨೩. ಎಲೈ ಹರಿಯೇ, ಈ ಭೂಮಿಯಲ್ಲಿ ನನ್ನಂತಹ ಪಾಪಿಯು ಮತ್ತಾರೂ ಇಲ್ಲ. ನಿನ್ನಂತಹ ಪಾಪಪರಿಹಾರಕನೂ ಮತ್ತೊಬ್ಬನಿಲ್ಲ ; ಹೇ ಜಗನ್ನಾಥ, ಈ ಅಂಶವನ್ನು ಅರಿತು ನಿನಗೆ ಯಾವ ರೀತಿ ಇಚ್ಛೆಯುಂಟಾಗುವುದೋ ಆ ರೀತಿ ನನ್ನನ್ನು ನಿಯೋಜಿಸು ಎಂದು ಪ್ರಾರ್ಥಮಾಡಿಕೊಳ್ಳಬೇಕು.

|| ಅಥ ಸ್ತುತಿಃ ||

ಸಂಜ್ಞಾನಮಾತ್ರಂ ಸದಸತ್ಪರಂ ಮಹ-
ಚ್ಛಶ್ವತ್ಪ್ರಶಾಂತಂ ವಿಭವಂ ಸಮಂ ಮಹತ್ |
ತ್ವಾಂ ಬ್ರಹ್ಮ ವಂದೇ ಹಿ ಸುದುರ್ಗಮಂ ಪರಂ
ಸದಾ ಸ್ವಧಾಮ್ನಾ ಪರಿಭೂತಕೈತವಂ || ೨೪ ||

ಏವಂ ಸಂಪೂಜ್ಯ ದೇವೇಶಮೇಭಿರ್ಮಂತ್ರೈರ್ಮಹಾಮತೇ |
ಪ್ರಣಮ್ಯ ವಿಷ್ಣುಂ ಸರ್ವಾಂಗಪೂಜಾಂ ಕುರ್ಯಾತ್ಪ್ರಯತ್ನತಃ || ೨೫ ||

ಓಂ ನಮೋ ನಾರಾಯಣಾಯ ಪುರುಷಾಯ ಮಹಾತ್ಮನೇ |
ವಿಶುದ್ಧಸತ್ತ್ವಧೀಸ್ಥಾಯ ಮಹಾಹಂಸಾಯ ಧೀಮಹಿ || ೨೬ ||

|| ಇತಿ ಮಂತ್ರೇಣ ಪ್ರಾಣಾಯಾಮಂ ಕೃತ್ವಾ ||

---

೨೪. ಅನಂತರ—ಎಲೈ ಪ್ರಭುವೇ, ನೀನು ಶುದ್ಧಜ್ಞಾನಸ್ವರೂಪನಾಗಿರುವೆ. ಸತ್ತು, ಅಸತ್ತುಗಳೆರಡೂ ನೀನೇ. ನೀನೇ ಎಲ್ಲಾ ವಸ್ತುಗಳಿಗಿಂತಲೂ ಉತ್ತಮೋತ್ತಮನೂ, ಎಲ್ಲದಕ್ಕಿಂತಲೂ ಮಹತ್ತನ್ನೊಳಗೊಂಡವನೂ, ತ್ರಿಕಾಲಾಬಾಧಿತನೂ, ಪ್ರಶಾಂತನೂ, ಸರ್ವಸಮನೂ, ಅಖಂಡೈಶ್ವರ್ಯಸ್ವರೂಪನೂ, ಸಂಸಾರಬಂಧವಿಲ್ಲದವನೂ ಆಗಿರುವೆ. ನಿನ್ನನ್ನು ಸಾಕ್ಷಾತ್ಕರಿಸಲು ಯಾರಿಗೂ ದುಸ್ಸಾಧ್ಯವಾಗಿರುವುದು. ನಿನ್ನ ದಿವ್ಯತೇಜಸ್ಸಿನಿಂದ ಸಕಲವಿಧವಾದ ಮಾಯಾಬಂಧನವನ್ನೂ ಪರಿಹರಿಸುತ್ತಿರುವೆ. ಓ ದೇವ, ಇಂತಹ ಪರಬ್ರಹ್ಮಸ್ವರೂಪನಾದ ನಿನ್ನನ್ನು ಸರ್ವಕಾಲದಲ್ಲಿಯೂ ನಮಸ್ಕರಿಸುವೆನು ಎಂದು ಆ ಶ್ರೀಹರಿಯ ದಿವ್ಯಗುಣಗಳನ್ನು ಸ್ತೋತ್ರಮಾಡಬೇಕು.

೨೫. ಓ ಯಾದವೇಂದ್ರ, ಈರೀತಿಯಾಗಿ ಮೇಲೆ ಹೇಳಿದ ಮಂತ್ರಗಳಿಂದ ದೇವದೇವನಾದ ಆ ಶ್ರೀಹರಿಯನ್ನು ಪೂಜೆಮಾಡಿದನಂತರ ಆತನನ್ನು ನಮಸ್ಕರಿಸಿ ಆತನ ಸರ್ವಾಂಗಗಳನ್ನೂ ಪೂಜಿಸಬೇಕು.

೨೬. ಎಲೈ ಶ್ರೀಹರಿಯೇ, ನೀನು ಪುರುಷಪದವಾಚ್ಯನು, ಮಹಾನುಭಾವನು, ಶುದ್ಧಮನಸ್ಕರಾದ ಸಜ್ಜನರ ಹೃದಯದಲ್ಲಿ ಸರ್ವದಾ ನೆಲೆಸಿರುವವನು, ಮಹಾಹಂಸಸ್ವರೂಪನು. ಇಂತಹ ನಿನ್ನನ್ನು ನಮಸ್ಕರಿಸುವೆನು ಎಂಬ ಮಂತ್ರದಿಂದ ಪ್ರಾಣಾಯಾಮವನ್ನು ಮಾಡಬೇಕು.

ಓಂ ವಿಷ್ಣವೇ ಮಧುಸೂದನಾಯ ವಾಮನಾಯ ತ್ರಿವಿಕ್ರಮಾಯ ಶ್ರೀಧರಾಯ ಹೃಷೀಕೇಶಾಯ ಪದ್ಮನಾಭಾಯ ದಾಮೋದರಾಯ ಸಂಕರ್ಷಣಾಯ ವಾಸುದೇವಾಯ ಪ್ರದ್ಯುಮ್ನಾಯ ಅನಿರುದ್ಧಾಯ ಅಧೋಕ್ಷಜಾಯ ಪುರುಷೋತ್ತಮಾಯ ಶ್ರೀಕೃಷ್ಣಾಯ ನಮಃ ॥

ಇತಿ ಪಾದಗುಲ್ಫಜಾನೂರುಕಟ್ಯುದರಪೃಷ್ಠಭುಜಾಕಂಧರಕರ್ಣ-ನಾಸಿಕಾಧರನೇತ್ರಶಿರಸ್ಸು ಪೃಥಕ್ಪೃಥಕ್ಪೂಜಯಾಮೀತಿ ಸರ್ವಾಂಗ-ಪೂಜಾಂ ಕುರ್ಯಾತ್ ॥

ತಥಾ ಸಖೀಸಖಶಂಖಚಕ್ರಗದಾಪದ್ಮಾಸಿಧನುರ್ಬಾಣಹಲಮುಸ-ಲಾದೀನ್, ತಥಾ ಕೌಸ್ತುಭವನಮಾಲಾ ಶ್ರೀವತ್ಸಪೀತಾಂಬರನೀಲಾಂ-ಬರವಂಶೀವೇತ್ರಾದೀನ್, ತಥಾ ತಾಲಾಂಕಗರುಡಾಂಕರಥದಾರುಕ ಸುಮತಿಸಾರಥಿಗರುಡಕುಮುದನಂದಸುನಂದಚಂಡಮಹಾಬಲಕುಮು ದಾಕ್ಷಾದೀನ್ ಪ್ರಣವಪೂರ್ವೇಣ ಚತುರ್ಥ್ಯಂತೇನ ನಮಃ ಸಂಯು ಕ್ತೇನ ನಾಮ್ನಾ, ತಥಾ ವಿಷ್ವಕ್ಸೇನಶಿವಾವಿಧಿದುರ್ಗಾವಿನಾಯಕ-ದಿಕ್ಪಾಲವರುಣನವಗ್ರಹಮಾತೃಕಾದೀನ್ಮಂತ್ರೈಃ ಪೂಜಯೇತ್ ॥

ಓಂ ನಮೋ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ　　　॥ ೨೭ ॥

॥ ಇತಿ ಮಂತ್ರೇಣ ಶತಮಾಹುತೀರ್ಜುಹುಯಾತ್ ॥

---

೨೭. ಅನಂತರ–ಎಲೈ ವಿಷ್ಣುವೇ, ನಿನ್ನ ಪಾದಗಳನ್ನು ಪೂಜಿಸುವೆನು. ಹೇ ಮಧುಸೂದನ, ನಿನ್ನ ಗುಲ್ಫಗಳನ್ನು ಅರ್ಚಿಸುವೆನು ಎಂದು ಮುಂತಾಗಿ "ಓಂ ವಿಷ್ಣವೇ ನಮಃ ಪಾದೌ ಪೂಜಯಾಮಿ । ಓಂ ಮಧುಸೂದನಾಯ ನಮಃ ಗುಲ್ಫೌ ಪೂಜಯಾಮಿ" ಎಂಬ ಮಂತ್ರಗಳಿಂದ ಅಂಗಪೂಜೆಯನ್ನು ಮಾಡಲು ಪ್ರಾರಂಭಿಸಿ, ಕ್ರಮವಾಗಿ ಆ ಪರಮಾತ್ಮನ ಪಾದಗಳು, ಗುಲ್ಫ, ಮಂಡಿ, ತೊಡೆ, ನಡು, ಹೊಟ್ಟೆ, ಬೆನ್ನು, ತೋಳು, ಕತ್ತು, ಕಿವಿ, ಮೂಗು, ತುಟಿ, ಕಣ್ಣು, ತಲೆ ಮೊದಲಾದ ಸರ್ವಾಂಗಗಳನ್ನೂ ಬೇರೆಬೇರೆಯಾಗಿ ಪೂಜಿಸಬೇಕು. ಹಾಗೆಯೇ, ರಾಧಾಕೃಷ್ಣರ ಸಖೀಸಖರನ್ನೂ, ಶಂಖ, ಚಕ್ರ, ಗದಾ, ಪದ್ಮ, ನಂದಕವೆಂಬ ಖಡ್ಗ, ಧನುಸ್ಸು, ಬಾಣ, ಹಲ, ಮುಸಲಾದಿ ಆಯುಧಗಳನ್ನೂ, ಕೌಸ್ತುಭ, ವನಮಾಲಾ, ಶ್ರೀವತ್ಸ, ಪೀತಾಂಬರ, ನೀಲಾಂಬರ, ಕೊಳಲು, ವೇತ್ರಗಳನ್ನೂ, ತಾಲಧ್ವಜ ಗರುಡಧ್ವಜಗಳಿಂದ ಅಲಂಕೃತವಾದ ರಥಗಳನ್ನೂ, ಸಾರಥಿಗಳಾದ ಸುಮತಿದಾರುಕ

ದೇವಂ ಪ್ರದಕ್ಷಿಣೀಕೃತ್ಯ ಮಹಾಭೋಗಂ ನಿಧಾಯ ಚ ।
ಪ್ರಣಮೇದ್ದಂಡವದ್ಭೂಮೌ ಮಂತ್ರಮೇತಮುದೀರಯೇತ್ ॥ ೨೮ ॥

ಧ್ಯೇಯಂ ಸದಾ ಪರಿಭವಘ್ನಮಭೀಷ್ಟದೋಹಂ
ತೀರ್ಥಾಸ್ಪದಂ ಶಿವವಿರಿಂಚಿನುತಂ ಶರಣ್ಯಂ ।
ಭೃತ್ಯಾರ್ತಿಹನ್ಪ್ರಣತಪಾಲಭವಾಬ್ಧಿಪೋತಂ
ವಂದೇ ಮಹಾಪುರುಷ ತೇ ಚರಣಾರವಿಂದಂ ॥ ೨೯ ॥

ರನ್ನೂ, ಅನುಚರರಾದ ಗರುಡ, ಕುಮುದ, ನಂದ, ಸುನಂದ, ಚಂಡ, ಮಹಾಬಲ, ಕುಮುದಾಕ್ಷಾದಿಗಳನ್ನೂ ಓಂಕಾರಪೂರ್ವಕವಾಗಿ ನಮಶ್ಶಬ್ದವು ಅಂತ್ಯದಲ್ಲಿರುವಂತೆ ಚತುರ್ಥ್ಯಂತವಾದ ಓಂ ಶಂಖಾಯ ನಮಃ। ಓಂ ಚಕ್ರಾಯ ನಮಃ। ಮೊದಲಾದ ಆಯಾ ನಾಮಗಳಿಂದ ಪೂಜಿಸಬೇಕು. ಅನಂತರ ವಿಷ್ವಕ್ಸೇನ, ಶಿವ, ಬ್ರಹ್ಮ, ದುರ್ಗಾ, ವಿನಾಯಕ, ಇಂದ್ರಾದಿದಿಕ್ಪಾಲಕರು, ವರುಣ, ನವಗ್ರಹಗಳು, ಮಾತೃದೇವತೆಗಳು ಮೊದಲಾದವರನ್ನೂ ಆಯಾ ಮಂತ್ರಗಳಿಂದ ಅರ್ಚಿಸಬೇಕು. ಆಮೇಲೆ ಸಾತ್ವತಪ್ರಭುವೂ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣರೆಂಬ ಚತುರ್ವ್ಯೂಹಮೂರ್ತಿಗಳ ಆಕಾರವನ್ನು ಧರಿಸಿದವನೂ ಆದ ಆ ಶ್ರೀಹರಿಗೆ ನಮಸ್ಕಾರವು—ಎಂಬ ಅರ್ಥವಿರುವ " ಓಂ ನಮೋ ವಾಸುದೇವಾಯ "—ಇತ್ಯಾದಿ ಮಂತ್ರದಿಂದ ಪ್ರತಿಷ್ಠಿತವಾದ ಅಗ್ನಿಯಲ್ಲಿ ಒಂದು ನೂರು ಆಹುತಿಗಳನ್ನು ಹೋಮ ಮಾಡಬೇಕು.

೨೮–೨೯ ಬಳಿಕ ದೇವರಿಗೆ ಪ್ರದಕ್ಷಿಣೆಮಾಡಿ ಮಹಾಭೋಗವನ್ನು ತೆಗೆದಿಟ್ಟು ಭೂಮಿಯಲ್ಲಿ ದಂಡಾಕಾರವಾಗಿ ನಮಸ್ಕಾರಮಾಡಬೇಕು. ಆ ಸಮಯದಲ್ಲಿ—" ಹೇ ಭಕ್ತವತ್ಸಲ, ನೀನು ಸರ್ವಕಾಲದಲ್ಲಿಯೂ ಧ್ಯಾನಿಸಲ್ಪಡಲು ಅರ್ಹನಾದವನು. ನಿನ್ನನ್ನು ಸೇವಿಸುವವರ ಸಕಲಪರಿಭವಗಳನ್ನೂ ಪರಿಹರಿಸುವವನು, ಬಯಸಿದ ಇಷ್ಟಾರ್ಥಗಳೆಲ್ಲವನ್ನೂ ಕರುಣಿಸುವವನು, ಸಕಲತೀರ್ಥಗಳಿಗೂ ಆವಾಸವೆನಿಸಿದವನು, ಶಿವಬ್ರಹ್ಮಾದಿಗಳಿಂದ ಸ್ತುತಿಸಲ್ಪಡುವವನು, ಶರಣಾಗತಸಂರಕ್ಷಣತತ್ಪರನು, ಸಂಸಾರವೆಂಬ ಸಾಗರವನ್ನು ಪಾರುಗಾಣಿಸುವ ನೌಕೆಯು. ಇಂತಹ ನಿನ್ನ ಪಾದಾರವಿಂದಗಳನ್ನು ಸರ್ವದಾ ನಮಸ್ಕರಿಸುವೆನು ಎಂಬ ಅರ್ಥವುಳ್ಳ " ಧ್ಯೇಯಂ ಸದಾ "—ಎಂಬೀ ಮಂತ್ರವನ್ನು ಮನಸಾ ವಾಚಾ ಉಚ್ಚರಿಸಬೇಕು.

ಇತಿ ನತ್ವಾ ಹರಿಂ ರಾಜನ್ಪುನರ್ನೀರಾಜನಂ ಹರೇಃ ।
ಕಾರಯೇದ್ವಿಧಿವದ್ಭಕ್ತೋ ಹರಿಭಕ್ತಜನೈಃ ಸಹ ॥ ೩೦ ॥

ಘಟೀವಾದ್ಯರಣದ್ಘಂಟಾಕಾಂಸ್ಯವೀಣಾದಿಕೀಚಕೈಃ ।
ಕರತಾಲಮೃದಂಗಾದ್ಯೈಃ ಕೀರ್ತನಂ ಕಾರಯೇದ್ಬುಧಃ ॥ ೩೧ ॥

ನೃತ್ಯಂತಿ ಶ್ರೀಹರೇರಗ್ರೇ ಭಕ್ತಾ ವೈ ಪ್ರೇಮವಿಹ್ವಲಾಃ ।
ಜಯಧ್ವನಿಸಮಾಯುಕ್ತಾಃ ಸತ್ಕಥಾಗಾನತತ್ಪರಾಃ ॥ ೩೨ ॥

ಪುನಃ ಪ್ರಭುಂ ನಮಸ್ಕೃತ್ಯ ಮಂದಿರೇ ತಪನೋಜ್ಜ್ವಲೇ ।
ಶಯನಂ ಕಾರಯೇತ್ಸಮ್ಯಕ್ ಶ್ರೀಕೃಷ್ಣಸ್ಯ ಮಹಾತ್ಮನಃ ॥ ೩೩ ॥

ಏವಂ ಕರೋತಿ ಶ್ರೀಕೃಷ್ಣಸೇವಾಂ ಯೋ ಲಗ್ನಮಾನಸಃ ।
ಪ್ರಣಮಂತಿ ಚ ತಂ ರಾಜನ್ದೇವತಾಃ ಸ್ವರ್ಗಸಂಭವಾಃ ॥ ೩೪ ॥

---

೩೦. ಓ ರಾಜೇಂದ್ರ, ಈ ರೀತಿಯಾಗಿ ಶ್ರೀಹರಿಯನ್ನು ನಮಸ್ಕರಿಸಿದನಂತರ ಭಕ್ತನಾದವನು ಇತರ ಭಕ್ತಜನರೊಂದಿಗೆ ವಿಧಿಪೂರ್ವಕವಾಗಿ ಮತ್ತೊಮ್ಮೆ ಮಂಗಳಾರತಿಯನ್ನು ಬೆಳಗಬೇಕು.

೩೧. ಅನಂತರ–ಘಟವಾದ್ಯ, ಗಂಟೆ, ಕಂಚಿನತಾಳ, ವೀಣೆ, ವೇಣು, ಮೃದಂಗ, ಚಪ್ಪಾಳೆ ಮೊದಲಾದವುಗಳೊಡನೆ ಶ್ರೀಹರಿಯ ದಿವ್ಯಗುಣಗಳನ್ನು ಸಂಕೀರ್ತನಮಾಡಬೇಕು.

೩೨. ಆ ಸಮಯದಲ್ಲಿ ಶ್ರೀಹರಿಯ ಭಕ್ತಾಗ್ರಣಿಗಳು ತಮಗೆ ಆ ಸ್ವಾಮಿಯಲ್ಲಿರುವ ನಿರತಿಶಯವಾದ ದಿವ್ಯಪ್ರೇಮದಿಂದ ಆಕರ್ಷಿತರಾಗಿ ಆ ಶ್ರೀಹರಿಯ ದಿವ್ಯಚರಿತ್ರಗಳನ್ನು ಹಾಡುತ್ತಾ ನಡುನಡುವೆ ಜಯಶಬ್ದಗಳನ್ನು ಉಚ್ಚರಿಸುತ್ತಾ ನರ್ತನದಲ್ಲಿ ನಿರತರಾಗುವರು.

೩೩. ಈ ರೀತಿ ನರ್ತನವನ್ನು ಮಾಡಿದನಂತರ ಮತ್ತೊಮ್ಮೆ ಆ ಸ್ವಾಮಿಗೆ ನಮಸ್ಕಾರಮಾಡಿ ಸೂರ್ಯನಂತೆ ತೇಜಸ್ಸಿನಿಂದ ಬೆಳಗುತ್ತಿರುವ ಆ ದೇವಮಂದಿರದ ಒಳಗಡೆ ಮಹಾತ್ಮನಾದ ಆ ಶ್ರೀಕೃಷ್ಣನಿಗೆ ಶಯನೋತ್ಸವವನ್ನು ನೆರವೇರಿಸಬೇಕು.

೩೪. ಓ ರಾಜೇಂದ್ರ, ಈರೀತಿಯಾಗಿ ಯಾವ ಮಾನವನು ಮನಸ್ಸಿಟ್ಟು ಶ್ರೀಹರಿಯನ್ನು ಸೇವೆಮಾಡುವನೋ ಆ ಭಕ್ತಾಗ್ರಣಿಯನ್ನು ಸ್ವರ್ಗಲೋಕನಿವಾಸಿಗಳಾದ ದೇವತೆಗಳೂ ಸಹ ನಮಸ್ಕರಿಸುವರು.

ಸೋಽಪಿ ರಾಜೇಂದ್ರ ನಾಕೇಽಪಿ ಪದಂ ಧೃತ್ವಾ ಹರೇರ್ಜನಃ ।
ಅಂತೇ ಯಾತಿ ಪರಂ ಧಾಮ ಗೋಲೋಕಂ ಯೋಗಿದುರ್ಲಭಂ ॥ ೩೫ ॥

ಇತಿ ಶ್ರೀಕೃಷ್ಣಸೇವಾಯಾ ವಿಧಾನಂ ವರ್ಣಿತಂ ಮಯಾ ।
ಚತುಃಪದಾರ್ಥದಂ ನೄಣಾಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೩೬ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಜ್ಞಾನಖಂಡೇ
ವ್ಯಾಸೋಗ್ರಸೇನಸಂವಾದೇ
ನವಮೋಽಧ್ಯಾಯಃ

---

೩೫. ಆ ಭಕ್ತೋತ್ತಮನು ಈ ದೇಹಾಂತವಾದನಂತರ ಕೆಲಕಾಲ ಸ್ವರ್ಗಲೋಕದಲ್ಲಿ ವಿಹರಿಸುತ್ತಿದ್ದು, ಕೊನೆಗೆ ಮಹಾಯೋಗಿಗಳಿಗೂ ದುರ್ಲಭವೆನಿಸಿದ ಅತ್ಯುತ್ತಮವಾದ ಶ್ರೀಗೋಲೋಕಧಾಮವನ್ನು ಹೋಗಿ ಸೇರುವನು.

೩೬- ಈರೀತಿಯಾಗಿ ಮಾನವರಿಗೆ ಧರ್ಮಾದಿಪುರುಷಾರ್ಥಗಳೆಲ್ಲವನ್ನೂ ಕರುಣಿಸುವ, ದಿವ್ಯವಾದ ಶ್ರೀಕೃಷ್ಣಸೇವಾವಿಧಾನವನ್ನು ನಿನಗೆ ವರ್ಣಿಸಿರುವೆನು. ಈಗ ಮತ್ತೇನನ್ನು ಕೇಳಬೇಕೆಂದಿರುವೆ ? ಕೇಳು ಎಂದನು.

ಇಲ್ಲಿಗೆ ಶ್ರೀಗಾರ್ಗ್ಯಸಂಹಿತೆಯ ವಿಜ್ಞಾನಖಂಡದಲ್ಲಿ ಶ್ರೀಕೃಷ್ಣಸೇವಾವಿಧಾನವೆಂಬ ಒಂಭತ್ತನೆಯ ಅಧ್ಯಾಯವು ಮುಗಿದುದು.

—॥ ಶ್ರೀಃ ॥—

—॥ ಶ್ರೀ ಕೃಷ್ಣಾಯ ಪರಮಾತ್ಮನೇ ನಮಃ ॥—

ಅಥ ಗಾರ್ಗಸಂಹಿತಾಯಾಂ

ವಿಜ್ಞಾನ ಖಂಡೇ

ದಶಮೋಽಧ್ಯಾಯಃ

॥ ಉಗ್ರಸೇನ ಉವಾಚ ॥

ಸಿದ್ಧೋಽಸ್ಮ್ಯನುಗೃಹೀತೋಽಸ್ಮಿ ತ್ವಯಾ ಶ್ರೀಕೃಷ್ಣರೂಪಿಣಾ ।
ಶ್ರೀಕೃಷ್ಣಪದ್ಧತಿಃ ಸಾಕ್ಷಾಚ್ಛ್ರುತಾ ವೈ ವಿಧಿವನ್ಮಯಾ ॥ ೧ ॥

ಅಹೋ ಲೋಕಾ ಮಹಾಮೂಢಾ ಲೋಭಮೋಹಮದಾನ್ವಿತಾಃ ।
ನಾಪ್ನುವಂತಿ ಹಿ ವೈರಾಗ್ಯಂ ಭಜಂತಿ ನ ಹರಿಂ ಕ್ವಚಿತ್ ॥ ೨ ॥

ಹತ್ತನೆಯ ಅಧ್ಯಾಯವು

೧. ಆಗ ಯಾದವೇಂದ್ರನಾದ ಉಗ್ರಸೇನಮಹಾರಾಜನು ವ್ಯಾಸಮಹರ್ಷಿಯನ್ನು ಕುರಿತು—ಓ ಬ್ರಹ್ಮಜ್ಞ, ಶ್ರೀಕೃಷ್ಣಸ್ವರೂಪನಾದ ನಿನ್ನ ಮುಖದಿಂದ ವಿಧಿವತ್ತಾಗಿ ಶ್ರೀಕೃಷ್ಣನ ಸೇವಾಪ್ರಕಾರವನ್ನು ಕೇಳಿ ತಿಳಿದುಕೊಂಡೆನು. ನಾನೀಗ ಕೃತಕೃತ್ಯನಾದೆನು, ನಿಜವಾಗಿಯೂ ನೀನು ನನ್ನಲ್ಲಿ ಸಂಪೂರ್ಣಾನುಗ್ರಹವನ್ನು ತೋರಿದಂತಾಯಿತು.

೨. ಆಹಾ! ಏನಾಶ್ಚರ್ಯ! ಈ ಜನರೆಲ್ಲರೂ ಎಷ್ಟು ಅಜ್ಞಾನಿಗಳು! ಈ ಮೂಢರು ಲೋಭದಿಂದಲೂ, ಮದಮೋಹಗಳಿಂದಲೂ ತೊಳಲುತ್ತಾ ವೈರಾಗ್ಯವೆಂಬುದನ್ನೇ ಅರಿಯದೆ ಅದನ್ನು ಆರ್ಜಿಸದೆ ಇರುವರು. ಹೀಗಾಗಿ ಕ್ಷಣಮಾತ್ರವಾಗಲಿ ಆ ಶ್ರೀಹರಿಯನ್ನು ಸೇವಿಸದೆ ಇರುವರು.

ಭಗವನ್ನಸ್ಯ ಜಗತೋ ಮೋಹಕಾರಣಮುದ್ಭುತಂ ।
ಕಥಂ ಜಾತಂ ವದ ವಿಭೋ ಕಥಮೇತನ್ನಿವರ್ತತೇ ॥ ೩ ॥

॥ ವ್ಯಾಸ ಉವಾಚ ॥

ಯಥಾಂಭಸಿ ಪ್ರಾಪ್ತಮುದೋ ವಿಧೋಃ
ಖತಸ್ತತ್ರೇಕ್ಷತೇ ಕೇವಲಮೇವ ವೇಗತಃ ।
ತಥಾಹಿ ಬಿಂಬಃ ಪರಮಸ್ಯ ಮಾಯಯಾ
ಸಮೇತ್ಯಹಂ ಭಾಗವತೇ ಪ್ರವರ್ತತೇ ॥ ೪ ॥

ಪ್ರಧಾನಕಾಲಾಶಯದೇಹಜೈರ್ಗುಣೈಃ
ಕುರ್ವನ್ನಿಕರ್ಮಾಣಿ ಜನೋ ನಿಬಧ್ಯತೇ ।
ಕಾಚೇರ್ಭಕಂ ಸೈಕತ ಏವ ಜೀವನಂ
ಗುಣೇ ಚ ಸರ್ಪಂ ಪ್ರತನೋತಿ ಸೋಽಕ್ಷಿಭಿಃ ॥ ೫ ॥

---

೩. ಎಲೈ ಪೂಜ್ಯನೇ, ಈ ಜಗತ್ತಿನಲ್ಲಿರುವ ಜೀವಿಗಳಿಗೆ ಇಷ್ಟು ಮೋಹವು ಕವಿದುಕೊಳ್ಳಲು ಕಾರಣವೇನು ? ಮತ್ತು ಈ ಮೋಹವು ನಿವೃತ್ತಿಯಾಗುವ ಬಗೆ ಹೇಗೆ ? ಇದನ್ನು ನನಗೆ ತಿಳಿಸಬೇಕು ಎಂದು ಪ್ರಶ್ನಿಸಲು.

೪. ವ್ಯಾಸಮಹರ್ಷಿಯಿಂತೆಂದನು—ಯಾವ ರೀತಿ ಮತ್ತನಾದವನು, ಆಕಾಶದಲ್ಲಿ ಬೆಳಗುತ್ತಿರುವ ಚಂದ್ರನು ನೀರಿನಲ್ಲಿ ಪ್ರತಿಬಿಂಬಿತವಾಗಿರುವುದನ್ನು ಕಂಡು ತನ್ನ ಮದಾತಿರೇಕದಿಂದ ಆ ಜಲಚಂದ್ರಬಿಂಬವೇ ನಿಜವಾದುದೆಂಬದಾಗಿ ಭ್ರಾಂತಿಗೀಡಾಗುವನೋ ಅದರಂತೆ ಭಗವಂತನ ಮಾಯೆಯಿಂದ ಆವೃತನಾದ ಮಾನವನು ತಾನು ಆ ಪರಮಾತ್ಮನ ಪ್ರತಿಬಿಂಬವೆಂಬುದನ್ನು ಮರೆತು, ತಾನು ಕರ್ತೃವೆಂದೂ, ಭೋಕ್ತೃವೆಂದೂ ಅಹಂಕಾರಕ್ಕೆ ವಶನಾಗಿ ತೊಳಲುವನು.

೫. ಮತ್ತು ಪ್ರಕೃತಿವಶದಿಂದಲೂ, ಕಾಲವಶದಿಂದಲೂ, ಮಾನಸಿಕವೂ ಮತ್ತು ದೈಹಿಕವೂ ಆದ ಗುಣವಿಶೇಷಗಳ ಒತ್ತಾಯದಿಂದಲೂ ಆ ಮಾನವನು ಸಲ್ಲದ ಕರ್ಮಗಳನ್ನೇ ಮಾಡುತ್ತಾ ಮತ್ತಷ್ಟು ಬಂಧನಕ್ಕೆ ಸಿಲುಕಿ ಕೊಳ್ಳುವನು. ಈ ರೀತಿ ಮೋಹಕ್ಕೆ ಈಡಾದುದರಿಂದ ಆ ಮಾನವನು ಗಾಜಿನ ಬೊಂಬೆಯನ್ನು ಮಗುವೆಂತಲೂ, ಮರಳುಗಾಡಿನಲ್ಲಿ ಕಾಣಬರುವ ಬಿಸಲ್ಗುದುರೆಯನ್ನು ನೀರೆಂತಲೂ, ಹಗ್ಗವನ್ನು ಹಾವೆಂತಲೂ ಭ್ರಮಿಸುವಂತೆ ನಿಜಾಂಶವನ್ನರಿಯದೆ ಕೇವಲ ಭ್ರಾಂತಿಗೊಳಗಾಗುವನು.

ರಾಜನ್ಜಗನ್ಮೋಹಮಯಂ ರಜೋಮಯಂ
ತಮೋಮಯಂ ಸತ್ವಮಯಂ ತಥಾ ಕ್ವಚಿತ್ ।
ಮನೋವಿಲಾಸಂ ವಿಕೃತಂ ಚ ವಿಭ್ರಮಂ
ವಿದ್ಧ್ಯಶ್ವಿದಂ ಲೋಲಮಲಾತಚಕ್ರವತ್ ॥ ೬ ॥

ಇದಂ ಕರಿಷ್ಯಾಮಿ ಕರೋಮ್ಯಭೂವಂ
ಮಮೇದಮಸ್ತೀತಿ ಚ ವೇದಮಾಬ್ರುರ್ವ ।
ಅಹಂ ಸುಖೀ ದುಃಖಯುತಃ ಸುಹೃಜ್ಜನೋ
ಲೋಕಸ್ತ್ವಹಂಕಾರ ವಿಮೋಹಿತೋ ಮತಃ ॥ ೭ ॥

॥ ಉಗ್ರಸೇನ ಉವಾಚ ॥

ವದ ಮೇ ಕೃಪಯಾ ಬ್ರಹ್ಮ‍ನ್ ಲಕ್ಷಣಂ ಪರಮಾತ್ಮನಃ ।
ಕತಿಧಾ ಕವಯಃ ಕೃಷ್ಣಂ ವದಂತಿ ಜಯವರ್ತ್ಮನಿ ॥ ೮ ॥

---

೬. ಓ ರಾಜೇಂದ್ರ ! ಈ ಜಗತ್ತೆಲ್ಲವೂ ಮೋಹದಿಂದ ತುಂಬಿ ಹೋಗಿರುವುದಲ್ಲದೆ ಮುಕ್ಕಾಲು ಪಾಲು ರಜೋಗುಣದಿಂದಲೂ ತಮೋಗುಣದಿಂದಲೂ ಅಭಿಭೂತವಾಗಿರುವುದು. ಎಲ್ಲೋ ಒಂದೊಂದು ಕಡೆಮಾತ್ರ ಸತ್ವಗುಣಪ್ರಧಾನರಾದ ಕೆಲಮಂದಿ ಕಂಡುಬರುವರು. ಹೀಗಿರುವುದರಿಂದ ತಂತಮ್ಮ ಮಾನಸಿಕವಾದ ಪರಿಸ್ಥಿತಿಗನುಗುಣವಾಗಿ ಈ ಜಗತ್ತು ವಿಧವಿಧವಾದ ವಿಕಾರಗಳಿಗೊಳಗಾಗಿ ಸುಮ್ಮನೆ ತೊಳಲುತ್ತಿರುವುದು. ಆದುದರಿಂದಲೇ ಇದು ಅಲಾತಚಕ್ರದಂತೆ (ಕೊಳ್ಳಿಯ ಚಕ್ರ) ನಿಂತಲ್ಲಿ ನಿಲ್ಲದೆ ಸರ್ವದಾ ವೇಗದಿಂದ ಭ್ರಮಿಸುತ್ತಿರುವುದು.

೭. ನಾನು ಈ ಕಾರ್ಯವನ್ನು ಮಾಡುವೆನು ; ನಾನು ಮಾಡುತ್ತಿರುವೆನು ; ನಾನು ಮಾಡಿದೆನು ; ಇದು ನನ್ನದು ; ನಾನು ಸುಖಿಯಾಗಿರುವೆನು : ನಾನು ದುಃಖಿಯಾಗಿರುವೆನು ; ನನಗೆ ಇವನು ಬೇಕಾದವನು ; ಎಂಬೀ ರೀತಿಯಾಗಿ ವ್ಯವಹರಿಸುತ್ತಿರುವಂತಹ ಮಾನವನು ಅಹಂಕಾರಮಮಕಾರಾದಿಗಳ ಮಾಯಾಪಾಶಕ್ಕೆ ಸಿಲುಕಿದವನೆಂಬುದಾಗಿ ಅರಿಯಬೇಕು.

೮. ಹೀಗೆಂದು ವ್ಯಾಸಮಹರ್ಷಿಯು ನುಡಿಯಲು ಉಗ್ರಸೇನನು " ಓ ಬ್ರಹ್ಮಜ್ಞಾ ! ಕೃಪೆಯಿಟ್ಟು ನನಗೆ ಪರಬ್ರಹ್ಮಸ್ವರೂಪವನ್ನು ತಿಳಿಸಬೇಕು. ಪರಮಾತ್ಮನನ್ನು ಸಾಕ್ಷಾತ್ಕರಿಸುವುದರಲ್ಲಿ ಜಯಶಾಲಿಗಳಾದ ಪ್ರಾಜ್ಞರು ಯಾವ ಯಾವ

॥ ವ್ಯಾಸ ಉವಾಚ ॥

ಸನಾತನಸ್ಯಾತ್ರ ನ ಮೃತ್ಯುಜನ್ಮನೀ
ನ ಶೋಕಮೋಹೌ ನ ಜರಾ ಯುವಾದಯಃ ।
ಅಹಂಮದೋ ವ್ಯಾಧಿಯುತೋ ಭಯಂ ಸುಖಂ
ಶುಚೋಕ್ಷುಧೇಚ್ಛಾ ನ ರತಿರ್ನ ಚಾಧಯಃ ॥ ೯ ॥

ಆತ್ಮಾ ನಿರೀಹೋ ಹ್ಯತನುಃ ಸ ಸರ್ವಗೋ
ನಾಹಂಕೃತಿಃ ಶುದ್ಧಬಲೋ ಗುಣಾಶ್ರಯಃ ।
ಸ್ವಯಂ ಪರೋ ನಿಷ್ಫಲ ಆತ್ಮಮಂಗಲೋ
ಜ್ಞಾನಾತ್ಮಕೋ ಯೋ ವಿದಿತೋ ಮುನೀಶ್ವರೈಃ ॥ ೧೦ ॥

ರೀತಿಯಾಗಿ ಆ ಪರಮಾತ್ಮನಾದ ಶ್ರೀಕೃಷ್ಣನ ದಿವ್ಯಸ್ವರೂಪವನ್ನು ವಿವರಿಸುವರು ? ಅದನ್ನು ದಯವಿಟ್ಟು ತಿಳಿಸಬೇಕು" ಎಂದು ಪ್ರಾರ್ಥಿಸಿದನು, ಆಗ ವ್ಯಾಸಮಹರ್ಷಿಯು ಮರಳಿ ಇಂತೆಂದು ನುಡಿಯ ತೊಡಗಿದನು.

೯. "ಈ ಪರಮಾತ್ಮನು ತ್ರಿಕಾಲಾಬಾಧಿತನು, ಅಂದರೆ ಎಂದೆಂದಿಗೂ ಇರತಕ್ಕವನು. ಈತನಿಗೆ ಹುಟ್ಟು ಸಾವುಗಳಾಗಲಿ, ದುಃಖ, ಭ್ರಾಂತಿಗಳಾಗಲಿ, ಜರಾ (ಮುಪ್ಪು) ಯೌವನಗಳಾಗಲಿ, ಅಹಂಕಾರ ಮಮಕಾರಗಳಾಗಲಿ, ಮದವಾಗಲಿ, ವ್ಯಾಧಿಯಾಗಲಿ, ಸುಖ ದುಃಖಗಳಾಗಲಿ, ಹಸಿವು ಹೆದರಿಕೆಗಳಾಗಲಿ, ಬಯಕೆಯಾಗಲಿ, ಒಲುಮೆಯಾಗಲಿ, ಮಾನಸಿಕವಾದ ವ್ಯಥೆಗಳಾಗಲಿ, ಎಂದೆಂದಿಗೂ ಉಂಟಾಗಲಾರವು.

೧೦. "ಈತನನ್ನೇ ಆತ್ಮನೆಂಬುದಾಗಿ ಕರೆಯುವರು. ಈತನಿಗೆ ಯಾವೊಂದು ಬಯಕೆಯೂಗಲಿ, ಶರೀರವಾಗಲಿ, ಅಹಂಕಾರವಾಗಲಿ ಇಲ್ಲದಿರುವುದು. ಮತ್ತು ಈತನು ಎಲ್ಲಿಬೇಕಾದರೂ ಸಂಚರಿಸಬಲ್ಲನು. ಈತನಲ್ಲೇ ಸತ್ತ್ವಾದಿಗುಣಗಳು ನೆಲೆಸಿರುವುವು. ಈತನು ಸ್ವಸ್ವರೂಪದಿಂದಲೂ ಇತರ ಅನೇಕ ರೂಪಗಳಿಂದಲೂ ವ್ಯಕ್ತನಾಗುವನು. ಈತನೇ ಸಕಲಫಲಸ್ವರೂಪನಾದುದರಿಂದ ಈತನಿಗೆ ಮತ್ತಾವ ಅಪೇಕ್ಷಿತಫಲವೂ ಇರುವುದಿಲ್ಲ. ಶುದ್ಧ ಜ್ಞಾನಾತ್ಮಕವಾದೀ ಪರಮಪುರುಷನು ಸರ್ವದಾ ಮಂಗಲಸ್ವರೂಪನಾಗಿರುವನು," ಹೀಗೆಂಬುದಾಗಿ ಮುನಿಶ್ರೇಷ್ಠರೆಲ್ಲರೂ ಈತನನ್ನು ಅರಿತಿರುವರು.

ಜಾಗರ್ತಿ ಯೋಽಸ್ಮಿನ್ ಶಯನಂ ಗತೇ ಸತಿ
ಸಾಯುಂ ಜನೋ ವೇದ ಸವೇದ ತಂ ಹಿತಂ ।
ಪಶ್ಯಂತಮಾದ್ಯಂ ಪುರುಷಂ ಹಿ ಯಂ ಜನೋ
ನ ಪಶ್ಯತಿ ಸ್ವಕ್ಷಮಲಂ ಚ ತಂ ಭಜೇ ॥ ೧೧ ॥

ಯಥಾ ನಭೋಽಗ್ನಿಃ ಪವನೋ ನ ಸಜ್ಜತೇ
ಘಟೇನ ಕಾಷ್ಠೇನ ರಜೋಭಿರಾವೃತಃ ।
ತಥಾ ಪುಮಾನ್ಸರ್ವಗುಣೈಶ್ಚ ನಿರ್ಮಲೋ
ವರ್ಣೈರ್ಯಥಾ ಸ್ಯಾತ್ಸ್ಫಟಿಕೋ ಮದೋಜ್ಜ್ವಲಃ ॥ ೧೨ ॥

ವ್ಯಂಗ್ಯೇನ ವಾ ಲಕ್ಷಣಯಾ ಚ ವಾಕ್ಪಥೈ-
ರರ್ಥೈಃ ಪದಸ್ಫೋಟಪರಾಯಣೈಃ ಪರಂ ।
ನ ಜ್ಞಾಯತೇ ತದ್ಧ್ವನಿನೋತ್ತಮೇನ ಸ-
ದ್ವಾಚ್ಯಂ ತತೋ ಬ್ರಹ್ಮ ಕುತಸ್ತು ಲೌಕಿಕ್ಯೈಃ ॥ ೧೩ ॥

---

೧೧. ಈ ಪರಮಾತ್ಮನು ಈ ಜಗತ್ತೆಲ್ಲವೂ ನಿದ್ರಿಸುತ್ತಿರುವಾಗ ತಾನು ಎಚ್ಚೆತ್ತಿರುವನು. ಜನರು ಮಾತ್ರ ಆತನನ್ನು ಅರಿಯದಿದ್ದರೂ ಅವನು ಎಲ್ಲರನ್ನೂ ಅರಿತಿರುವನು. ಆ ಆದಿಪುರುಷನನ್ನು ಈ ಜನರಾರೂ ಕಣ್ಣಿಂದ ಕಾಣಲಾರರು. ಆತನು ಮಾತ್ರ ಇವರೆಲ್ಲರನ್ನೂ ತನ್ನ ದಿವ್ಯಚಕ್ಷುಸ್ಸಿನಿಂದ ಕಾಣುತ್ತಿರುವನು. ಇಂತಹ ಪರಮಪುರುಷನನ್ನು ಮನಸಾರೆ ಸೇವಿಸುವೆನು.

೧೨. ಯಾವ ರೀತಿ ಆಕಾಶವು ಘಟದಿಂದಲೂ ವಾಯುವು ಧೂಳೀಜಾಲದಿಂದಲೂ ಆವರಿಸಲ್ಪಟ್ಟಿದ್ದರೂ ಅಷ್ಟರಲ್ಲಿಯೇ ಪರಿಮಿತಿಗೊಳಿಸಲ್ಪಡಲಾರದೋ ಆರೀತಿ ಈತನನ್ನು ಯಾವುದೂ ಪರಿಚ್ಛೇದ (ಪರಿಮಿತಿ) ಗೊಳಸಲಾರದು. ಮತ್ತು ಸ್ವಭಾವ ಶುಭ್ರವಾದ ಸ್ಫಟಿಕವು ತನ್ನ ಅಕ್ಕ ಪಕ್ಕದಲ್ಲಿನ ನೀಲ, ಪೀತಾದಿ ವರ್ಣಗಳ ಉಪಾಧಿವಶದಿಂದ ಆಯಾ ಬಣ್ಣವನ್ನು ತಳೆದಂತೆ ತೋರಿದರೂ ಯಾವ ರೀತಿ ತನ್ನ ಸಹಜವಾದ ನಿರ್ಮಲತೆಯನ್ನು (ಶುಕ್ಲರೂಪವನ್ನು) ತೊರೆಯದಿರುವುದೋ ಅದೇ ರೀತಿ ನಿರ್ಗುಣನಾದೀ ಪರಮಪುರುಷನು ಸತ್ತ್ವಾದಿಗುಣಗಳ ಉಪಾಧಿವಶದಿಂದ ಬ್ರಹ್ಮ ವಿಷ್ಣ್ವಾದಿರೂಪಗಳಿಂದ ತೋರುವನು.

೧೩. ಈ ಪರಬ್ರಹ್ಮನನ್ನು ವ್ಯಂಗ್ಯವಾಗಲೀ ಲಕ್ಷಣಗಳಾಗಲೀ ಇತರ ವಿಧವಾದ ಅಭಿಪ್ರಾಯ ಸೂಚಕ ಮಾರ್ಗಗಳಾಗಲೀ ಪದಸ್ಫೋಟ ವಾಕ್ಯಸ್ಫೋಟಗಳಾಗಲೀ ಧ್ವನಿಮಾರ್ಗವಾಗಲೀ ವ್ಯಕ್ತಪಡಿಸಲಾರದು. ಹೀಗಿರುವಾಗ ಸಾಮಾನ್ಯರಾದ ಜನರು ಸಾಮಾನ್ಯವಾದ ಮಾತುಗಳಿಂದ ಹೇಗೇ ತಾನೇ ವಾಚ್ಯವೃತ್ತಿಯಿಂದ ಆತನನ್ನು ತಿಳಿಸಿಯಾರು.?

ವದಂತಿ ಕೇಚಿದ್ಭುವಿಕರ್ಮಕರ್ತೃ ಯು-
ತ್ಕಾಲಂ ಚ ಕೇಚಿತ್ಪರಮೇವ ಶೋಭನಂ ।
ಕೇಚಿದ್ವಿಚಾರಂ ಪ್ರವದಂತಿ ಯಚ್ಚ ತ-
ದ್ಬ್ರಹ್ಮೇತಿ ವೇದಾಂತವಿದೋ ವದಂತಿ ಹಿ ॥ ೧೪ ॥

ಯಂ ನ ಸ್ಪೃಶಂತೀಹ ಗುಣಾ ನ ಕಾಲಜಾ
ಮಾಯೇಂದ್ರಿಯಂ ಚಿತ್ತಮನೋ ನ ಬುದ್ಧಯಃ ।
ಮಹನ್ನ ವೇದೋ ವದತೀತಿ ತತ್ಪರಂ
ವಿಶಂತಿ ಸರ್ವೇಽನಲವಿಸ್ಫುಲಿಂಗವತ್ ॥ ೧೫ ॥

ಹಿರಣ್ಯಗರ್ಭಃ ಪರಮಾತ್ಮತತ್ತ್ವಂ
ಯದ್ವಾಸುದೇವಂ ಪ್ರವದಂತಿ ಸಂತಃ ।
ವಿಚಾರ್ಯ ತದ್ದೇವವರಸ್ವರೂಪಂ
ವಿಸೃಜ್ಯ ಮೋಹಂ ವಿಚರೇದಸಂಗಃ ॥ ೧೬ ॥

---

೧೪. ಆತನನ್ನು ಕೆಲವರು ಕರ್ಮವೆನ್ನುವರು. ಕೆಲವರು ಕರ್ತೃವೆನ್ನುವರು. ಕೆಲವರು ಕಾಲನೆಂಬುದಾಗಿ ಕರೆಯುವರು. ಕೆಲವರು ಪರಮಮಂಗಲವೆನ್ನುವರು. ಕೆಲವರು ವಿಚಾರವೆನ್ನುವರು. ಕೆಲಮಂದಿ ವೇದಾಂತವನ್ನು ಬಲ್ಲ ಪ್ರಾಜ್ಞರು ಬ್ರಹ್ಮವೆಂಬುದಾಗಿ ಆತನ ಸ್ವರೂಪವನ್ನು ತಿಳಿಯಪಡಿಸುವರು.

೧೫. ಆತನನ್ನು ಕಾಲವಶದಿಂದ ಪ್ರಾಪ್ತವಾಗುವ ಗುಣಗಳಾಗಲಿ, ಮಾಯೆಯಾಗಲಿ, ಇಂದ್ರಿಯಗಳಾಗಲಿ, ಚಿತ್ತವಾಗಲಿ, ಮನಸ್ಸಾಗಲಿ, ಬುದ್ಧಿಯಾಗಲಿ, ಮಹತ್ತತ್ತ್ವವಾಗಲಿ ಎಂದೆಂದಿಗೂ ನಿಲುಕಲಾರವು " ಎಂಬುದಾಗಿ ಆ ಪರಮಾತ್ಮನ ನಿಶ್ವಾಸರೂಪವಾದ ವೇದವು ನಮಗೆ ತಿಳಿಸುವುದು. ನಾವೆಲ್ಲರೂ ಕೊನೆಗೆ ಬೆಂಕಿಯಿಂದ ಹೊರಬಿದ್ದ ಕಿಡಿಗಳೆಲ್ಲವೂ ಮತ್ತೆ ಅದರಲ್ಲಿಯೇ ಪ್ರವೇಶಿಸಿ ಲೀನವಾಗುವಂತೆ ಆ ಪರಮಪುರುಷನಲ್ಲಿಯೇ ಐಕ್ಯವಾಗಿ ಹೋಗುವೆವು.

೧೬. ಯಾವಾತನು ಪ್ರಾಜ್ಞರಾದ ಸಾಧುವರೇಣ್ಯರು ಹಿರಣ್ಯಗರ್ಭನೆಂದೂ ಪರಮಾತ್ಮನೆಂದೂ ತತ್ತ್ವವೆಂತಲೂ ವಾಸುದೇವನೆಂದೂ ಮುಕ್ತಕಂಠವಾಗಿ ತಿಳಿಸುವರೋ ಅಂತಹ ಆ ದೇವಾದಿದೇವನ ಪರಮೋತ್ತಮವಾದ ಸ್ವರೂಪವನ್ನು ಮೋಹಕ್ಕೊಳಗಾಗದೆ ಸಂಸಾರಬಂಧನಕ್ಕೆ ಸಿಲುಕಿಕೊಳ್ಳದೆ ಪ್ರತಿಯೊಬ್ಬನೂ ಭಾವಿಸುತ್ತಿರಬೇಕು.

ಯಥೇಂದುರೇಕೋ ಜಲಪಾತ್ರವೃಂದಗೋ
ಯಥಾಗ್ನಿರೇಕೋ ವಿದಿತಃ ಸಮಿಚ್ಚಯೇ ।
ತಥಾ ಪರಾತ್ಮಾ ಭಗವಾನನೇಕವಿ-
ದಂತರ್ಬಹಿಃ ಸ್ಯಾತ್ಸ್ವಕೃತೇಷು ದೇಹಿಷು ॥ ೧೭ ॥

ಸೂರ್ಯೋದಯೇ ನೈಶತಮೋ ವಿಲೀಯತೇ
ಪ್ರದೃಶ್ಯತೇ ವಸ್ತು ಗೃಹೇ ಯಥಾ ಜನೈಃ ।
ಜ್ಞಾನೋದಯೇಽಜ್ಞಾನತಮಃ ಪ್ರಲೀಯತೇ
ಸಂಪ್ರಾಪ್ಯತೇ ಬ್ರಹ್ಮ ಪರಂ ತನೌ ತಥಾ ॥ ೧೮ ॥

ಯಥೇಂದ್ರಿಯಾಣಾಂ ಚ ಪೃಥಕ್ಪ್ರವೃತ್ತಿಭಿ-
ರ್ನಾನೇಯರ್ತೇಽರ್ಥೋಽತಿಗುಣಾಶ್ರಯಃ ಪರಃ ।
ಏಕಂ ಹ್ಯನಂತಸ್ಯ ಪರಸ್ಯ ಧಾಮ ತ-
ತ್ತಥಾ ಮುನೀನಾಂ ಕಿಲ ಶಾಸ್ತ್ರವರ್ತ್ಮಭಿಃ ॥ ೧೯ ॥

---

೧೭. ಯಾವ ರೀತಿ ಚಂದ್ರನು ನೀರಿನ ಪಾತ್ರೆಗಳಲ್ಲಿ ಪ್ರತಿಬಿಂಬಿಸಿ ಅನೇಕ ಸಂಖ್ಯೆಯಲ್ಲಿ ತೋರಿದರೂ ವಸ್ತುತಃ ಒಬ್ಬನೇ ಆಗಿರುವನೋ, ಯಾವ ರೀತಿ ಅಗ್ನಿಯು ತನಗೆ ಒಟ್ಟಿದ ಕಟ್ಟಿಗೆಗಳಲ್ಲಿ ಬೇರೆಬೇರೆಯಾಗಿ ಕಂಡರೂ ಒಂದೇ ಎನಿಸಿರುವನೋ ಅದೇ ರೀತಿ ಆ ಪರಮಾತ್ಮನು ತಾನೇ ಸೃಷ್ಟಿಸಿದ ಅನೇಕ ವ್ಯಕ್ತಿಗಳ ಒಳಹೊರಗೂ ವ್ಯಾಪಿಸಿ ಅನೇಕ ಸಂಖ್ಯೆಯಲ್ಲಿ ವ್ಯಕ್ತನಾಗಿ ತೋರಿದರೂ ವಸ್ತುತಃ ನಿಜಸ್ವರೂಪದಲ್ಲಿ ಏಕೈಕನಾಗಿರುವನು.

೧೮. ರಾತ್ರಿಯಲ್ಲಿ ಕವಿದಿದ್ದ ಕತ್ತಲೆಯು ಸೂರ್ಯನು ಉದಯಿಸುತ್ತಲೇ ಅಡಗಿಹೋಗಿ ಮನೆಯಲ್ಲಿರುವ ಪದಾರ್ಥವು ಜನರ ಕಣ್ಣಿಗೆ ಸ್ಫುಟವಾಗಿ ತೋರುವು ದಲ್ಲವೇ ? ಅದರಂತೆ ಮಾನವನಿಗೆ ಶುದ್ಧ ಜ್ಞಾನವು ಉದಿಸಿದಾದ ಆತನಿಗೆ ಕವಿದಿದ್ದ ಅಜ್ಞಾನವೆಂಬ ಅಂಧಕಾರವು ನೀಗಿಹೋಗಿ ಆತನ ಹೃದಯಮಂದಿರದಲ್ಲಿ ಪರಬ್ರಹ್ಮ ಸ್ವರೂಪವು (ಸೋಹಂಭಾವವು) ಸ್ಫುಟವಾಗಿ ಗೋಚರವಾಗುವುದು.

೧೯. ಯಾವ ರೀತಿ ಒಂದೇ ಒಂದು ಖಾದ್ಯವಸ್ತುವು (ಸಿಹಿಮಿಠಾಯಿ) ಚಕ್ಷುರಾದೀಂದ್ರಿಯಗಳ ಪ್ರವೃತ್ತಿಗನುಸಾರವಾಗಿ ಬಿಳುಪಾದುದೆಂತಲೂ, ಸಿಹಿ ಯಾದುದೆಂತಲೂ, ಮೃದುವಾದುದೆಂತಲೂ, ಸುವಾಸನೆಯುಳ್ಳದೆಂತಲೂ ಬೇರೆ ಬೇರೆ ತೆರನಾಗಿ ತೋರುವುದೋ ಅದೇ ರೀತಿ ಆ ಪರಮಪುರುಷನು ಏಕೈಕನಾಗಿದ್ದರೂ ಆಯಾ ಮುನಿಗಳಿಂದ ಪ್ರಣೀತಗಳಾದ ಶಾಸ್ತ್ರಮಾರ್ಗಗಳಿಗನುಸಾರವಾಗಿ ಬೇರೆ ಬೇರೆ ರೂಪದಿಂದ ತಿಳಿಸಲ್ಪಡುವನು.

ಸಾಕ್ಷಾದ್ಧರಿರ್ಯಃ ಪುರುಷೋತ್ತಮೋತ್ತಮಃ
ಶ್ರೀಕೃಷ್ಣಚಂದ್ರೋ ನಿಜಭಕ್ತವತ್ಸಲಃ ।
ಕೈವಲ್ಯನಾಥೋ ನೃಗಮುಜ್ಜಹಾರ ತಂ
ಪೂರ್ಣಂ ಸ್ವಯಂ ಬ್ರಹ್ಮ ಪರಂ ನಮಾಮ್ಯಹಂ ॥ ೨೦ ॥

॥ ಶ್ರೀನಾರದ ಉವಾಚ ॥

ಇತ್ಯುಕ್ತ್ವಾ ತಮನುಜ್ಞಾಪ್ಯ ಭಗವಾನ್ಬಾದರಾಯಣಃ ।
ಪಶ್ಯತಾಂ ಯಾದವಾನಾಂ ಚ ತತ್ರೈವಾಂತರಧೀಯತ ॥ ೨೧ ॥

ಇದಂ ಮಯಾ ತೇ ಕಥಿತಂ ಹರಿಭಕ್ತಿವಿವರ್ಧನಂ ।
ವಿಜ್ಞಾನಖಂಡಂ ವಿಶದಂ ಶ್ರೋತ್ರೂಣಾಂ ಮೋಕ್ಷದಂ ಸ್ಮೃತಂ ॥ ೨೨ ॥

ಗರ್ಗಾಚಾರ್ಯೇಣ ಕಥಿತಾ ನಾಮ್ನೇಯಂ ಗರ್ಗಸಂಹಿತಾ ।
ಸರ್ವದೋಷಹರಾ ಪುಣ್ಯಾ ಚತುರ್ವರ್ಗಫಲಪ್ರದಾ ॥ ೨೩ ॥

---

೨೦. ಈ ಪರಬ್ರಹ್ಮನೇ ಶ್ರೀಹರಿಯು. ಈತನೇ ಪುರುಷಶ್ರೇಷ್ಠರಲ್ಲೆಲ್ಲ ಶ್ರೇಷ್ಠನಾದವನು. ಈತನೇ ತನ್ನ ಭಕ್ತರಲ್ಲಿ ಮಿತಿಮೀರಿದ ವಾತ್ಸಲ್ಯವುಳ್ಳ ಶ್ರೀಕೃಷ್ಣ ಚಂದ್ರನು. ಈತನೇ ಮೋಕ್ಷದಾಯಕನಾದ ಪ್ರಭುವು. ಈತನೇ ಪತಿತನಾದ ನೃಗಚಕ್ರವರ್ತಿಯನ್ನು ಉದ್ಧಾರಮಾಡಿದವನು. ಇಂತಹ ಪರಿಪೂರ್ಣತಮನೂ ಪರಬ್ರಹ್ಮಪದವಾಚ್ಯನೂ ಆದ ಪರಮಪುರುಷನನ್ನು ನಮಸ್ಕರಿಸುವೆನು" ಎಂದನು.

೨೧. ಓ ಬಹುಲಾಶ್ವರಾಜ! ಈ ರೀತಿಯಾಗಿ ಉಗ್ರಸೇನಮಹಾರಾಜನಿಗೆ ಬೋಧಿಸಿದ ನಂತರ ಭಗವಾನ್ ವೇದವ್ಯಾಸಮಹಾಮುನಿಯು ಆ ಸಭೆಯಲ್ಲಿದ್ದ ಯಾದವರೆಲ್ಲರೂ ನೋಡುತ್ತಿರುವಂತೆ ಕಣ್ಮರೆಯಾಗಿಬಿಟ್ಟನು.

೨೨. ಈರೀತಿಯಾಗಿ ನಿನಗೆ ಶ್ರೀಕೃಷ್ಣಭಕ್ತಿಯನ್ನು ಹೆಚ್ಚಿಸುವಂತಹ ಶ್ರೋತ್ರುಗಳಿಗೆ ಮೋಕ್ಷದಾಯಕವಾದ ಈ ವಿಜ್ಞಾನಖಂಡವನ್ನು ವಿಶದವಾಗಿ ವಿವರಿಸಿದೆನು.

೨೩. ಶ್ರೀ ಗರ್ಗಾಚಾರ್ಯರಿಂದ ಪ್ರೋಕ್ತವಾಗಿ ಗರ್ಗಸಂಹಿತೆಯೆಂದೇ ಪ್ರಖ್ಯಾತವಾಗಿರುವೀ ಸಂಹಿತೆಯು ಸಕಲ ದೋಷಗಳನ್ನೂ ಪರಿಹರಿಸುವುದು. ಮತ್ತು ಪರಮಪಾವನವಾದುದು. ಚತುರ್ವಿಧ ಪುರುಷಾರ್ಥಗಳನ್ನೂ ಕರುಣಿಸುವುದು.

ಗೋಲೋಕವೃಂದಾವನಯೋರ್ಗಿರೀಶ್ವರ-
ಮಾಧುರ್ಯಯೋಃ ಶ್ರೀಮಥುರಾಪುರಸ್ಯ ಚ ।
ದ್ವಾರಾವತೀವಿಶ್ವಜಿತೋರ್ಹಲಾಯುಧ-
ವಿಜ್ಞಾನಯೋಃ ಖಂಡಚಯಾಃ ಪೃಥಕ್ ನವ ॥ ೨೪ ॥

ಶ್ರೀಕೃಷ್ಣಮೂರ್ತಿಃ ಪರಮೈ ರಸೈರ್ಯಥಾ
ಯಥಾ ಚ ಭೂಮಿರ್ಭರತಾದಿಭಿರ್ಭೃಶಂ ।
ತಥಾ ಹಿ ಶಶ್ವನ್ಮುನಿಗರ್ಗಸಂಹಿತಾ
ವಿಭಾತಿ ಖಂಡೈರ್ನವಭಿರ್ನೃಪೇಶ್ವರ ॥ ೨೫ ॥

ಯಥಾ ಹಿ ರತ್ನೈರ್ನವಭಿರ್ವಿರಾಜತೇ
ದೇವಾಂಗುಲೌ ತಪ್ತಸುವರ್ಣಮುದ್ರಿಕಾ ।
ತಥಾ ಚತುರ್ವರ್ಗಫಲಪ್ರದೇ ವಿಧೌ
ಸರ್ಗೈರ್ವಿಸರ್ಗೈರ್ಮುನಿಗರ್ಗಸಂಹಿತಾ ॥ ೨೬ ॥

---

೨೪. ಈ ಗರ್ಗಸಂಹಿತೆಯಲ್ಲಿ ಗೋಲೋಕಖಂಡ, ವೃಂದಾವನಖಂಡ, ಗಿರಿರಾಜ ಖಂಡ. ಮಾಧುರ್ಯಖಂಡ, ಮಥುರಾಖಂಡ, ದ್ವಾರಕಾಖಂಡ, ವಿಶ್ವಜಿತ್ಖಂಡ, ಬಲಭದ್ರಖಂಡ, ವಿಜ್ಞಾನಖಂಡಗಳೆಂದು ಪ್ರತ್ಯೇಕ ಪ್ರತ್ಯೇಕವಾಗಿ ಒಂಭತ್ತು ಖಂಡಗಳಿರುವುವು.

೨೫. ಯಾವ ರೀತಿ ಶ್ರೀಕೃಷ್ಣನ ಮೂರ್ತಿಯು (ಶರೀರವು ಅಥವಾ ಸ್ವರೂಪವು) ಶೃಂಗಾರಾದಿ ನವರಸಗಳಿಗೆ ಆಶ್ರಯವೆನಿಸಿರುವುದೋ ಯಾವ ರೀತಿ ಭೂಮಿಯು ಭರತ ಕಿಂಪುರುಷಾದಿ ನವವಿಧಖಂಡಗಳಿಂದ ನಿಬಿಡವಾಗಿರುವುದೋ ಅದೇ ರೀತಿ ಶ್ರೀ ಗರ್ಗಮುನಿಪ್ರಣೀತವಾದ ಈ ಸಂಹಿತೆಯು ಮೇಲೆ ಹೇಳಿದ ನವಖಂಡಗಳಿಂದ ಸಂಪೂರ್ಣವಾಗಿ ವಿರಾಜಿಸುತ್ತಿರುವುದು.

೨೬. ಯಾವರೀತಿ ಸ್ವಾಮಿಯ ಬೆರಳಿನಲ್ಲಿ ಧರಿಸಿರುವ ಚೊಕ್ಕ ಬಂಗಾರದ ಉಂಗರವು ನವರತ್ನಗಳಿಂದ ಉಜ್ವಲವಾಗಿರುವುದೋ ಅದೇ ರೀತಿ ಧರ್ಮಾದಿ ಪುರುಷಾರ್ಥಚತುಷ್ಟಯಗಳಿಗೆ ಸಾಧನವಾದ ರೀತಿಯಲ್ಲಿ ಪ್ರತಿಪಾದಿಸಲ್ಪಟ್ಟಿರುವ ಈ ಗರ್ಗಾಚಾರ್ಯಸಂಹಿತೆಯು ನವವಿಧ ಸರ್ಗವಿಸರ್ಗಗಳಿಂದ (ಖಂಡಗಳಿಂದ) ಶೋಭಿಸುತ್ತಿರುವುದು.

ನರೇಂದ್ರ ಶಶ್ವನ್ಮುನಿಸಂಹಿತಾಂ ಯೇ
ಶೃಣ್ವಂತಿ ಭಕ್ತ್ಯಾ ಹಿ ಜನಾಃ ಪುನೀತಾಃ ।
ಇಹೈವ ಸೌಖ್ಯಂ ಪರಮಾಪ್ನುವಂತ-
ಸ್ತತಸ್ತು ಗೋಲೋಕಪುರಂ ಪ್ರಯಾಂತಿ ॥ ೨೭ ॥

ಕೃತ್ವಾಥ ಪೀತಾಂಬರವಂದನಂ ತ್ರಿಮಾಂ
ಶೃಣೋತಿ ವಂಧ್ಯಾ ಬಹುಲಾಲಸಾ ಭೃಶಂ ।
ಹ್ರಸ್ವೇನ ಕಾಲೇನ ಗೃಹಾಂಗಣೇ ಶಿಶೂ-
ನ್ಸಂಚಾರಯಂತೀ ವಿಚರತ್ಯಹರ್ನಿಶಂ ॥ ೨೮ ॥

ರೋಗೀ ಪ್ರಮಾನ್ರೋಗಗಣಾತ್ಪ್ರಮುಚ್ಯತೇ
ಭೀತೋ ಭಯಾದ್ಬಂಧಗತಶ್ಚ ಬಂಧನಾತ್ ।
ಶ್ರುತ್ವಾ ಕಥಾಂ ನಿರ್ಧನ ಏತಿ ವೈಭವಂ
ಮೂರ್ಖೋ ಭವೇತ್ಪಂಡಿತ ಏವ ಸತ್ವರಂ ॥ ೨೯ ॥

---

೨೭. ಓ ಬಹುಲಾಶ್ವನರೇಂದ್ರ! ಶ್ರೀಗರ್ಗಮಹಾಮುನಿಗಳಿಂದ ಪ್ರಣೀತವಾದೀ ಸಂಹಿತೆಯನ್ನು ಯಾವ ಮಾನವರು ಭಕ್ತಿಯಿಂದ ಶ್ರವಣಮಾಡುವರೋ ಅವರೆಲ್ಲರೂ ತಮ್ಮ ತಮ್ಮ ಪಾಪಗಳಿಂದ ಬಿಡುಗಡೆಯನ್ನು ಹೊಂದಿ ಈ ಲೋಕದಲ್ಲಿ ನಿರತಿಶಯವಾದ ಸುಖವನ್ನು ಅನುಭವಿಸಿ ಕೊನೆಗೆ ದಿವ್ಯವಾದ ಗೋಲೋಕಧಾಮವನ್ನು ಹೋಗಿ ಸೇರುವರು.

೨೮. ಯಾವ ಸ್ತ್ರೀಯು ತನಗೆ ಮಕ್ಕಳಿಲ್ಲವೆಂದು ಕೊರಗುತ್ತಿರುವಳೋ ಆ ಬಂಜೆಯು ಪೀತಾಂಬರಧರನಾದ ಶ್ರೀಹರಿಯನ್ನು ಮೊದಲು ಪೂಜಿಸಿ ಈ ಸಂಹಿತೆಯನ್ನು ಭಕ್ತಿಯಿಂದ ಶ್ರವಣಮಾಡಿದಲ್ಲಿ ಆ ಸ್ತ್ರೀಯು ಬಹು ಕ್ಷಿಪ್ರದಲ್ಲಿಯೇ ತನ್ನ ಮನೆಯಂಗಳದಲ್ಲಿ ಹಗಲಿರುಳೂ ಮಕ್ಕಳನ್ನು ಓಡಾಡಿಸುತ್ತಾ ಸಂತೋಷದಿಂದ ನಲಿಯುವಳು.

೨೯. ಈ ಸಂಹಿತೆಯನ್ನು ಶ್ರವಣಮಾಡಿದೊಡನೆಯೇ ರೋಗಗ್ರಸ್ತನು ತನ್ನ ವ್ಯಾಧಿಯಿಂದ ಬಿಡುಗಡೆ ಹೊಂದುವನು. ಭಯದಿಂದ ತೊಳಲುತ್ತಿದ್ದವನು ಆ ಹೆದರಿಕೆಯನ್ನು ತೊರೆಯುವನು. ಸೆರೆಯಲ್ಲಿ ಸಿಕ್ಕಿಬಿದ್ದವನು ಅದರಿಂದ ವಿಮೋಚನವನ್ನು ಹೊಂದುವನು. ದರಿದ್ರನು ಐಶ್ವರ್ಯವಂತನಾಗುವನು. ಮೂರ್ಖನು ಪಾಂಡಿತ್ಯವನ್ನು ಪಡೆಯುವನು.

ಯಃ ಕಾರ್ತಿಕೇ ಮಾಸಿ ನೃಪಃ ಶ್ರಿಯಾ ಯುತಃ
ಶೃಣೋತಿ ಶಶ್ವನ್ಮುನಿಗರ್ಗಸಂಹಿತಾಂ ।
ಸ ಚಕ್ರವರ್ತೀ ಭವಿತಾ ನ ಸಂಶಯೋ
ನರೇಂದ್ರಹಸ್ತೋದ್ಧೃತಚಾರುಪಾದುಕಃ ॥ ೩೦ ॥

ಮನೋಜವೈಃ ಸಿಂಧುತುರಂಗಮೈರ್ನವೈ-
ರ್ದ್ವಿಪೈಶ್ಚ ವಿಂಧ್ಯಾಚಲಸಂಭವೈಃ ಪರೈಃ ।
ವೈತಾಲಿಕೋದ್ಗೀತಯಶಾ ಮಹೀತಲೇ
ನಿಷೇವಿತೋ ವಾರವಧೂಜನೈಃ ಸಹ ॥ ೩೧ ॥

ಸುವರ್ಣಶೃಂಗಾಂಬರತಾಮ್ರಪೃಷ್ಠಂ
ಸಭೂಷಣಂ ರೌಪ್ಯಖುರಂ ಸವತ್ಸಂ ।
ದದಾತಿ ಖಂಡಂ ಪ್ರತಿ ಗೋದ್ವಯಂ ಯಃ
ಪ್ರಾಪ್ನೋತಿ ಸರ್ವಂ ಹಿ ಮನೋರಥಂ ಸಃ ॥ ೩೨ ॥

---

೩೦. ಯಾವ ನರಪತಿಯು ಪ್ರತಿಯೊಂದು ಕಾರ್ತಿಕಮಾಸದಲ್ಲಿಯೂ ಮಹಾ ವೈಭವದಿಂದ ಶ್ರೀಗರ್ಗಮಹಾಮುನಿಪ್ರಣೀತವಾದ ಸಂಹಿತೆಯನ್ನು ಶ್ರವಣಮಾಡುವನೋ ಆ ನರೇಂದ್ರನು ಖಂಡಿತವಾಗಿಯೂ ಕ್ಷಿಪ್ರದಲ್ಲಿಯೇ ಚಕ್ರವರ್ತಿಯಾಗುವನು. ತನ್ನ ಪಾದುಕೆಗಳನ್ನು ಇತರ ನರೇಂದ್ರರು ತಮ್ಮ ಕೈಯಿಂದ ಹೊತ್ತು ತರುವಂತಹ ಸಾರ್ವಭೌಮಪದವಿಯನ್ನನುಭವಿಸುವನು.

೩೧. ಆತನ ಕುದುರೆಯ ಲಾಯದಲ್ಲಿ ಮನೋವೇಗವುಳ್ಳ ಸಿಂಧುದೇಶದಲ್ಲಿ ಜನಿಸಿದ ಜಾತ್ಯಶ್ವಗಳು ಹೊಸಹೊಸದಾಗಿ ಬಂದು ಸೇರುವುವು. ವಿಂಧ್ಯಾಚಲದಲ್ಲಿ ಜನಿಸಿದಂತಹ ಅತ್ಯುತ್ತಮವಾದ ಆನೆಗಳು ಆತನಿಗೆ ಬೆಂಬಲವೀಯುವುವು. ಆತನು ಸರ್ವಕಾಲದಲ್ಲಿಯೂ ವಂದಿಮಾಗಧರಿಂದ ಸ್ತುತಿಸಲ್ಪಡುತ್ತಾ ವಾರಾಂಗನೆಯಿರಿಂದ ಸೇವಿಸಲ್ಪಡುವನು.

೩೨. ಯಾವಾತನು ಈ ಸಂಹಿತೆಯನ್ನು ಶ್ರವಣಮಾಡುವಾಗ ಒಂದೊಂದು ಖಂಡಕ್ಕೂ ಚಿನ್ನದಿಂದ ಮಾಡಿದ ಕೊಂಬಿನ ಕೊಳಗಗಳಿಂದಲೂ, ಕೆಂಪಾದ ಮೇಲು ಹೊದಿಕೆಯಿಂದಲೂ, ಬೆಳ್ಳಿಯ ಗೊರಸುಗಳಿಂದಲೂ, ಇತರ ಆಭರಣಗಳಿಂದಲೂ ಅಲಂಕೃತವಾಗಿರುವಂತಹ ಧೇನುಗಳೆರಡನ್ನೂ ಅವುಗಳ ಎಳೆಯ ಕರುಗಳೊಂದಿಗೆ ದಾನಮಾಡುವನೋ ಆತನು ತನ್ನ ಸಕಲ ಇಷ್ಟಾರ್ಥಗಳನ್ನೂ ಅನುಭವಿಸುವನು.

ನಿಷ್ಕಾರಣೋಽಸೌ ಶೃಣುತೇ ವಿದೇಹರಾಟ್
ಸರ್ವಾಮಿಮಾಂ ವೈ ಮುನಿಗರ್ಗಸಂಹಿತಾಂ ।
ಹೃತ್ಪುಂಡರೀಕೇ ವಸತೇಽಸ್ಯ ಸರ್ವದಾ
ಶ್ರೀಕೃಷ್ಣಚಂದ್ರೋ ನಿಜಭಕ್ತವತ್ಸಲಃ ॥ ೩೩ ॥

॥ ಶ್ರೀ ಗರ್ಗ ಉವಾಚ ॥

ಇತ್ಯುಕ್ತ್ವಾ ತಮನುಜ್ಞಾಪ್ಯ ನಾರದೋ ದೇವದರ್ಶನಃ ।
ಸರ್ವೇಷಾಂ ಪಶ್ಯತಾಂ ಬ್ರಹ್ಮನ್ನಂಬರಂ ಗತವಾನ್ಮುನಿಃ ॥ ೩೪ ॥

ಬಹುಲಾಶ್ವೋ ಮಹಾರಾಜಃ ಶ್ರೀಕೃಷ್ಣೇ ಲಗ್ನಮಾನಸಃ ।
ಸರ್ವತಸ್ತು ಕೃತಾರ್ಥೋಽಭೂಚ್ಛ್ರುತ್ವೇಮಾಂ ಸಂಹಿತಾಂ ಹರೇಃ ॥ ೩೫ ॥

ತವ ಪ್ರಶ್ನೋಪರಿ ಬ್ರಹ್ಮನ್ಕಥಿತಾ ಸಂಹಿತಾ ಮಯಾ ।
ಶ್ರುತಾ ವಾ ಪಠಿತಾ ಕೈಶ್ಚಿತ್ಕೋಟಿಯಜ್ಞಫಲಪ್ರದಾ ॥ ೩೬ ॥

---

೩೩. ಓ ವಿದೇಹರಾಜೇಂದ್ರ ! ಯಾವಾತನು ಯಾವೊಂದು ಫಲಾಪೇಕ್ಷೆಯೂ ಇಲ್ಲದೆ ಈ ಗರ್ಗಾಚಾರ್ಯಸಂಹಿತೆಯನ್ನು ಶುದ್ಧಾಂತಃಕರಣದಿಂದ ಶ್ರವಣ ಮಾಡುವನೋ ಆತನ ಹೃದಯಕಮಲದಲ್ಲಿ ಭಕ್ತವತ್ಸಲನಾದ ಶ್ರೀಕೃಷ್ಣಚಂದ್ರನು ನಿರಂತರವೂ ನೆಲೆಯಾಗಿ ನಿಲ್ಲುವನು.

೩೪. ಗರ್ಗಾಚಾರ್ಯನು ನುಡಿದನು :—ಎಲೈ ಶೌನಕಮಹರ್ಷಿಯೇ ! ಈ ರೀತಿಯಾಗಿ ನಾರದಮಹರ್ಷಿಯು ಉಪದೇಶಿಸಿ ಆ ಬಹುಲಾಶ್ವನ ಒಪ್ಪಿಗೆಯನ್ನು ಪಡೆದು ಎಲ್ಲರೂ ನೋಡುತ್ತಿರುವಂತೆಯೇ ಆಕಾಶಮಾರ್ಗದಲ್ಲಿ ಹೊರಟುಹೋದನು.

೩೫. ಇತ್ತಲಾಗಿ ಮಿಥಿಲಾಧಿಪತಿಯಾದ ಆ ಬಹುಲಾಶ್ವನರೇಂದ್ರನು ಈ ಗರ್ಗಸಂಹಿತೆಯನ್ನು ಆಲಿಸಿದನಂತರ ಶ್ರೀಕೃಷ್ಣನಲ್ಲಿಯೇ ತನ್ನ ಮನಸ್ಸನ್ನು ನೆಲೆಗೊಳಿಸಿ ಸರ್ವಾಂಶದಲ್ಲಿಯೂ ಕೃತಾರ್ಥನಾದನು.

೩೬. "ಓ ಬ್ರಾಹ್ಮಣೋತ್ತಮಾ ! ಯಾವುದನ್ನು ಶ್ರವಣಮಾಡಿದರಾಗಲಿ, ಪಠಿಸಿದರಾಗಲಿ, ಕೋಟಿಯಜ್ಞಗಳನ್ನು ಮಾಡಿದ ಫಲವುಂಟಾಗುವುದೋ ಆ ಸಂಹಿತೆಯನ್ನು ನಿನ್ನ ಪ್ರಶ್ನೆಗನುಸಾರವಾಗಿ ನಿನಗೆ ವಿವರಿಸಿ ಹೇಳಿದೆನು" ಎಂದನು.

|| ಶ್ರೀ ಶೌನಕ ಉವಾಚ ||

ಧನ್ಯೋಽಹಂ ಚ ಕೃತಾರ್ಥೋಽಹಂ ತ್ವತ್ಸಂಗೇನ ಮಹಾಮುನೇ |
ಪ್ರಾಪ್ನೋಮಿ ಪರಮಾಂ ಭಕ್ತಿಂ ಶ್ರೀಕೃಷ್ಣಪ್ರೇಮವರ್ಧಿನೀಂ || ೩೭ ||

ವಿಶದಹೃದಿ ಮುನೀನಾಂ ಮಾನಸೇ ರಾಜಹಂಸಃ
ಸಕಲಸುಖವಿರಾಜನ್ನಾದಮಾಧುರ್ಯವಂಶಃ |
ಜಗತಿ ವಿಕಲದಂಶಃ ಶೂರವಂಶಾವತಂಸಃ
ಕರಬಲಹತಕಂಸ ಪಾತುಃ ವಃ ಸತ್ಪ್ರಶಂಸಃ || ೩೮ ||

ಇತ್ಯುಕ್ತ್ವಾ ತಾನ್ಮುನೀನ್ಸರ್ವಾನ್ಗರ್ಗಾಚಾರ್ಯೋ ಮಹಾಮುನಿಃ |
ಅನುಜ್ಞಾಪ್ಯ ಪ್ರಸನ್ನಾತ್ಮಾ ಗಂತುಮಭ್ಯುದ್ಯತೋಽಭವತ್ || ೩೯ ||

---

೩೭. ಇದನ್ನು ಕೇಳಿ ಶೌನಕಮಹರ್ಷಿಯು ಆ ಗರ್ಗಾಚಾರ್ಯನನ್ನು ಕುರಿತು "ಓ ಮುನೀಂದ್ರ! ನಿನ್ನ ಸಹವಾಸವು ನನಗೆ ದೊರೆತದುದರಿಂದ ಇಂದಿಗೆ ನಾನು ಧನ್ಯನಾದೆನು ಕೃತಾರ್ಥನಾದೆನು. ನಿನ್ನ ಅನುಗ್ರಹದಿಂದ ಶ್ರೀಕೃಷ್ಣನ ಪ್ರೇಮವನ್ನು ಹೆಚ್ಚಿಸುವಂತಹ ನಿರತಿಶಯವಾದ ಭಕ್ತಿಯನ್ನು ಹೊಂದುವೆನು" ಎಂದನು.

೩೮. "ಯಾವನು ಮಹರ್ಷಿಗಳ ನಿರ್ಮಲವಾದ ಮನಸ್ಸೆಂಬ ಮಾನಸ ಸರೋವರದಲ್ಲಿ ರಾಜಹಂಸನಂತೆ ವಿಹರಿಸುತ್ತಿರುವನೋ, ಯಾವನು ಸಕಲರಿಗೂ ಸುಖದಾಯಕವಾದ ನಾದಮಾಧುರ್ಯದಿಂದ ತುಂಬಿದ ಕೊಳಲನ್ನು ಕೈಲಿ ಧರಿಸಿರುವನೋ, ಯಾವನು ಜಗತ್ತಿನಲ್ಲೆಲ್ಲಾ ತನ್ನ ಅಂಶವನ್ನು ತೋರ್ಪಡಿಸುತ್ತಿರುವನೋ, ಯಾವನು ಶೂರವಂಶಕ್ಕೆ ಅವತಂಸಪ್ರಾಯನಾಗಿರುವನೋ, ಯಾವನು ತನ್ನ ಬಾಹುಬಲದಿಂದ ಕಂಸನನ್ನು ನಿಗ್ರಹಿಸಿದನೋ ಆ ಸಜ್ಜನ ಪ್ರಶಂಸಾಸ್ಪದನಾದ ಶ್ರೀಕೃಷ್ಣಚಂದ್ರನು ನಿಮ್ಮೆಲ್ಲರನ್ನೂ ಕಾಪಾಡಲಿ."

೩೯. ಈರೀತಿಯಾಗಿ ಅಲ್ಲಿದ್ದ ಮುನಿಗಳೆಲ್ಲರನ್ನೂ ಆಶೀರ್ವದಿಸಿ ಪ್ರಸನ್ನಚಿತ್ತನಾದ ಆ ಗರ್ಗಮಹಾಮುನಿಯು ಅವರೆಲ್ಲರ ಒಪ್ಪಿಗೆಯನ್ನು ತೆಗೆದುಕೊಂಡು ಅಲ್ಲಿಂದ ಹೊರಡಲನುವಾದನು.

ನವಸರ್ಗವಿಸರ್ಗಾಢ್ಯಾಂ ಸ್ವರ್ಗಭೃದ್ಗರ್ಗಸಂಹಿತಾಂ।
ಚತುರ್ವರ್ಗಪ್ರದಾಮುಕ್ತ್ವಾ ಗರ್ಗೋ ಗರ್ಗಾಚಲಂ ಯಯೌ ॥ ೪೦ ॥

ಶರದ್ವಿಕಚಪಂಕಜಶ್ರಿಯಮತೀವವಿದ್ವೇಷಕಂ
ಮಿಲಿಂದಮುನಿಸೇವಿತಂ ಕುಲಿಶಕಂಜಚಿನ್ಹಾವೃತಂ।
ಸ್ಫುರತ್ಕನಕನೂಪುರಂ ದಲಿತಭಕ್ತತಾಪತ್ರಯಂ
ಚಲದ್ದ್ಯುತಿಪದದ್ವಯಂ ಹೃದಿ ದಧಾಮಿ ರಾಧಾಪತೇಃ ॥ ೪೧ ॥

ಇತಿ ಶ್ರೀಮದ್ಗರ್ಗಸಂಹಿತಾಯಾಂ ವಿಜ್ಞಾನಖಂಡೇ ಶ್ರೀನಾರದ-ಬಹುಲಾಶ್ವಸಂವಾದಾಂತರ್ಗತವ್ಯಾಸೋಗ್ರಸೇನಸಂವಾದೇ ಪರಬ್ರಹ್ಮನಿರೂಪಣಂ ನಾಮ ದಶಮೋಽಧ್ಯಾಯಃ

॥ ಇತಿ ವಿಜ್ಞಾನಖಂಡಂ ಸಮಾಪ್ತಂ ॥

---

೪೦. ಹೀಗೆ ಆ ಗರ್ಗಮಹಾಮುನಿಯು ಒಂಬತ್ತು ಸರ್ಗ ವಿಸರ್ಗಗಳಿಂದ (ಖಂಡಗಳಿಂದ) ಕೂಡಿ ಧರ್ಮಾದಿಚತುರ್ವಿಧಪುರುಷಾರ್ಥಗಳನ್ನೂ ಕರುಣಿಸುವಂತಹ ಮಹಾಸಂಹಿತೆಯನ್ನು ತಿಳಿಸಿ ತನ್ನ ನಿವಾಸವಾದ ಗರ್ಗಾಚಲಕ್ಕೆ ತೆರಳಿದನು.

೪೧. ಶರದೃತುವಿನ ಸುಪ್ರಭಾತದಲ್ಲಿ ಅರಳಿದ ತಾವರೆಯ ಕಾಂತಿಯನ್ನು ಜರಿಯುತ್ತಿರುವಂತಹುದೂ ತನ್ನಲ್ಲಿರುವ ರಸವನ್ನು ಸವಿಯುತ್ತಿರುವ ಮುನಿಗಳೆಂಬ ಭ್ರಮರಗಳಿಂದ ಮುತ್ತಲ್ಪಟ್ಟಿರುವುದೂ ವಜ್ರ, ಕಮಲ ಮೊದಲಾದ ಶುಭಚಿಹ್ನೆಗಳಿಂದ ಅಲಂಕೃತವಾದುದೂ, ಥಳಥಳನೆ ಹೊಳೆಯುತ್ತಿರುವ ಚಿನ್ನದ ಅಂದಿಗೆಯಿಂದ ಕಂಗೊಳಿಸುತ್ತಿರುವುದೂ, ಭಕ್ತಜನರ ತಾಪತ್ರಯಗಳನ್ನು ನಿವಾರಿಸುವಂತಹುದೂ, ಕಾಂತಿವಿಶೇಷದಿಂದ ಉಜ್ವಲವಾದುದೂ ಆದ ಶ್ರೀರಾಧಾಕಾಂತನ ಚರಣಯುಗಲವನ್ನು ನನ್ನ ಹೃದಯದಲ್ಲಿ ಎಂದೆಂದಿಗೂ ನೆಲೆಗೊಳಿಸುವೆನು.

ಇಲ್ಲಿಗೆ ಶ್ರೀಮದ್ಗರ್ಗಸಂಹಿತಾಂತರ್ಗತವಾದ ವಿಜ್ಞಾನಖಂಡದ ನಾರದಬಹುಲಾಶ್ವ ಸಂವಾದದಲ್ಲಿನ ವ್ಯಾಸೋಗ್ರಸೇನಸಂವಾದದಲ್ಲಿ ಪರಬ್ರಹ್ಮನಿರೂಪಣವೆಂಬ ಹತ್ತನೆಯ ಅಧ್ಯಾಯವು ಮುಗಿದುದು.

ವಿಜ್ಞಾನಖಂಡವು ಸಮಾಪ್ತವಾದುದು.

॥ ಶ್ರೀಕೃಷ್ಣಾರ್ಪಣಮಸ್ತು ॥